ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಲಕ್ಷ್ಯ ಸಜ್ಜು
ಚೀನಾದಲ್ಲಿ ಮಂಗಳವಾರ ಆರಂಭವಾಗಲಿರುವ ಬ್ಯಾಡ್ಮಿಂಟನ್ ಏಷ್ಯಾ ಚಾಂಪಿಯನ್‌ಷಿಪ್‌ನಲ್ಲಿ ಲಕ್ಷ್ಯ ಸೇನ್ ಅವರು ಭಾರತವನ್ನು ಪ್ರತಿನಿಧಿಸಲಿದ್ದಾರೆ

ಸೆನ್ಸೆಕ್ಸ್ 74,106 | ನಿಫ್ಟಿ 22,968 | $/₹ 92.90 | ಚಿನ್ನ (Std. 10g) ₹1,55,500 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,45,100 (ಬೆಂಗಳೂರು)

ಅನುದಾನಕ್ಕಾಗಿ ರಾಜ್ಯದ ಪಟ್ಟು

ಜೆಜೆಎಂ: ರಾಜ್ಯ ಸರ್ಕಾರಕ್ಕೆ ₹2,500 ಕೋಟಿ ಹೊರೆ ಅಂದಾಜು • ಒಪ್ಪಂದಕ್ಕೆ ಸಹಿ ಹಾಕಲು ಹಿಂದೇಟು

• ಮಂಜುನಾಥ ಹೆಬ್ಬಾರ್

ನವದೆಹಲಿ: ಜಲ ಜೀವನ್ ಮಿಷನ್‌ನ (ಜೆಜೆಎಂ) ಕೇಂದ್ರದ ಪಾಲಿನ ಬಾಕಿ ಮೊತ್ತ ₹16,863 ಕೋಟಿ ಬಿಡುಗಡೆ ಮಾಡುವ ಬಗ್ಗೆ ಖಾತರಿ ನೀಡಿದರಷ್ಟೇ ಹೊಸ ಒಪ್ಪಂದಕ್ಕೆ ಸಹಿ ಹಾಕುವುದಾಗಿ ಕರ್ನಾಟಕ ಸರ್ಕಾರವು ಕೇಂದ್ರ ಜಲಶಕ್ತಿ ಸಚಿವಾಲಯದ ಎದುರು ಪಟ್ಟು ಹಿಡಿದಿದೆ.

ಗ್ರಾಮೀಣ ಪ್ರದೇಶದ ಜನರಿಗೆ ಶುದ್ಧ ಕುಡಿಯುವ ನೀರು ಒದಗಿಸುವ ಉದ್ದೇಶ ಹೊಂದಿರುವ ಈ ಯೋಜನೆಗೆ ಜಲಶಕ್ತಿ ಸಚಿವಾಲಯವು ರಾಜ್ಯಕ್ಕೆ 2019ರಿಂದ 2025ರ ಅವಧಿಗೆ ₹28,623 ಕೋಟಿ (ಕೇಂದ್ರದ ಪಾಲು) ಹಂಚಿಕೆ ಮಾಡಿತ್ತು. ಆದರೆ, ಈವರೆಗೆ ₹11,760 ಕೋಟಿ ಬಿಡುಗಡೆ ಮಾಡಿದೆ. ಅಗತ್ಯ ದಾಖಲೆಗಳೊಂದಿಗೆ ಪ್ರಸ್ತಾವ ಸಲ್ಲಿಸಲು ರಾಜ್ಯ ಸರ್ಕಾರ ವಿಳಂಬ ಮಾಡಿದೆ ಎಂಬ ಕಾರಣ ನೀಡಿ ಬಾಕಿ ಮೊತ್ತ ಬಿಡುಗಡೆ ಮಾಡಲು ಜಲಶಕ್ತಿ ಸಚಿವಾಲಯ ಈ ಹಿಂದೆ ನಿರಾಕರಿಸಿತ್ತು.

ಯೋಜನೆಯನ್ನು 2028ರ ಡಿಸೆಂಬರ್‌ವರೆಗೆ ವಿಸ್ತರಿಸಲು ಕೇಂದ್ರ ಸಚಿವ ಸಂಪುಟ ಮಾರ್ಚ್ 10ರಂದು ಅನುಮೋದನೆ ನೀಡಿತ್ತು. ಮಿಷನ್‌ನ ಮರುರಚನೆಗಾಗಿ ಒಟ್ಟು ವೆಚ್ಚವನ್ನು ₹8.69 ಲಕ್ಷ ಕೋಟಿಗೆ ಹೆಚ್ಚಿಸಲು ಒಪ್ಪಿಗೆ ನೀಡಲಾಗಿತ್ತು. ರಾಜ್ಯಗಳಿಗೆ ಕೇಂದ್ರ ಸರ್ಕಾರದಿಂದ ಹೆಚ್ಚುವರಿಯಾಗಿ ₹1.51 ಲಕ್ಷ ಕೋಟಿ ನೀಡಲು ಸಮ್ಮತಿ ಸೂಚಿಸಲಾಗಿತ್ತು. ಯೋಜನೆಯಲ್ಲಿ ರಚನಾತ್ಮಕ ಬದಲಾವಣೆ ತರಲು ರಾಜ್ಯ ಸರ್ಕಾರಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲು ತೀರ್ಮಾನಿಸಲಾಗಿತ್ತು. ಇಲ್ಲಿಯವರೆಗೆ 12 ರಾಜ್ಯಗಳು ಒಪ್ಪಂದಕ್ಕೆ ಸಹಿ ಹಾಕಿವೆ. ಪರಿಷ್ಕೃತ ಯೋಜನೆಯ ಕಡ್ಡಾಯ ಷರತ್ತುಗಳನ್ನು ಪೂರೈಸಿದ ಐದು ರಾಜ್ಯಗಳಿಗೆ ಜಲಶಕ್ತಿ ಸಚಿವಾಲಯವು ಮಾರ್ಚ್ 31ರಂದು ₹1,516 ಕೋಟಿ ಬಿಡುಗಡೆ ಮಾಡಿದೆ. ಉತ್ತರ ಪ್ರದೇಶ, ಮಹಾರಾಷ್ಟ್ರ, ಛತ್ತೀಸಗಢ, ಮಧ್ಯಪ್ರದೇಶ ಹಾಗೂ ಒಡಿಶಾಕ್ಕೆ ಈ ಅನುದಾನ ಸಿಕ್ಕಿದೆ.

‘ಜಲ ಜೀವನ್ ಮಿಷನ್ 2.0’ ಅನುಷ್ಠಾನದ ಸಂಬಂಧ ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ ಅವರು ರಾಜ್ಯಗಳ ಪಂಚಾಯತ್‌ರಾಜ್ ಸಚಿವರ ಜತೆಗೆ ಇತ್ತೀಚೆಗೆ ಸಮಾಲೋಚನಾ ಸಭೆ ನಡೆಸಿದ್ದಾರೆ. ರಾಜ್ಯಕ್ಕೆ ಬರಬೇಕಾಗಿರುವ ಬಾಕಿ ಮೊತ್ತದ ಬಗ್ಗೆ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು ಸಭೆಯಲ್ಲಿ ಪ್ರಸ್ತಾಪಿಸಿದ್ದಾರೆ.

‘ಮೊದಲು ಒಪ್ಪಂದಕ್ಕೆ ಸಹಿ ಹಾಕಿ. ಬಾಕಿ ಮೊತ್ತದ ಬಗ್ಗೆ ಮತ್ತೆ ಚರ್ಚೆ ನಡೆಸೋಣ’ ಎಂದು ಪಾಟೀಲ ಮನವೊಲಿಸಲು ಯತ್ನಿಸಿದ್ದಾರೆ. ‘ಕೇಂದ್ರದ ಮಾರ್ಗಸೂಚಿಯ ಪ್ರಕಾರವೇ ಯೋಜನೆಯ ಡಿಪಿಆರ್ ಸಿದ್ಧಪಡಿಸಲಾಗಿತ್ತು. ಅನುದಾನ ಬಳಕೆ ಪ್ರಮಾಣಪತ್ರವನ್ನೂ ಒದಗಿಸಲಾಗಿತ್ತು. ಆದರೂ, ಬಾಕಿ ಅನುದಾನ ಒದಗಿಸಲು ಕೇಂದ್ರ ಸತಾಯಿಸುತ್ತಿದೆ. ಇದರಿಂದ, ರಾಜ್ಯ ಸರ್ಕಾರಕ್ಕೆ ಭಾರಿ ಹೊರೆ ಆಗಿದೆ. ಮುಂದಿನ ದಿನಗಳಲ್ಲಿ ಇಂತಹ ಹೊರೆ ಹೊರಲು ಸಾಧ್ಯವಿಲ್ಲ’ ಎಂದು ಪ್ರಿಯಾಂಕ್ ಸ್ಪಷ್ಟಪಡಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪುನರ್ ರಚಿತ ಯೋಜನೆಯ ಸಾಧಕ ಬಾಧಕಗಳ ಬಗ್ಗೆ ಕರ್ನಾಟಕ ಗ್ರಾಮೀಣಾಭಿವೃದ್ಧಿ ಸಚಿವಾಲಯ ಲೆಕ್ಕಾಚಾರ ಹಾಕಿದ್ದು, ರಾಜ್ಯಕ್ಕೆ ಹೆಚ್ಚುವರಿಯಾಗಿ ₹2,500 ಕೋಟಿ ಹೊರೆ ಆಗಲಿದೆ ಎಂದು ಅಂದಾಜಿಸಿದೆ. ಈ ಲೆಕ್ಕಾಚಾರದ ಕರಡನ್ನು ಹಣಕಾಸು ಇಲಾಖೆಗೆ ಕಳುಹಿಸಿ ಅಭಿಪ್ರಾಯ ಕೇಳಿದೆ.

ಜೆಜೆಎಂ–ಕೇಂದ್ರದ ಪಾಲು (₹ಕೋಟಿಗಳಲ್ಲಿ)

ವರ್ಷ	ಹಂಚಿಕೆ	ಬಿಡುಗಡೆ
2019-20	546.06	546.06
2020-21	1,189.40	446.36
2021-22	5,008.80	2,504.40
2022-23	5,451.85	2,725.93
2023-24	12,623.37	4,966.62
2024-25	3,804.41	570.66
ಒಟ್ಟು	28,623.89	11,760.03



ಜಲಜೀವನ್ ಮಿಷನ್ ಯೋಜನೆಗೆ ಸಂಬಂಧಿಸಿದ ಅನುದಾನ ಬಿಡುಗಡೆ ಕುರಿತಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮಧ್ಯೆ ಜಟಾಪಟಿ ನಡೆದಿರುವುದರಿಂದ ಯೋಜನೆಯ ಅನುಷ್ಠಾನ ವಿಳಂಬವಾಗಿದೆ



ಯೋಜನೆಯ ಸಾಧಕ–ಬಾಧಕಗಳ ಬಗ್ಗೆ ಹಣಕಾಸು ಇಲಾಖೆ ಪರಿಶೀಲನೆ ನಡೆಸುತ್ತಿದೆ. ಆ ಬಳಿಕ ವಿಷಯವನ್ನು ಸಚಿವ ಸಂಪುಟದ ಮುಂದಿಟ್ಟು, ಚರ್ಚಿಸಿ ಮುಂದಿನ ಹೆಜ್ಜೆ ಇಡಲಾಗುವುದು. ಕೇಂದ್ರದ ಸಹವಾಸವೇ ಬೇಡ ಎಂಬ ಅಭಿಪ್ರಾಯ ವ್ಯಕ್ತವಾದರೆ ಒಪ್ಪಂದಕ್ಕೆ ಸಹಿ ಹಾಕುವುದಿಲ್ಲ

ಪ್ರಿಯಾಂಕ್ ಖರ್ಗೆ, ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವ



ರಾಜ್ಯ ಸರ್ಕಾರದ ಲೋಪದಿಂದಲೇ ಬಾಕಿ ಅನುದಾನ ಬಿಡುಗಡೆ ಆಗಿಲ್ಲ. ರಾಜ್ಯದಲ್ಲಿ ಯೋಜನೆಯನ್ನು ಸಮರೋಪಾದಿಯಲ್ಲಿ ನಡೆಸಲು ಕೇಂದ್ರ ಸರ್ಕಾರ ಉತ್ಸುಕವಾಗಿದೆ. ಇದಕ್ಕಾಗಿ ರಾಜ್ಯವು ಒಪ್ಪಂದಕ್ಕೆ ಸಹಿ ಹಾಕಬೇಕು. ಆಗ ಮಾತ್ರ ಹೊಸ ಕಾಮಗಾರಿಗಳಿಗೆ ಜಲಶಕ್ತಿ ಸಚಿವಾಲಯ ಅನುದಾನ ನೀಡಲಿದೆ

ವಿ.ಸೋಮಣ್ಣ, ಜಲಶಕ್ತಿ ಖಾತೆ ರಾಜ್ಯ ಸಚಿವ

ಕದನ ವಿರಾಮ ಪ್ರಸ್ತಾವ ಇರಾನ್‌ನಿಂದ ತಿರಸ್ಕಾರ

ದುಬೈ, ಟೆಹರಾನ್ (ಎಎಫ್‌ಪಿ, ಎಪಿ): 45 ದಿನಗಳ ಕದನ ವಿರಾಮ ಘೋಷಿಸುವ ಪ್ರಸ್ತಾವವನ್ನು ಇರಾನ್ ಸಾರಾಸಗಟಾಗಿ ತಿರಸ್ಕರಿಸಿದೆ.

‘ನಮಗೆ ಯುದ್ಧವು ಶಾಶ್ವತವಾಗಿ ಕೊನೆಗೊಳ್ಳುವುದು ಮುಖ್ಯ. ಕೇವಲ ಕದನ ವಿರಾಮವನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ’ ಎಂದು ಪಾಕಿಸ್ತಾನದ ಮೂಲಕ ತನ್ನ ನಿಲುವನ್ನು ತಿಳಿಸಿದೆ.

’ಭವಿಷ್ಯದಲ್ಲಿ ನಮ್ಮ ಮೇಲೆ ಮತ್ತೊಮ್ಮೆ ದಾಳಿ ನಡೆಸುವುದಿಲ್ಲ ಎನ್ನುವ ಖಾತರಿಯೊಂದಿಗೆ ಯುದ್ಧ ಅಂತ್ಯಗೊಳಿಸುವ ಪ್ರಸ್ತಾವವನ್ನು ಮಾತ್ರವೇ ನಾವು ಒಪ್ಪಿಕೊಳ್ಳುತ್ತೇವೆ’ ಎಂದು ಇರಾನ್‌ನ ರಾಜತಾಂತ್ರಿಕ ಮಿಷನ್‌ನ ಮುಖ್ಯಸ್ಥ ಮುಜತಬಾ ಫಿರದ್ಯೆಸಿ ಪೈರ ತಿಳಿಸಿದ್ದಾರೆ.

ಇಬ್ಬರು ರೆವಲ್ಯೂಷನರಿ ಗಾರ್ಡ್ ಕಮಾಂಡರ್‌ಗಳ ಹತ್ಯೆ ಮತ್ತು ಪೆಟ್ರೊಕೆಮಿಕಲ್ ಘಟಕದ ಮೇಲೆ ಇಸ್ರೇಲ್ ದಾಳಿ ನಡೆಸಿದ ಬೆನ್ನಲ್ಲೇ ಇರಾನ್ ತನ್ನ ನಿಲುವು ಪ್ರಕಟಿಸಿದೆ.

ಹೊರ್ಮುಜ್ ಜಲಸಂಧಿಯನ್ನು ಮತ್ತೆ ಮುಕ್ತಗೊಳಿಸುವ ಹಾಗೂ 45 ದಿನಗಳ ಕಾಲ ಕದನವಿರಾಮ ಘೋಷಿಸುವ ಪ್ರಸ್ತಾವವನ್ನು ಅಮೆರಿಕ ಮತ್ತು ಇರಾನ್‌ಗೆ ಸೋಮವಾರ ಸಲ್ಲಿಸಲಾಗಿತ್ತು.

ಕದನ ವಿರಾಮಕ್ಕೆ ಮಧ್ಯಸ್ಥಿಕೆ ಪಾತ್ರ ವಹಿಸಿರುವ ಈಜಿಪ್ಟ್, ಪಾಕಿಸ್ತಾನ, ಟರ್ಕಿಯಿಂದ ಈ ಪ್ರಸ್ತಾವ ಸಿದ್ಧಗೊಂಡಿತ್ತು.

45 ದಿನಗಳ ಅವಧಿಯಲ್ಲಿ ಶಾಶ್ವತ ಕದನ ವಿರಾಮ ಸ್ಥಾಪಿಸಲು ಸಾಕಷ್ಟು ಸಮಯಾವಕಾಶ ದೊರೆಯಲಿದೆ ಎನ್ನುವುದು ಈ ಪ್ರಸ್ತಾವದ ಆಶಯವಾಗಿತ್ತು.

ಇರಾನ್‌ನ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ, ಅಮೆರಿಕದ ಪಶ್ಚಿಮ ಏಷ್ಯಾದ ರಾಯಭಾರಿ ಸ್ಟೀವ್ ವಿಟ್ಕೋಫ್ ಅವರಿಗೆ ಈ ಪ್ರಸ್ತಾವ ಕಳುಹಿಸಿಕೊಡಲಾಗಿತ್ತು.

▶10

ಗುಪ್ತಚರ ವಿಭಾಗದ ಮುಖ್ಯಸ್ಥನ ಹತ್ಯೆ



ಮಜೀದ್ ಖಾದೇಮಿ

ದುಬೈ/ಜೆರುಸಲೇಂ (ಎಪಿ/ಪಿಟಿಐ): ಅಮೆರಿಕ ಹಾಗೂ ಇಸ್ರೇಲ್ ಸೋಮವಾರ ನಡೆಸಿದ ವೈಮಾನಿಕ ದಾಳಿಯಲ್ಲಿ ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕೋರ್‌ನ (ಐಆರ್‌ಜಿಸಿ) ಗುಪ್ತಚರ ವಿಭಾಗದ ಮುಖ್ಯಸ್ಥ ಮೇಜರ್ ಜನರಲ್ ಮಜೀದ್ ಖಾದೇಮಿ ಸಾವಿಗೀಡಾಗಿದ್ದಾರೆ.

ಸೋಮವಾರ ಬೆಳಿಗ್ಗೆ ಟೆಹರಾನ್‌ನ ವಿವಿಧ ವಸತಿ ಪ್ರದೇಶಗಳನ್ನು ಗುರಿಯಾಗಿಸಿಕೊಂಡು ಅನೇಕ ವೈಮಾನಿಕ ದಾಳಿಗಳನ್ನು ನಡೆಸಲಾಗಿದೆ. ಈ ವೇಳೆ ಮಜೀದ್ ಹತರಾಗಿದ್ದಾರೆ. ಮಜೀದ್ ಅವರನ್ನು ಹತ್ಯೆ ಮಾಡಿರುವುದಾಗಿ ಇಸ್ರೇಲ್ ರಕ್ಷಣಾ ಸಚಿವ ಇಸ್ರೇಲ್ ಕಾಟ್ಜ್ ಘೋಷಿಸಿದ್ದಾರೆ.

ಒಂದೇ ರಾತ್ರಿಯಲ್ಲಿ ಇರಾನ್ ನಾಶ: ಡೊನಾಲ್ಡ್ ಟ್ರಂಪ್ ಬೆದರಿಕೆ

ವಾಷಿಂಗ್ಟನ್/ಟೆಹರಾನ್ (ಎಪಿ): ‘ಒಂದೇ ರಾತ್ರಿಯಲ್ಲಿ ಇರಾನ್ ಅನ್ನು ಸಂಪೂರ್ಣವಾಗಿ ನಾಶ ಮಾಡಬಹುದು’ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬೆದರಿಕೆ ಹಾಕಿದ್ದಾರೆ. ‘ಆ ರಾತ್ರಿ ಮಂಗಳವಾರ ರಾತ್ರಿಯೇ ಆಗಬಹುದು’ ಎಂದು ಶ್ವೇತಭವನದಲ್ಲಿ ಸೋಮವಾರ ರಾತ್ರಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಎಚ್ಚರಿಕೆ ನೀಡಿದರು.

‘ಮಂಗಳವಾರ ರಾತ್ರಿ ಎಂಟು ಗಂಟೆಯೊಳಗೆ ನಮ್ಮೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳದಿದ್ದರೆ, ಇರಾನ್‌ನ ನಾಗರಿಕ ಮೂಲಸೌಕರ್ಯಗಳ ಮೇಲೆ ವ್ಯಾಪಕ ಬಾಂಬ್ ದಾಳಿ ನಡೆಸಲಾಗುವುದು’ ಎಂದು ಅವರು ಎಚ್ಚರಿಸಿದರು.

ಲಾಕಪ್ ಡೆತ್: 9 ಪೊಲೀಸರಿಗೆ ಮರಣದಂಡನೆ

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನ ತೂತುಕುಡಿ ಜಿಲ್ಲೆ ಸಾತನ್‌ಕುಳಂ ಠಾಣೆಯಲ್ಲಿ ನಡೆದಿದ್ದ ತಂದೆ–ಮಗನ ಲಾಕಪ್ ಡೆತ್ ಪ್ರಕರಣದ ಸಂಬಂಧ ಮೊದಲನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು ಒಂಬತ್ತು ಪೊಲೀಸರಿಗೆ ಮರಣದಂಡನೆ ವಿಧಿಸಿದೆ.

2020ರಲ್ಲಿ ಕೊರೊನಾ ಲಾಕ್‌ಡೌನ್ ಸಂದರ್ಭದಲ್ಲಿ ಅವಧಿ ಮೀರಿ ಅಂಗಡಿ ತೆರೆದಿದ್ದ ಆರೋಪದ ಮೇಲೆ ಮೊಬೈಲ್ ವ್ಯಾಪಾರಿಗಳಾದ ಅಪ್ಪ–ಮಗನನ್ನು ಪೊಲೀಸರು ಬಂಧಿಸಿದ್ದರು.

ಪೊಲೀಸ್ ವಶದಲ್ಲಿದ್ದ ತಂದೆ ಜಯರಾಜ್, ಪುತ್ರ ಬೆನ್ನಿಕ್ಸ್ ಇಬ್ಬರೂ ನ್ಯಾಯಾಂಗ ಬಂಧನಕ್ಕೆ ನೀಡಿದ ಮಾರನೇ ದಿನವೇ ಸಾವನ್ನಪ್ಪಿದ್ದರು. ಈ ಬರ್ಬರ ಕೃತ್ಯಕ್ಕೆ ದೇಶದಾದ್ಯಂತ ವ್ಯಾಪಕ ಆಕ್ರೋಶ ವ್ಯಕ್ತವಾಗಿತ್ತು.



ಇದು ಲಾಕಪ್ ಡೆತ್ ಎಂದು ಮೃತರ ಸಂಬಂಧಿಕರು ಆರೋಪಿಸಿದ್ದರು. ಸಿಬಿ–ಸಿಐಡಿ ಈ ಸಂಬಂಧ ತನಿಖೆ ನಡೆಸುತ್ತಿತ್ತು. ಮದ್ರಾಸ್ ಹೈಕೋರ್ಟ್ ಈ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಿತ್ತು. ಪ್ರಕರಣದ ತನಿಖೆ ನಡೆಸಿದ್ದ ಸಿಬಿಐ, ಠಾಣೆಯಲ್ಲೇ ಕಿರುಕುಳ ನೀಡಿರುವ ತಪ್ಪಿತಸ್ಥರಿಗೆ ಪೆರೋಲ್‌ಗೂ ಅವಕಾಶ ನೀಡದೆ, ಕ್ರೂರ ಶಿಕ್ಷೆ ನೀಡಬೇಕು ಎಂದು ಮನವಿ ಮಾಡಿತ್ತು.

▶4A

ದೆಹಲಿ ವಿಧಾನಸಭೆ ಗೇಟ್ ಮುರಿದು ಒಳನುಗ್ಗಿದ ವ್ಯಕ್ತಿ

ನವದೆಹಲಿ (ಪಿಟಿಐ): ಮುಸುಕುಧಾರಿ ವ್ಯಕ್ತಿಯೊಬ್ಬ ತನ್ನ ಎಸ್‌ಯುವಿ ಕಾರಿನಲ್ಲಿ ದೆಹಲಿ ವಿಧಾನಸಭೆಯ ಗೇಟು ಮುರಿದು ಒಳನುಗ್ಗಿ ಸ್ಪೀಕರ್ ಕಚೇರಿಯ ಹೊರಭಾಗದಲ್ಲಿ ಹೂಗುಚ್ಛ ಇಟ್ಟು, ನಂತರ ಬಂದ ಮಾರ್ಗದಲ್ಲಿಯೇ ಪರಾರಿಯಾಗಿದ್ದಾನೆ. ಭದ್ರತಾ ಸಿಬ್ಬಂದಿಯ ಸಮ್ಮುಖದಲ್ಲಿಯೇ ಮಧ್ಯಾಹ್ನ ಘಟನೆ ನಡೆದಿದ್ದು, ಭಾರಿ ಭದ್ರತಾ ವೈಫಲ್ಯದ ಪ್ರಶ್ನೆ ಎದುರಾಗಿದೆ.

ಸ್ಥಳಕ್ಕೆ ಧಾವಿಸಿದ ಪೊಲೀಸರ ತಂಡಗಳು, ಬಾಂಬ್ ನಿಷ್ಕ್ರಿಯ ತಂಡ ಹೂಗುಚ್ಛ ಇಟ್ಟ ಪ್ರದೇಶ ಸೇರಿದಂತೆ ಹಲವೆಡೆ ಪರಿಶೀಲನೆ ನಡೆಸಿದವು. ಇಡೀ ನಗರದಲ್ಲಿ ಕಟ್ಟೆಚ್ಚರ ಘೋಷಿಸಲಾಯಿತು.

‘ಉತ್ತರ ಪ್ರದೇಶದ ನೋಂದಣಿ ಸಂಖ್ಯೆ ಹೊಂದಿದ ಕಾರಿನಲ್ಲಿ ಬಂದ ವ್ಯಕ್ತಿಯೊಬ್ಬ ಮಧ್ಯಾಹ್ನ 2 ಗಂಟೆ ವೇಳೆಗೆ ಗೇಟ್ ನಂ.2ರಿಂದ ಒಳಪ್ರವೇಶಿಸಿದ್ದ’ ಎಂದು ದೆಹಲಿ ಸಚಿವಾಲಯದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಮೂರು ಮಂದಿಯನ್ನು ಉತ್ತರ ದೆಹಲಿಯಲ್ಲಿ ಬಂಧಿಸಲಾಗಿದೆ. ಕಾರನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಚಿನಕುರುಳಿ ಪ್ರಕಾಶ್ ಶೆಟ್ಟಿ



ಸೂರ್ಯೋದಯ: 6:13 ಸೂರ್ಯಾಸ್ತ : 6:33 ಚಂದ್ರೋದಯ: ರಾ. 10:10 ಚಂದ್ರಾಸ್ತ: ಬೆ. 8:51 | ಸೋಮವಾರದ ಉಷ್ಣಾಂಶ : ಗರಿಷ್ಠ 35° ಕನಿಷ್ಠ 23°
ಮಂಗಳವಾರ ● ಏಪ್ರಿಲ್ 7, 2026
ಮಂಗಳವಾರದ ಉಷ್ಣಾಂಶ 35° ಗರಿಷ್ಠ | 22° ಕನಿಷ್ಠ | ಬುಧವಾರ 33° : 22° | ಗುರುವಾರ 33° : 22° | ಶುಕ್ರವಾರ 33° : 22°
ಪ್ರಜಾವಾಣಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣವಾಗಿ ಮಳೆಯಾಗುವ ಸಾಧ್ಯತೆ ಇದೆ

ಕೆಪಿಎಸ್ ಶಾಲೆ ವಿರುದ್ಧ ಜನ ಸಮಾವೇಶ ಎ.10ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಪಿಎಸ್ ಮ್ಯಾಗ್ನೆಟ್ ಶಾಲೆ ಯೋಜನೆಯ ವಿರುದ್ಧ ಏಪ್ರಿಲ್ 10ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ರಾಜ್ಯಮಟ್ಟದ ಜನ ಸಮಾವೇಶ ಆಯೋಜಿಸಲಾಗುವುದು ಎಂದು ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ ಆರ್ಗನೈಸೇಷನ್ (ಎಐಡಿಎಸ್ಒ) ತಿಳಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಐಡಿಎಸ್ಒ ರಾಜ್ಯ ಘಟಕದ ಅಧ್ಯಕ್ಷೆ ಕೆ.ಎಸ್. ಅಶ್ವಿನಿ, ಕಾರ್ಯದರ್ಶಿ ಅಜಯ್ ಕಾಮತ್, 'ಕೆಪಿಎಸ್ ಶಾಲೆಗಳ ಹೆಸರಿನಲ್ಲಿ ರಾಜ್ಯದಲ್ಲಿರುವ 40 ಸಾವಿರ ಸರ್ಕಾರಿ ಶಾಲೆಗಳನ್ನು ಮುಚ್ಚಲು ರಾಜ್ಯ ಸರ್ಕಾರ ಮುಂದಾಗಿದೆ. ಈ ಬಗ್ಗೆ ನಾವು ರಾಜ್ಯದ ಹಳ್ಳಿಗಳಿಗೆ ತೆರಳಿ ಸಾರ್ವಜನಿಕ ಶಿಕ್ಷಣ ಉಳಿಸುವಂತೆ ಜಾಗೃತಿ ಮೂಡಿಸುತ್ತಿದ್ದೇವೆ. ಸರ್ಕಾರದ ಈ ನಿರ್ಧಾರವನ್ನು ಶಿಕ್ಷಣ ತಜ್ಞರು ಸೇರಿದಂತೆ ಸಾರ್ವಜನಿಕರು ಖಂಡಿಸಿದ್ದಾರೆ' ಎಂದು ತಿಳಿಸಿದರು.

'ಯಾವ ಯಾವ ಶಾಲೆಗಳನ್ನು ವಿಲೀನ ಮಾಡಬೇಕು ಎಂದು ಮ್ಯಾಪಿಂಗ್ ಮಾಡುವ ಕೆಲಸ ಈಗಾಗಲೇ ನಡೆಯುತ್ತಿದೆ. ಶಿಕ್ಷಣ ಇಲಾಖೆಯ ಅಧಿಕಾರಿಗಳ ಮೂಲಕ ಮ್ಯಾಗ್ನೆಟ್ ಶಾಲೆಗಳ ಸಮೀಕ್ಷೆ ನಡೆಸಲಾಗುತ್ತಿದೆ. ವಿಲೀನಗೊಳ್ಳುವ ಶಾಲೆಗಳ ಮುಖ್ಯ ಶಿಕ್ಷಕರಿಗೆ ಮೌಖಿಕವಾಗಿ ಆದೇಶಗಳನ್ನು ನೀಡಲಾಗುತ್ತಿದೆ. ಸರ್ಕಾರದ ಈ ಜನವಿರೋಧಿ ನೀತಿಯನ್ನು ನಾವು ಖಂಡಿಸುತ್ತೇವೆ' ಎಂದರು.

'ಏ. 10ರಂದು ನಡೆಯುವ ಜನ ಸಮಾವೇಶದಲ್ಲಿ ಸಾಹಿತಿಗಳಾದ ಹಂ.ಪ. ನಾಗರಾಜಯ್ಯ, ಕೆ. ಮರುಳಸಿದ್ಧಪ್ಪ, ಎಸ್.ಜಿ. ಸಿದ್ಧರಾಮಯ್ಯ, ಅಲ್ಲಮಪ್ರಭು ಬೆಟ್ಟದೂರು, ಹೈದರಾಬಾದ್ ಕರ್ನಾಟಕ ಜನಾಂದೋಲನ ಕೇಂದ್ರದ ಸಂಸ್ಥಾಪಕ ರಾಘವೇಂದ್ರ ಕುಷ್ಟಗಿ, ಹೇಮಲತಾ ಮಹಿಷಿ, ಶಿಕ್ಷಣ ತಜ್ಞ ವಿ.ಪಿ. ನಿರಂಜನಾರಾಧ್ಯ, ಡಿಎಸ್‌ಎಸ್ ಮುಖಂಡರಾದ ಗುರುಪ್ರಸಾದ್ ಕೆರೆಗೋಡು, ಮಾವಳ್ಳಿ ಶಂಕರ್, ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಭಾಗವಹಿಸಲಿದ್ದಾರೆ' ಎಂದು ಮಾಹಿತಿ ನೀಡಿದರು.

ನೀರಿನ ಬಿಲ್ ಬಾಕಿ: ಒಟಿಎಸ್ ಆರಂಭ

ಅಸಲು ಪಾವತಿಸಿದರೆ ಬಡ್ಡಿ ಮನ್ನಾ ಮೂರು ತಿಂಗಳು ಕಾಲಾವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ನೀರಿನ ಬಿಲ್ ಬಾಕಿ ವಸೂಲಿಗೆ ಆರಂಭಿಸಿರುವ ಒಂದು ಬಾರಿ ಪರಿಹಾರ (ಒಟಿಎಸ್) ಯೋಜನೆ ಸೋಮವಾರದಿಂದ ಜಾರಿಯಾಗಿದೆ.

ಜೂನ್ ಅಂತ್ಯದವರೆಗೂ ಈ ಯೋಜನೆ ಜಾರಿಯಲ್ಲಿ ಇರಲಿದ್ದು, ಮೂರು ತಿಂಗಳ ಒಳಗೆ ಅಸಲು ಪಾವತಿಸಿದರೆ ಬಡ್ಡಿ ಮನ್ನಾ ಆಗಲಿದೆ ಎಂದು ಜಲಮಂಡಳಿ ಅಧ್ಯಕ್ಷ ರಾಮಪ್ರಸಾತ್ ಮನೋಹರ್ ತಿಳಿಸಿದ್ದಾರೆ.

ಯುಗಾದಿ ಹಬ್ಬದ ವಿಶೇಷ ಕೊಡುಗೆಯಾಗಿ ಜಲಮಂಡಳಿ ವತಿಯಿಂದ ಒಟಿಎಸ್ ಯೋಜನೆಯನ್ನು ಡಿಸಿಎಂ ಪ್ರಕಟಿಸಿದ್ದರು. ಕಳೆದ ತಿಂಗಳ ಬಿಲ್ ಹಾಗೂ ಬಾಕಿ ವಿವರ ಸಂಗ್ರಹಿಸಿ ಈಗ ಅಧಿಕೃತವಾಗಿ ಯೋಜನೆ ಆರಂಭಿಸಲಾಗಿದೆ. ಈಗಾಗಲೇ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ಹೇಳಿದ್ದಾರೆ.

ಬಾಕಿ: ಜಲಮಂಡಳಿ ವ್ಯಾಪ್ತಿಯಲ್ಲಿರುವ ಸುಮಾರು 11 ಲಕ್ಷ ನೀರಿನ ಸಂಪರ್ಕಗಳ ಪೈಕಿ, 5.11 ಲಕ್ಷ ಗ್ರಾಹಕರು ಬಿಲ್ ಬಾಕಿ ಉಳಿಸಿಕೊಂಡಿದ್ದಾರೆ. 2026ರ ಫೆಬ್ರವರಿ ಅಂತ್ಯದ ಮಾಹಿತಿಯಂತೆ, ಒಟ್ಟು ₹851.33 ಕೋಟಿ ಬಾಕಿ ಇದೆ. ಇದರಲ್ಲಿ ಅಸಲು ₹539.43 ಕೋಟಿ ಹಾಗೂ ಬಡ್ಡಿ ₹311.90 ಕೋಟಿ ಸೇರಿದೆ.

ಬಾಕಿ ಪಾವತಿ ಹೇಗೆ?

ಒಟಿಎಸ್ ಯೋಜನೆಗೆ ಅರ್ಹರಾಗಿರುವ ಗ್ರಾಹಕರಿಗೆ ಈ ತಿಂಗಳ ನೀರಿನ ಬಿಲ್ ಜತೆಯಲ್ಲಿ ಸಮಗ್ರ ಮಾಹಿತಿಯನ್ನು ಒದಗಿಸಲಾಗುವುದು. ಬಾಕಿ ಮೊತ್ತ, ಮನ್ನಾ ಆಗುವ ಬಡ್ಡಿ, ಪಾವತಿಸಬೇಕಾದ ಅಂತಿಮ ಮೊತ್ತ, ಪಾವತಿಸುವ ವಿಧಾನ ಹಾಗೂ ಯೋಜನೆಯ ಮಾನದಂಡಗಳ ವಿವರಗಳನ್ನು ಒಳಗೊಂಡಿರುವ ಪ್ರತ್ಯೇಕ ಪತ್ರವನ್ನು ಬಿಲ್ ಜೊತೆಯಲ್ಲೇ ನೀಡಲಾಗುವುದು ಎಂದು ರಾಮ್ ಪ್ರಸಾತ್ ಮನೋಹರ್ ಹೇಳಿದ್ದಾರೆ.

ಬಾಕಿ ಪಾವತಿಸಿದರೆ ಬಡ್ಡಿ ಮನ್ನಾ ಆಗಲಿದೆ. 'ಈ ಹಣವನ್ನು ನಮಗೆ ನೀಡಿ, ಮೊತ್ತ ಕಡಿಮೆ ಮಾಡಿಸುತ್ತೇವೆ' ಎಂದು ಹೇಳಿಕೊಂಡು ಬರುವ ಮಧ್ಯವರ್ತಿಗಳ ಬಗ್ಗೆ ಎಚ್ಚರಿಕೆಯಿಂದ ಇರುವಂತೆ ಅಧಿಕಾರಿಗಳು ಸೂಚನೆ ನೀಡಿದ್ದಾರೆ.

ಮಧ್ಯವರ್ತಿಗಳಿಗೆ ಹಣ ನೀಡಬೇಡಿ, ನೇರವಾಗಿ ಜಲಮಂಡಳಿಯ ಕಚೇರಿಗೆ ಬಂದು ಡಿಡಿ ಇಲ್ಲವೇ ಆನ್‌ಲೈನ್ ಮೂಲಕ ಬಿಲ್ ಪಾವತಿಸಬೇಕು. ಬೆಂಗಳೂರು ಒನ್ ಕಚೇರಿಗಳಲ್ಲಿಯೂ ಪಾವತಿಸಲು ಅವಕಾಶವಿದೆ ಎಂದು ತಿಳಿಸಿದ್ದಾರೆ.



ಬೆಂಗಳೂರು ಜಲಮಂಡಳಿ

ಶೃಂಗೇರಿ ವಿಧಾನಸಭಾಕ್ಷೇತ್ರ: ಅಂಚೆಮತ ಮರು ಎಣಿಕೆ

ರಾಜೇಗೌಡ ಆಯ್ಕೆ ಪ್ರಶ್ನಿಸಿ ಜೀವರಾಜ್ ಸಲ್ಲಿಸಿದ್ದ ಅರ್ಜಿ; 279 ಅಂಚೆ ಮತ ಮರು ಪರಿಶೀಲಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲಿ ಚಲಾವಣೆಯಾಗಿರುವ 1,811 ಅಂಚೆ ಮತಗಳ ಪೈಕಿ ತಿರಸ್ಕೃತಗೊಂಡಿರುವ 279 ಅಂಚೆ ಮತಗಳನ್ನು ಮರು ಪರಿಶೀಲಿಸಿ, ನಂತರ ಎಲ್ಲಾ ಅಂಚೆ ಮತಗಳನ್ನು ಮರು ಎಣಿಕೆ ಮಾಡಿ ಫಲಿತಾಂಶ ಪ್ರಕಟಿಸಬೇಕು' ಎಂದು ಹೈಕೋರ್ಟ್ ಚುನಾವಣಾ ಅಧಿಕಾರಿಗೆ ಆದೇಶಿಸಿದೆ.

ಕಾಂಗ್ರೆಸ್‌ನ ಟಿ.ಡಿ.ರಾಜೇಗೌಡ ಅವರ ಆಯ್ಕೆಯನ್ನು ಪ್ರಶ್ನಿಸಿ ಪರಾಜಿತ ಅಭ್ಯರ್ಥಿ ಬಿಜೆಪಿಯ ಡಿ.ಎನ್.ಜೀವರಾಜ್ ಸಲ್ಲಿಸಿದ್ದ ಚುನಾವಣಾ ತಕರಾರು ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಆದೇಶವನ್ನು ನ್ಯಾಯಮೂರ್ತಿ ಆರ್.ನಟರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ಪ್ರಕಟಿಸಿತು.

ಅರ್ಜಿಯನ್ನು ಭಾಗಶಃ ಪುರಸ್ಕರಿಸಿರುವ ನ್ಯಾಯಪೀಠ, 'ತಿರಸ್ಕೃತಗೊಂಡಿರುವ 279 ಅಂಚೆ ಮತಗಳನ್ನು ಮರು ಪರಿಶೀಲಿಸಬೇಕು. ಈ ವೇಳೆ ಚುನಾವಣಾ ಅಧಿಕಾರಿಗಳ ಕೈಪಿಡಿ 2023ರ ಮಾರ್ಗಸೂಚಿ 15.14.7 ಅನ್ನು ಅನೂಚಾನವಾಗಿ ಪಾಲನೆ ಮಾಡಬೇಕು. ಅಂಚೆಮತಗಳ ಚಲಾವಣೆಯಲ್ಲಿ ಸಮಸ್ಯೆ ಇದೆಯೇ ಹೇಗೆ ಎಂಬುದನ್ನು ಪತ್ತೆ ಮಾಡಬೇಕು. ಸಮಗ್ರ ಪರಿಶೀಲನೆ ನಡೆಸಿದ ಬಳಿಕ ಎಲ್ಲಾ ಅಂಚೆಮತಗಳನ್ನು ಮರು ಎಣಿಕೆ ಮಾಡಿ ಅರ್ಜಿದಾರರು ಅಥವಾ ಪ್ರತಿವಾದಿಗಳು ಪಡೆದಿರುವ ಮತಗಳ ಫಲಿತಾಂಶ ಪ್ರಕಟಿಸಬೇಕು. ಈ ಪ್ರಕ್ರಿಯೆಯನ್ನು ಎರಡು ವಾರಗಳಲ್ಲಿ ಪೂರ್ಣಗೊಳಿಸಬೇಕು' ಎಂದು ನಿರ್ದೇಶಿಸಿದೆ.


ಟಿ.ಡಿ.ರಾಜೇಗೌಡ ಪರ ಹಾಜರಿದ್ದ ಪದಾಂಕಿತ ಹಿರಿಯ ವಕೀಲ ಕೆ.ಎನ್. ಫಣೀಂದ್ರ ಅವರು, 'ಈ ಆದೇಶವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲಾಗುವುದು. ಹಾಗಾಗಿ, ಆದೇಶಕ್ಕೆ ಮೂರು ವಾರಗಳ ತಡೆ ನೀಡಬೇಕು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಆದೇಶಕ್ಕೆ ತಡೆ ನೀಡುವುದನ್ನು ಜೀವರಾಜ್ ಪರ ಹಾಜರಿದ್ದ ಹೈಕೋರ್ಟ್ ವಕೀಲೆ ಪಿ.ಎಲ್. ವಂದನಾ ರೆಡ್ಡಿ ವಿರೋಧಿಸಿದರು. ಆದರೆ ಈ ವಿರೋಧವನ್ನು ತಳ್ಳಿ ಹಾಕಿದ ನ್ಯಾಯಪೀಠ ತನ್ನ ಆದೇಶಕ್ಕೆ ಎರಡು ವಾರಗಳ ತಡೆ ನೀಡಿತು. ಜೀವರಾಜ್ ಪರ ಪದಾಂಕಿತ ಹಿರಿಯ ವಕೀಲ ಎಂ.ಎಸ್. ಶ್ಯಾಮಸುಂದರ್ ವಾದ ಮಂಡಿಸಿದ್ದರು.

ಆದೇಶದ ಪ್ರತಿಯನ್ನು ಭಾರತೀಯ ಚುನಾವಣಾ ಆಯೋಗ, ಜಿಲ್ಲಾ ಚುನಾವಣಾಧಿಕಾರಿ ಮತ್ತು ಶೃಂಗೇರಿಯ ಚುನಾವಣಾಧಿಕಾರಿಗೆ ರಿಜಿಸ್ಟ್ರಿ ಕಚೇರಿಯು, ಸ್ಪೀಡ್ ಪೋಸ್ಟ್ ಅಥವಾ ಇ-ಮೇಲ್ ಮೂಲಕ ರವಾನಿಸಬೇಕು ಎಂದು ನ್ಯಾಯಪೀಠ ಆದೇಶದಲ್ಲಿ ವಿವರಿಸಿದೆ.

ಹೈಕೋರ್ಟ್ ಸುದ್ದಿ

OBITUARY



With deep sorrow we inform you of the sad demise of
Shri. K L Gangadhara Gowda(79 years)
(Ex Member, BDA and Ex Director, Bharath Co-operative bank) on 6th April 2026 at 9.50pm

Husband of Smt. Padmavathi Gangadhara Gowda
(Ex Mayor, Bengaluru)

We humbly request you to join us for the last rites which will take place on April 7, 2026 Visting time 9am-12pm

Venue:
110/C-8, 29th A Cross, 7th block, Jayanagar, Bengaluru.

ಕೆಎಸ್‌ಒಯು: ಎರಡೇ ದಿನದಲ್ಲಿ ವರ್ಗಾವಣೆ ಆದೇಶ ವಾಪಸ್

ಪ್ರಜಾವಾಣಿ ವಾರ್ತೆ

ಮೈಸೂರು: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುಲಸಚಿವರಾಗಿ ಕೆಎಎಸ್ ಅಧಿಕಾರಿ ಎಸ್. ಕುಸುಮಾ ಕುಮಾರಿ ಅವರನ್ನು ನೇಮಿಸಿದ್ದ ರಾಜ್ಯ ಸರ್ಕಾರವು ಎರಡೇ ದಿನದಲ್ಲಿ ಆದೇಶ ಹಿಂಪಡೆದಿದೆ.

ಕೆಎಸ್‌ಒಯು ಸಭಾಂಗಣದಲ್ಲಿ ಕಾರ್ಯಕ್ರಮ ಆಯೋಜನೆ ವಿಚಾರದಲ್ಲಿ ಕುಲಪತಿ ಪ್ರೊ. ಶರಣಪ್ಪ ಹಲಸೆ ಹಾಗೂ ರಾಜ್ಯ ಸರ್ಕಾರದ ನಡುವೆ ಈಚೆಗೆ ಮುಸುಕಿನ ಗುದ್ದಾಟ ಏರ್ಪಟ್ಟಿತ್ತು. ಇದರ ಬೆನ್ನಲ್ಲೇ, ಕುಲಸಚಿವ ನವೀನ್‌ಕುಮಾರ್ ಜಾಗಕ್ಕೆ ಕುಸುಮಾ ಕುಮಾರಿ ಅವರನ್ನು ಶನಿವಾರವಷ್ಟೇ ಸರ್ಕಾರ ನೇಮಿಸಿತ್ತು. ಮೈಸೂರು ಪಾಲಿಕೆ ಹೆಚ್ಚುವರಿ ಆಯುಕ್ತೆ ಹುದ್ದೆಯಿಂದ ತಿಂಗಳ ಹಿಂದೆಯೇ ಬಿಡುಗಡೆಯಾಗಿದ್ದ ಕುಸುಮಾ, ಸೋಮವಾರ ಅಧಿಕಾರ ಸ್ವೀಕರಿಸಬೇಕಿತ್ತು.



ಹಿಂದಿನ ಕುಲಸಚಿವರ ವಿರುದ್ಧ ಭ್ರಷ್ಟಾಚಾರ ಆರೋಪ ಕೇಳಿ ಬಂದಿದ್ದರಿಂದ ಏಳು ತಿಂಗಳ ಹಿಂದೆಯಷ್ಟೇ ನವೀನ್‌ಕುಮಾರ್ ಅವರನ್ನು ಕುಲಸಚಿವರಾಗಿ ನೇಮಿಸಲಾಗಿತ್ತು. ವಿಶ್ವವಿದ್ಯಾಲಯದಲ್ಲಿ ಕುಲಸಚಿವ ಹುದ್ದೆಗೆ ಪ್ರಾಧ್ಯಾಪಕರನ್ನೇ ನಿಯೋಜಿಸಲಾಗುತ್ತಿದೆ. ಈಗ ಕೆಎಎಸ್ ಅಧಿಕಾರಿಯನ್ನು ನಿಯೋಜಿಸಿದ್ದು, ಆಡಳಿತದಲ್ಲಿ ಪಾರದರ್ಶಕತೆ ಹಾಗೂ ಹಿಡಿತ ಸಾಧಿಸುವ ಸಲುವಾಗಿ ಸರ್ಕಾರ ಈ ಕ್ರಮಕ್ಕೆ ಮುಂದಾಗಿದೆ ಎನ್ನಲಾಗಿತ್ತು. ಇದೀಗ ವರ್ಗಾವಣೆ ಆದೇಶ ಹಿಂಪಡೆದಿರುವುದು ಚರ್ಚೆಗೆ ಗ್ರಾಸವಾಗಿದೆ.

ಮಾ. 25ರಿಂದ 27ರವರೆಗೆ ಮುಕ್ತ ವಿ.ವಿ. ಘಟಿಕೋತ್ಸವ ಭವನದಲ್ಲಿ ಖಾಸಗಿ ಸಂಸ್ಥೆಗಳ ಸಹಯೋಗದಲ್ಲಿ 'ಏಕಾತ್ಮ ಮಾನವ ದರ್ಶನ'- ಶೈಕ್ಷಣಿಕ ಸಮ್ಮೇಳನ ನಡೆದಿತ್ತು. ಇದಕ್ಕೆ ವಿ.ವಿ. ಸಹಯೋಗವಿದ್ದು, ರಾಜ್ಯಪಾಲರು ಹಾಗೂ ಕೇಂದ್ರ ಸಚಿವರನ್ನು ಆಹ್ವಾನಿಸಿದ್ದರೂ ರಾಜ್ಯ ಉನ್ನತ ಶಿಕ್ಷಣ ಸಚಿವರನ್ನು ಆಹ್ವಾನಿಸಿಲ್ಲ ಎಂಬ ಕಾರಣಕ್ಕೆ ಕಾರ್ಯಕ್ರಮ ರದ್ದುಗೊಳಿಸಿ ರಾಜ್ಯ ಸರ್ಕಾರ ಆದೇಶಿಸಿತ್ತು. ಆದರೆ ಆದೇಶ ಧಿಕ್ಕರಿಸಿ, ಕುಲಪತಿ ಪ್ರೊ. ಶರಣಪ್ಪ ಹಲಸೆ ಕಾರ್ಯಕ್ರಮಕ್ಕೆ ಸಹಕಾರ ನೀಡಿದ್ದರು.

ನಂತರದಲ್ಲಿ ರಾಜ್ಯ ಸರ್ಕಾರವು ಮುಕ್ತ ವಿ.ವಿ.ಯ ಬ್ಯಾಂಕ್ ಖಾತೆಗಳ ಸ್ಥಗಿತಕ್ಕೆ ಆದೇಶ ನೀಡಿದ್ದು ಮತ್ತೊಂದು ಸುತ್ತಿನ ಗುದ್ದಾಟಕ್ಕೆ ಕಾರಣವಾಗಿತ್ತು.

10ರಂದು ಚಾಲನೆ

ಬೆಂಗಳೂರು: ಚಾಮರಾಜನಗರ ಜಿಲ್ಲೆಯ ಉತ್ತವಳ್ಳಿಯ ನಳಂದ ಜ್ಞಾನ ಮತ್ತು ಅಧ್ಯಯನ ಕೇಂದ್ರದಲ್ಲಿ 888 ಅಡಿ ಎತ್ತರದ ಬುದ್ಧನ ಪತ್ರಿಮೆಯನ್ನು ಪ್ರತಿಷ್ಠಾಪಿಸುವ ಕಾಮಗಾರಿಗೆ ಏ.10ರಂದು ಸಿ.ಎಂ ಸಿದ್ದರಾಮಯ್ಯ ಚಾಲನೆ ನೀಡಲಿದ್ದಾರೆ.



ಬರಲಿದೆ ಮತ್ತೊಂದು ಕೋಚ್ ರೆಸ್ಟೋರೆಂಟ್

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ ತಯಾರಿ ಎರಡು ತಿಂಗಳ ಒಳಗೆ ಸಿದ್ಧಗೊಳ್ಳಲಿದೆ

ಬ್ರ್ಯಾಂಡ್ ಬೆಂಗಳೂರು

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ (ಕೆಎಸ್‌ಆರ್) ರೈಲು ನಿಲ್ದಾಣದಲ್ಲಿ ಮತ್ತೊಂದು 'ರೈಲು ಕೋಚ್ ರೆಸ್ಟೋರೆಂಟ್' ನಿರ್ಮಾಣಗೊಳ್ಳುತ್ತಿದೆ. ಮೂರನೇ ಪ್ರವೇಶದ್ವಾರದ ಬಳಿ ಇದಕ್ಕಾಗಿ ಸಿದ್ಧತೆಗಳು ನಡೆಯುತ್ತಿವೆ.

ರೈಲು ಮತ್ತು ಅತ್ಯಾಧುನಿಕ ರೆಸ್ಟೋರೆಂಟ್‌ನ ಅನುಭವವನ್ನು ಏಕಕಾಲದಲ್ಲಿ ನೀಡುವ 'ರೈಲು ಕೋಚ್ ರೆಸ್ಟೋರೆಂಟ್' ಇನ್ನೆರಡು ತಿಂಗಳ ಒಳಗೆ ಆರಂಭವಾಗಲಿದೆ.

15 ವರ್ಷ ಬಳಸಿದ ಬೋಗಿಗಳನ್ನು ಸಾಮಾನ್ಯವಾಗಿ ಗುಜರಿಗೆ ಮಾರಾಟ ಮಾಡಲಾಗುತ್ತದೆ. ಅದರ ಬದಲು ಬೋಗಿಗಳನ್ನು ರೆಸ್ಟೋರೆಂಟ್ ಮಾಡುವ ಮೂಲಕ ಟಿಕೆಟ್‌ಯೇತರ ಆದಾಯ ಗಳಿಸುವ ಪ್ರಯೋಗಕ್ಕೆ ಕೆಲವು ವರ್ಷಗಳ ಹಿಂದೆ ನೈರುತ್ಯ ರೈಲ್ವೆ ಕೈ ಹಾಕಿತ್ತು. ಅದರ ಭಾಗವಾಗಿ ಹುಬ್ಬಳ್ಳಿಯಲ್ಲಿ 'ಬೋಗಿ ಬೋಗಿ ರೆಸ್ಟೋರೆಂಟ್' ಆರಂಭವಾಗಿತ್ತು.

ರಾಜ್ಯದ ಎರಡನೇ ಹಾಗೂ ನೈರುತ್ಯ ರೈಲ್ವೆ ಬೆಂಗಳೂರು ವಿಭಾಗದ ಮೊದಲ 'ಕೋಚ್ ರೆಸ್ಟೋರೆಂಟ್' ಕೆಎಸ್‌ಆರ್ ರೈಲು ನಿಲ್ದಾಣದ ಮುಖ್ಯ ಪ್ರವೇಶ ದ್ವಾರದ ಮುಂಭಾಗದಲ್ಲಿ 2024ರಲ್ಲಿ ಆರಂಭವಾಗಿತ್ತು. ರೆಸ್ಟೋರೆಂಟ್ ಗುತ್ತಿಗೆಯನ್ನು ಓಂ ಇಂಡಸ್ಟ್ರೀಸ್ ಪಡೆದಿದ್ದು, ಅಲ್ಲಿ ಹಲ್ದಿರಾಮ್ ರೆಸ್ಟೋರೆಂಟ್ ನಡೆಯುತ್ತಿದೆ. ಬೈಯಪನಹಳ್ಳಿಯ ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್‌ನಲ್ಲಿ ಬೆಂಗಳೂರು ವಿಭಾಗದ ಮತ್ತೊಂದು ಕೋಚ್ ರೆಸ್ಟೋರೆಂಟ್ ಅನ್ನು ಅದೇ ವರ್ಷ ಆರಂಭಿಸಲಾಗಿತ್ತು. ಇದನ್ನು ಗೌರವ್ ಎಂಟರ್‌ಪ್ರೈಸಸ್ ಗುತ್ತಿಗೆಗೆ ಪಡೆದಿದೆ. ಈ ಎರಡು ರೆಸ್ಟೋರೆಂಟ್‌ಗಳಿಂದ ಗುತ್ತಿಗೆಯ ಐದು ವರ್ಷದ ಅವಧಿಯಲ್ಲಿ ನೈರುತ್ಯ ರೈಲ್ವೆಗೆ ₹7.54 ಕೋಟಿ ಆದಾಯ ಬರಲಿದೆ.

'ನೈರುತ್ಯ ರೈಲ್ವೆ ಬೆಂಗಳೂರು ವಿಭಾಗದ ಮೂರನೇ ಹಾಗೂ ಕೆಎಸ್‌ಆರ್ ನಿಲ್ದಾಣದಲ್ಲಿ ಎರಡನೇ ರೈಲು ಕೋಚ್ ರೆಸ್ಟೋರೆಂಟ್ ಕಾರ್ಯಗತಗೊಳಿಸುವ ಪ್ರಕ್ರಿಯೆ ನಡೆಯುತ್ತಿದೆ. ಮೆಜೆಸ್ಟಿಕ್‌ನ ನಾಡಪ್ರಭು ಕೆಂಪೇಗೌಡ ಮೆಟ್ರೊ ನಿಲ್ದಾಣದ ಎದುರು ಇರುವ ಕೆಎಸ್‌ಆರ್ ರೈಲು ನಿಲ್ದಾಣದ ಪ್ರವೇಶ ದ್ವಾರದ ಬಳಿ ಸ್ಥಳ ಪರಿಶೀಲನೆ ಮಾಡಿ ಅಂತಿಮಗೊಳಿಸಲಾಗಿದೆ' ಎಂದು ನೈರುತ್ಯ ರೈಲ್ವೆಯ ಬೆಂಗಳೂರು ವಿಭಾಗದ ಅಧಿಕಾರಿಗಳು ತಿಳಿಸಿದ್ದಾರೆ.


'ಶ್ರೀ ಗುರು ಕೊಟ್ಟೂರೇಶ್ವರ ಕೇಟರಿಂಗ್-ಬೆಂಗಳೂರು' ಇವರು ರೆಸ್ಟೋರೆಂಟ್ ಗುತ್ತಿಗೆ ಪಡೆದಿದ್ದಾರೆ. ಕೆಲಸ ಆರಂಭವಾಗಿದೆ. ಟ್ರ್ಯಾಕ್ ಮತ್ತು ಬೋಗಿಯನ್ನು ನಾವು ನೀಡುತ್ತೇವೆ. ಅಳವಡಿಸುವ ಕೆಲಸವನ್ನು ಗುತ್ತಿಗೆ ಪಡೆದವರೇ ಮಾಡಲಿದ್ದಾರೆ. ಬೋಗಿಯಲ್ಲಿರುವ ಪ್ರಯಾಣಿಕರ ಸೀಟ್‌ಗಳನ್ನು ತೆಗೆದು, ಹೋಟೆಲ್‌ನ ಆಸನ, ಟೇಬಲ್‌ಗಳನ್ನು ಅಳವಡಿಸಲಾಗುತ್ತದೆ' ಎಂದು ಮಾಹಿತಿ ನೀಡಿದ್ದಾರೆ.

ಈಗಿರುವ ಕೋಚ್ (ಬೋಗಿ) ರೆಸ್ಟೋರೆಂಟ್‌ಗಳು ಹವಾನಿಯಂತ್ರಿತವಾಗಿದ್ದು, ಆರಾಮದಾಯಕ 52 ಆಸನಗಳನ್ನು ಹೊಂದಿವೆ.



ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ (ಕೆಎಸ್‌ಆರ್) ರೈಲು ನಿಲ್ದಾಣದ ಮುಖ್ಯ ಪ್ರವೇಶದ್ವಾರದಲ್ಲಿನ ರೈಲು ಕೋಚ್ ರೆಸ್ಟೋರೆಂಟ್ ಪ್ರಜಾವಾಣಿ ಚಿತ್ರ: ರಂಜು ಪಿ.

ಮೂರನೇ ಕೋಚ್ ರೆಸ್ಟೋರೆಂಟ್‌ನಲ್ಲಿಯೂ ಈ ಸೌಲಭ್ಯಗಳು ಇರಲಿವೆ. ಜೊತೆಗೆ ಹೊರಗೂ ಆಸನಗಳನ್ನು ಅಳವಡಿಸಲು ಅವಕಾಶವಿದೆ. ದಕ್ಷಿಣ ಭಾರತ, ಉತ್ತರ ಭಾರತ ಶೈಲಿಯ ಆಹಾರ, ಸಸ್ಯಾಹಾರ ಅಥವಾ ಮಾಂಸಾಹಾರದ ವ್ಯವಸ್ಥೆಯನ್ನು ಗುತ್ತಿಗೆದಾರರು ಮಾಡಬಹುದು. ಇಂಥದ್ದೇ ಆಹಾರ ಪೂರೈಸಬೇಕು ಎಂಬ ಷರತ್ತು ವಿಧಿಸಿಲ್ಲ. ಆರೋಗ್ಯಯುತ ಆಹಾರ ನೀಡಬೇಕು ಎಂಬ ಷರತ್ತು ವಿಧಿಸಲಾಗಿದೆ ಅಷ್ಟೇ ಎಂದು ವಿವರಿಸಿದರು.


ಬೈಯಪ್ಪನಹಳ್ಳಿ ಎಸ್‌ಎಂವಿಟಿ ರೈಲು ನಿಲ್ದಾಣದಲ್ಲಿ ಆರಂಭಗೊಂಡಿರುವ ರೈಲು ಕೋಚ್ ರೆಸ್ಟೋರೆಂಟ್

ಅಂಕಿ ಅಂಶಗಳು

5 ವರ್ಷ
ರೈಲು ಕೋಚ್ ರೆಸ್ಟೋರೆಂಟ್‌ನ ಗುತ್ತಿಗೆ ಅವಧಿ

₹36.52 ಲಕ್ಷ
ವಾರ್ಷಿಕ ಪರವಾನಗಿ ಶುಲ್ಕ

ಟಿಕೆಟ್‌ಯೇತರ ಆದಾಯ ಮೂಲ

ನೈರುತ್ಯ ರೈಲ್ವೆ ಬೆಂಗಳೂರು ವಿಭಾಗದಿಂದ ಈಗಾಗಲೇ ಕೆಎಸ್‌ಆರ್ ರೈಲು ನಿಲ್ದಾಣ ಮತ್ತು ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್‌ನಲ್ಲಿ ತಲಾ ಒಂದು ರೈಲು ಕೋಚ್ ರೆಸ್ಟೋರೆಂಟ್‌ಗಳನ್ನು ಸ್ಥಾಪಿಸಲಾಗಿದೆ. ಅವು ಚೆನ್ನಾಗಿ ನಡೆಯುತ್ತಿವೆ. ಪ್ರತಿದಿನ ಲಕ್ಷಾಂತರ ಜನರು ಬಂದು ಹೋಗುವ ಕೆಎಸ್‌ಆರ್ ರೈಲು ನಿಲ್ದಾಣದಲ್ಲಿ ಸುಸಜ್ಜಿತ ರೆಸ್ಟೋರೆಂಟ್‌ಗಳಿಗೆ ಬೇಡಿಕೆ ಹೆಚ್ಚಿದೆ. ಕೋಚ್ ರೆಸ್ಟೋರೆಂಟ್ ಹೊಸ ಅನುಭವ ನೀಡುತ್ತದೆ. ಜೊತೆಗೆ ರೈಲ್ವೆಗೆ ಟಿಕೆಟ್‌ಯೇತರ ಆದಾಯವೂ ಬರಲಿದೆ. ಕೋಚ್‌ಗಳು ಗುಜರಿ ಸೇರುವ ಬದಲು ಈ ರೀತಿ ಸದುಪಯೋಗ ಆಗುತ್ತವೆ. ಇನ್ನೆರಡು ತಿಂಗಳಲ್ಲಿ ಹೊಸ ಕೋಚ್ ರೆಸ್ಟೋರೆಂಟ್ | ಆರಂಭಗೊಳ್ಳಲಿದೆ ಎಂದು ಬೆಂಗಳೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಅಶುತೋಷ್ ಕುಮಾರ್ ಸಿಂಗ್ ತಿಳಿಸಿದರು.

ಸುರಂಗ ರಸ್ತೆ: 9ಕ್ಕೆ ಸಮಾಲೋಚನೆ


ಲಾಲ್‌ಬಾಗ್‌ನಲ್ಲಿ ಶಾಫ್ಟ್ ನಿರ್ಮಿಸಲು ಗುರುತಿಸಿರುವ ಆರು ಎಕರೆ ಪ್ರದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರ–ದಕ್ಷಿಣ ಸುರಂಗ ರಸ್ತೆ ಯೋಜನೆಯು ಲಾಲ್‌ಬಾಗ್‌ನ ಭೂಮಿಯೊಳಗೆ ಸಾಗುವ ಬಗ್ಗೆ ಅಧ್ಯಯನ ನಡೆಸುತ್ತಿರುವ ಭಾರತೀಯ ಭೂವಿಜ್ಞಾನ ಸಮೀಕ್ಷೆಯ (ಜಿಎಸ್‌ಐ) ಹಿರಿಯ ಅಧಿಕಾರಿಗಳನ್ನು ಭೇಟಿ ಮಾಡಿ ತಮ್ಮ ಆತಂಕವನ್ನು ಹೇಳಿಕೊಳ್ಳಲು ನಾಗರಿಕ ಸಂಘಟನೆಗಳು ನಿರ್ಧರಿಸಿವೆ.

ಜಿಎಸ್‌ಐನ ದಕ್ಷಿಣ ವಲಯದ ಹೆಚ್ಚುವರಿ ಮಹಾ ನಿರ್ದೇಶಕ ವಿಜಯ್ ವಿಷ್ಣುಪಂತ್ ಅವರು ಗುರುವಾರ ನಾಗರಿಕರನ್ನು ಭೇಟಿ ಮಾಡುವ ನಿರೀಕ್ಷೆ ಇದೆ. ಈ ಭೇಟಿಯ ಸಂದರ್ಭದಲ್ಲಿ, ನಾಗರಿಕರು ಮನವಿ ಸಲ್ಲಿಸಿ, 240 ಎಕರೆ ವಿಸ್ತೀರ್ಣದ ಲಾಲ್‌ಬಾಗ್ ಅನ್ನು ವಿಶ್ವ ಪಾರಂಪರಿಕ ತಾಣವಾಗಿ ಉಳಿಸಲು ಕೋರಲಿದ್ದಾರೆ.

ಕರ್ನಾಟಕದಲ್ಲಿ, ಉತ್ತರ ಕನ್ನಡದ ಯಾಣ, ಉಡುಪಿಯ ಸೇಂಟ್ ಮೇರಿ ದ್ವೀಪ ಸೇರಿದಂತೆ ಆರು ಸ್ಥಳಗಳನ್ನು ಜಿಯೊ– ಪಾರಂಪರಿಕ ತಾಣಗಳೆಂದು ಜಿಎಸ್‌ಐ ಗುರುತಿಸಿದೆ. ಇದರಲ್ಲಿ ಲಾಲ್‌ಬಾಗ್‌ನಲ್ಲಿರುವ ಹಳೆಯ ಶಿಲಾ ರಚನೆಗಳ ಪೆನಿನ್ಸುಲರ್ ಗ್ನೀಸ್ ಕೂಡಾ ಒಂದಾಗಿದೆ. ಪೆನಿನ್ಸುಲರ್ ಗ್ನೀಸ್ ಸುಮಾರು 3,000 ದಶಲಕ್ಷ ವರ್ಷಗಳ ಅತ್ಯಂತ ಪುರಾತನ ಮತ್ತು ಮಹತ್ವದ ಬಂಡೆ ಎಂದು ಗುರುತಿಸಲಾಗಿದೆ. ಇವುಗಳು ಆರ್ಕಿಯನ್ ಸಮಯದಲ್ಲಿ ರೂಪುಗೊಂಡಿವೆ. ಇವು ಮುಖ್ಯವಾಗಿ ಟೋನಲೈಟ್ - ಟ್ರಾಂಡ್ಜೆಮೈಟ್ - ಗ್ರಾನೋಡಯೋರೈಟ್ (ಟಿಟಿಜಿ) ಶಿಲೆಗಳಿಂದ ರೂಪುಗೊಂಡಿವೆ ಎಂದು ಹೇಳಲಾಗಿದೆ.

ಉದ್ಯಾನದ ಉಸ್ತುವಾರಿ ತೋಟಗಾರಿಕೆ ಇಲಾಖೆಯದ್ದಾಗಿದ್ದು, ಜಿಎಸ್‌ಐ ಕೂಡ ಜಿಯೊ–ಪಾರಂಪರಿಕ ತಾಣದ ರಕ್ಷಕನ ಜವಾಬ್ದಾರಿ ಹೊಂದಿದೆ.

ಸುರಂಗ ರಸ್ತೆ ಯೋಜನೆಯ ವಿಸ್ತೃತ ಯೋಜನಾ ವರದಿಯನ್ನು (ಡಿಪಿಆರ್) ಅಂತಿಮಗೊಳಿಸುವ ಮುನ್ನ ಜಿಎಸ್‌ಐ ಅಧಿಕಾರಿಗಳನ್ನು ಸಂಪರ್ಕಿಸಿಲ್ಲ. ಡಿಪಿಆರ್ ಪ್ರಕಾರ, ಸುರಂಗ ರಸ್ತೆ ನಿರ್ಮಿಸುವಾಗ ಲಾಲ್‌ಬಾಗ್‌ನ ಆರು ಎಕರೆ ಜಾಗವನ್ನು ಬಳಸಿಕೊಳ್ಳಲಾಗುತ್ತದೆ, ಒಂದು ಎಕರೆ ಶಾಶ್ವತವಾಗಿ ಯೋಜನೆಯ ಭಾಗವಾಗಲಿದೆ. ಅಲ್ಲದೆ, ಬಂಡೆಗಳ ಕೆಳಗೇ ಸುರಂಗ ರಸ್ತೆ ಹಾದುಹೋಗಲಿದೆ.

ಸಂಸದ ತೇಜಸ್ವಿ ಸೂರ್ಯ ಅವರು ಕೇಂದ್ರ ಗಣಿ ಸಚಿವ ಜಿ. ಕೃಷ್ಣಾರೆಡ್ಡಿ ಅವರನ್ನು ಭೇಟಿ ಮಾಡಿ, ನಾಗರಿಕರು ಸುರಂಗ ರಸ್ತೆ ಬಗ್ಗೆ ಹೊಂದಿರುವ ಆತಂಕವನ್ನು ವಿವರಿಸಿದ್ದರು. ಹೀಗಾಗಿ, ಜಿಎಸ್‌ಐ ತಜ್ಞರ ಸಮಿತಿ ಲಾಲ್‌ಬಾಗ್‌ನಲ್ಲಿ ಅಧ್ಯಯನ ನಡೆಸಿ, ಮೂರು ವಾರದಲ್ಲಿ ವರದಿಯನ್ನು ಸಲ್ಲಿಸಲಿದೆ.

ಚಿಟಿಕೆ ಸುದ್ದಿ

ದ್ವಿಭಾಷಾ ಸೂತ್ರ ಕಡ್ಡಾಯಕ್ಕೆ ಒತ್ತಾಯ

ಬೆಂಗಳೂರು: ರಾಜ್ಯ ಸರ್ಕಾರ ಶಾಲಾ ಶಿಕ್ಷಣದಲ್ಲಿ ದ್ವಿಭಾಷಾ ಸೂತ್ರವನ್ನು ಕಡ್ಡಾಯಗೊಳಿಸಬೇಕು. ರಾಜ್ಯ ಶಿಕ್ಷಣ ನೀತಿಯನ್ನು 2026–27ನೇ ಸಾಲಿನ ಶೈಕ್ಷಣಿಕ ಹಂತದಿಂದಲೇ ಜಾರಿಗೊಳಿಸಬೇಕು ಎಂದು ಕರ್ನಾಟಕ ರಾಜ್ಯ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಸಮನ್ವಯ ವೇದಿಕೆ ಒತ್ತಾಯಿಸಿದೆ.

ಶಿಕ್ಷಣ ಹಕ್ಕು ಕಾಯ್ದೆ–2009 ಅನ್ನು ಪೂರ್ಣಪ್ರಮಾಣದಲ್ಲಿ ಜಾರಿಗೊಳಿಸಲು ಕ್ರಿಯಾ ಯೋಜನೆ ರೂಪಿಸಬೇಕು. 8ನೇ ತರಗತಿಯವರೆಗೆ ಮಾತೃಭಾಷೆಯಲ್ಲೇ ಶಿಕ್ಷಣ ನೀಡಬೇಕು ಎಂಬುದು ಸೇರಿದಂತೆ 15 ನಿರ್ಣಯಗಳನ್ನು ವೇದಿಕೆಯ ಮಹಾ ಪೋಷಕ ವಿ.ಪಿ.ನಿರಂಜನಾರಾಧ್ಯ ಅಧ್ಯಕ್ಷತೆಯಲ್ಲಿ ಸೋಮವಾರ ಆಯೋಜಿಸಿದ್ದ ರಾಜ್ಯ ಸಮಿತಿ ಸಭೆಯಲ್ಲಿ ಅಂಗೀಕರಿಸಲಾಯಿತು.

ಹೆದ್ದಾರಿಗೆ ಮಣ್ಣು ಸುರಿದು ಪ್ರತಿಭಟನೆ

ಚಿಕ್ಕಬಳ್ಳಾಪುರ: ಶಿಡ್ಲಘಟ್ಟ ತಾಲ್ಲೂಕಿನ ಜಂಗಮಕೋಟೆ ಹೋಬಳಿಯ 13 ಹಳ್ಳಿಗಳ ಫಲವತ್ತಾದ ಕೃಷಿ ಜಮೀನು ಸ್ವಾಧೀನ ವಿರೋಧಿಸಿ ಜಿಲ್ಲಾಧಿಕಾರಿ ಕಚೇರಿ ಎದುರು ನಡೆಯುತ್ತಿರುವ ಅನಿರ್ದಿಷ್ಟಾವಧಿ ಧರಣಿ ಸೋಮವಾರ ಪೊಲೀಸರು ಮತ್ತು ರೈತ ಸಂಘದ ಕಾರ್ಯಕರ್ತರ ತೀವ್ರ ಜಟಾಪಟಿಗೆ ಸಾಕ್ಷಿಯಾಯಿತು.

ಜಿಲ್ಲಾಡಳಿತ ಭವನದ ಮುಂಭಾಗದ ರಾಷ್ಟ್ರೀಯ ಹೆದ್ದಾರಿ 234ಕ್ಕೆ ಮಣ್ಣು ಸುರಿದ ರೈತ ಸಂಘದ ಕಾರ್ಯಕರ್ತರು ಟ್ರ್ಯಾಕ್ಟರ್‌ಗಳನ್ನು ಅಡ್ಡಲಾಗಿ ನಿಲ್ಲಿಸಿದರು. ಇದರಿಂದ ಸಂಚಾರಕ್ಕೆ ಅಡ್ಡಿಯಾಯಿತು. ಸ್ಥಳಕ್ಕೆ ಬಂದ ಪೊಲೀಸರು ಟ್ರ್ಯಾಕ್ಟರ್‌ಗಳನ್ನು ತೆರವುಗೊಳಿಸಲು ಮುಂದಾದಾಗ ಜಟಾಜಟಿ ತೀವ್ರವಾಯಿತು. ರೈತ ಸಂಘದ ಕಾರ್ಯಕರ್ತರು ಹೆದ್ದಾರಿಯಲ್ಲಿಯೇ ಧರಣಿ ಕುಳಿತರು. ಕೆಐಎಡಿಬಿ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿದರು. ಸ್ಥಳಕ್ಕೆ ಬಂದ ಜಿಲ್ಲಾಧಿಕಾರಿ ಜಿ.ಪ್ರಭು ಪ್ರತಿಭಟನಕಾರರ ಜೊತೆ ಸಂಧಾನ ನಡೆಸಿದರು.

ಅಧಿವೇಶನಕ್ಕೆ ಆಗ್ರಹ

ಬೆಂಗಳೂರು: ಅಮೆರಿಕ ಹಾಗೂ ಐರೋಪ್ಯ ಒಕ್ಕೂಟಗಳ ಜೊತೆ ಭಾರತ ಮಾಡಿಕೊಳ್ಳುತ್ತಿರುವ ಮುಕ್ತ ವಾಣಿಜ್ಯ ಒಪ್ಪಂದಗಳಿಂದ ಆಗಲಿರುವ ಪರಿಣಾಮಗಳ ಕುರಿತು ಚರ್ಚಿಸಲು ವಿಧಾನ ಮಂಡಲದ ವಿಶೇಷ ಅಧಿವೇಶನ ಕರೆಯುವಂತೆ 'ದ ವೇ ಫಾರ್ವರ್ಡ್ ವೇದಿಕೆ' ಒತ್ತಾಯಿಸಿದೆ. 'ಹಿಮಾಚಲ ಪ್ರದೇಶ ಹಾಗೂ ಪಂಜಾಬ್‌ನಲ್ಲಿ ವಿಶೇಷ ಅಧಿವೇಶನ ಕರೆದು ರೈತರು ಹಾಗೂ ಜನರ ಹಿತ ಕಾಯುವ ನಿರ್ಣಯ ಕೈಗೊಳ್ಳಲಾಗಿದೆ. ಅದೇ ಮಾದರಿಯನ್ನು ಅನುಸರಿಸಬೇಕು' ಎಂದು ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಸದಸ್ಯ ಟಿ.ಎನ್.ಪ್ರಕಾಶ್ ಕಮ್ಮರಡಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬರೆದಿರುವ ಪತ್ರದಲ್ಲಿ ಆಗ್ರಹಿಸಿದ್ದಾರೆ.

ಅ.ನ.ಯಲ್ಲಪ್ಪರೆಡ್ಡಿ, ಕೆ.ನಾರಾಯಣ ಗೌಡ, ನಗರದ ಮಹದೇವಪ್ಪ, ಎಸ್.ಜಿ.ಸಿದ್ದರಾಮಯ್ಯ, ವಿಜಯಮ್ಮ, ಕೆ.ಟಿ.ಗಂಗಾಧರ್, ಕುರಬೂರು ಶಾಂತಕುಮಾರ್, ತೇಜಸ್ವಿ ಪಟೇಲ್, ಶಾರದಾ ಗೋಪಾಲ್, ಕಾತ್ಯಾಯಿನಿ ಚಾಮರಾಜ್ ಸಹಿತ ಹಲವರು ಬೆಂಬಲಿಸಿದ್ದಾರೆ.

ಬೀದರ್, ಕಲಬುರಗಿ ರೈಲುಗಳ ಸಂಚಾರ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಬೆಂಗಳೂರು: ಕಲಬುರಗಿ ಮತ್ತು ಬೀದರ್ ನಗರಗಳಿಗೆ ಬೆಂಗಳೂರಿನಿಂದ ಸಂಚರಿಸುವ ವಿಶೇಷ ಎಕ್ಸ್‌ಪ್ರೆಸ್ ರೈಲಿನ ಅವಧಿಯನ್ನು ಎರಡು ವಾರ ವಿಸ್ತರಿಸಲಾಗಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಬೇಸಿಗೆಯ ಅವಧಿಯಲ್ಲಿ ಪ್ರಯಾಣಿಕರ ಹೆಚ್ಚುವರಿ ದಟ್ಟಣೆಯನ್ನು ನಿಯಂತ್ರಿಸಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ಅವರು ವಿವರ ನೀಡಿದ್ದಾರೆ.

ಬೆಂಗಳೂರಿನ ಕಂಟೋನ್ಮೆಂಟ್‌ನಿಂದ ಕಲಬುರಗಿಗೆ ಪ್ರತಿ ಶನಿವಾರ ರೈಲು ಹೊರಡಲಿದೆ. ಏಪ್ರಿಲ್ 11ರಿಂದ 25ರವರೆಗೆ ಸಂಚರಿಸಲಿದೆ. ಕಲಬುರಗಿಯಿಂದ ಕಂಟೋನ್ಮೆಂಟ್‌ಗೆ ಪ್ರತಿ ಭಾನುವಾರ ಹೊರಡುವ ರೈಲು ಏ.12 ರಿಂದ 26ರವರೆಗೆ ಕಾರ್ಯ ನಿರ್ವಹಿಸಲಿದೆ. ಈ ರೈಲುಗಳು ಎರಡೂ ದಿಕ್ಕುಗಳಲ್ಲಿ ತಲಾ ಮೂರು ಟ್ರಿಪ್ ಹೊಂದಿವೆ.

ಎಸ್‌ಎಂವಿಟಿ ಬೆಂಗಳೂರಿನಿಂದ ಬೀದರ್‌ಗೆ ಪ್ರತಿ ಶುಕ್ರವಾರ ಮತ್ತು ಭಾನುವಾರ ಸಂಚರಿಸುವ ರೈಲು ಏ. 10ರಿಂದ 26ರವರೆಗೆ ಹಾಗೂ ಮರು ಪ್ರಯಾಣದಲ್ಲಿ ಬೀದರ್‌ನಿಂದ ಎಸ್‌ಎಂವಿಟಿಗೆ ಪ್ರತಿ ಶನಿವಾರ ಮತ್ತು ಸೋಮವಾರ ಸಂಚರಿಸುವ ರೈಲು ಏ. 11ರಿಂದ 27ರವರೆಗೆ ಇರಲಿದೆ. ಈ ರೈಲುಗಳು ಎರಡೂ ದಿಕ್ಕುಗಳಲ್ಲಿ ಒಟ್ಟು 6 ಟ್ರಿಪ್ ಹೊಂದಿವೆ.

ಈ ಎರಡು ವಿಶೇಷ ರೈಲುಗಳ ಅವಧಿ ಮಾರ್ಚ್ ಕೊನೆಗೆ ಮುಕ್ತಾಯವಾಗಿತ್ತು. ಈ ಎರಡು ರೈಲುಗಳು ಸೇರಿ ಒಟ್ಟು 16 ರೈಲುಗಳನ್ನು ಸಾಮಾನ್ಯ ರೈಲುಗಳನ್ನಾಗಿ ಪರಿವರ್ತಿಸಲು ರೈಲ್ವೆ ಮಂಡಳಿ ನಿರ್ಧಾರ ಕೈಗೊಂಡಿತ್ತು. ಹಾಗಾಗಿ ವಿಶೇಷ ರೈಲುಗಳ ಅವಧಿ ವಿಸ್ತರಣೆಗೊಂಡಿರಲಿಲ್ಲ. ಅಧಿಸೂಚನೆ ಹೊರಡಿಸದೇ ಇರುವುದರಿಂದ ಸಾಮಾನ್ಯ ರೈಲುಗಳೂ ಸಂಚರಿಸುತ್ತಿರಲಿಲ್ಲ. ಈ ಬಗ್ಗೆ 'ಪ್ರಜಾವಾಣಿ'ಯು 'ರೈಲು: ವಿಶೇಷವೂ ಇಲ್ಲ, ಸಾಮಾನ್ಯವೂ ಇಲ್ಲ' ಎಂಬ ಶೀರ್ಷಿಕೆಯಲ್ಲಿ ವಿಶೇಷ ವರದಿಯನ್ನು ಏ.5ರಂದು ಪ್ರಕಟಿಸಿತ್ತು.

ನಗರದಲ್ಲಿ ಆಟೊಗಳಿಗೆ ಎಲ್‌ಪಿಜಿ ವಿತರಿಸುವ ಬಹುತೇಕ ಸ್ಟೇಷನ್‌ಗಳು ಬಂದ್

ಪೆಟ್ರೋಲ್ ಬಳಕೆಗೆ ಆಟೊ ಚಾಲಕರ ಹಿಂದೇಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಟೊಗಳಿಗೆ ನಿತ್ಯ ಬೇಡಿಕೆಯಷ್ಟು ಎಲ್‌ಪಿಜಿ ಸಿಗದೇ ಇರುವುದರಿಂದ ಪೆಟ್ರೋಲ್ ಬಳಸುವಂತೆ ತೈಲ ಕಂಪನಿಗಳು ಹಾಗೂ ರಾಜ್ಯ ಸರ್ಕಾರ ಸೂಚನೆ ನೀಡಿದ್ದರೂ, ಚಾಲಕರು ಇದಕ್ಕೆ ಒಪ್ಪುತ್ತಿಲ್ಲ.

'ನಾವು ಎಲ್‌ಪಿಜಿ ಬಳಕೆಯ ಎಂಜಿನ್ ಹೊಂದಿರುವ ಆಟೊಗಳನ್ನು ಬಳಸುತ್ತಿದ್ದೇವೆ. ಪೆಟ್ರೋಲ್ ಬಳಸಲು ಅವಕಾಶವಿದ್ದರೂ ಅದು ಅತ್ಯಲ್ಪ. ಪೆಟ್ರೋಲ್ ದರ ದುಬಾರಿ ಆಗಿರುವುದರಿಂದ ಇದು ಕಷ್ಟ' ಎಂದು ಆಟೊ ಚಾಲಕರು ತಿಳಿಸಿದ್ದಾರೆ.

'ಆಟೊಗಳಿಗೆ ಎಲ್‌ಪಿಜಿ ಸಿಗದೇ ಇದ್ದರೆ ಪೆಟ್ರೋಲ್ ಬಳಸಿ ಎಂದು ಹೇಳುವುದು ಸುಲಭ. ಆದರೆ, ಅದು ಕಾರ್ಯಸಾಧುವಲ್ಲ' ಎಂದು ಸಾರಥಿ ಆಟೊ ಚಾಲಕರ ಸಂಘದ ಅಧ್ಯಕ್ಷ ರಾಮೇಗೌಡ ತಿಳಿಸಿದರು.

'ಎಲ್‌ಪಿಜಿ ಕಿಟ್ ಇರುವ ಆಟೊಗಳಲ್ಲಿ 2.5ರಿಂದ 3 ಲೀಟರ್ ತುಂಬಬಲ್ಲ ಪೆಟ್ರೋಲ್ ಟ್ಯಾಂಕ್ ಇರುತ್ತದೆ. ಒಂದು ಲೀಟರ್‌ಗೆ 10 ಕಿ.ಮೀ. ಮೈಲೇಜ್ ಬರುತ್ತದೆ. ಗ್ಯಾಸ್‌ನಲ್ಲಿ ಒಂದು ಲೀಟರ್‌ಗೆ 22 ಕಿ.ಮೀ. ಕ್ರಮಿಸಲು ಸಾಧ್ಯ. ಅಲ್ಲದೇ ಟ್ಯಾಂಕ್ 14 ಲೀಟರ್‌ನದ್ದಾಗಿದ್ದು, ಒಂದು ಬಾರಿ ತುಂಬಿಸಿದರೆ ಸುಮಾರು 300 ಕಿ.ಮೀ. ಓಡಿಸಬಹುದು' ಎಂದು ವಿವರಿಸಿದರು.

ಆಟೊಗಳಿಗೆ ಎಲ್‌ಪಿಜಿ ಸರಬರಾಜು ಪ್ರಮಾಣ ಗಣನೀಯವಾಗಿ ಕಡಿಮೆ ಆಗಿರುವುದರಿಂದ ಚಾಲಕರ ಪರದಾಟ ಮುಂದುವರಿದಿದೆ.

ಬೆಂಗಳೂರಿನಲ್ಲಿ ಆಟೊಗಳಿಗೆ ಎಲ್‌ಪಿಜಿ ವಿತರಿಸುವ ಬಹುತೇಕ ಸ್ಟೇಷನ್‌ಗಳು ಬಂದ್ ಆಗಿವೆ. ಕೆಲವು ಮಧ್ಯಾಹ್ನದವರೆಗೆ ಮಾತ್ರ ಸೇವೆ ನೀಡುತ್ತಿವೆ. ಇದರಿಂದ ಆಟೊ ಚಾಲಕರು ಎಲ್‌ಪಿಜಿ ಸ್ಟೇಷನ್ ಹುಡುಕಿಕೊಂಡು ಕಿ.ಮೀ ಗಟ್ಟಲೇ ಕ್ರಮಿಸುವ ಸನ್ನಿವೇಶ ನಿರ್ಮಾಣವಾಗಿದೆ.

'ಹೆಚ್ಚಿನ ಪ್ರಮಾಣದಲ್ಲಿ ಎಲ್‌ಪಿಜಿ ಸರಬರಾಜು ಆಗಬಹುದು ಎಂದು ಎರಡು ದಿನದಿಂದ ಕಾಯುತ್ತಲೇ ಇದ್ದೇವೆ. ಮಂಗಳವಾರ ಬರುವ ನಿರೀಕ್ಷೆಯಿದೆ. ಸ್ಟೇಷನ್ ನಡೆಸಿದರೆ ನೌಕರರಿಗೆ ಸಂಬಳ ನೀಡಿ ನಿರ್ವಹಣೆ ಮಾಡಲು ಸಾಧ್ಯವಾಗಲಿದೆ. ಈ ಕಾರಣದಿಂದ ಲಭ್ಯ ಇರುವ ಎಲ್‌ಪಿಜಿ ಮಾರಾಟ ಮುಂದುವರಿಸಿದ್ದೇವೆ' ಎಂದು ಸ್ಟೇಷನ್ ಮಾಲೀಕ ಪ್ರಕಾಶ್ ಕುಮಾರ್ ಹೇಳಿದರು.


ಸೆಂಟ್ ಮಾರ್ಕ್ಸ್ ರಸ್ತೆಯ ಸ್ಟೇಷನ್ ಒಂದರಲ್ಲಿ ಎಲ್‌ಪಿಜಿ ತುಂಬಿಸಿಕೊಳ್ಳಲು ಸರತಿಯಲ್ಲಿ ನಿಂತ ಆಟೊಗಳು

ಚಾಲಕರಿಗೆ ಸಂಕಷ್ಟ

ಎಲ್‌ಪಿಜಿ ಸಿಗದ ಕಾರಣ ಆಟೊ ಚಾಲಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಅನಿಲ ಲಭ್ಯವಾದರೆ ಮಾತ್ರ ಪ್ರಯಾಣಿಕರನ್ನು ಕರೆದುಕೊಂಡು ಹೋಗುತ್ತಾರೆ. ಇಲ್ಲದೇ ಇದ್ದರೆ ಆದಾಯವೂ ಇಲ್ಲ. ಹೀಗಾಗಿ ಸಾಲ ಮಾಡಿ ಆಟೊ ಮಾಲೀಕರಿಗೆ ದಿನದ ಬಾಡಿಗೆ ಪಾವತಿಸುವಂತಾಗಿದೆ.

ಕೆಲವರು ಮನೆಯಲ್ಲಿನ ಆಭರಣ ಅಡವಿಟ್ಟು ಆಟೊ ಬಾಡಿಗೆ ಪಾವತಿಸಿದ ಪ್ರಕರಣಗಳೂ ನಡೆದಿವೆ.

'ಆಟೊ ಬಾಡಿಗೆಗೆ ಪಡೆದ ಹಣವನ್ನು ಮಾಲೀಕರಿಗೆ ಅಂದೇ ನೀಡಬೇಕು. ಒಂದೆರಡು ದಿನ ಸಮಯ ನೀಡಿದರೂ, ನಂತರವಾದರೂ ಕೊಡಲೇಬೇಕು. ಈಗ ವಹಿವಾಟು ಇಲ್ಲದ ಕಾರಣ ಕಿರಿಕಿರಿ ಅನುಭವಿಸುವಂತಾಗಿದೆ' ಎಂದು ಚಾಲಕರೊಬ್ಬರು ಹೇಳಿದರು.

'ದೇಶದ ಉನ್ನತಿಗೆ ಸಂವಿಧಾನ ಅನುಸರಿಸಿ'

ಪ್ರಜಾವಾಣಿ ವಾರ್ತೆ

ನೆಲಮಂಗಲ: ಜನರ ಹಿತ, ದೇಶದ ಉನ್ನತಿಗಾಗಿ ವಿದ್ಯಾರ್ಥಿಗಳು, ಯುವಕರು ಸಂವಿಧಾನದಕ್ಕೆ ಅನುಗುಣವಾಗಿ ನಡೆಯಬೇಕು. ಅದಕ್ಕಾಗಿ 'ಸಂವಿಧಾನದ ಓದು' ಅಭಿಯಾನ ನಡೆಸಲಾಗುತ್ತಿದೆ' ಎಂದು ಹೈಕೋರ್ಟ್ ನ್ಯಾಯಮೂರ್ತಿ ಎಚ್.ಪಿ. ಸಂದೇಶ್ ತಿಳಿಸಿದರು.

ಹರ್ಷ ಸಂಸ್ಥೆಯು ಸಂಘಟಿಸಿದ್ದ 'ಸಂವಿಧಾನ ಓದು' ಜಿಲ್ಲಾ ಮಟ್ಟದ ಪ್ರಬಂಧ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಿಸಿ ಅವರು ಮಾತನಾಡಿದರು.

ಈ ದೇಶ ಪ್ರತಿಯೊಬ್ಬ ಪ್ರಜೆಗೆ ಸೇರಿದ್ದು ಎಂದ ಗಾಂಧೀಜಿಯ ಆಶಯವನ್ನು ಡಾ.ಬಿ.ಆರ್. ಅಂಬೇಡ್ಕರ್ ದಾಖಲಿಸಿರುವುದೇ ಸಂವಿಧಾನ. ಅದು ಎಲ್ಲ ಕಾಯ್ದೆಗಳ ತಾಯಿ ಎಂದರು.

ಅಭಿಯಾನದ ಸಂಯೋಜಕ, ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ಮಾತನಾಡಿ, 'ಸಂವಿಧಾನ ಓದು ಅಭಿಯಾನವನ್ನು 2018ರಲ್ಲಿ ಪ್ರಾರಂಭಿಸಿದ್ದು ವಿವಿಧ ಕಾನೂನುಗಳ ವಿಶೇಷ ಉಪನ್ಯಾಸವನ್ನು ಶಾಲಾ ಕಾಲೇಜುಗಳಲ್ಲಿ ಆಯೋಜಿಸಿದೆ. ಎಲ್ಲರಿಗೂ ಎಲ್ಲ ಸ್ವಾತಂತ್ರ್ಯವಿರಬೇಕು. ಅದು ಇನ್ನೊಬ್ಬರಿಗೆ ಹಿಂಸೆಯನ್ನು ಕೊಡಬಾರದು ಎಂಬುದು ಸಂವಿಧಾನದ ತತ್ವ' ಎಂದರು.


ವಕೀಲರ ಸಂಘದ ಅಧ್ಯಕ್ಷ ಕೇಶವಮೂರ್ತಿ, ಹರ್ಷ ಸಮೂಹದ ಅಧ್ಯಕ್ಷ ಸಂಘಟಕ ಎಸ್.ಶಿವಕುಮಾರ್, ಸಂಚಾಲಕ ರಾಜಶೇಖರ್ ಗೊರೂರು, ದಲಿತ ಹಕ್ಕುಗಳ ಸಮಿತಿ ಉಪಾಧ್ಯಕ್ಷ ಸಿ.ಬಿ. ರಾಜಶೇಖರಮೂರ್ತಿ, ಹರ್ಷ ಮ್ಯಾನೇಜ್‌ಮೆಂಟ್ ಕಾಲೇಜು ಪ್ರಾಂಶುಪಾಲರಾದ ಸಂಧ್ಯಾ, ರುದ್ರೇಶ್ ಅದರಂಗಿ ಭಾಗವಹಿಸಿದ್ದರು.



ಸಂವಿಧಾನ ಓದು ಅಭಿಯಾನದ ಪ್ರಯುಕ್ತ ಹಮ್ಮಿಕೊಂಡಿದ್ದ ಜಿಲ್ಲಾಮಟ್ಟದ ಪ್ರಬಂಧ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಿಸಲಾಯಿತು

ಬಹುಜೋಡಿ ಮೂತ್ರಪಿಂಡ ಕಸಿಗೆ ಅನುಮತಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜ್ಯದಾದ್ಯಂತ ನೋಂದಾಯಿತ ಎಲ್ಲಾ ಅಂಗಾಂಗ ಕಸಿ ಕೇಂದ್ರಗಳಲ್ಲಿ ಬಹುಜೋಡಿ ಮೂತ್ರಪಿಂಡ ಕಸಿ ಮಾಡಲು ರಾಜ್ಯ ಸರ್ಕಾರ ಅನುಮತಿ ನೀಡಿದೆ. ಇದರಿಂದ ಮೂತ್ರಪಿಂಡ ದಾನಕ್ಕಾಗಿ ಕಾಯುತ್ತಿರುವವರಿಗೆ ಅನುಕೂಲ ಆಗಲಿದೆ.

ಮೂತ್ರಪಿಂಡ ಕಸಿಗಾಗಿ ಕಾದಿರುವ ರೋಗಿಗಳ ನೆರವಿಗಾಗಿ ಬಹು ಜೋಡಿ (ಸ್ವೀಕೃತಿದಾರ-ದಾನಿ) ನಡುವೆ ಮೂತ್ರಪಿಂಡ ವಿನಿಮಯ ಸಾಧ್ಯವಾಗುವಂತೆ 'ಬಹು ಜೋಡಿ ಕಿಡ್ನಿ ವಿನಿಮಯ ಕಸಿ ಮಾರ್ಗಸೂಚಿ-2026' ಅನ್ನು ಏಪ್ರಿಲ್ 4ರಂದು ಸರ್ಕಾರ ಹೊರಡಿಸಿದೆ.

ಆರೋಗ್ಯ ಇಲಾಖೆ ಮಾನವ ಅಂಗಾಂಗ ಮತ್ತು ಅಂಗಾಂಶ ಗಳ ಕಸಿ ಕಾಯ್ದೆ (ತೋಟಾ ಕಾಯ್ದೆ), ಸುಪ್ರೀಂ ಕೋರ್ಟ್ ತೀರ್ಪು ಹಾಗೂ ಮಾನವೀಯ ದೃಷ್ಟಿಯಿಂದ ಈ ಮಾರ್ಗಸೂಚಿ ರೂಪಿಸಿದೆ.

ಇದರಿಂದ ಕಸಿ ಮಾನ್ಯತೆ ಪಡೆದ ಆಸ್ಪತ್ರೆಗಳು ಮೂರು ಅಥವಾ ಹೆಚ್ಚಿನ ಜೋಡಿಗಳ ನಡುವೆ ಕಿಡ್ನಿ ಕಸಿ ನಡೆಸಲು ಸಾಧ್ಯವಾಗಲಿದೆ.

ಶಸ್ತ್ರಚಿಕಿತ್ಸೆಗಳು ಸಾಮಾನ್ಯವಾಗಿ ಒಂದೇ ಸಮಯದಲ್ಲಿ ನಡೆಯಬೇಕು. ಒಂದು ವೇಳೆ ಸಾಧ್ಯವಾಗದಿದ್ದರೆ ಸಮನ್ವಯದೊಂದಿಗೆ ಕ್ರಮವಾಗಿ ನಡೆಸಲು ಅನುಮತಿ ಪಡೆಯಬೇಕು. ಶಸ್ತ್ರಚಿಕಿತ್ಸೆಯ ಬಳಿಕ ಮಾಹಿತಿಯನ್ನು ಸಲ್ಲಿಸಬೇಕು. ವಿಶೇಷ ಸಂಯೋಜಕರನ್ನು ನೇಮಿಸಿ ಸಂಪೂರ್ಣ ಪ್ರಕ್ರಿಯೆಯನ್ನು ಮೇಲ್ವಿಚಾರಣೆ ಮಾಡಲಾಗುತ್ತದೆ. ಅಂಗಾಂಗ ಕಸಿ ಮಾಡುವಿಕೆಯನ್ನು ರಾಜ್ಯ ಅಂಗ ಮತ್ತು ಅಂಗಾಂಶ ಕಸಿ ಸಂಸ್ಥೆಯಲ್ಲಿ (ಎಸ್‌ಒಟಿಟಿಒ) ನೋಂದಾಯಿಸಿರಬೇಕು.

ದಾನಿ, ಸ್ವೀಕೃತಿದಾರರ ಸಂಬಂಧಿ ಆಗಿರಬೇಕು. ಸ್ವೀಕರಿಸುವ ಜೋಡಿ ಜೈವಿಕ ಅಸಂಗತತೆ ಸೇರಿ ಇತರೆ ಸಮಸ್ಯೆಯುಳ್ಳ ದಾಖಲಾತಿ ಹೊಂದಿರಬೇಕು. ದಾನಿಗಳ ರಕ್ತ ಗುಂಪು ಸ್ವೀಕೃತಿದಾರರೊಂದಿಗೆ ಜೈವಿಕವಾಗಿ ಹೊಂದಾಣಿಕೆ ಆಗಬೇಕು. ಜಂಟಿ ಒಪ್ಪಂದ ಮಾಡಿಕೊಂಡಿರಬೇಕು.

ಮಧ್ಯವರ್ತಿಗಳು ಇರಬಾರದು, ಶಸ್ತ್ರಚಿಕಿತ್ಸೆಗೂ ಮುನ್ನ ಸಮಿತಿಯ ಅನುಮೋದನೆ ಪಡೆಯುವುದು ಅಗತ್ಯ ಎಂದು ಮಾರ್ಗಸೂಚಿಯಲ್ಲಿ ವಿವರಿಸಲಾಗಿದೆ.

ನಗರದಲ್ಲಿ ಇಂದು



ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ: ಉದ್ಘಾಟನೆ: ಶಾಲಿನಿ ರಜನೀಶ್, ಅತಿಥಿಗಳು: ಡಾ. ನಾಗಲಕ್ಷ್ಮೀ ಚೌಧರಿ, ಉಮಾ ಮಹದೇವನ್, ಸಪ್ತಮಿಗೌಡ, ಆಯೋಜನೆ ಮತ್ತು ಸ್ಥಳ: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನ, ಬೆಳಿಗ್ಗೆ 10

ಫರ್ಡಿನಾಂಡ್ ಕಿಟೆಲ್ ಜನ್ಮದಿನಾಚರಣೆ: ಆಯೋಜನೆ: ವಿಶ್ವ ಚೇತನ, ಸ್ಥಳ: ಮೆಯೋ ಹಾಲ್ ಮುಂದಿನ ಕಿರು ಉದ್ಯಾನ, ಎಂ.ಜಿ. ರಸ್ತೆ, ಬೆಳಿಗ್ಗೆ 11

12 ಮತ್ತು 13ನೇ ಘಟಿಕೋತ್ಸವ: ಅಧ್ಯಕ್ಷತೆ: ಥಾವರಚಂದ್ ಗೆಹಲೋತ್, ಉಪಸ್ಥಿತಿ: ಡಾ.ಎಂ.ಸಿ. ಸುಧಾಕರ್, ಎಸ್. ಅಹಲ್ಯಾ, ಡಾ.ಸಿ.ಎನ್. ಮಂಜುನಾಥ್, ಆಯೋಜನೆ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ, ಸೆಂಟ್ರಲ್ ಕಾಲೇಜಿನ ಆವರಣ, ಬೆಳಿಗ್ಗೆ 11.30

ಬಹುಮಾನ ವಿತರಣಾ ಸಮಾರಂಭ: ಅಧ್ಯಕ್ಷತೆ: ಸೋ ಮೇರಿ ಲೂಯಿಸಾ, ಅತಿಥಿ: ನಟರಾಜ್ ತಲಘಟ್ಟಪುರ, ಆಯೋಜನೆ ಮತ್ತು ಸ್ಥಳ: ಜ್ಯೋತಿ ನಿವಾಸ್ ಕಾಲೇಜು, ಕೋರಮಂಗಲ, ಮಧ್ಯಾಹ್ನ 12.30

ಶರಣ ಸಂಗಮ 'ಬಸವತತ್ವ ಅಂದು ಇಂದು' ಉಪನ್ಯಾಸ: ಸಾನ್ನಿಧ್ಯ: ಮಲ್ಲಿಕಾರ್ಜುನ ದೇವರು, ಅತಿಥಿಗಳು: ಡಿಂಪಲ್, ನಿವೇದಿತಾ ಭಾವಿಮನಿ, ಬಸವರಾಜು ಉಮ್ರಾಣಿ, ಆಯೋಜನೆ: ರಾಷ್ಟ್ರೀಯ ಬಸವತತ್ವ ಪರಿಷತ್ತು, ಸ್ಥಳ: ಡಾ.ಎಂ. ಚಿದಾನಂದಮೂರ್ತಿ ಸಭಾಂಗಣ, ಪಾಲಿಕೆ ಸೌಧ, ವಿಜಯನಗರ, ಸಂಜೆ 4.30

ಕನ್ನಡ ನಾಟಕೋತ್ಸವ–2026: 'ತಾಜ್ ಮಹಲಿನ ಟೆಂಡರ್' ನಾಟಕ ಪ್ರದರ್ಶನ, ಪ್ರಸ್ತುತಿ: ದೃಶ್ಯ, ನಿರ್ದೇಶನ: ದಾಕ್ಷಾಯಣಿ ಭಟ್ ಎ., ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡನಗರ, ಸಂಜೆ 6.30

'ಶಿವೋಹಂ' ನಾಟಕ ಪ್ರದರ್ಶನ: ನಿರ್ದೇಶನ: ಗಣೇಶ್ ಮಂದಾರ್ತಿ, ಆಯೋಜನೆ: ಕ್ರಾನಿಕಲ್ಸ್ ಆಫ್ ಇಂಡಿಯಾ, ರಂಗಭೂಮಿ ಉಡುಪಿ, ಸ್ಥಳ: ರಂಗಶಂಕರ, ಜೆ.ಪಿ. ನಗರ, ಸಂಜೆ 7.30

ಭಜನೆ ಮತ್ತು ಉಪನ್ಯಾಸ: ಭಜನೆ: ಜಾಹ್ನವಿ ಭಜನಾ ಮಂಡಳಿ, 'ಹರಿಸರ್ವೋತ್ತಮತ್ವ' ಉಪನ್ಯಾಸ: ರಾಮವಿಠಲಾಚಾರ್ಯ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ವ್ಯಾಸರಾಜ ಮಠ (ಸೋಸಲೆ), ಐದನೇ ಮುಖ್ಯರಸ್ತೆ, ಸುಬ್ರಹ್ಮಣ್ಯನಗರ, ರಾಜಾಜಿನಗರ ಎರಡನೇ ಹಂತ, ಸಂಜೆ 6



33ನೇ ಶ್ರೀರಾಮನವಮಿ ಸಂಗೀತೋತ್ಸವ: ಪಿಟೀಲು: ಅಂಬಿ ಸುಬ್ರಮಣಿಯಂ, ಮೃದಂಗ: ವಿ.ವಿ. ರಮಣಮೂರ್ತಿ, ಮೋರ್ಸಿಂಗ್: ಬಿ. ರಾಜಶೇಖರ್, ಆಯೋಜನೆ ಮತ್ತು ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ, ಸಂಜೆ 6.30

88ನೇ ಶ್ರೀರಾಮನವಮಿ ಸಂಗೀತೋತ್ಸವ: ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಅಭಿಷೇಕ್ ಎನ್.ಎಸ್., ಕಾರ್ತಿಕೇಯ ಆರ್., ಕೌಶಿಕ್ ಶ್ರೀಧರ್, ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಬಾಲು ಮಾಸ್ತಿ, ಎಚ್.ಎನ್. ಭಾಸ್ಕರ್, ಕೆ.ವಿ. ಪ್ರಸಾದ್, ಸುಕನ್ಯಾ ರಾಮಗೋಪಾಲ್, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 4.30 ರಿಂದ

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ತ್ರಿಭಾಷಾ ಸೂತ್ರ ಪಾಲನೆಗೆ ನಿರ್ದೇಶನ ನೀಡಿರುವುದಕ್ಕೆ ವಿರೋಧ

ರಾಜ್ಯಪಾಲರ ವಿರುದ್ಧ ಕರವೇ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಭಾಷಾ ಪತ್ರಿಕೆಗೆ ಅಂಕಗಳ ಬದಲು ಗ್ರೇಡ್ ವ್ಯವಸ್ಥೆ ಜಾರಿಗೆ ತಂದಿರುವುದನ್ನು ಪುನರ್ ಪರಿಶೀಲನೆ ಮಾಡುವಂತೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿರುವುದನ್ನು ಖಂಡಿಸಿ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಸೋಮವಾರ ಪ್ರತಿಭಟನೆ ನಡೆಸಿದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆದ ಪ್ರತಿಭಟನೆಯಲ್ಲಿ ರಾಜ್ಯಪಾಲರ ವಿರುದ್ಧ ಘೋಷಣೆಗಳನ್ನು ಕೂಗಿದ ಕಾರ್ಯಕರ್ತರು, 'ನಾಡದ್ರೋಹಿ ಧೋರಣೆ ಅನುಸರಿಸುತ್ತಿರುವ ರಾಜ್ಯಪಾಲರು ಕರ್ನಾಟಕ ಬಿಟ್ಟು ತೊಲಗಲಿ ' ಎಂದು ಆಗ್ರಹಿಸಿದರು.

'ನಾವು ಹಿಂದಿ ವಿರೋಧಿಗಳಲ್ಲ, ಹಿಂದಿ ಹೇರಿಕೆಯ ವಿರೋಧಿಗಳು' ಎಂಬ ಫಲಕ ಪ್ರದರ್ಶಿಸಿದರು.

ಹಿಂದಿ ಸಾಮ್ರಾಜ್ಯಶಾಹಿಗಳ ಪರವಾಗಿ ವರ್ತಿಸುತ್ತ ಕರ್ನಾಟಕ ವಿರೋಧಿ ಧೋರಣೆ ತಳೆದಿರುವ ರಾಜ್ಯಪಾಲರನ್ನು ಕೇಂದ್ರ ಸರ್ಕಾರ ವಾಪಸ್ ಕರೆಯಿಸಿಕೊಳ್ಳಬೇಕು. ರಾಜ್ಯಪಾಲರು ಮುಖ್ಯ ಕಾರ್ಯದರ್ಶಿಗೆ ಬರೆದಿರುವ ಪತ್ರದ ಹಿಂದೆ, ರಾಜ್ಯದಲ್ಲಿ ಹಿಂದಿ ಹೇರಿಕೆಯನ್ನು ಶಾಶ್ವತವಾಗಿ ನಡೆಸುವ ಹುನ್ನಾರವಿದೆ. ಕನ್ನಡಿಗರ ಆಶೋತ್ತರ ಗಳಿಗೆ ವಿರುದ್ಧವಾಗಿ ನಡೆದುಕೊಂಡಿ ದ್ದಾರೆ ಎಂದು ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು.

ವೇದಿಕೆ ಅಧ್ಯಕ್ಷ ಟಿ.ಎ.ನಾರಾಯಣ ಗೌಡ ಮಾತನಾಡಿ, 'ಕನ್ನಡಿಗರ ಹಿತದೃಷ್ಟಿಗೆ ವಿರುದ್ಧವಾಗಿ ರಾಜ್ಯಪಾಲರು ಏನೇ ಹೇಳಿದರೂ ಅದನ್ನು ರಾಜ್ಯ ಸರ್ಕಾರ ಪರಿಗಣಿಸಬೇಕಿಲ್ಲ. ರಾಜ್ಯಪಾಲರ ಪತ್ರವನ್ನು ಕಸದ ಬುಟ್ಟಿಗೆ ಎಸೆಯಬೇಕು. ಹಿಂದೆ ಬ್ರಿಟಿಷ್ ಸಾಮ್ರಾಜ್ಯಶಾಹಿ ವಿರುದ್ಧ ಹೋರಾಡಿದ್ದೆವು. ಈಗ ಹಿಂದಿ ಸಾಮ್ರಾಜ್ಯಶಾಹಿ ಆಳಲು ಯತ್ನಿಸುತ್ತಿದೆ. ಇದಕ್ಕೆ ಅವಕಾಶ ಕೊಡುವುದಿಲ್ಲ' ಎಂದು ಹೇಳಿದರು.

'ರಾಜ್ಯಪಾಲರು ಹಿಂದಿ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಪತ್ರ ಬರೆದು ಅಲ್ಲೆಲ್ಲಾ ತೃತೀಯ ಭಾಷೆಯಾಗಿ ಕನ್ನಡ ಕಲಿಸಲು ತಾಕೀತು ಮಾಡಲಿ. ಅವರ ಸ್ವಂತ ರಾಜ್ಯ ಮಧ್ಯಪ್ರದೇಶದಲ್ಲಿ ಈಗಲೂ ಎರಡೇ ಭಾಷೆಗಳನ್ನು ಕಲಿಸಲಾಗುತ್ತಿದೆ. ಮೂರನೇ ಭಾಷೆಯನ್ನಾಗಿ ಕಡ್ಡಾಯವಾಗಿ ಕನ್ನಡ ಕಲಿಸುವಂತೆ ಅಲ್ಲಿನ ಸರ್ಕಾರದ ಮೇಲೆ ಅವರು ಒತ್ತಡ ಹೇರಲಿ. ಅದು ಸಾಧ್ಯವಿಲ್ಲದಿದ್ದರೆ ಕನ್ನಡಿಗರ ಮೇಲೆ ಯಾಕೆ ಹಿಂದಿ ಹೇರಲು ಯತ್ನಿಸುತ್ತಾರೆ' ಎಂದು ಪ್ರಶ್ನಿಸಿದರು.

'ರಾಜ್ಯದ ಶಿಕ್ಷಣ ನೀತಿಯನ್ನು ರಾಜ್ಯ ಸರ್ಕಾರ ತೀರ್ಮಾನಿಸುತ್ತದೆ. ಇದನ್ನು ಪ್ರಶ್ನಿಸಲು ರಾಜ್ಯಪಾಲರು ಯಾರು? ಅವರಿಗೆ ಸಂವಿಧಾನ ಈ ಅವಕಾಶ ನೀಡಿಲ್ಲ' ಎಂದರು.



ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಟಿ.ಎ. ನಾರಾಯಣಗೌಡ ನೇತೃತ್ವದಲ್ಲಿ ವೇದಿಕೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

ಆರೋಗ್ಯಕರ ದೇಹವೇ ಆಧ್ಯಾತ್ಮಿಕ ಜೀವನದ ನೆಲೆ

• ರಘು ವಿ.

ಮಾನವನ ಜೀವನವು ದೇಹ, ಮನಸ್ಸು ಮತ್ತು ಆತ್ಮ ಎಂಬ ಮೂರು ಅಂಶಗಳ ಸಮನ್ವಯವಾಗಿದೆ. ನಾವು ಸಾಮಾನ್ಯವಾಗಿ ಆತ್ಮ ಮತ್ತು ಮನಸ್ಸಿನ ಬೆಳವಣಿಗೆಯ ಬಗ್ಗೆ ಹೆಚ್ಚು ಯೋಚಿಸುತ್ತೇವೆ. ಆದರೆ ಈ ಎರಡಕ್ಕೂ ಆಧಾರವಾಗಿರುವುದು ದೇಹವೇ ಎಂಬ ಸತ್ಯವನ್ನು ಹಲವು ವೇಳೆ ಮರೆತುಬಿಡುತ್ತೇವೆ. ದೇಹ ಆರೋಗ್ಯವಾಗಿ ಇದ್ದರೆ ಮಾತ್ರ ಮನಸ್ಸು ಶಾಂತವಾಗಿರುತ್ತದೆ; ಮನಸ್ಸು ಶಾಂತವಾಗಿದ್ದರೆ ಮಾತ್ರ ಆಧ್ಯಾತ್ಮಿಕ ಬೆಳವಣಿಗೆ ಸಾಧ್ಯವಾಗುತ್ತದೆ.

ನಮ್ಮ ಶಾಸ್ತ್ರಗಳಲ್ಲಿ 'ಶರೀರಮಾಧ್ಯಂ ಖಲು ಧರ್ಮಸಾಧನಂ' ಎಂದು ಹೇಳಲಾಗಿದೆ. ಅಂದರೆ, ದೇಹವೇ ಧರ್ಮಸಾಧನೆಗೆ ಮುಖ್ಯ ಸಾಧನ. ಧ್ಯಾನ, ಜಪ, ಅಧ್ಯಯನ ಇವೆಲ್ಲವೂ ಸಾಧ್ಯವಾಗಬೇಕಾದರೆ ದೇಹ ಗಟ್ಟಿಯಾಗಿರಬೇಕು. ದೇಹ ದುರ್ಬಲವಾಗಿದ್ದರೆ, ಮನಸ್ಸು ಏಕಾಗ್ರತೆಯನ್ನು ಪಡೆಯುವುದಿಲ್ಲ; ಏಕಾಗ್ರತೆ ಇಲ್ಲದೆ ಆತ್ಮಚಿಂತನೆ ಸಾಧ್ಯವಾಗುವುದಿಲ್ಲ.

ಅಲಕ್ಸಿಸ್ ಕೆರಲ್ ತಮ್ಮ 'Man the Unknown' ಕೃತಿಯಲ್ಲಿ ಮಾನವನನ್ನು ಒಂದು ಸಮಗ್ರ ಏಕತೆಯಾಗಿ ನೋಡುತ್ತಾರೆ. ಅವರ ದೃಷ್ಟಿಯಲ್ಲಿ ದೇಹ, ಮನಸ್ಸು ಮತ್ತು ಆತ್ಮ ಪರಸ್ಪರ ಸಂಬಂಧವನ್ನು ಹೊಂದಿವೆ. ದೇಹವನ್ನು ನಿರ್ಲಕ್ಷಿಸಿದರೆ ಮನಸ್ಸು ಅಸ್ಥಿರವಾಗುತ್ತದೆ; ಮನಸ್ಸು ಅಸ್ಥಿರವಾದರೆ ಆಧ್ಯಾತ್ಮಿಕ ಬೆಳವಣಿಗೆ ಕುಂಠಿತವಾಗುತ್ತದೆ. ಅವರು ಹೇಳುವಂತೆ, ಮಾನವನು ತನ್ನದೇ ವ್ಯಕ್ತಿತ್ವವನ್ನು ರೂಪಿಸುವ ಶಿಲ್ಪಿ—'marble and sculptor'. ಈ ರೂಪುಗೊಳಿಸುವ ಪ್ರಕ್ರಿಯೆಯಲ್ಲಿ ದೇಹದ ಶಿಸ್ತೂ, ಆರೋಗ್ಯವೂ ಅಗತ್ಯ.

ವೇದಗಳಲ್ಲಿ ನಮ್ಮ ಇಂದ್ರಿಯಗಳು ಬಲವಾಗಿರಲಿ, ಆರೋಗ್ಯಕರವಾಗಿರಲಿ ಎಂದು ಪ್ರಾರ್ಥಿಸಲಾಗಿದೆ. ಅಲ್ಲಿನ ಶಾಂತಿ ಮಂತ್ರದಲ್ಲೇ ಹೀಗೆ ಪ್ರಾರ್ಥಿಸಲಾಗಿದೆ: 'ಓಂ ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ | ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ | ಸ್ಥಿರೈರಂಗೈಸ್ತುಷ್ಟುವಾಗಂಸಸ್ತನೂಭಿಃ | ವ್ಯಶೇಮ ದೇವಹಿತಂ ಯದಾಯುಃ ||'

[ಹೇ ದೇವತೆಗಳೇ, ನಾವು ನಮ್ಮ ಕಿವಿಗಳಿಂದ ಮಂಗಳಕರವಾದುದನ್ನು (ಒಳ್ಳೆಯದನ್ನು) ಕೇಳುವಂತಾಗಲಿ. ಯಜ್ಞ-ಯಾಗಾದಿಗಳನ್ನು ಮಾಡುವವರೇ, ನಾವು ನಮ್ಮ ಕಣ್ಣುಗಳಿಂದ ಮಂಗಳಕರವಾದುದನ್ನು ನೋಡುವಂತಾಗಲಿ. ದೃಢವಾದ ದೇಹ ಮತ್ತು ಅಂಗಾಂಗಗಳೊಂದಿಗೆ, ನಾವು ದೇವತೆಗಳನ್ನು ಸ್ತುತಿಸುತ್ತಾ. ದೇವತೆಗಳು ನಮಗೆ ನೀಡಿರುವ ಆಯಸ್ಸಿನವರೆಗೆ (ಜೀವಿತಾವಧಿ) ಸುಖವಾಗಿ ಬದುಕುವಂತಾಗಲಿ. ದೈಹಿಕ, ಆತ್ಮಿಕ ಮತ್ತು ಭೌತಿಕ ಶಾಂತಿ ನೆಲಸಲಿ.]

ಕಣ್ಣು, ಕಿವಿ, ಮನಸ್ಸುಗಳು ಅನುಭವದ ಬಾಗಿಲುಗಳು. ದೇಹವೆಂಬ ಯಂತ್ರವು ಸಮರ್ಥವಾಗಿ ಕಾರ್ಯನಿರ್ವಹಿಸಬೇಕಾದರೆ ಅದರ ಉಪಕರಣಗಳಾದ ಇಂದ್ರಿಯಗಳು ಸಮರ್ಪಕವಾಗಿ ಇರಬೇಕು. ಇವು ಶಕ್ತಿಯುತವಾಗಿದ್ದಾಗ ಮಾತ್ರ ಜೀವನವನ್ನು ಆಳವಾಗಿ ಅನುಭವಿಸಬಹುದು. ಅಧ್ಯಾತ್ಮವೆಂದರೆ ಬದುಕಿನ ನಿರಾಕರಣವಲ್ಲ ಅದು ಬದುಕಿನ ಸ್ವೀಕಾರ. ಬದುಕೆಂಬುದಕ್ಕೆ ಮೂಲ ಅಸ್ಮಿತೆ ಒದಗಿಸುವುದೇ ದೇಹ. ಹೀಗಾಗಿ ಅದನ್ನು ಗಟ್ಟಿಗೊಳಿಸಿದ ಬಳಿಕವಷ್ಟೆ ಮುಂದಿನ ಎಲ್ಲ ಸಾಧನೆಗಳು.

ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಸಮತೋಲನದ ಮಹತ್ವವನ್ನು ಹೇಳುತ್ತಾನೆ: ಅತಿಯಾಗಿ ತಿನ್ನುವುದೂ ತಪ್ಪು, ಅತಿಯಾಗಿ ಉಪವಾಸವೂ ತಪ್ಪು. ದೇಹವನ್ನು ಹಿಂಸಿಸುವುದು ಯೋಗಕ್ಕೆ ಸಹಾಯಕವಲ್ಲ. ಸಮತೋಲನ ಜೀವನವೇ ಆಧ್ಯಾತ್ಮಿಕತೆಗೆ ಸೂಕ್ತ ಮಾರ್ಗ. ಗೌತಮ ಬುದ್ಧರ ಜೀವನವೂ ಇದೇ ಸತ್ಯವನ್ನು ಪ್ರತಿಪಾದಿಸುತ್ತದೆ. ಕಠಿಣ ತಪಸ್ಸಿನಿಂದ ದೇಹವನ್ನು ಹಿಂಸಿಸಿದ ನಂತರ ಅವರು ಅರಿತುಕೊಂಡದ್ದು—ದೇಹವನ್ನು ದುರ್ಬಲಗೊಳಿಸುವುದರ ಮೂಲಕ ಮನಸ್ಸನ್ನು ಶಾಂತಗೊಳಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಅವರು 'ಮಧ್ಯಮಮಾರ್ಗ'ವನ್ನು ಸಾರಿದರು.

ದೈಹಿಕ ಕ್ಷಮತೆ ಎಂದರೆ ಕೇವಲ ಬಲವಲ್ಲ; ಅದು ಚೈತನ್ಯ, ಉತ್ಸಾಹ ಮತ್ತು ಸ್ಥೈರ್ಯ. ವ್ಯಾಯಾಮ, ಯೋಗ, ಪ್ರಾಣಾಯಾಮ. ಇವು ದೇಹವನ್ನು ಚುರುಕಾಗಿ ಇಡುತ್ತವೆ. ದೇಹ ಚುರುಕಾಗಿದ್ದರೆ ಮನಸ್ಸು ಚುರುಕಾಗುತ್ತದೆ; ಮನಸ್ಸು ಏಕಾಗ್ರವಾಗುತ್ತದೆ; ಧ್ಯಾನ ಸುಲಭವಾಗುತ್ತದೆ.

ಈ ಸತ್ಯವನ್ನು ಅತ್ಯಂತ ಸುಂದರವಾಗಿ ವಿವರಿಸುತ್ತಾರೆ, ಡಿ.ವಿ. ಗುಂಡಪ್ಪ ಅವರು ತಮ್ಮ ಮಂಕುತಿಮ್ಮನ ಕಗ್ಗದಲ್ಲಿ: 'ಕಲ್ಮಷದ ವಲ್ಮೀಕವೆಂದೊಡಲ ಜರೆಯದಿರು ಬ್ರಹ್ಮಪುರಿಯೆಂದದನು ಋಷಿಗಳೊರೆದಿಹರು, ಹಮ್ಮುಳ್ಳ ಹಯವ ಕಾಪಿಟ್ಟು ಕಡಿವಣ ತೊಡಿಸೆ ನಮ್ಮ ಗುರಿಗೈದಿಪುದು – ಮಂಕುತಿಮ್ಮ'. ಈ ಕಗ್ಗದ ಅರ್ಥ ಬಹಳ ಆಳವಾಗಿದೆ. ನಮ್ಮ ದೇಹವನ್ನು ಕೊಳೆಯ ಹುತ್ತವೆಂದು ತಳ್ಳಿಹಾಕಬಾರದು. ನಮ್ಮ ಋಷಿ– ಮುನಿಗಳು ಈ ದೇಹವನ್ನು ಪರಮಾತ್ಮನ ಆವಾಸಸ್ಥಾನವೆಂದು ಕರೆದಿದ್ದಾರೆ. ಒಂದು ಉತ್ತಮ ಕುದುರೆಯನ್ನು ಹೇಗೆ ಸಾಕಿ, ನಿಯಂತ್ರಿಸಿ, ಸರಿಯಾದ ದಾರಿಯಲ್ಲಿ ಓಡಿಸಿದರೆ ಅದು ತನ್ನ ಗುರಿಯನ್ನು ತಲುಪುತ್ತದೊ, ಹಾಗೆಯೇ ನಾವು ನಮ್ಮ ದೇಹವನ್ನು ಕಾಪಾಡಿಕೊಂಡು, ನಿಯಂತ್ರಣದಲ್ಲಿಟ್ಟು, ದೃಢವಾಗಿಟ್ಟುಕೊಂಡರೆ, ಅದೇ ದೇಹದ ಮೂಲಕ ನಮ್ಮ ಪರಮ ಗುರಿಯನ್ನು ತಲುಪಬಹುದು. ದೇಹವನ್ನು ನಿರ್ಲಕ್ಷಿಸುವುದಲ್ಲ, ಅದನ್ನು ಸಾಧನವಾಗಿ ಬಳಸುವುದೇ ಜೀವನದ ಸಾರ್ಥಕ್ಯ.

ಇಂದು ಕೆಲವರು ಆಧ್ಯಾತ್ಮಿಕತೆ ಎಂದರೆ ದೇಹವನ್ನು ತಳ್ಳಿಹಾಕುವುದು ಎಂದು ಭಾವಿಸುತ್ತಾರೆ. ಆದರೆ ನಿಜವಾದ ಆಧ್ಯಾತ್ಮಿಕತೆ ದೇಹವನ್ನು ಸಾಧನವಾಗಿ ಬಳಸುವುದರಲ್ಲಿ ಇದೆ. ದೇಹವು ಆತ್ಮನು ನೆಲಸಿರುವ ದೇವಸ್ಥಾನದಂಥದ್ದು; ಅದನ್ನು ಶುದ್ಧವಾಗಿ, ಆರೋಗ್ಯಕರವಾಗಿ ಇಡುವುದು ನಮ್ಮ ಕರ್ತವ್ಯ. ಆರೋಗ್ಯಕರ ದೇಹವೇ ಆಧ್ಯಾತ್ಮಿಕ ಜೀವನದ ಮೊದಲ ಹೆಜ್ಜೆ. ದೇಹವನ್ನು ಕಾಪಾಡಿ, ಮನಸ್ಸನ್ನು ಶಾಂತಗೊಳಿಸಿ, ಆತ್ಮವನ್ನು ಅರಿಯುವ ದಾರಿಗೆ ಸಾಗುವುದು ಮಾನವ ಜೀವನದ ನಿಜವಾದ ಸಾರ್ಥಕ್ಯ.



ದೇಹವನ್ನು ಫಿಟ್ ಆಗಿಡಲು

- ಪ್ರತಿದಿನ ಕನಿಷ್ಠ 30 ನಿಮಿಷ ವ್ಯಾಯಾಮ ಅಥವಾ ನಡಿಗೆ.
- ಸಮತೋಲನಯುತ, ಪೌಷ್ಟಿಕ ಆಹಾರಸೇವನೆ.
- ದಿನಕ್ಕೆ 6ರಿಂದ 8 ಗಂಟೆಗಳ ಉತ್ತಮ ನಿದ್ರೆ.
- ಸಾಕಷ್ಟು ನೀರು ಕುಡಿಯುವುದು.
- ಜಂಕ್ ಫುಡ್ ಮತ್ತು ಅಲಸ್ಯವನ್ನು ಕಡಿಮೆ ಮಾಡುವುದು.

ಮನಸ್ಸನ್ನು ಫಿಟ್ ಆಗಿಡಲು

- ದಿನವೂ ಧ್ಯಾನ ಮತ್ತು ಪ್ರಾಣಾಯಾಮದ ಅಭ್ಯಾಸ.
- ಧನಾತ್ಮಕ ಚಿಂತನೆ ಬೆಳೆಸಿಕೊಳ್ಳುವುದು.
- ಒತ್ತಡವನ್ನು ನಿಯಂತ್ರಿಸಿ, ಸಮತೋಲನ ಜೀವನ ನಡೆಸುವುದು.
- ಉತ್ತಮ ಪುಸ್ತಕಗಳನ್ನು ಓದುವ ಅಭ್ಯಾಸ.
- ಒಳ್ಳೆಯ ಸ್ನೇಹಿತರನ್ನು ಹೊಂದುವುದು ಮತ್ತು ಸಕಾರಾತ್ಮಕ ವಾತಾವರಣದಲ್ಲಿ ಇರುವುದು.



ನಿಧಾನವೇ ಪ್ರಧಾನವಾಗಿ ಕಾಯಿಲೆ ಆಗಬಲ್ಲದೆ?

• ಡಾ. ಕೆ.ಎಸ್. ಶುಭ್ರತಾ

ಶೇಖರ್ ಈಗಷ್ಟೇ ಹತ್ತನೇ ತರಗತಿ ಮುಗಿಸಿದ್ದಾನೆ. 'ಶೇಕಿ' ಎಂದೇ ಪ್ರೀತಿಯಿಂದ ಅಪ್ಪ ಅಮ್ಮ ಇವನನ್ನು ಕರೆಯುತ್ತಾರೆ. ಕೋವಿಡ್ ಸಂದರ್ಭದಿಂದ ಶೇಕಿ ಬದಲಾಗಿದ್ದಾನೆ ಎಂದು ಅಪ್ಪ ಅಮ್ಮನಿಗೆ ಅನ್ನಿಸುತ್ತದೆ. ಸ್ನಾನಕ್ಕೆ ಹೋದರೆ ಮೊದಮೊದಲು ಐದು ನಿಮಿಷದಲ್ಲಿ ಮುಗಿಸುತ್ತಿದ್ದಂತ ಶೇಕಿ, ಈಗ ನಲವತ್ತು ನಿಮಿಷಗಳಾದರೂ ಹೊರಬರುವುದಿಲ್ಲ. ಸ್ನಾನ ಮಾಡಿ ಹೊರಬಂದ ಮೇಲೆ ಬಟ್ಟೆಗಳನ್ನು ಹಾಕಿಕೊಂಡು ರೆಡಿಯಾಗಲು ಮತ್ತೆ ಇಪ್ಪತ್ತು ನಿಮಿಷಗಳು. ಓದುವುದಕ್ಕೆ ಕುಳಿತರೆ ಒಂದೇ ಪೇಜನ್ನು, ಒಂದು ಗಂಟೆ ಓದಿದರೂ ಮುಗಿದಿಲ್ಲವೆಂದು ಬೇಸರಪಡುತ್ತಾನೆ. ಗಾಡಿ ಪಾರ್ಕ್ ಮಾಡಲು ಹೋದರೂ ಕೂಡ ಹತ್ತು ನಿಮಿಷವಾದರೂ ಅವನಿಗೆ ಬೇಕು. ಈ ನಿಧಾನದಿಂದಾಗಿ ರೋಸಿ ಹೋಗಿರುವ ಅಪ್ಪ ಅಮ್ಮ, ಶೇಕಿಯನ್ನು ಪಿಯು ಓದಲು ಹಾಸ್ಟೆಲ್‌ಗೆ ಹಾಕುವ ನಿರ್ಧಾರವನ್ನು ತೆಗೆದುಕೊಂಡರು. ಹಾಸ್ಟೆಲ್‌ಗೆ ಹೋದ ಒಂದೇ ತಿಂಗಳಿನಲ್ಲಿ ಶೇಕಿಯ ನಿಧಾನ ಮತ್ತಷ್ಟು ಜಾಸ್ತಿಯಾಗಿದೆ. ಇದರ ಜೊತೆ ಮಾನಸಿಕ ಖಿನ್ನತೆಯ ಲಕ್ಷಣಗಳು ಕಾಣಿಸಿಕೊಂಡಿವೆ.

ರಾಶಿ ತಲೆನೋವಿಗಾಗಿ ಮನೋವೈದ್ಯರಲ್ಲಿ ಬಂದಿದ್ದಾಳೆ. ಪ್ರತಿದಿನವೂ ಕಾಡುವ ಸಣ್ಣದಾಗಿ ಇರುವ ತಲೆನೋವಿನಿಂದ ರಾಶಿಗೆ ಸಕತ್ ಕಿರಿಕಿರಿ. ಎಲ್ಲ ರೀತಿಯ ಸ್ಕ್ಯಾನ್‌ಗಳು ನಾರ್ಮಲ್ ಎಂದೇ ರಿಪೋರ್ಟ್ ಬಂದಿದೆ. ಆಪ್ತಸಮಾಲೋಚನೆಯಲ್ಲಿ, ರಾಶಿಗೆ ಇರುವಂತದ್ದು ಖಿನ್ನತೆಯ ಲಕ್ಷಣಗಳು ಎಂದು ಕಂಡುಬಂತು. ಏನಾದರೂ ಒತ್ತಡಗಳಿವೆಯೇ? ಎಂದು ವಿಚಾರಿಸಿದಾಗ ರಾಶಿಯ ಉತ್ತರ ಹೀಗಿತ್ತು : 'ಡಾಕ್ಟರ್, ಈ ಒಂದೆರಡು ವರ್ಷಗಳಿಂದ, ಅಂದರೆ ನನ್ನ ಚಿಕ್ಕ ಮಗಳು ಹುಟ್ಟಿದಾಗಿನಿಂದ ಮನೆಯ ಕೆಲಸಗಳಲ್ಲಿ ನಾನು ತುಂಬಾ ನಿಧಾನವಾಗಿದ್ದೇನೆ. ಬೆಳಗ್ಗೆ 6 ಗಂಟೆಗೆ ಕೆಲಸಗಳನ್ನು ಆರಂಭಿಸಿದರೆ, ಸಂಜೆ 5 ಗಂಟೆಯಾದರೂ ಅಡುಗೆ, ಬಟ್ಟೆ ಒಗೆಯುವುದು, ಪಾತ್ರೆ ತೊಳೆಯುವುದು ಮುಗಿಯುವುದೇ ಇಲ್ಲ. ನನಗೇ ಮಾಡುವುದು ಕಷ್ಟ ಆಗ್ತಾ ಇದೆ. ನನ್ನ ಯಜಮಾನರೂ ಬೈಯಲು ಆರಂಭಿಸಿದ್ದಾರೆ. ಮತ್ತಷ್ಟು ಆಳವಾಗಿ ಸಮಾಲೋಚಿಸಿದಾಗ ರಾಶಿಗೆ ಸ್ವಚ್ಛತೆ ಬಗ್ಗೆ ಅತಿಯಾದ ಕಾಳಜಿ, ಮಾಡುವ ಕೆಲಸವನ್ನು ಸರಿಯಾಗಿಯೇ ಮಾಡಬೇಕೆಂಬ ಮನಸ್ಥಿತಿ, ಇತ್ತೀಚೆಗೆ ಜಾಸ್ತಿ ಆಗಿರುವುದು ಕಂಡುಬಂತು.

> ಗೀಳುಕಾಯಿಲೆ ಅತಿಯಾದ ನಿಧಾನದ ಲಕ್ಷಣವಾಗಿ ಕೂಡ ಕಾಣಿಸಿಕೊಳ್ಳಬಹುದು

ನಿಧಾನವೆಂದ ಮಾತ್ರಕ್ಕೆ ಸೋಮಾರಿಯಲ್ಲ

ಕೆಲಸಗಳು ನಿಧಾನವಾದಾಗ, ಸೋಮಾರಿಯೆಂದು ಬೈಯುವವರೇ ಜಾಸ್ತಿ. ಆದರೆ ನಿಧಾನವೂ ಕಾಯಿಲೆಯ ಲಕ್ಷಣವಾಗಬಲ್ಲದು.

ಕೆಲಸಗಳಲ್ಲಿ ತೊಂದರೆ ಮಾಡುವಂತಹ ಅತಿಯಾದ ನಿಧಾನಗತಿ ಅಥವಾ 'ಪೆಥಾಲಾಜಿಕಲ್ ಸ್ಲೋನೆಸ್', ಗೀಳು ಅಥವಾ 'ಒಸಿಡಿ' (Obsessive Compulsive Disorder) ಎಂಬ ಮಾನಸಿಕ ಕಾಯಿಲೆಯ ಲಕ್ಷಣ. ಗೀಳು ಎಂದರೆ ಪದೇ ಪದೇ ಕೈ ತೊಳೆಯುವುದು, ಮತ್ತೆ ಮತ್ತೆ ಬಾಗಿಲಿನ ಲಾಕ್ ಆಗಿದೆಯೇ ಇಲ್ಲವೇ ಎಂದು ಪರೀಕ್ಷಿಸುವುದು, ಈ ಲಕ್ಷಣಗಳೇ ಮನಸ್ಸಿಗೆ ಬರುತ್ತದೆ. ಆದರೆ ಗೀಳುಕಾಯಿಲೆ, ಅತಿಯಾದ ನಿಧಾನದ ಲಕ್ಷಣವಾಗಿ ಕೂಡ ಕಾಣಿಸಿಕೊಳ್ಳಬಹುದು.

ನಿಧಾನಕ್ಕೆ ಕಾರಣಗಳು

ಈ ನಿಧಾನದ ಲಕ್ಷಣವನ್ನು ಮತ್ತಷ್ಟು ಆಳವಾಗಿ ಪರಿಶೀಲಿಸಿದಾಗ ಇದರ ಹಿಂದಿರುವುದು ಆತಂಕ, ಸಂಶಯ, ಸರಿಯಾಗಿ ಮತ್ತು ಕಟ್ಟುನಿಟ್ಟಾದ ಕ್ರಮದಲ್ಲಿ ಮಾಡಬೇಕೆಂಬ ಗಟ್ಟಿ ನಂಬಿಕೆ ಎಂದು ತಿಳಿಯುತ್ತದೆ. ಕೆಲಸ ಪರಿಪೂರ್ಣವಾಗಿರಬೇಕು (perfect) ಎಂಬ ಯೋಚನೆ ಇರುತ್ತದೆ. ತಾನು ಮಾಡಿದ್ದು ಸರಿಯಾಗಿದೆಯೇ, ಇಲ್ಲವೇ ಎಂಬ ನಿರಂತರ ಸಂಶಯ ಕಾಡುತ್ತದೆ. ಇದರಿಂದಾಗಿ ಮಾಡುವ ಕೆಲಸ ಸಮಾಧಾನ ಕೊಡುವುದಿಲ್ಲ ಮತ್ತೆ ಮಾಡಿದರೆ, ಮತ್ತಷ್ಟು ಕ್ರಮಬದ್ಧವಾಗಿ ಮಾಡಿದರೆ, ಸರಿಯಾಗುತ್ತದೆ ಎಂದು ಅನ್ನಿಸಿ, ನಿಧಾನವಾಗಿ, ಪದೇ ಪದೇ ಮಾಡುತ್ತಾರೆ. ಆತಂಕ ನಿವಾರಣೆಯಾಗದ ಕಾರಣ, ಕೆಲಸ ಮತ್ತಷ್ಟು ತಡವಾಗುತ್ತದೆ.

ಸಮಸ್ಯೆಗಳು

ವಿದ್ಯಾರ್ಥಿಗಳಿಗೆ ಶಾಲಾ-ಕಾಲೇಜಿನ ಕಲಿಕೆಯಲ್ಲಿ ನಿಗದಿತ ಪಠ್ಯಕ್ರಮವನ್ನು ಮುಗಿಸಲು ಅಸಾಧ್ಯವಾಗಿ ಓದಿನಲ್ಲಿ ಮತ್ತು ಅಂಕಗಳಲ್ಲಿ ಹಿಂದೆ ಬೀಳುತ್ತಾರೆ. ಉದ್ಯೋಗದ ಸ್ಥಳದಲ್ಲಿ ಡೆಡ್‌ಲೈನ್‌ಗಳನ್ನು ಪೂರೈಸಲಾಗದೆ ಕಾರ್ಯಕ್ಷಮತೆ ಕುಸಿಯುತ್ತದೆ. ಕುಟುಂಬದಲ್ಲಿ ಕೆಲಸಗಳು ಆಗದೆ, ಸದಸ್ಯರ ನಡುವೆ ಉದ್ವಿಗ್ನತೆ ಉಂಟಾಗಬಹುದು. ಒಟ್ಟಾರೆಯಾಗಿ ವ್ಯಕ್ತಿಯಲ್ಲಿ ಆತ್ಮವಿಶ್ವಾಸವೇ ಕಡಿಮೆಯಾಗುತ್ತದೆ.

ಚಿಕಿತ್ಸೆ

ಅತಿಯಾದ ನಿಧಾನತೆ ಈ ಗೀಳು ಕಾಯಿಲೆಯ ಲಕ್ಷಣವಾಗಿ ಕಾಣಿಸಿಕೊಂಡಾಗ, ಗೀಳುಕಾಯಿಲೆಗೆ ಚಿಕಿತ್ಸೆ ನೀಡಿದರೆ ಇದು ಕಡಿಮೆಯಾಗುತ್ತದೆ. ಗೀಳುಕಾಯಿಲೆಯಲ್ಲಿ, ಮಿದುಳಿನಲ್ಲಿ ಉಂಟಾಗುವಂತಹ ನರವಾಹಕಗಳ ಏರುಪೇರಿನಿಂದಾಗಿ ವ್ಯಕ್ತಿಗೆ ಅರ್ಥವಿಲ್ಲದಂತಹ, ಆತಂಕ ಉಂಟುಮಾಡುವ ಯೋಚನೆಗಳು ಮತ್ತೆ ಮತ್ತೆ ಬರುತ್ತವೆ. ಗೀಳು ಕಾಯಿಲೆಗೆ ಮನೋವೈದ್ಯರಲ್ಲಿ ಚಿಕಿತ್ಸೆಯನ್ನು ಪಡೆಯಬೇಕು. ಸೌಮ್ಯವಾದ ಕಾಯಿಲೆಯಾದರೆ, 'ಅರಿವಿನ ವರ್ತನಾ ಚಿಕಿತ್ಸೆ' (ಸಿಬಿಟಿ -Cognitive Behaviour Therapy) ಎಂಬ ವಿಶೇಷವಾದ ಆಪ್ತಸಮಾಲೋಚನೆ ಸಹಾಯಕ. ಆದರೆ ಕಾಯಿಲೆಯ ಸ್ವರೂಪ, ಮಧ್ಯಮ ಮತ್ತು ತೀವ್ರ ತರಹದ್ದಾದರೆ, ಇದರ ಜೊತೆ ಮಾತ್ರೆಗಳ ಅವಶ್ಯಕತೆ ಇರುತ್ತದೆ.

ನಿಧಾನವೇ ಪ್ರಧಾನ ಎಂಬುದು ಪ್ರಸಿದ್ಧವಾದ ಮಾತಾಗಿದ್ದರೂ, ಅತಿಯಾದ ನಿಧಾನ ಕಾಯಿಲೆಯಾಗಬಲ್ಲದು. ಸರಿಯಾದ ಸಮಯದಲ್ಲಿ ಅರಿತು, ಚಿಕಿತ್ಸೆಯನ್ನು ಪಡೆಯಬೇಕು.

'ನೀಟ್' ದಿಕ್ಸೂಚಿ — ಎಸ್‌ಎಸ್‌ಎಲ್‌ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ — ಪಿಯುಸಿ/ಸಿಇಟಿ ಪರೀಕ್ಷೆ

BIOLOGY

42) Given below are two statements : One is labelled as Assertion (A) and other is labelled as Reason (R).

Assertion (A) : Cells of the tapetum possess dense cytoplasm and generally have more than one nucleus.

Reason (R) : Presence of more than one nucleus in the tapetum increases the efficiency of nourishing the developing microspore mother cells.

In light of the above statements, choose the most appropriate answer from the options given below:

(a) A is false but R is true
(b) Both A and R are true and R is the correct explanation of A
(c) Both A and R are true but R is NOT the correct explanation of A
(d) A is true but R is false

Ans:- (d)

Expln:- Cell of the tapetum possess dense cytoplasm and generally have more than one nucleus because the presence of more than one nucleus in the tapetal cells increases the efficiency of nourishing the develpoing pollen grains

43) A multicellular, filamentous alga exhibits a type of sexual life cycle in which the meiotic division occurs after the formation of zygote. The adult filament of this alga has

a) haploid vegetative cells and diploid gametangia
b) diploid vegetative cells and diploid gametangia
c) diploid vegetative cells and haploid gametangia
d) haploid vegetative cells and haploid gametangia

Ans:- d

44) The male gametes of rice plant have 12 chromosomes in their nucleus. The chromosome number in the female gamete, zygote and the cells of the seedling will be, respectively,

a) 12, 24, 12 b) 24, 12, 12
c) 12, 24, 24 d) 24, 12, 24

Ans:- c

45) Match List I with List II

	List-I		List-II
A.	*Rhizopus*	I.	Mushroom
B.	*Ustilago*	II.	Smut fungus
C.	*Puccinia*	III.	Bread mould
D.	*Agaricus*	IV.	Rust fungus

Choose the correct answer from the options given below:

(a) A-III, B-II, C-IV, D-I (b)A-I, B-III, C-II, D-IV
(c) A-III, B-II, C-I, D-IV (d) A-IV, B-III, C-II, D-I

Ans; (a)

46) A Bivalent of meiosis-I consists of

a) Four chromatids and two centromeres
b) Two chromatids and one centromere
c) Two chromatids and two centromeres
d) Four chromatids and four centromeres

Ans:- a;

Expln- A bivalent of meiosis-I consists of four chromatids and two centromeres, i.e., two double stranded chromosomes become pairs. It is called synapsis. Which is referred as tetrad.

47) The capacity to generate a whole plant from any cell of the plant is called:

(a) Totipotency (b) Micropropagation
(c) Differentiation (d) Somatic hybridization

Ans:- (a)

48) Cause of world population explosion is

a) Better health care
b) Increased agriculture production
c) More jobs d) Fewer wars

Ans:- a;

49) What is correct about test tube baby?

a) Fertilization inside female genital tract and growth in test tube
b) Rearing of prematurely born baby in incubator
c) Fertilization outside and gestation inside womb of mother
d) Both fertilization and development are effected outside the female genital tract.

Ans:- c;

50) A transcription unit in DNA is defined primarily by the three regions in DNA and these are with respect to upstream and down stream end;

(a) Repressor, Operator gene, Structural gene
(b) Structural gene, Transposons, Operator gene
(c) Inducer, Repressor, Structural gene
(d) Promotor, Structural gene, Terminator

Ans (d)

Expln:- A transcription unit of DNA is defined primarily by the three regions in the DNA: (i) A promoter (ii) The structural gene (iii) A terminator

The promoter is said to be located towards 5′-end (upstream) of the structural gene (the reference is made with respect to the polarity of coding strand) The terminator is located towards 3′-end (downstream) of the coding strand.

51) Appearance of vegetative propagules from the nodes of plants such as sugarcane and ginger is mainly because:

a) Nodes are shorter than internodes
b) Nodes have meristematic cells
c) Nodes are located near the soil
d) Nodes have non-photosynthetic cells

Ans:- b

PHYSICS

44) Two wires A and B are made of same material. Their diameters are in the ratio of 1:2 and lengths are in the ratio of 1:3. If they are stretched by the same force, then increase in their lengths will be in the ratio of

(a) 3 : 4 (b) 2 : 3
(c) 3 : 2 (d) 4 : 3

Ans. d

Expln:-

$$\frac{F}{A} = y\frac{\Delta\ell}{\ell} \Rightarrow \Delta\ell = \frac{F\ell}{AY} = \frac{F\ell}{\pi r^2 y}$$

$$\therefore \frac{\Delta\ell_1}{\Delta\ell_2} = \left(\frac{\ell_1}{\ell_2}\right)\times\left(\frac{r_2}{r_1}\right)^2$$

$$= \frac{1}{3}\times\left(\frac{2}{1}\right)^2 = \frac{4}{3} \text{ or } 4:3$$

45) The ratio of contributions made by the electric field and magnetic field components to the intensity of an EM wave is.................

a) c : 1 b) c^2 : 1
c) 1 : 1 d) $\sqrt{c}$: 1

Ans:- C

46) 12. Two poles are by a distance of 3.14 m. The resolving power of human eye is minute of an arc. The maximum distance from which he can identify the two poles distinctly is

a. 376 m b. 10.8 km
c. 5.4 km d. 188 m

Ans: b

Expln:- Given the lateral separation of the poles d=3.14 m

The resolving power of the eye is $\theta = 1\text{min} = \pi/(60\times180)$ rad

The maximum distance from which poles are distinctly visible is $D = d/\theta$

$\Rightarrow D = (3.14\times60\times180)/\pi = 10800\text{m} = 10.8$ km

47) A stone is thrown vertically at a speed of 30ms^{-1} making an angle of 45^0 with the horizontal. What is the maximum height reached by the stone? Take g = 10 m s^{-2}.

a) 15m b) 30 m
c) 10 m d) 22.5 m

Ans: (d)

Expln: Maximum height reached by the stone is

$$H_{max} = \frac{u^2\sin^2\theta}{2g}$$

Here, $u = 30 \text{ m s}^{-1}, \theta = 45^0, g = 10 \text{ m s}^{-2}$

$$\therefore H_{max} = \frac{(30)^2\sin^2 45^0}{2\times10} = \frac{30\times30\times\left(\frac{1}{\sqrt{2}}\right)^2}{2\times10}$$

$$= \frac{45}{2} = 22.5 \text{ m}$$

48) A ray light incident at an angle θ on a refracting face of a prism emerges from the other face normally. If the angle of the prism is 5° and the prism is made of a material of refractive index 1.5, the angle of incidence is...........

a) 7.5^0 b) 5^0
c) 15^0 d) 2.5^0

Ans:- a

49) A short pulse of white light is incident from air to a glass slab at normal incidence. After travelling through the slab, the first colour to emerge is..............

a) blue b) green
c) violet d) red

Ans:- d

50) A force $\vec{F} = 5\hat{i} + 2\hat{j} - 5\hat{k}$ acts on a particle whose position vector is $\vec{r} = \hat{i} + 2\hat{j} + \hat{k}$ what is the torque about the origin?

(a) $8\hat{i} - 10\hat{j} - 8\hat{k}$ (b) $8\hat{i} + 10\hat{j} + 12\hat{k}$
(c) $10\hat{i} - 10\hat{j} - \hat{k}$ (d) $8\hat{i} + 10\hat{j} - 12\hat{k}$

So ln :(b): Here, $\vec{r} = \hat{i} - 2\hat{j} + \hat{k}$

$$\vec{F} = 5\hat{i} + 2\hat{j} + \hat{k}$$

$$= \begin{bmatrix} \hat{i} & \hat{j} & \hat{k} \\ 1 & -2 & 1 \\ 5 & 2 & -5 \end{bmatrix}$$

$$= \hat{i}(10-2) - \hat{j}(-5-5) + \hat{k}(-2(-10))$$

$$= 8\hat{i} + 10\hat{j} + 12\hat{k}$$

51) An object approaches a convergent lens from the left of the lens with a uniform speed 5 m/s and stops at the focus. The image

a) moves away from the lens with an uniform speed 5 m/s.
b) moves away from the lens with an uniform acceleration.
c) moves away from the lens with a nonuniform acceleration.
d) moves towards from the lens with a non-uniform acceleration.

Ans:- c

52) A passenger in an aeroplane shall...........

a) never see a rainbow.
b) may see a primary and a secondary rainbow as concentric circles.
c) may see a primary and a secondary rainbow as concentric arcs.
d) shall never see a secondary rainbow.

Ans:-b

53) The I-V graph for a conductor at two different temperatures 100 ⁰C and 400⁰ C is as shown in the figure. The temperature coefficient of resistance of the conductor is about (in per degree Celsius) *(Contd...)*

‘ಪ್ರತಿ ಪಾಲಿಕೆಗೊಂದು ಯಂತ್ರ’

ರಸ್ತೆಗುಂಡಿ ಮುಚ್ಚುವ ಕಾರ್ಯ: ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚನೆ

ಪ್ರಜಾವಾಣಿ ವಾರ್ತೆ

ಜಿಬಿಎ ಸುದ್ದಿ

ಬೆಂಗಳೂರು: ಜಿಬಿಎ ವ್ಯಾಪ್ತಿಯಲ್ಲಿ ಪ್ರತಿ ನಗರ ಪಾಲಿಕೆಗೆ ರಸ್ತೆ ಗುಂಡಿ ಮುಚ್ಚುವ ತಲಾ ಒಂದು ಯಂತ್ರ ಖರೀದಿಸಬೇಕು ಎಂದು ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಜಿಬಿಎ ವ್ಯಾಪ್ತಿಯ ವಿವಿಧ ಇಲಾಖೆಗಳೊಂದಿಗೆ ಸೋಮವಾರ ನಡೆದ ಸಮನ್ವಯ ಸಭೆಯಲ್ಲಿ ಮಾತನಾಡಿದ ಅವರು, ಆಯಾ ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚಲು ಹಾಗೂ ವಿವಿಧ ಇಲಾಖೆಗಳು ಕತ್ತರಿಸಿದ ರಸ್ತೆಗಳನ್ನು ಕೂಡಲೇ ದುರಸ್ತಿ ಮಾಡುವ ಸಲುವಾಗಿ ರಸ್ತೆ ಗುಂಡಿ ಮುಚ್ಚುವ ಯಂತ್ರ ಖರೀದಿಸಿ, ಡಾಂಬರೀಕರಣ ಕಾಮಗಾರಿ ನಡೆಸಬೇಕು ಎಂದರು.

ನಗರದಲ್ಲಿ ವಿವಿಧ ಕಾಮಗಾರಿಗಳಿಗಾಗಿ ರಸ್ತೆ ಕತ್ತರಿಸಲು ಮಾರ್ಕ್ಸ್ ಸಾಫ್ಟ್‌ವೇರ್ ತಂತ್ರಾಂಶದ ಮೂಲಕ ಅನುಮತಿ ಪಡೆದು, ಕಾಮಗಾರಿ ಪೂರ್ಣಗೊಂಡ ಬಳಿಕ ರಸ್ತೆ ದುರಸ್ತಿ ಮಾಡದಿದ್ದಲ್ಲಿ ಪಾಲಿಕೆಯಿಂದಲೇ ದುರಸ್ತಿ ಕಾರ್ಯ ಕೈಗೊಂಡು, ಅದರ ವೆಚ್ಚವನ್ನು ಸಂಬಂಧಪಟ್ಟ ಸಂಸ್ಥೆಗಳಿಂದ ವಸೂಲಿ ಮಾಡಲು ಕ್ರಮವಹಿಸಬೇಕು ಎಂದು ಸೂಚಿಸಿದರು.

ಗೇಲ್ ಸಂಸ್ಥೆ ವತಿಯಿಂದ ಮಾರ್ಕ್ಸ್ ಸಾಫ್ಟ್‌ವೇರ್‌ನಲ್ಲಿ ರಸ್ತೆ ಕತ್ತರಿಸಲು ಸಲ್ಲಿಸಿರುವ ಅರ್ಜಿಗಳಿಗೆ ತ್ವರಿತವಾಗಿ ಅನುಮತಿ ನೀಡಬೇಕು. ನಂತರ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸುವುದರ ಜೊತೆಗೆ, ಕತ್ತರಿಸಿದ ರಸ್ತೆ ಭಾಗವನ್ನು ಸಂಸ್ಥೆಯವರಿಂದಲೇ ದುರಸ್ತಿ ಮಾಡಿಸಬೇಕು ಎಂದರು.

ಹೆಬ್ಬಾಳ ಜಂಕ್ಷನ್‌ನಲ್ಲಿ ಸುರಂಗ ರಸ್ತೆ, ಕೆಳಸೇತುವೆ, ಮೆಟ್ರೊ ಹಾಗೂ ಉಪ ನಗರ ರೈಲು ಸೇರಿದಂತೆ ವಿವಿಧ ಇಲಾಖೆಗಳ ಕಾಮಗಾರಿಗಳು ನಡೆಯುತ್ತಿವೆ. ಈ ಕಾರಣದಿಂದ ಸಂಬಂಧಪಟ್ಟ ಇಲಾಖೆಗಳು ಜಂಟಿಯಾಗಿ ಸ್ಥಳ ಪರಿಶೀಲನೆ ನಡೆಸಿ, ಸಮಗ್ರ ನಕ್ಷೆಯನ್ನು ಸಿದ್ಧಪಡಿಸಬೇಕು ಎಂದು ಹೇಳಿದರು.

ಕೆ-100 ಜಲಮಾರ್ಗಕ್ಕೆ ಇನ್ನೂ ಕೆಲವು ಪ್ರದೇಶಗಳಿಂದ ಕೊಳಚೆ ನೀರು ಸೇರುತ್ತಿರುವುದು ಗಮನಕ್ಕೆ ಬಂದಿದ್ದು, ಇದನ್ನು ಸಂಪೂರ್ಣವಾಗಿ ತಡೆಯಲು ಜಲಮಂಡಳಿಯವರು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿದರು.

ಬಿಡಿಎ ಆಯುಕ್ತ ಮಣಿವಣ್ಣನ್, ನಗರ ಪಾಲಿಕೆಗಳ ಆಯುಕ್ತರಾದ ರಾಜೇಂದ್ರ ಚೋಳನ್, ಪೊಮ್ಮಲ ಸುನೀಲ್ ಕುಮಾರ್, ರಮೇಶ್ ಡಿ.ಎಸ್., ಡಾ. ರಾಜೇಂದ್ರ ಕೆ.ವಿ., ಪ್ರಧಾನ ಎಂಜಿನಿಯರ್ ಪ್ರಹ್ಲಾದ್ ಇದ್ದರು.

‘ಇಂದಿನಿಂದಲೇ ಟೋಯಿಂಗ್’

‘ನಗರದ ರಸ್ತೆ ಬದಿಗಳಲ್ಲಿ ಹಲವು ತಿಂಗಳಿಂದ ನಿಲ್ಲಿಸಿರುವ ಅನಾಥ ವಾಹನಗಳನ್ನು ತೆರವುಗೊಳಿಸಲು ಮಂಗಳವಾರದಿಂದಲೇ ಟೋಯಿಂಗ್ ಕಾರ್ಯ ಪ್ರಾರಂಭಿಸಬೇಕು’ ಎಂದು ಮಹೇಶ್ವರ್ ರಾವ್ ಸೂಚಿಸಿದರು.

ಉತ್ತರ ಮತ್ತು ಕೇಂದ್ರ ನಗರ ಪಾಲಿಕೆಯಿಂದ ಈಗಾಗಲೇ ಟೋಯಿಂಗ್ ವಾಹನಗಳನ್ನು ಸಂಚಾರ ಪೊಲೀಸ್ ವಿಭಾಗಕ್ಕೆ ಹಸ್ತಾಂತರಿಸಲಾಗಿದೆ. ಉತ್ತರ ನಗರ ಪಾಲಿಕೆಯಿಂದ ಅನಾಥ ವಾಹನಗಳಿರುವ ರಸ್ತೆಗಳ ಪಟ್ಟಿ ನೀಡಲಾಗಿದೆ. ತಕ್ಷಣವೇ ಟೋಯಿಂಗ್ ಕಾರ್ಯ ಪ್ರಾರಂಭಿಸಲು ಸೂಚಿಸಿದರು.

ನಗರದ ವೈಟ್ ಟಾಪಿಂಗ್ ಹಾಗೂ ಇತರ ಪ್ರಮುಖ ರಸ್ತೆಗಳಲ್ಲಿ ನಿರ್ದಿಷ್ಟ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಿರುವಂತಹ ಪಾರ್ಕಿಂಗ್ ಬೇ ಪ್ರದೇಶಗಳನ್ನು ಹೊರತುಪಡಿಸಿ ಬೇರೆಡೆ ಪಾರ್ಕಿಂಗ್ ಮಾಡುವುದನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಸಂಚಾರ ಪೊಲೀಸ್ ವಿಭಾಗಕ್ಕೆ ಸೂಚನೆ ನೀಡಿದರು.

ಜನಗಣತಿ: ಸಿಬ್ಬಂದಿಗೆ ₹25 ಸಾವಿರ ಗೌರವಧನ

ಜನಗಣತಿ ಕಾರ್ಯಕ್ಕೆ ನಿಯೋಜಿಸಿರುವ ಗಣತಿದಾರರು ಹಾಗೂ ಮೇಲ್ವಿಚಾರಕರಿಗೆ ಮನೆ ಪಟ್ಟಿ ಸಿದ್ಧತೆಗಾಗಿ ₹9,000 ಹಾಗೂ ಜನಗಣತಿ ಕಾರ್ಯಕ್ಕಾಗಿ ₹16,000 ಸೇರಿದಂತೆ ಒಟ್ಟು ₹25 ಸಾವಿರ ಗೌರವಧನವನ್ನು ಕೇಂದ್ರ ಸರ್ಕಾರದ ಆದೇಶದಂತೆ ನೀಡಲಾಗುತ್ತದೆ. ಅಲ್ಲದೆ ದಿನಕ್ಕೆ ₹40ರಂತೆ ತರಬೇತಿ ಭತ್ಯೆ ನೀಡಲಾಗುತ್ತದೆ ಎಂದು ಬೆಂಗಳೂರು ದಕ್ಷಿಣ ನಗರ ಪಾಲಿಕೆ ಆಯುಕ್ತ ಕೆ.ಎನ್. ರಮೇಶ್ ತಿಳಿಸಿದರು.

ಮನೆಪಟ್ಟಿ ಕಾರ್ಯ ಏಪ್ರಿಲ್ 16ರಿಂದ ಮೇ 15ರವರೆಗೆ ನಡೆಯಲಿದೆ. ಈ ಸಮೀಕ್ಷಾ ಕಾರ್ಯಕ್ಕೆ, ಪಾಲಿಕೆ ವ್ಯಾಪ್ತಿಯಲ್ಲಿ 4,678 ಗಣತಿದಾರರು, 798 ಮೇಲ್ವಿಚಾರಕರನ್ನು ನೇಮಕ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಶ್ರೀರಾಮನವಮಿ ಸಂಗೀತೋತ್ಸವ

ಪ್ರಜಾವಾಣಿ ಚಿತ್ರ



ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್ ಆಯೋಜಿಸಿರುವ 88ನೇ ಶ್ರೀರಾಮನವಮಿ ಸಂಗೀತೋತ್ಸವ ಕಾರ್ಯಕ್ರಮದಲ್ಲಿ ಸುಮಾ ಸುಧೀಂದ್ರ ಮತ್ತು ತಂಡದವರು ಸೋಮವಾರ ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ ನಡೆಸಿಕೊಟ್ಟರು

ಲಾಕಪ್ ಡೆತ್ 9 ಪೊಲೀಸರಿಗೆ ಮರಣದಂಡನೆ

ಒಂದನೇ ಪುಟದಿಂದ...

ಈ ಪ್ರಕರಣದ ವಿಚಾರಣೆಯನ್ನು ಪೂರ್ಣಗೊಳಿಸಿದ ಮದುರೈ ಮೊದಲನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಜಿ. ಮುತ್ತು ಕುಮಾರನ್ ಅವರು ಸೋಮವಾರ ತೀರ್ಪು ಪ್ರಕಟಿಸಿದರು. ಇನ್‌ಸ್ಪೆಕ್ಟರ್ ಶ್ರೀಧರ್, ಸಬ್ ಇನ್‌ಸ್ಪೆಕ್ಟರ್‌ಗಳಾದ ಬಾಲಕೃಷ್ಣನ್ ಮತ್ತು ಗಣೇಶ್, ಹೆಡ್ ಕಾನ್‌ಸ್ಟೆಬಲ್ ಹಾಗೂ ಕಾನ್‌ಸ್ಟೆಬಲ್‌ಗಳಾದ ಮುರುಗನ್, ಸಮುದುರೈ, ಮುತ್ತುರಾಜ್, ಚೆಲ್ಲಾದುರೈ, ಥಾಮಸ್ ಫ್ರಾನ್ಸಿಸ್ ಮತ್ತು ವೇಲುಮುತ್ತು ಅಪರಾಧಿಗಳು ಎಂದು ಘೋಷಿಸಿದರು. ಎಲ್ಲರಿಗೂ ಮರಣದಂಡನೆ ಶಿಕ್ಷೆ ವಿಧಿಸಿ, ಒಟ್ಟು ₹ 1.40 ಕೋಟಿ ದಂಡವನ್ನೂ ವಿಧಿಸಿದರು. ದಂಡದ ಮೊತ್ತವನ್ನು ಸಂತ್ರಸ್ತರ ಕುಟುಂಬಕ್ಕೆ ಪಾವತಿಸುವಂತೆ ಆದೇಶಿಸಿದರು.

ಸಿಬಿಐ ಮುಂದೆ ಹೇಳಿಕೆ ನೀಡಿದ್ದ ಮಹಿಳಾ ಕಾನ್‌ಸ್ಟೆಬಲ್‌ವೊಬ್ಬರು, ‘ಇಬ್ಬರನ್ನೂ ಮನಬಂದಂತೆ ಥಳಿಸಲಾಗಿತ್ತು. ಪೊಲೀಸ್ ಠಾಣೆಯ ಪೀಠೋಪಕರಣ ಮತ್ತು ಲಾಠಿಗಳೆಲ್ಲವೂ ರಕ್ತಸಿಕ್ತವಾಗಿದ್ದವು’ ಎಂದಿದ್ದರು. ಸಿ.ಸಿ. ಟಿ.ವಿ. ಕ್ಯಾಮೆರಾಗಳಲ್ಲಿನ ದೃಶ್ಯಾವಳಿಗಳನ್ನು ಅಳಿಸಿಹಾಕಿ ಸಾಕ್ಷ್ಯ ಸಿಗದಂತೆ ಮಾಡಲಾಗಿತ್ತು. ಪ್ರಕರಣದ ಸಂಬಂಧ ಸಿಬಿಐ 100ಕ್ಕೂ ಹೆಚ್ಚು ಸಾಕ್ಷಿಗಳ ವಿಚಾರಣೆ ನಡೆಸಿತ್ತು.

ವಿದೇಶಿ ಮಹಿಳೆ ಜೊತೆ ಅನುಚಿತ ವರ್ತನೆ: ಹೈಕೋರ್ಟ್ ಗರಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಮಾನ ನಿಲ್ದಾಣದಲ್ಲಿ ತಪಾಸಣೆ ನಡೆಸುವ ನೆಪದಲ್ಲಿ ದಕ್ಷಿಣ ಕೊರಿಯಾದ ಮಹಿಳೆಯೊಬ್ಬರ ಅಂಗಾಂಗಗಳನ್ನು ಅನುಚಿತವಾಗಿ ಸ್ಪರ್ಶಿಸುವ ಮೂಲಕ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಎದುರಿಸುತ್ತಿರುವ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಉದ್ಯೋಗಿಯೊಬ್ಬರಿಗೆ ಹೈಕೋರ್ಟ್ ಛೀಮಾರಿ ಹಾಕಿದೆ.

‘ನನ್ನ ವಿರುದ್ಧ ದೇವನಹಳ್ಳಿ ಜೆಎಂಎಫ್‌ಸಿ ಕೋರ್ಟ್‌ನಲ್ಲಿ ದಾಖಲಾಗಿರುವ ಕ್ರಿಮಿನಲ್ ಪ್ರಕರಣ ರದ್ದುಗೊಳಿಸಬೇಕು’ ಎಂದು ಕೋರಿ ಇಮಿಗ್ರೇಷನ್ ತಪಾಸಣೆ ವಿಭಾಗದ ಸಿಬ್ಬಂದಿಯಾಗಿ ಕರ್ತವ್ಯ ನಿರ್ವಹಿಸುವ ಬೆಂಗಳೂರು ಉತ್ತರ ತಾಲ್ಲೂಕಿನ ರಾಮಯ್ಯ ಲೇಔಟ್‌ನ ಥಾಮಸ್ ಟೌನ್ ನಿವಾಸಿ ಮೊಹಮ್ಮದ್ ಅಫ್ಘಾನ್ ಅಹ್ಮದ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ಆರೋಪಿ ಪರ ವಕೀಲರ ಮನವಿಗೆ ಗರಂ ಆದ ನ್ಯಾಯಪೀಠ, ‘ನಿಮ್ಮ ಅರ್ಜಿದಾರರು ಏನು ಮಾಡಿದ್ದಾರೆ ಎಂಬುದು ತಿಳಿದಿದೆಯೇ? ಅವರು ಏನೆಲ್ಲಾ ಮಾಡಿದ್ದಾರೆ ಎಂಬುದನ್ನು 32 ವರ್ಷದ ಮಹಿಳೆ ತಮ್ಮ ದೂರಿನಲ್ಲಿ ಸವಿವರವಾಗಿ ಹೇಳಿದ್ದಾರೆ’ ಎಂದು ಖಾರವಾಗಿ ಹೇಳಿದರು.

‘ಪುರುಷರ ಶೌಚಾಲಯಕ್ಕೆ ಮಹಿಳೆಯನ್ನು ಕರೆದೊಯ್ದು ‘ಟಿ’ ಪೊಸಿಷನ್‌ನಲ್ಲಿ ನಿಲ್ಲಿಸಿ ದೇಹದೆಲ್ಲೆಡೆ ಸ್ಪರ್ಶಿಸಿದ್ದಾರೆ. ಇದಕ್ಕೆ ಮಹಿಳಾ ಶೌಚಾಲಯದಲ್ಲಿ ಮತ್ತೊಬ್ಬರು ಇದ್ದರು ಎಂಬ ಸಮರ್ಥನೆ ಬೇರೆ ಕೊಟ್ಟಿದ್ದಾರೆ. ವಿದೇಶಿ ಮಹಿಳೆಯೊಂದಿಗೆ ಅಸಭ್ಯವಾಗಿ ವರ್ತಿಸಿರುವುದನ್ನು ಸಹಿಸಿಕೊಳ್ಳಬೇಕೆ? ಈ ಅರ್ಜಿದಾರ ಯಾವ ರೀತಿಯ ಅಧಿಕಾರಿ? ಪುರುಷರ ಶೌಚಾಲಯಕ್ಕೆ ಏಕೆ ಕರೆದೊಯ್ಯಲಾಗಿತ್ತು ಎಂಬುದನ್ನು ಮೊದಲು ವಿವರಿಸಿ’ ಎಂದಿತು. ‘ಇಂತಹ ವರ್ತನೆಯನ್ನು ಸಹಿಸಲಾಗದು’ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ ನ್ಯಾಯಪೀಠ ಅರ್ಜಿ ವಜಾಗೊಳಿಸಿ ಆದೇಶಿಸಿತು.

ಪ್ರಕರಣವೇನು?: ವಿಮಾನ ನಿಲ್ದಾಣದಲ್ಲಿ ಕೆಲಸ ಮಾಡುತ್ತಿರುವ ಮೊಹಮ್ಮದ್ ವಿರುದ್ಧ ಮಹಿಳೆ ಬಿಐಎಎಲ್ ಪೊಲೀಸ್ ಠಾಣೆಗೆ 2026ರ ಜನವರಿ 19ರಂದು ದೂರು ನೀಡಿದ್ದರು.

‘ನಾನು ದಕ್ಷಿಣ ಕೊರಿಯಾಗೆ ಪ್ರಯಾಣಿಸಲು ವಿಮಾನ ನಿಲ್ದಾಣಕ್ಕೆ ತೆರಳಿದ್ದೆ. ಇಮಿಗ್ರೇಷನ್ ತಪಾಸಣೆ ಮುಗಿಸಿ ಹೋಗುವ ಸಮಯದಲ್ಲಿ ವಿಮಾನ ನಿಲ್ದಾಣದ ಸಿಬ್ಬಂದಿಯಾದ ಮೊಹಮ್ಮದ್ ನನ್ನ ಬಳಿಗೆ ಬಂದು ನನ್ನ ವಿಮಾನದ ಟಿಕೆಟ್ ಪರಿಶೀಲಿಸಿದ್ದರು. ನಂತರ ನನ್ನ ಚೆಕ್-ಇನ್-ಬ್ಯಾಗೇಜ್ ಕುರಿತು ಸಮಸ್ಯೆಯಿದೆ ಎಂದು ಹೇಳಿದ್ದರು’ ಎಂದು ದೂರಿನಲ್ಲಿ ವಿವರಿಸಿದ್ದರು.

‘ಬ್ಯಾಗ್ ತಪಾಸಣೆ ಮಾಡಿ, ಬೀಪ್ (ಎಚ್ಚರಿಕೆ) ಶಬ್ದ ಬಂದಿದೆ ಎಂದು ತಿಳಿಸಿ ಪುನಃ ತಪಾಸಣೆ ನಡೆಸಬೇಕು ಎಂದರು. ನಿಮ್ಮನ್ನು ವೈಯಕ್ತಿಕವಾಗಿ ತಪಾಸಣೆ ಮಾಡಬೇಕು ಎಂದು ಹೇಳಿ ಪುರುಷರ ಶೌಚಾಲಯಕ್ಕೆ ಕರೆದುಕೊಂಡು ಹೋಗಿದ್ದರು. ಅಲ್ಲಿ ನನ್ನ ದೇಹದ ಖಾಸಗಿ ಭಾಗಗಳನ್ನು ಅನುಚಿತವಾಗಿ ಸ್ಪರ್ಶಿಸಿದ್ದರು. ನಾನು ಅವರ ವರ್ತನೆಯನ್ನು ಖಂಡಿಸಿದಾಗ ಏಕಾಏಕಿ ನನ್ನನ್ನು ತಬ್ಬಿಕೊಂಡು ಧನ್ಯವಾದ ಹೇಳಿ ಹೊರಗೆ ಕಳುಹಿಸಿದ್ದರು’ ಎಂದು ಆರೋಪಿಸಿದ್ದರು.

ಓದಿಕೊಂಡು ಬರದಿದ್ದರೆ ಹೇಗೆ?

ಪ್ರಕರಣವೊಂದರ ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರಿಗೆ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು, ‘ನೀವು ನಿಮ್ಮ ಅರ್ಜಿಯನ್ನೇ ಓದಿಕೊಂಡು ಬರದಿದ್ದರೆ ಹೇಗೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ನ್ಯಾ.ನಾಗಪ್ರಸನ್ನ ಅವರು ತಮ್ಮ ಏಕಸದಸ್ಯ ನ್ಯಾಯಪೀಠದಲ್ಲಿ ಸೋಮವಾರ 500 ಕ್ರಿಮಿನಲ್ ಮತ್ತು ರಿಟ್ ಅರ್ಜಿಗಳ ವಿಚಾರಣೆ ನಡೆಸಿದರು. ಇವುಗಳಲ್ಲಿ 110 ಅರ್ಜಿಗಳನ್ನು ವಿಲೇವಾರಿ ಮಾಡಿದರು.

ಬಿಜೆಪಿ ಸ್ಥಾಪನಾ ದಿನ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ‘ಕೇವಲ ಅಧಿಕಾರಕ್ಕಾಗಿ ಅಲ್ಲದೆ, ರಾಷ್ಟ್ರ ನಿರ್ಮಾಣದ ಗುರಿಯೊಂದಿಗೆ ಅಹೋರಾತ್ರಿ ಶ್ರಮಿಸುತ್ತಿರುವ ಕೋಟ್ಯಂತರ ಕಾರ್ಯಕರ್ತರ ಶ್ರಮಕ್ಕೆ ಈ ದಿನ ಸಮರ್ಪಿತ’ ಎಂದು ಶಾಸಕ ಎಸ್. ಮುನಿರಾಜು ಹೇಳಿದರು.


ಬಾಗಲಗುಂಟೆಯ ಬಿಜೆಪಿ ಕಚೇರಿಯಲ್ಲಿ ಬಿಜೆಪಿ ಸಂಸ್ಥಾಪನಾ ದಿನ ಆಚರಿಸಿ ಅವರು ಮಾತನಾಡಿದರು.

‘ಸಂಕಲ್ಪ, ಸೇವೆ ಮತ್ತು ಸಮರ್ಪಣೆಯಿಂದ ಭಾರತೀಯ ಜನತಾ ಪಾರ್ಟಿಯನ್ನು ವಿಶ್ವದ ಅತಿ ದೊಡ್ಡ ರಾಜಕೀಯ ಪಕ್ಷವಾಗಿ ಬೆಳೆಸಿದ ಪ್ರತಿಯೊಬ್ಬ ಕಾರ್ಯಕರ್ತರಿಗೆ ಬಿಜೆಪಿ ಸ್ಥಾಪನಾ ದಿನದ ಅಭಿನಂದನೆಗಳು’ ಎಂದರು.

ಸಾಹಿತಿ ಎಸ್‌.ಜಿ. ಸಿದ್ಧರಾಮಯ್ಯ ಅಭಿಮತ

‘ರಾಜಕಾರಣಿಗಳಿಗೆ ತಾಯಿ ಅಂತಃಕರಣ ಅಗತ್ಯ’

ಪ್ರಜಾವಾಣಿ ವಾರ್ತೆ



ಎಸ್‌.ಜಿ. ಸಿದ್ಧರಾಮಯ್ಯ

ಬೆಂಗಳೂರು: ‘ರಾಜಕಾರಣಿಗಳಿಗೆ ತಾಯಿಯ ಅಂತಃಕರಣವಿದ್ದರೆ ಜಗತ್ತಿನಲ್ಲಿ ಮಕ್ಕಳ ಮತ್ತು ಅಮಾಯಕರ ಮಾರಣಹೋಮ ನಿಲ್ಲುತ್ತದೆ’ ಎಂದು ಸಾಹಿತಿ ಎಸ್.ಜಿ. ಸಿದ್ಧರಾಮಯ್ಯ ಅಭಿಪ್ರಾಯಪಟ್ಟರು.

ಜಾಣಗೆರೆ ಪತ್ರಿಕೆ ಪ್ರಕಾಶನ ನಗರದಲ್ಲಿ ಈಚೆಗೆ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಜಾಣಗೆರೆ ವೆಂಕಟರಾಮಯ್ಯ ಅವರ ಆತ್ಮಕಥೆ ‘ಅರ್ಥವಾಗದ ಲೋಕ’ ಜನಾರ್ಪಣೆ ಮಾಡಿ, ಮಾತನಾಡಿದರು.

‘ಜಗತ್ತು ಆತ್ಮವಿಮರ್ಶೆ ಪ್ರಜ್ಞೆಯ ಮೂಲಕ ಅಹಿಂಸೆಯನ್ನು ರೂಢಿಸಿಕೊಳ್ಳುವಂತಾಗಬೇಕು. ಜಗತ್ತಿನ ವಿನಾಶ ನೋಡಿದರೆ ಕರುಳು ಕಿತ್ತು ಬರುತ್ತದೆ. ಇಂತಹ ದುಷ್ಕೃತ್ಯ ಕಡಿಮೆಯಾಗಬೇಕಿದೆ’ ಎಂದು ಹೇಳಿದರು.

‘ಜಗತ್ತಿನ ವಿಮರ್ಶೆ ಮಾಡುವ ಮೊದಲು ನಮ್ಮನ್ನು ನಾವು ವಿಮರ್ಶೆ ಮಾಡಿಕೊಳ್ಳಬೇಕು. ಆತ್ಮವಿಮರ್ಶೆ ನಿಷ್ಠುರವಾಗಿರಬೇಕು. ಆಗ ವ್ಯಕ್ತಿಯಲ್ಲಿ ಲೋಕವನ್ನು ವಿಮರ್ಶಿಸುವ ನೈತಿಕ ಎಚ್ಚರ ಇರುತ್ತದೆ. ಜಾಣಗೆರೆ ವೆಂಟಕರಾಮಯ್ಯ ಅವರು ಒಳವಿಮರ್ಶೆಯ ಪ್ರಜ್ಞೆಯನ್ನು ಮೈಗೂಡಿಸಿಕೊಂಡಿದ್ದಾರೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಗಾಂಧಿ ಸ್ಮಾರಕ ನಿಧಿಯ ಗೌರವ ಕಾರ್ಯದರ್ಶಿ ವೂಡೇ ಪಿ. ಕೃಷ್ಣ, ‘ಜಾಣಗೆರೆ ವೆಂಕಟರಾಮಯ್ಯ ಅಂತಹವರ ಚಿಂತನಾ ನಾಯಕತ್ವ ಈ ನಾಡಿಗೆ ಅಗತ್ಯ. ಅವರು ನಾಡು–ನುಡಿ ಪರವಾದ ಹೋರಾಟ ನಡೆಸುತ್ತಾ ಬಂದಿದ್ದಾರೆ. ಹಿಂದಿ ಹೇರಿಕೆ ವಿರುದ್ಧವೂ ಹೋರಾಟ ನಡೆಸಿದ್ದರು. ಸಂವಿಧಾನದಡಿ ಹಿಂದಿ ಕೂಡ ಕನ್ನಡದಂತೆ ಒಂದು ಭಾಷೆ. ಹೆಚ್ಚು ಜನ ಈ ಭಾಷೆಯನ್ನು ಮಾತನಾಡುತ್ತಾರೆ ಎಂಬ ಕಾರಣಕ್ಕೆ ರಾಷ್ಟ್ರ ಭಾಷೆ ಎನ್ನಲು ಸಾಧ್ಯವಿಲ್ಲ. ತಮಿಳು ಭಾಷಿಕರಂತೆ ಕನ್ನಡಿಗರು ನಮ್ಮ ಅಸ್ಮಿತೆ ಉಳಿಸಿಕೊಳ್ಳಬೇಕು’ ಎಂದು ಅವರು ಹೇಳಿದರು.

ಸಾಹಿತಿ ಬಂಜಗೆರೆ ಜಯಪ್ರಕಾಶ್, ‘ಜಾಣಗೆರೆ ವೆಂಕಟರಾಮಯ್ಯ ಅವರು ಮಾರಿಕೊಳ್ಳದ, ರಾಜಿಯಾಗದ ಹೋರಾಟಗಾರ. ಅವರು ಲಾಬಿಗೆ ಒಳಗಾಗಲಿಲ್ಲ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಜಾಣಗೆರೆ ವೆಂಕಟರಾಮಯ್ಯ ಅವರು, ‘ಈ ಲೋಕ ಏಕೆ, ಯಾರಿಂದ ಸೃಷ್ಟಿಯಾಗಿದೆ ಸೇರಿದಂತೆ ಹಲವು ಸಂಗತಿಗಳು ಇಂದಿಗೂ ಅರ್ಥವಾಗಿಲ್ಲ. 75 ವರ್ಷ ದಾಟಿದ್ದರಿಂದ ಕೆಲವು ಘಟನೆ, ವಿಚಾರ ಮರೆಯುತ್ತಿದ್ದೇನೆ. ಈ ಕಾರಣಕ್ಕೆ ಆತ್ಮಕಥೆ ಬರೆದೆ’ ಎಂದು ಅವರು ಹೇಳಿದರು.

ಸಾಹಿತಿ ಹಂಪ ನಾಗರಾಜಯ್ಯ ಅವರು ಜಾಣಗೆರೆ ವೆಂಕಟರಾಮಯ್ಯ ಅವರ ಜತೆಗಿನ ಒಡನಾಟವನ್ನು ಸ್ಮರಿಸಿಕೊಂಡರು.

ಮುಖ್ಯಾಂಶಗಳು
- ‘ಅರ್ಥವಾಗದ ಲೋಕ’ ಕೃತಿ ಜನಾರ್ಪಣೆ ಕಾರ್ಯಕ್ರಮ
- ‘ಆತ್ಮವಿಮರ್ಶೆಯ ಮೂಲಕ ಅಹಿಂಸೆ ರೂಢಿಸಿಕೊಳ್ಳಿ’
- ‘ತಮಿಳು ಭಾಷಿಕರಂತೆ ಕನ್ನಡಿಗರು ನಮ್ಮ ಅಸ್ಮಿತೆ ಉಳಿಸಿಕೊಳ್ಳಬೇಕು’

ಯುವತಿ ಮೇಲೆ ಹಲ್ಲೆ: ಐವರ ಸೆರೆ

ಎಂಟು ಮಂದಿ ವಿರುದ್ಧ ವರ್ತೂರು ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್

ಪ್ರಜಾವಾಣಿ ವಾರ್ತೆ


ಅಸುರಾ ಖಾತೂನ್


ಫತಾಯ್


ಬಾಬನ್


ಸೀಮಾ


ಸುಕ್ಕಾರ್ ಖಾತೂನ್

ಬೆಂಗಳೂರು: ಶೆಡ್‌ಗೆ ನುಗ್ಗಿ ಯುವತಿ ಮೇಲೆ ಹಲ್ಲೆ ನಡೆಸಿದ್ದ ಐವರು ಆರೋಪಿಗಳನ್ನು ವರ್ತೂರು ಠಾಣೆಯ ಪೊಲೀಸರು ಸೋಮವಾರ ರಾತ್ರಿ ಬಂಧಿಸಿದ್ದಾರೆ.

ಬಾಬನ್, ಫತಾಯ್, ಸುಕ್ಕಾರ್ ಖಾತೂನ್, ಸೀಮಾ, ಅಸುರಾ ಖಾತೂನ್ ಬಂಧಿತರು.

ಜಮ್ಮೀದ್, ಟುಕೋನ್, ನೂರ್ ತಲೆಮರೆಸಿಕೊಂಡಿದ್ದು, ಅವರ ಬಂಧನಕ್ಕೆ ವಿಶೇಷ ತಂಡ ರಚಿಸಲಾಗಿದೆ ಎಂದು ಪೊಲೀಸರು ಹೇಳಿದರು.

20 ವರ್ಷದ ಯುವತಿ ನೀಡಿದ ದೂರಿನ ಮೇಲೆ ಆರೋಪಿಗಳ ವಿರುದ್ಧ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

‘ವರ್ತೂರಿನ ಶೋಭಾ ಅಪಾರ್ಟ್‌ಮೆಂಟ್ ಸಮೀಪದ ಶೆಡ್‌ನಲ್ಲಿ ಒಬ್ಬಳೇ ನೆಲಸಿದ್ದೇನೆ. ನಾನು ಕೆಲಸಕ್ಕೆ ಹೋಗುವಾಗ–ಬರುವಾಗ ಆರೋಪಿಗಳು ಹಿಂಬಾಲಿಸುತ್ತಿದ್ದರು. ಹಿಂಬಾಲಿಸದಂತೆ ಎಚ್ಚರಿಕೆ ನೀಡಿದ್ದೆ. ಆದರೂ, ಆರೋಪಿಗಳ ಅದೇ ರೀತಿಯ ವರ್ತನೆ ಮುಂದುವರಿಸಿದ್ದರು. ಏಪ್ರಿಲ್ 4ರಂದು ರಾತ್ರಿ 9.30ರ ಸುಮಾರಿಗೆ ಎಂಟು ಆರೋಪಿಗಳು ಶೆಡ್‌ಗೆ ನುಗ್ಗಿ ದೊಣ್ಣೆಯಿಂದ ಹಲ್ಲೆ ನಡೆಸಿದರು. ಅಲ್ಲದೇ ‘ಬೆಂಗಳೂರಿನಲ್ಲಿ ಇರಲು ಬಿಡುವುದಿಲ್ಲ’ ಎಂದು ಬೆದರಿಕೆ ಹಾಕಿದ್ದಾರೆ. ಶೆಡ್‌ನಲ್ಲಿದ್ದ ಸ್ನೇಹಿತನ ಮೇಲೂ ಹಲ್ಲೆ ನಡೆಸಿದ್ದರು’ ಎಂದು ಯುವತಿ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ಆರೋಪಿಗಳ ಪೈಕಿ, ಐವರನ್ನು ಬಂಧಿಸಲಾಗಿದೆ. ಯಾವ ಕಾರಣದಿಂದ ಆರೋಪಿಗಳು ಹಲ್ಲೆ ನಡೆಸಿದ್ದರು ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ. ಯುವತಿಯ ಖಾಸಗಿತನಕ್ಕೆ ಧಕ್ಕೆ ತಂದಿರುವ ಮತ್ತು ಹಲ್ಲೆ ನಡೆಸಿರುವ ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಕೊಳ್ಳಲಾಗುವುದು’ ಎಂದು ಪೊಲೀಸರು ಹೇಳಿದರು.

ನಟನ ಮೇಲೆ ಬಿಯರ್ ಬಾಟಲಿಯಿಂದ ಹಲ್ಲೆ

‘ಒಡೆಯ’ ಚಿತ್ರದಲ್ಲಿ ನಟ ದರ್ಶನ್ ತಮ್ಮನ ಪಾತ್ರದಲ್ಲಿ ನಟಿಸಿದ್ದ ನಿರಂಜನ್ ಅವರ ಮೇಲೆ ಬಾರ್‌ನಲ್ಲಿ ನಡೆದ ಗಲಾಟೆ ವೇಳೆ ಬಿಯರ್ ಬಾಟಲಿಯಿಂದ ಹಲ್ಲೆ ನಡೆಸಿದ್ದ ನಾಲ್ವರನ್ನು ಪತ್ತೆಹಚ್ಚಿರುವ ಸುಬ್ರಹ್ಮಣ್ಯಪುರ ಠಾಣೆಯ ಪೊಲೀಸರು, ಇಬ್ಬರನ್ನು ಠಾಣೆಗೆ ಕರೆಸಿ ವಿಚಾರಣೆ ನಡೆಸಿದ್ದಾರೆ.

ಆರ್.ಆರ್.ನಗರದ ನಿವಾಸಿಗಳಾದ ಪ್ರೀತಂ, ಪ್ರಜ್ವಲ್, ರಾಘವೇಂದ್ರ ಹಾಗೂ ನಿತಿನ್ ಹಲ್ಲೆ ನಡೆಸಿದ ಆರೋಪಿಗಳು. ಬಾರ್‌ನಲ್ಲಿ ಅಳವಡಿಸಿದ್ದ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯಾವಳಿ ಆಧರಿಸಿ, ಆರೋಪಿಗಳನ್ನು ಪತ್ತೆ ಮಾಡಲಾಯಿತು. ವಿಚಾರಣೆಗೆ ಬರುವಂತೆ ನಾಲ್ವರಿಗೆ ನೋಟಿಸ್ ಜಾರಿ ಮಾಡಲಾಗಿತ್ತು. ಪ್ರೀತಂ, ಪ್ರಜ್ವಲ್ ವಿಚಾರಣೆಗೆ ಹಾಜರಾಗಿದ್ದರು. ಮತ್ತಿಬ್ಬರು ತಲೆಮರೆಸಿಕೊಂಡಿದ್ದು, ಅವರ ಪತ್ತೆಗೆ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ದೂರಿನಲ್ಲಿ ಏನಿದೆ?: ‘ಸ್ನೇಹಿತ ಯಶಸ್ ಸೂರ್ಯ ಅವರ ಮನೆಗೆ ಹೋಗಿ, ದ್ವಿಚಕ್ರ ವಾಹನದಲ್ಲಿ ಉತ್ತರಹಳ್ಳಿ ರಸ್ತೆಯ ಮೂಲಕ ವಾಪಸ್ ಬರುತ್ತಿದ್ದೆ. ಮಾರ್ಗ ಮಧ್ಯೆ ಕುಡಿಯಲು ನೀರಿನ ಬಾಟಲ್ ಖರೀದಿಗೆಂದು ಬಾರ್‌ವೊಂದಕ್ಕೆ ಹೋಗಿದ್ದೆ. ನೀರಿನ ಬಾಟಲ್ ಖರೀದಿಸುವಾಗ ಒಬ್ಬ ವ್ಯಕ್ತಿ ಬಂದು, ತಳ್ಳಿದ. ಆಗ ಪ್ರಶ್ನೆ ಮಾಡಿದೆ. ಕೀಳು ಪದ ಬಳಸಿ ನಿಂದನೆ ಮಾಡಿದ. ‘ನೀನು ಸಿನಿಮಾ ಕಲಾವಿದ ಆಗಿರಬಹುದು. ಇಲ್ಲಿ ನಮ್ಮದೇ ದುನಿಯಾ ನಡೆಯುವುದು’ ಎಂದು ಹೇಳಿದ. ನಾನು ಬಾರ್ ಮಾಲೀಕರ ಜತೆಗೆ ಮಾತನಾಡಿಕೊಂಡು ಒಳಗೆ ಹೋದೆ.

ಅಪರಾಧ ಸುದ್ದಿಗಳು

ಅಷ್ಟರಲ್ಲಿ ಇನೊವಾ ಕಾರಿನಲ್ಲಿ ಬಂದ ನಾಲ್ವರು ಜಗಳ ತೆಗೆದರು. ಇಬ್ಬರು ಕೈನಿಂದ ಹಲ್ಲೆ ನಡೆಸಿದರೆ, ಮತ್ತಿಬ್ಬರು ಬಿಯರ್ ಬಾಟಲಿಯಿಂದ ತಲೆಯ ಮೇಲೆ ಹಲ್ಲೆ ನಡೆಸಿದರು. ಹಲ್ಲೆಯಿಂದ ಗಂಭೀರವಾಗಿ ಗಾಯಗೊಂಡಿದ್ದೇನೆ’ ಎಂದು ನಿರಂಜನ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

₹3.12 ಕೋಟಿ ಮೌಲ್ಯದ ಗಾಂಜಾ ವಶ

ದೇವನಹಳ್ಳಿ: ಬ್ಯಾಂಕಾಕ್‌ನಿಂದ ₹3.12 ಕೋಟಿ ಮೌಲ್ಯದ ಹೈಡ್ರೋಪೋನಿಕ್ ಗಾಂಜಾ ಸಾಗಿಸುತ್ತಿದ್ದ ಪ್ರಯಾಣಿಕನನ್ನು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ (ಕೆಐಎಬಿ) ಕಸ್ಟಮ್ಸ್ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

ಏಪ್ರಿಲ್ 3ರಂದು ಟರ್ಮಿನಲ್–2ರಲ್ಲಿ ಬ್ಯಾಂಕಾಕ್‌ನಿಂದ ಬಂದ ಪ್ರಯಾಣಿಕನ ಚೆಕ್–ಇನ್ ಬ್ಯಾಗ್ ಪರಿಶೀಲಿಸಿದಾಗ ಬ್ಯಾಗಿನಲ್ಲಿ 8.93 ಕೆ.ಜಿ ಗಾಂಜಾ ಪತ್ತೆಯಾಗಿದೆ. ಗಾಂಜಾ ಸಮೇತ ಆರೋಪಿಯನ್ನು ವಶಕ್ಕೆ ಪಡೆಯಲಾಗಿದೆ.

ಆರೋಪಿ ವಿರುದ್ಧ ಮಾದಕ ವಸ್ತುಗಳ ನಿಷೇಧ ಕಾಯಿದೆ (ಎನ್‌ಡಿಪಿಎಸ್) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಸಂಚಾರ ನಿಯಮ ಉಲ್ಲಂಘನೆ 789 ಚಾಲಕರ ವಿರುದ್ಧ ಪ್ರಕರಣ

ಮದ್ಯಪಾನ ಮಾಡಿ ವಾಹನ ಚಾಲನೆ ಹಾಗೂ ಅತಿವೇಗದಿಂದ ವಾಹನ ಚಾಲನೆ ಮಾಡಿ ಸಂಚಾರ ನಿಯಮ ಉಲ್ಲಂಘಿಸಿದ್ದ 789 ಚಾಲಕರ ವಿರುದ್ಧ ಪ್ರಕರಣ ದಾಖಲಾಗಿದೆ.

53 ಸಂಚಾರ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಮಾರ್ಚ್ 30ರಿಂದ ಏಪ್ರಿಲ್ 5ರವರೆಗೆ ವಿಶೇಷ ಕಾರ್ಯಾಚರಣೆ ನಡೆಸಲಾಯಿತು. ಈ ಅವಧಿಯಲ್ಲಿ 42,558 ವಿವಿಧ ಮಾದರಿಯ ವಾಹನಗಳನ್ನು ತಪಾಸಣೆ ನಡೆಸಲಾಯಿತು. ಮದ್ಯಪಾನ ಮಾಡಿ ವಾಹನ ಚಾಲನೆ ಮಾಡಿ ಸಂಚಾರ ನಿಯಮ ಉಲ್ಲಂಘಿಸಿದ್ದ 638 ಚಾಲಕರ ವಿರುದ್ಧ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು.

ಅತಿವೇಗದಿಂದ ವಾಹನ ಚಾಲನೆ ಮಾಡುತ್ತಿದ್ದವರ ವಿರುದ್ಧ ಒಟ್ಟು 151 ಪ್ರಕರಣ ದಾಖಲು ಮಾಡಿಕೊಂಡು ₹1.52 ಲಕ್ಷ ದಂಡ ಸಂಗ್ರಹಿಸಲಾಗಿದೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಮದ್ಯಪಾನ ಮಾಡಿ ವಾಹನ ಚಲಾಯಿಸುವ ಹಾಗೂ ಅತಿವೇಗವಾಗಿ ವಾಹನ ಚಲಾಯಿಸುವವರ ಹಾವಳಿ ತಡೆಗಟ್ಟಲು ಮತ್ತು ರಸ್ತೆ ಸುರಕ್ಷತೆಗಾಗಿ ಇಂತಹ ಕಾರ್ಯಾಚರಣೆಯನ್ನು ಮುಂದಿನ ದಿನಗಳಲ್ಲಿಯೂ ನಡೆಸಲಾಗುವುದು ಎಂದು ಅವರು ಎಚ್ಚರಿಸಿದರು.

ಡಿಆರ್‌ಡಿಒ ಕಚೇರಿಗೆ ಬಾಂಬ್ ಬೆದರಿಕೆ: ಆತಂಕ ಸೃಷ್ಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೈಯಪ್ಪನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ (ಡಿಆರ್‌ಡಿಒ) ಕಚೇರಿಗೆ ಬಾಂಬ್ ಬೆದರಿಕೆಯ 10ಕ್ಕೂ ಹೆಚ್ಚು ಇ–ಮೇಲ್‌ಗಳು ಬಂದ ಕಾರಣ ಸೋಮವಾರ ಆತಂಕದ ವಾತಾವರಣ ಸೃಷ್ಟಿ ಆಗಿತ್ತು.

ಕಚೇರಿಗೆ ಬಂದ ಸಿಬ್ಬಂದಿ ಇ–ಮೇಲ್ ಗಮನಿಸಿ, ಪೊಲೀಸರಿಗೆ ಮಾಹಿತಿ ನೀಡಿದರು. ಅಲ್ಲದೇ ಕಚೇರಿಯಲ್ಲಿದ್ದ ಎಲ್ಲ ಸಿಬ್ಬಂದಿಗೆ ಹೊರಗೆ ಹೋಗುವಂತೆ ಸೂಚಿಸಿದರು.

ಬಾಂಬ್ ನಿಷ್ಕ್ರಿಯ ದಳ, ಬಾಂಬ್ ತಪಾಸಣೆ ದಳ ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದರು. ಯಾವುದೇ, ಸ್ಫೋಟಕ ವಸ್ತುಗಳಾಗಲಿ, ರಾಸಾಯನಿಕ ಪದಾರ್ಥಗಳಾಗಲಿ ಪತ್ತೆ ಆಗಿಲ್ಲ. ಇದೊಂದು ಹುಸಿ ಬಾಂಬ್ ಬೆದರಿಕೆ ಎಂಬುದು ದೃಢಪಟ್ಟಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಡಿಆರ್‌ಡಿಒ ಅಡಿಯಲ್ಲಿ ಬರುವ ಜಿಟಿಆರ್‌ಇ (ಗ್ಯಾಸ್ ಟರ್ಬೈನ್ ರಿಸರ್ಚ್ ಎಸ್ಟಾಬ್ಲಿಷ್‌ಮೆಂಟ್) ಕಚೇರಿಯನ್ನು ಗುರಿಯಾಗಿಸಿಕೊಂಡು ಬೆದರಿಕೆ ಹಾಕಲಾಗಿದೆ. ಕಚೇರಿ ಆವರಣದಲ್ಲಿ ಸುಧಾರಿತ ಸ್ಫೋಟಕಗಳನ್ನು ಇರಿಸಲಾಗಿದೆ. ಅವುಗಳು ಮಧ್ಯಾಹ್ನ 1.30ರ ಸುಮಾರಿಗೆ ಸ್ಫೋಟಗೊಳ್ಳಲಿವೆ ಎಂಬುದಾಗಿ ಇ–ಮೇಲ್‌ನಲ್ಲಿ ಬರೆಯಲಾಗಿತ್ತು. ಇ–ಮೇಲ್ ತಮಿಳು ಭಾಷೆಯಲ್ಲಿತ್ತು. ಅಲ್ಲದೇ ತಮಿಳುನಾಡಿನ ಪ್ರಭಾವಿ ರಾಜಕಾರಣಿಯೊಬ್ಬರ ಮೊಮ್ಮಗನನ್ನು ಅಪಹರಣ ಮಾಡಲಾಗುವುದು ಎಂಬುದಾಗಿಯೂ ಉಲ್ಲೇಖಿಸಲಾಗಿತ್ತು. ಮಾಹಿತಿ ಬಂದ ತಕ್ಷಣವೇ ತಪಾಸಣೆ ನಡೆಸಲಾಯಿತು’ ಎಂದು ಪೊಲೀಸರು ಹೇಳಿದರು.

‘ಉದಯನಿಧಿ ಹೆಸರಿನ ಐಡಿಯಿಂದ ಇ ಮೇಲ್ ಸಂದೇಶ ಬಂದಿದೆ. ಯಾವುದೇ ಸ್ಫೋಟಕ ವಸ್ತುಗಳು ಪತ್ತೆಯಾಗಿಲ್ಲ. ಆದರೆ, ಮುನ್ನೆಚ್ಚರಿಕಾ ಕ್ರಮವಾಗಿ ನಗರದಲ್ಲಿ ಇರುವ ಎಲ್ಲ ರಕ್ಷಣಾ ಸಂಸ್ಥೆಗಳ ಬಳಿ ಭದ್ರತೆ ಹೆಚ್ಚಿಸಲಾಗಿದೆ. ಆರೋಪಿಗಳ ಪತ್ತೆಗೆ ಸಿಸಿಬಿ ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ’ ಎಂದು ಮೂಲಗಳು ಹೇಳಿವೆ.

ನಕಲಿ ದಾಖಲೆ ಸೃಷ್ಟಿ: ಬಿಜೆಪಿ ಮುಖಂಡ ಶ್ರೀನಾಥ್ ನಗರಗದ್ದೆ ಸೇರಿ ಮೂವರ ಸೆರೆ

ಪ್ರಜಾವಾಣಿ ವಾರ್ತೆ


ಶ್ರೀನಾಥ್


ಕಿಶನ್


ಕೃಷ್ಣಮೂರ್ತಿ

ಬೆಂಗಳೂರು: ನಕಲಿ ದಾಖಲೆ ಸೃಷ್ಟಿಸಿ ಮಲ್ಲೇಶ್ವರದ ಪೊಲೀಸ್ ವಸತಿಗೃಹದ ಜಾಗವನ್ನು ಕಬಳಿಸಲು ಯತ್ನಿಸಿದ್ದ ಪ್ರಕರಣದಲ್ಲಿ ಶಿವಮೊಗ್ಗದ ಬಿಜೆಪಿ ಮುಖಂಡ ಸೇರಿದಂತೆ ಮೂವರನ್ನು ಮಲ್ಲೇಶ್ವರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಬಿಜೆಪಿ ಮುಖಂಡ ಶ್ರೀನಾಥ್ ನಗರಗದ್ದೆ, ತುಮಕೂರಿನ ಕೃಷ್ಣಮೂರ್ತಿ ಹಾಗೂ ಮೈಸೂರಿನ ಕಿಶನ್ ಬಂಧಿತರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬೆಂಗಳೂರು ದಕ್ಷಿಣ ಜಿಲ್ಲೆಯ ಲೋಕಾಯುಕ್ತ ಇನ್‌ಸ್ಪೆಕ್ಟರ್ ಎಂ.ಕುಮಾರ್ ನೀಡಿದ ದೂರಿನ ಮೇರೆಗೆ ಎಫ್‌ಐಆರ್ ದಾಖಲು ಮಾಡಿಕೊಳ್ಳಲಾಗಿತ್ತು. ರಾಜ್ಯದ ವಿವಿಧೆಡೆ ಕಾರ್ಯಾಚರಣೆ ನಡೆಸಿ, ಆರೋಪಿಗಳನ್ನು ಬಂಧಿಸಲಾಗಿದೆ. ನ್ಯಾಯಾಲಯಕ್ಕೆ ಹಾಜರುಪಡಿಸಿ ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ಪಡೆಯಲಾಗಿದೆ.

ಶ್ರೀನಾಥ್ ನಗರಗದ್ದೆಯೇ ಈ ಪ್ರಕರಣದ ಸೂತ್ರಧಾರ. ಮಾಜಿ ಸಚಿವರೊಬ್ಬರ ಶಿವಮೊಗ್ಗದ ಕಚೇರಿಯಲ್ಲೂ ಶ್ರೀನಾಥ್ ಕೆಲಸ ಮಾಡಿದ್ದರು ಎಂದು ಮೂಲಗಳು ಹೇಳಿವೆ. ₹80 ಕೋಟಿ ಮೌಲ್ಯದ ಆಸ್ತಿಯನ್ನು ಕಬಳಿಸಲು ಸಂಚು ರೂಪಿಸಲಾಗಿದೆ ಎಂದು ನೀಡಿದ ದೂರಿನ ಮೇರೆಗೆ ತನಿಖೆ ನಡೆಸಲಾಗುತ್ತಿದೆ.

ಪೊಲೀಸ್ ವಸತಿಗೃಹಗಳು ಹಳೆಯದಾಗಿದ್ದವು. ವಸತಿಗೃಹ ತೆರವು ಮಾಡಿ ಹೊಸ ಕಟ್ಟಡ ನಿರ್ಮಾಣಕ್ಕೆ ಉತ್ತರ ವಿಭಾಗದ ಡಿಸಿಪಿ ಅವರು ಪ್ರಸ್ತಾವ ಸಲ್ಲಿಸಿದ್ದರು. ಅದೇ ಜಾಗವನ್ನು ಕಬಳಿಸಲು ಈ ತಂಡವು ಮುಂದಾಗಿತ್ತು ಎಂದು ಮೂಲಗಳು ಹೇಳಿವೆ.

ಇ–ಖಾತಾ ಮಾಡಿಕೊಟ್ಟ, ವಿದ್ಯುತ್ ಸಂಪರ್ಕದ ವರ್ಗಾವಣೆ ಮಾಡಿಕೊಟ್ಟ ಜಿಬಿಎ ಮತ್ತು ಬೆಸ್ಕಾಂ ಅಕಾರಿಗಳಿಗೂ ನೋಟಿಸ್ ಜಾರಿ ಮಾಡಲಾಗಿದೆ. ಕೆಲವು ಅಧಿಕಾರಿಗಳ ಪಾತ್ರ ಇರುವುದೂ ಕಂಡುಬಂದಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಇಲಾಖೆಗೆ ಸೇರಿದ ಜಾಗವನ್ನು 1913ರ ನಕ್ಷೆಯಲ್ಲಿಯೇ ಪೊಲೀಸ್ ವಸತಿಗೃಹವೆಂದು ಗುರುತಿಸಲಾಗಿತ್ತು. ಪ್ರಸ್ತುತ ಈ ಸ್ಥಳದಲ್ಲೀಗ ನಾಲ್ವರು ಇನ್‌ಸ್ಪೆಕ್ಟರ್ ಕುಟುಂಬ ಹಾಗೂ ಸಿಬ್ಬಂದಿ ವಾಸಿಸುತ್ತಿದ್ದಾರೆ. ಆದರೆ, ಇತ್ತೀಚೆಗೆ ಅಲ್ಲೇ ವಾಸವಿರುವ ಇನ್‌ಸ್ಪೆಕ್ಟರ್ ಕುಮಾರ್ ಮನೆಗೆ ವಿದ್ಯುತ್ ಬಿಲ್ ಬಂದಿದ್ದು, ಅದರಲ್ಲಿ ಮಹಾಲಕ್ಷ್ಮಿ ಎಂಬುವರ ಹೆಸರಿತ್ತು. ಅನುಮಾನಗೊಂಡ ಕುಮಾರ್ ಬೆಸ್ಕಾಂ, ಜಿಬಿಎ, ಉಪ ನೋಂದಣಿ ಕಚೇರಿಗಳಿಗೆ ಭೇಟಿ ನೀಡಿ ವಿಚಾರಣೆ ಆರಂಭಿಸಿದಾಗ ಅಕ್ರಮವಾಗಿ ದಾಖಲೆಗಳನ್ನು ಸೃಷ್ಟಿಸಿ ಮಹಾಲಕ್ಷ್ಮಿ ಎಂಬ ಹೆಸರಿಗೆ ವರ್ಗಾವಣೆ ಮಾಡಲಾಗಿರುವುದು ಕಂಡುಬಂದಿತ್ತು. ಜೊತೆಗೆ, ಜಿಬಿಎ ಮೂಲಕ ಅಕ್ರಮವಾಗಿ ಇ-ಖಾತಾ ಮಾಡಿಸಿರುವುದು ಹಾಗೂ ಮಾರಾಟ ಮಾಡಲು ಒಪ್ಪಂದ ಪತ್ರ ಕೂಡ ಮಾಡಲಾಗಿತ್ತು. ಆಸ್ತಿ ಕಬಳಿಕೆ ವಿಚಾರ ಮಹಾಲಕ್ಷ್ಮಿ ಅವರ ಗಮನದಲ್ಲೇ ಇರಲಿಲ್ಲ. ಆದರೆ, ಆರೋಪಿಗಳು ಅಕ್ರಮ ದಾಖಲೆ ಸೃಷ್ಟಿಸಿ ಅವರ ಹೆಸರಿಗೆ ಆಸ್ತಿ ವರ್ಗಾವಣೆ ಮಾಡಿದ್ದು ತನಿಖೆಯಲ್ಲಿ ಕಂಡುಬಂದಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

ಕಾನ್‌ಸ್ಟೆಬಲ್‌ಗಳ ಕುಟುಂಬಸ್ಥರಿಂದ ಜಿ.ಪರಮೇಶ್ವರ ಭೇಟಿ

ವರ್ಗಾವಣೆ ಕೋರಿ ಸಚಿವರಿಗೆ ಮನವಿ

ಪ್ರಜಾವಾಣಿ ವಾರ್ತೆ


ಜಿ.ಪರಮೇಶ್ವರ

ಬೆಂಗಳೂರು: ಸಿವಿಲ್ ಪೊಲೀಸ್ ಕಾನ್‌ಸ್ಟೆಬಲ್‌ಗಳಿಗೆ (ಸಾಮಾನ್ಯ ಪ್ರಕರಣ) ಅಂತರ ಜಿಲ್ಲಾ ವರ್ಗಾವಣೆ ನೀಡುವಂತೆ ಆಗ್ರಹಿಸಿ, ಗೃಹ ಸಚಿವ ಜಿ.ಪರಮೇಶ್ವರ ಅವರಿಗೆ ಕಾನ್‌ಸ್ಟೆಬಲ್‌ಗಳ ಕುಟುಂಬಸ್ಥರು ಸೋಮವಾರ ಮನವಿ ಸಲ್ಲಿಸಿದರು.

ಸದಾಶಿವನಗರದ ನಿವಾಸದ ಬಳಿ ಸಚಿವರನ್ನು ಭೇಟಿ ಮಾಡಿದ ಕುಟುಂಬಸ್ಥರು ಮನವಿ ನೀಡಿದರು. ಮನವಿ ಸ್ವೀಕರಿಸಿದ ಬಳಿಕ ಮಾತನಾಡಿದ ಪರಮೇಶ್ವರ, ಈ ಸಂಬಂಧ ರಾಜ್ಯ ಪೊಲೀಸ್ ಮಹಾನಿರ್ದೇಶಕರು ಹಾಗೂ ನಗರ ಪೊಲೀಸ್ ಕಮಿಷನರ್ ಅವರೊಂದಿಗೆ ಚರ್ಚಿಸಲಾಗುವುದು ಎಂದು ಭರವಸೆ ನೀಡಿದರು.

ಒಂದೇ ಘಟಕದಲ್ಲಿ 10 ವರ್ಷ ಕೆಲಸ ಪೂರೈಸಿರುವ 2016ನೇ ಸಾಲಿನ ಸಿವಿಲ್ ಪೊಲೀಸ್ ಕಾನ್‌ಸ್ಟೆಬಲ್‌ಗಳಿಗೆ ಅಂತರ ಜಿಲ್ಲಾ ವರ್ಗಾವಣೆಗೆ ಅವಕಾಶ ನೀಡುವಂತೆ ಕುಟುಂಬಸ್ಥರು ಮನವಿಯಲ್ಲಿ ಕೋರಿದರು.

‘ಇಲಾಖೆಗೆ ಸೇರಿದ ಸಮಯದಲ್ಲಿ ಎರಡೂವರೆ ವರ್ಷ ಪ್ರೊಬೇಷನರಿ ಅವಧಿ ಮುಕ್ತಾಯವಾದ ಮೇಲೆ ಅಂತರ ಜಿಲ್ಲಾ ವರ್ಗಾವಣೆ ಬಯಸುವ ಪೊಲೀಸ್ ಸಿಬ್ಬಂದಿ, ರಾಜ್ಯ ಪೊಲೀಸ್ ಮಹಾನಿರ್ದೇಶಕರ ಕಚೇರಿಯಿಂದ ಆದೇಶ ಪಡೆದುಕೊಂಡು ವರ್ಗಾವಣೆ ಹೊಂದಬಹುದಿತ್ತು. ಆದರೆ, 2024ರಲ್ಲಿ ಮತ್ತೊಂದು ಆದೇಶವನ್ನು ಹೊರಡಿಸಿ ‘ಸಿ’ ವರ್ಗದ ಪೊಲೀಸ್ ಸಿಬ್ಬಂದಿಯ ವರ್ಗಾವಣೆಯ ಅವಧಿಯನ್ನು ಐದು ವರ್ಷದಿಂದ ಏಳು ವರ್ಷಕ್ಕೆ ಹೆಚ್ಚಿಸಲಾಗಿತ್ತು. ಅದಾದ ಮೇಲೆ ಆ ಅವಧಿಯನ್ನು 10 ವರ್ಷಕ್ಕೆ ಹೆಚ್ಚಿಸಲಾಗಿದೆ. ಅಲ್ಲದೇ ವರ್ಗಾವಣೆ ಬಯಸುವ ಸಿಬ್ಬಂದಿ ಕೆಎಸ್‌ಪಿ ಪೋರ್ಟಲ್‌ನಲ್ಲಿ ಅರ್ಜಿ ಹಾಕಬೇಕೆಂಬ ನಿಯಮವನ್ನೂ ಜಾರಿಗೊಳಿಸಲಾಗಿದೆ. ನಮ್ಮ ಕುಟುಂಬದಲ್ಲಿ ಕಾನ್‌ಸ್ಟೆಬಲ್‌ಗಳಾಗಿ ಕೆಲಸ ಮಾಡುತ್ತಿದ್ದವರು ಆ ನಿಯಮದಂತೆಯೇ ಅರ್ಜಿ ಸಲ್ಲಿಸಿದ್ದರು. ಆದರೆ, ವರ್ಗಾವಣೆ ಆದೇಶ ಸಿಕ್ಕಿಲ್ಲ’ ಎಂದು ನೋವು ತೋಡಿಕೊಂಡರು.

ವರ್ಗಾವಣೆ ವಿಳಂಬದ ಕಾರಣಕ್ಕೆ ವರ್ಗಾವಣೆಗೆ ಅರ್ಜಿ ಸಲ್ಲಿಸಿದ್ದವರ ಪೈಕಿ ಶೇ 80ರಷ್ಟು ಮಂದಿ ಹೆಡ್ ಕಾನ್‌ಸ್ಟೆಬಲ್‌ಗಳಾಗಿ ಪದೋನ್ನತಿ ಪಡೆದುಕೊಂಡಿದ್ದಾರೆ. ಕೌಟುಂಬಿಕ ಪರಿಸ್ಥಿತಿ, ಒಬ್ಬನೇ ಮಗ, ಒಂಟಿ ಪೋಷಕರು, ಪೋಷಕರ ಅನಾರೋಗ್ಯ ಕಾರಣಕ್ಕೆ ಉಳಿದ 300 ಸಿಬ್ಬಂದಿ ವರ್ಗಾವಣೆ ನಿರೀಕ್ಷೆಯಲ್ಲಿದ್ದಾರೆ. ಪದೋನ್ನತಿಯ ಅವಕಾಶವನ್ನೂ ಬಿಟ್ಟುಕೊಟ್ಟಿದ್ದಾರೆ. ತಕ್ಷಣವೇ ಅಂತಿಮ ಆದೇಶ ಹೊರಡಿಸಬೇಕು ಎಂದು ಕೋರಿದರು.

‘ಈಡೇರದ ಭರವಸೆ’

‘ಪತಿ–ಪತ್ನಿ ಪ್ರಕರಣ, ಮೂರು ವರ್ಷ ಸೇವೆ ಪೂರೈಸಿದ ಮಾಜಿ ಸೈನಿಕ ಪೊಲೀಸ್ ಸಿಬ್ಬಂದಿಗೆ ಅವರು ಕೋರಿದ್ದ ಜಿಲ್ಲೆಗಳಿಗೆ ವರ್ಗಾವಣೆ ದೊರೆತಿದೆ. ಅದೇ ಸಾಮಾನ್ಯ ಪ್ರಕರಣಗಳಲ್ಲಿ ವರ್ಗಾವಣೆಯ ಸೌಲಭ್ಯ ಸಿಗದೇ ಪೊಲೀಸ್ ಸಿಬ್ಬಂದಿ ಪರದಾಡುತ್ತಿದ್ದಾರೆ. ಹಿಂದೊಮ್ಮೆ ಭೇಟಿ ಮಾಡಿ ಮನವಿ ಸಲ್ಲಿಸಿದಾಗ ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದೀರಿ. ಆದರೆ, ಭರವಸೆ ಈಡೇರಿಲ್ಲ’ ಎಂದು ಕುಟುಂಬಸ್ಥರು ಮನವಿಯಲ್ಲಿ ನೋವು ತೋಡಿಕೊಂಡರು.

'ಇನ್ನೂ 2 ವರ್ಷ ಸಿದ್ದರಾಮಯ್ಯ ಸಿ.ಎಂ'

ಹೈಕಮಾಂಡ್ ಈ ಬಗ್ಗೆ ಸ್ಪಷ್ಟನೆ ನೀಡುವ ಅಗತ್ಯವಿಲ್ಲ – ಗೃಹ ಸಚಿವ ಜಿ.ಪರಮೇಶ್ವರ

• ಪ್ರಜಾವಾಣಿ ವಾರ್ತೆ


ಜಿ.ಪರಮೇಶ್ವರ

ಮೈಸೂರು: 'ಸಿದ್ದರಾಮಯ್ಯ ಅವರೇ ಇನ್ನೂ ಎರಡು ವರ್ಷ ಮುಖ್ಯಮಂತ್ರಿ ಆಗಿರುತ್ತಾರೆ' ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ಸೋಮವಾರ ಇಲ್ಲಿ ಪತ್ರಕರ್ತರೊಂದಿಗೆ ಮಾತನಾಡಿ, '2013ರಲ್ಲಿ ಸಿದ್ದರಾಮಯ್ಯ ಅವರೇ ಐದು ವರ್ಷ ಸಿ.ಎಂ ಎಂದು ಹೈಕಮಾಂಡ್ ಘೋಷಿಸಿರಲಿಲ್ಲ. ಆಗ ಅವಧಿ ಪೂರ್ಣಗೊಳಿಸಿದ್ದರು. 2023ರಲ್ಲೂ ಸಿದ್ದರಾಮಯ್ಯ ಮುಖ್ಯಮಂತ್ರಿ ಎಂದು ಹೈಕಮಾಂಡ್ ಹೇಳಿತ್ತು. ಅವಧಿ 2028ರವರೆಗೆ ಇದೆ. ಪೂರ್ಣಗೊಳಿಸಬೇಕು ತಾನೆ? ನೀವೇ 5 ವರ್ಷ ಸಿ.ಎಂ ಎಂದು ಹೈಕಮಾಂಡ್ ಸ್ಪಷ್ಟೀಕರಣ ನೀಡುವ ಅಗತ್ಯವಿಲ್ಲ' ಎಂದು ಪ್ರತಿಪಾದಿಸಿದರು.

'ಹೈಕಮಾಂಡ್ ಯಾವುದೇ ಗೊಂದಲವನ್ನೂ ಸೃಷ್ಟಿಸಿಲ್ಲ. ಅಧಿಕಾರದ ಅವಧಿ ಅಥವಾ ಬದಲಾವಣೆ ಬಗ್ಗೆ ಮಾತನಾಡಿದೆಯೇ? ಅದರರ್ಥ ಆ ರೀತಿಯ ಯಾವ ಬೆಳವಣಿಗೆಯೂ ಇಲ್ಲ ಎಂದೇ. ಈ ಬಗ್ಗೆ ಯಾರಾದರೂ ಹೇಳಿಕೆ ನೀಡಿದರೆ ಅದು ವೈಯಕ್ತಿಕ ಅಭಿಪ್ರಾಯವಷ್ಟೆ' ಎಂದರು.

ಡಿಕೆಶಿಗೆ ಸಮಸ್ಯೆ ಇಲ್ಲ

'ಡಿಸಿಎಂ ಡಿ.ಕೆ.ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷರು. ನಮ್ಮ ನಾಯಕರಾದ ಅವರಿಗೆ ಯಾವ ಸಮಸ್ಯೆಯೂ ಆಗಿಲ್ಲ. ಎಲ್ಲ ಶಾಸಕರೂ ಸಿ.ಎಂ ಆಗಲು ಅರ್ಹರು ಎಂದು ಮುಖ್ಯಮಂತ್ರಿಯವರು ಅಧಿವೇಶನದಲ್ಲೇ ಹೇಳಿದ್ದಾರಲ್ಲವೇ? ಅದರಲ್ಲಿ ನಾನೋ, ಇನ್ನೊಬ್ಬರೋ ಅರ್ಹರೆಂಬ ಪ್ರಶ್ನೆಯೇ ಬರುವುದಿಲ್ಲ' ಎಂದು ಜಿ.ಪರಮೇಶ್ವರ ಪ್ರತಿಕ್ರಿಯಿಸಿದರು.

'ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ಕ್ಷೇತ್ರಗಳ ಉಪಚುನಾವಣೆ ಫಲಿತಾಂಶವು ರಾಜ್ಯ ರಾಜಕೀಯದ ದಿಕ್ಸೂಚಿಯಲ್ಲ. ಅದು ಸರ್ಕಾರಕ್ಕೆ ನೀಡುವ ಅಂಕವಲ್ಲ. ಯಾವ ಬದಲಾವಣೆಯೂ ಆಗುವುದಿಲ್ಲ' ಎಂದು ಹೇಳಿದರು.

'ಮೇ 4ರ ನಂತರ ನಿರ್ಧಾರ'


ಕೆ.ಎನ್.ರಾಜಣ್ಣ

ತುಮಕೂರು: 'ಮುಖ್ಯಮಂತ್ರಿ ಸ್ಥಾನದಿಂದ ಸಿದ್ದರಾಮಯ್ಯ ಬದಲಾವಣೆ, ಇಲ್ಲವೆ ಸಚಿವ ಸಂಪುಟ ವಿಸ್ತರಣೆ ಮೇ 4ರ ನಂತರ ನಿರ್ಧಾರವಾಗಲಿದೆ' ಎಂದು ಶಾಸಕ ಕೆ.ಎನ್.ರಾಜಣ್ಣ ಹೇಳಿದ್ದಾರೆ.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ನಡುವೆ ಏನು ಒಪ್ಪಂದ ಆಗಿದೆ ಎಂಬುದು ಗೊತ್ತಿಲ್ಲ. ಆದರೆ ಮೇ 4ರ ನಂತರ ಹೈಕಮಾಂಡ್ ನಿರ್ಧಾರ ತೆಗೆದುಕೊಳ್ಳಲಿದೆ' ಎಂದರು.

ಕೆಪಿಸಿಸಿ ಅಧ್ಯಕ್ಷರ ಬದಲಾವಣೆಯೂ ಆಗಲಿದೆ. ಹಲವರು ಈ ಹುದ್ದೆಯ ರೇಸ್‌ನಲ್ಲಿ ಇದ್ದಾರೆ. ಸಚಿವ ಸತೀಶ್ ಜಾರಕಿಹೊಳಿ ಹೆಸರು ಮುಂಚೂಣಿಯಲ್ಲಿ ಇದೆ ಎಂದು ಹೇಳಿದರು.

ಆರ್ಡರ್ಲಿ: ಪೊಲೀಸ್ ಸಿಬ್ಬಂದಿ ಬಿಡುಗಡೆಗೆ ಆದೇಶ


ಎಂ.ಎ. ಸಲೀಂ

ಬೆಂಗಳೂರು: ಆರ್ಡರ್ಲಿ ಕರ್ತವ್ಯಕ್ಕೆ ನಿಯೋಜಿಸಲಾಗಿರುವ ಸಿಬ್ಬಂದಿಯನ್ನು ತಕ್ಷಣವೇ ಕರ್ತವ್ಯದಿಂದ ಬಿಡುಗಡೆ ಮಾಡುವಂತೆ ಸೂಚಿಸಿ ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ ಆದೇಶ ಹೊರಡಿಸಿದ್ದಾರೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳೂ ಸೇರಿದಂತೆ ಹಿರಿಯ ಅಧಿಕಾರಿಗಳಿಗೆ ನೀಡಲಾಗಿದ್ದ ಆರ್ಡರ್ಲಿಗೆ ಬದಲಾಗಿ ಪರ್ಯಾಯ ವ್ಯವಸ್ಥೆ ರೂಪಿಸಿ, ಗೃಹ ಇಲಾಖೆ ಆದೇಶಿಸಿದೆ. ಅದರ ಬೆನ್ನಲ್ಲೇ ಈ ಆದೇಶ ಹೊರಬಿದ್ದಿದೆ.

ಹಿಂದೆ ಪೊಲೀಸ್ ಕಾನ್‌ಸ್ಟೆಬಲ್ ಅಥವಾ ಹೆಡ್ ಕಾನ್‌ಸ್ಟೆಬಲ್‌ಗಳನ್ನು ಆರ್ಡರ್ಲಿಗಳನ್ನಾಗಿ ನೇಮಿಸಲಾಗುತ್ತಿತ್ತು. ಈಗ ಹೋಮ್ ಗಾರ್ಡ್ಸ್ ಅಥವಾ ಹೊರಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಲು ಆದೇಶಿಸಲಾಗಿದೆ.

ಹೊಸ ವ್ಯವಸ್ಥೆಯ ಪ್ರಕಾರ, ಹೊರಗುತ್ತಿಗೆ ಆಧಾರದ ನೇಮಕವಾದವರಿಗೆ ನಿಗದಿತ ಆರ್ಡರ್ಲಿ ಭತ್ಯೆಯನ್ನು ನೀಡಬಹುದು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಎಲ್ಲಾ ಘಟಕಾಧಿಕಾರಿಗಳು ಈ ಆದೇಶವನ್ನು ಪಾಲಿಸಬೇಕು. ಏಪ್ರಿಲ್ 30ರ ಒಳಗೆ ಪಾಲನಾ ವರದಿ ಸಲ್ಲಿಸಬೇಕು ಎಂದು ಆದೇಶದಲ್ಲಿ ಉಲ್ಲೇಖಿಸಿದ್ದಾರೆ.

ಈ ಆದೇಶವು ಪೊಲೀಸ್ ಇಲಾಖೆಯ ಆಡಳಿತದಲ್ಲಿ ಪ್ರಮುಖ ಬದಲಾವಣೆಯಾಗಿ ಪರಿಗಣಿಸಲ್ಪಟ್ಟಿದ್ದು ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಅಪಘಾತ: ಇಬ್ಬರು ವನಪಾಲಕರ ಸಾವು


ಕೃಷ್ಣ


ಹನುಮಂತಪ್ಪ

ಹೊಸಪೇಟೆ (ವಿಜಯನಗರ): ತಾಲ್ಲೂಕಿನ ವೆಂಕಟಾಪುರ ಗ್ರಾಮದ ಬಳಿ ಭಾನುವಾರ ರಾತ್ರಿ ಬೈಕ್‌ಗೆ ವಾಹನ ಡಿಕ್ಕಿ ಹೊಡೆದು, ಬೈಕ್‌ನಲ್ಲಿದ್ದ ಗಸ್ತು ವನಪಾಲಕರಾದ ಕಮಲಾಪುರದ ಕೃಷ್ಣ (25) ಮತ್ತು ವೆಂಕಟಾಪುರದ ಹನುಮಂತಪ್ಪ (50) ಮೃತಪಟ್ಟಿದ್ದಾರೆ. ಇಬ್ಬರೂ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದರು.

'ರಾಮಸಾಗರದ ಬೇಟೆ ತಡೆ ಶಿಬಿರಕ್ಕೆ (ಎಪಿಸಿ) ರಾತ್ರಿ ಪಾಳಿ ಕೆಲಸಕ್ಕೆಂದು ಬೈಕ್‌ನಲ್ಲಿ ಹೊರಟಿದ್ದರು. ಮೃತರ ಕುಟುಂಬದವರಿಗೆ ಉದ್ಯೋಗಕ್ಕೆ ಒತ್ತಾಯಿಸಿ ಕುಟುಂಬದವರು ಪ್ರತಿಭಟಿಸಿದರು' ಎಂದು ಪೊಲೀಸರು ತಿಳಿಸಿದರು.

'ಮೃತರ ಕುಟುಂಬದ ತಲಾ ಒಬ್ಬ ಸದಸ್ಯರಿಗೆ ಗುತ್ತಿಗೆ ಆಧಾರದಲ್ಲಿ ಕೆಲಸ ನೀಡಲಾಗುವುದು. ಪರಿಹಾರ ಒದಗಿಸಲು ಕ್ರಮ ಕೈಗೊಳ್ಳಲಾಗುವುದು' ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಎಚ್.ಅನುಪಮಾ ತಿಳಿಸಿದರು.

ತರಬೇತಿ ನಡುವೆಯೇ ಬೋಧನೆ, ಪರೀಕ್ಷಾ ಕಾರ್ಯ: ಶಿಕ್ಷಕರಿಗೆ ಸೂಚನೆ

ಗಣತಿ ಜತೆ ಶೈಕ್ಷಣಿಕ ಕಾರ್ಯ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನಗಣತಿ, ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಗೆ (ಎಸ್‌ಐಆರ್) ನಿಯೋಜಿಸಲ್ಪಟ್ಟಿರುವ ಶಿಕ್ಷಕರು, ಉಪನ್ಯಾಸಕರು ತರಬೇತಿ ನಡುವೆಯೇ ಬೋಧನೆ, ಪರೀಕ್ಷಾ ಕಾರ್ಯನಿರ್ವಹಿಸುವುದನ್ನು ಕಡ್ಡಾಯಗೊಳಿಸಲಾಗಿದೆ.

ಒಳಮೀಸಲಾತಿ, ಜಾತಿವಾರು ಸಮೀಕ್ಷೆಯನ್ನು ಈಗಷ್ಟೇ ಮಗಿಸಿದ್ದ ಶಿಕ್ಷಕರನ್ನು ಜನಗಣತಿ, ಎಸ್‌ಐಆರ್ ಕೆಲಸಕ್ಕೆ ನಿಯೋಜಿಸಲಾಗುತ್ತಿದೆ. ಎಸ್‌ಐಆರ್‌ಗೆ ನೇಮಕಗೊಂಡ ಪ್ರಧಾನ ತರಬೇತುದಾರರು, ಕ್ಷೇತ್ರ ತರಬೇತುದಾರು, ಮತಗಟ್ಟೆ ಅಧಿಕಾರಿಗಳಿಗೆ (ಬಿಎಲ್‌ಒ) ಕೆಲ ತಿಂಗಳ ಹಿಂದೆಯೇ ತರಬೇತಿ ನೀಡಲಾಗಿತ್ತು. ಈಗ ಜನಗಣತಿ ಕಾರ್ಯಕ್ಕೆ ನಿಯೋಜಿತರಾದ ಶಿಕ್ಷಕರು, ಉಪನ್ಯಾಸಕರಿಗೆ ತರಬೇತಿ ಆರಂಭವಾಗಿವೆ.

ಪ್ರತಿ ಶಾಲೆಯಲ್ಲೂ ಕೆಲವರನ್ನು ಜನಗಣತಿಗೆ, ಕೆಲವರನ್ನು ಎಸ್‌ಐಆರ್‌ಗೆ ಹಂಚಿಕೆ ಮಾಡಲಾಗಿದೆ. ಪರೀಕ್ಷೆ ಕೆಲಸದ ಜತೆಗೇ ತರಬೇತಿಗೂ ಹಾಜರಾಗುತ್ತಿದ್ದ ಶಿಕ್ಷಕರು ಇನ್ನು ಮುಂದೆ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯದ ಜತೆಗೆ ಈ ಕೆಲಸಗಳನ್ನೂ ಮಾಡಬೇಕಿದೆ. ದ್ವಿತೀಯ ಪಿಯು, ಎಸ್‌ಎಸ್‌ಎಲ್‌ಸಿ ಎರಡನೇ ಪರೀಕ್ಷೆಗಳಿಗೂ ಮಕ್ಕಳನ್ನು ಸಿದ್ಧಗೊಳಿಸುವ ಹೊಣೆ ನಿಭಾಯಿಸಬೇಕಿದೆ.

ಒಬ್ಬರಿಗೇ ಎರಡು, ಮೂರು ಆದೇಶ: ಕೆಲ ಭಾಗಗಳಲ್ಲಿ ಒಬ್ಬ ಶಿಕ್ಷಕರಿಗೆ ಎರಡು ಮೂರು ಆದೇಶಗಳು ಬಂದಿವೆ. ಬೆಂಗಳೂರಿನ ಶಿಕ್ಷಕಿಯೊಬ್ಬರು ಜನಗಣತಿಯ ಕ್ಷೇತ್ರ ತರಬೇತುದಾರಾಗಿ ನೇಮಕಗೊಂಡಿದ್ದು, ತರಬೇತಿಯನ್ನೂ ಪಡೆದಿದ್ದಾರೆ. ಅವರನ್ನು ಮತ್ತೆ ಗಣತಿದಾರರ ಮೇಲ್ವಿಚಾರಕರಾಗಿ ನೇಮಕ ಮಾಡಲಾಗಿದೆ. ಕೆಲವರನ್ನು ಗಣತಿ ಹಾಗೂ ಎಸ್‌ಐಆರ್ ಎರಡೂ ಕೆಲಸಗಳಿಗೂ ನಿಯೋಜಿಸಲಾಗಿದೆ. ಇದೇ ಏ.6 ರಿಂದ 8ರವರೆಗೆ ಮೊದಲ ಹಂತದ ತರಬೇತಿ ನಡೆಯುತ್ತಿದ್ದು, ಎಸ್‌ಐಆರ್ ಕಾರ್ಯದ ತರಬೇತಿ ಪಡೆದವರಿಗೆ ಈ ತರಬೇತಿಗೂ ಹಾಜರಾಗುವಂತೆ ಪತ್ರ ಬಂದಿವೆ.

ಈ ಮಧ್ಯೆ ಜನಗಣತಿ ಕಾರ್ಯದಿಂದ ತಮಗೆ ವಿನಾಯಿತಿ ನೀಡುವಂತೆ ಉಪನ್ಯಾಸಕರ ಸಂಘ ಮನವಿ ಮಾಡಿದೆ.

ಇಂಗ್ಲಿಷ್ ಭಾಷಾ ತರಬೇತಿಗೂ ತೊಡಕು

ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 2026-27ನೇ ಸಾಲಿನಿಂದ ದ್ವಿಭಾಷಾ (ಕನ್ನಡ-ಇಂಗ್ಲಿಷ್) ಬೋಧನೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ರಾಜ್ಯ ಸರ್ಕಾರ 1.55 ಲಕ್ಷಕ್ಕೂ ಹೆಚ್ಚು ಶಿಕ್ಷಕರಿಗೆ ಇಂಗ್ಲಿಷ್ ಭಾಷಾ ಮಾಧ್ಯಮ ವಿಶೇಷ ತರಬೇತಿ (ಇಎಂಟಿಟಿ) ಆರಂಭಿಸಿದೆ.

ರಾಜ್ಯ ಶಿಕ್ಷಣ ತರಬೇತಿ ಮತ್ತು ಸಂಶೋಧನಾ ಸಂಸ್ಥೆ (ಡಿಎಸ್‌ಇಆರ್‌ಟಿ) ನೇತೃತ್ವದಲ್ಲಿ 1-5ನೇ ತರಗತಿಯ ವಿದ್ಯಾರ್ಥಿಗಳಿಗೆ ಸ್ಥಳೀಯ ಭಾಷೆಯ ಜತೆಗೆ ಇಂಗ್ಲಿಷ್‌ನಲ್ಲಿ ಪರಿಣತಿ ಹೊಂದಲು ಈ ತರಬೇತಿ ಸಹಕಾರಿಯಾಗಿದೆ. ಈಗಾಗಲೇ 72 ತಾಲ್ಲೂಕುಗಳ ಶಿಕ್ಷಕರಿಗೆ ತರಬೇತಿ ಆರಂಭಿಸಲಾಗಿದೆ. ಇದೇ ಸಮಯದಲ್ಲಿ ಜನಗಣತಿ ತರಬೇತಿಯೂ ಇರುವ ಕಾರಣ ಬಹುತೇಕ ಶಿಕ್ಷಕರಿಗೆ ಇಎಂಟಿಟಿ ತರಬೇತಿ ಪಡೆಯಲು ಸಾಧ್ಯವಾಗಿಲ್ಲ.

'ತ್ರಿಭಾಷಾ ಸೂತ್ರ: ನೆಹರೂ ಕನಸು'

ಪ್ರಜಾವಾಣಿ ವಾರ್ತೆ


ಸಿ.ಟಿ.ರವಿ

ಚಿಕ್ಕಮಗಳೂರು: 'ತ್ರಿಭಾಷಾ ಸೂತ್ರ ನೆಹರೂ ಅವರ ಕನಸು, ಇಂದಿರಾ ಗಾಂಧಿ ಅವರು ಅದಕ್ಕೆ ನೀರೆರೆದರು. ಆದರೆ, ಇದನ್ನು ಈಗಿನ ಕಾಂಗ್ರೆಸ್‌ನವರು ವಿರೋಧ ಮಾಡುತ್ತಿದ್ದಾರೆ' ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಸೋಮವಾರ ಇಲ್ಲಿ ಆರೋಪಿಸಿದರು.

ಸುದ್ದಿಗಾರರಿಗೆ ಮಾತನಾಡಿದ ಅವರು, 'ಕರ್ನಾಟಕಕ್ಕೆ ಕನ್ನಡವೇ ಸಾರ್ವಭೌಮ ಭಾಷೆಯಾಗಿದ್ದು, ಪ್ರಾದೇಶಿಕ ಭಾಷೆಗಳಿಗೆ ಶಕ್ತಿ ತುಂಬುವ ಕೆಲಸವನ್ನು ರಾಷ್ಟ್ರೀಯ ಶಿಕ್ಷಣ ನೀತಿ ಕೂಡ ಮಾಡುತ್ತಿದೆ. ಹಿಂದಿಯು ದೇಶದ ಶೇ 40ರಷ್ಟು ಜನರ ಮಾತೃಭಾಷೆಯಾಗಿದೆ. ಇದನ್ನೂ ಅರ್ಥ ಮಾಡಿಕೊಳ್ಳಬೇಕು' ಎಂದರು.

ಕರ್ನಾಟಕದಲ್ಲಿ ಕನ್ನಡವನ್ನೇ ಮೆರೆಸಬೇಕು, ಉಳಿದ ಭಾಷೆಗಳನ್ನೂ ಕಲಿಯಲು ಅವಕಾಶ ಮಾಡಿಕೊಡಬೇಕು. ಕೆಲವರು ಇಂಗ್ಲಿಷ್ ಮೆರೆಸಿ ಕನ್ನಡ ಮರೆಸುತ್ತಿದ್ದಾರೆ. ಅದು ಸರಿಯಲ್ಲ ಎಂದು ಹೇಳಿದರು.

ಮೈಸೂರಿನಲ್ಲಿ ಏ.19ರಿಂದ 'ಅಗ್ನಿವೀರ್ ರ‍್ಯಾಲಿ'

ಪ್ರಜಾವಾಣಿ ವಾರ್ತೆ

ಮೈಸೂರು: 'ಇಲ್ಲಿನ ನಜರ್‌ಬಾದ್‌ನ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಏ.19ರಿಂದ ಏ.27ರವರೆಗೆ 'ಅಗ್ನಿವೀರ್ ರ‍್ಯಾಲಿ' ಹಮ್ಮಿಕೊಳ್ಳಲಾಗಿದ್ದು, 6,235 ಅಭ್ಯರ್ಥಿಗಳು ಭಾಗವಹಿಸಲಿದ್ದಾರೆ' ಎಂದು ಬೆಂಗಳೂರಿನ ಭಾರತೀಯ ಸೇನೆ ನೇಮಕಾತಿ ಅಧಿಕಾರಿ ಕರ್ನಲ್ ವಿವೇಕ್ ಜಮಾದಾರ್ ತಿಳಿಸಿದರು.

ಇಲ್ಲಿನ ಕ್ರೀಡಾ ಇಲಾಖೆಯ ಕಚೇರಿಯಲ್ಲಿ ಸೋಮವಾರ ಅಧಿಕಾರಿಗಳ ಸಭೆ ನಡೆಸಿದ ಅವರು, 'ಹೋದ ವರ್ಷ ಜೂನ್‌ನಲ್ಲಿ ಲಿಖಿತ ಪರೀಕ್ಷೆ ಮುಗಿದಿದ್ದು, 2ನೇ ಹಂತದ ಪರೀಕ್ಷೆಯನ್ನು (ಸ್ಕ್ರೀನಿಂಗ್) ಇಲ್ಲಿ ಹಮ್ಮಿಕೊಳ್ಳಲಾಗಿದೆ' ಎಂದರು.

'ರ‍್ಯಾಲಿಯಲ್ಲಿ 6,043 ಪುರುಷರು ಹಾಗೂ 192 ಮಹಿಳಾ ಅಭ್ಯರ್ಥಿಗಳು ಪಾಲ್ಗೊಳ್ಳಲಿದ್ದಾರೆ. ಪ್ರತಿ ದಿನ 800 ಅಭ್ಯರ್ಥಿಗಳ ದೈಹಿಕ ದೃಢತೆ ಸೇರಿ ಕೆಲವು ಪರೀಕ್ಷೆಗಳು ನಡೆಯಲಿವೆ. ಉತ್ತೀರ್ಣರಾದವರು ವೈದ್ಯಕೀಯ ಪರೀಕ್ಷೆಗೆ ಆಯ್ಕೆಯಾಗುತ್ತಾರೆ. ಏ.27ರಂದು ಮಹಿಳಾ ಅಭ್ಯರ್ಥಿಗಳಿಗೆ ರ‍್ಯಾಲಿ ನಡೆಯಲಿದೆ' ಎಂದು ತಿಳಿಸಿದರು.

'ಅಭ್ಯರ್ಥಿಗಳಿಗೆ ನಂಜರಾಜ ಬಹದ್ದೂರ್ ಛತ್ರದಲ್ಲಿ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಲಾಗಿದೆ. ದೈಹಿಕ ಪರೀಕ್ಷೆಯಲ್ಲಿ ಆಯ್ಕೆಯಾದವರು ಮಾತ್ರ ವೈದ್ಯಕೀಯ ಪರೀಕ್ಷೆಗೆ ಹಾಜರಾಗುವುದರಿಂದ, ಒಬ್ಬ ಅಭ್ಯರ್ಥಿಯು 1ರಿಂದ 2 ದಿನ ಮಾತ್ರವೇ ಇಲ್ಲಿ ತಂಗುತ್ತಾರೆ' ಎಂದರು.

ರಥೋತ್ಸವ...

ಪ್ರಜಾವಾಣಿ ಚಿತ್ರ:


ಬೆಳಗಾವಿ ಜಿಲ್ಲೆಯ ಮೂಡಲಗಿ ತಾಲ್ಲೂಕಿನ ಸುಣಧೋಳಿಯ ಜಡಿಸಿದ್ಧೇಶ್ವರ ರಥೋತ್ಸವ ಸೋಮವಾರ ಅಪಾರ ಭಕ್ತರ ಸಂಭ್ರಮದ ಮಧ್ಯೆ ಜರುಗಿತು.

ಸಮಾನ ವೇತನಕ್ಕೆ ಆಗ್ರಹ: 8ರಿಂದ ಪಾದಯಾತ್ರೆ

ಬೆಂಗಳೂರು: ಸರ್ಕಾರಿ ನೌಕರರಿಗೆ ನೀಡುವ ಹಾಗೆಯೇ ಸಾರಿಗೆ ನೌಕರರಿಗೂ ಸಮಾನ ವೇತನಕ್ಕೆ ಆಗ್ರಹಿಸಿ ಏ.8ರಂದು ಚಿತ್ರದುರ್ಗದಿಂದ ಬೆಂಗಳೂರಿಗೆ ಪಾದಯಾತ್ರೆ ನಡೆಸಲಾಗುವುದು ಎಂದು ಕೆಎಸ್‌ಆರ್‌ಟಿಸಿಯ ನಾಲ್ಕು ನಿಗಮಗಳ ಸಂಘಟನೆಗಳ ಒಕ್ಕೂಟ ತಿಳಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಮುಖಂಡರಾದ ಕೆ.ಈ. ರಾಧಾಕೃಷ್ಣ, ಚಂದ್ರಶೇಖರ್, 'ಬೆಲೆ ಏರಿಕೆಯಿಂದ ಜೀವನ ನಡೆಸುವುದೇ ಕಷ್ಟವಾಗಿದೆ. ಆದ್ದರಿಂದ ಬೇರೆ ಮಾರ್ಗವಿಲ್ಲದೇ ಪಾದಯಾತ್ರೆ ನಡೆಸಿ, ಏ.21ರಿಂದ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವುದು' ಎಂದರು.

'ಕ್ಷೇತ್ರ ಮರುವಿಂಗಡಣೆ: ಅನ್ಯಾಯವಾಗದು'

ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆಗೆ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಕಿಡಿ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಜನಸಂಖ್ಯೆ ಆಧಾರದಡಿ ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆಯಿಂದ ವ್ಯತ್ಯಾಸ ಆಗುವ ಸಾಧ್ಯತೆ ಇರುವದರಿಂದ ಶೇಕಡಾವಾರು ಪ್ರಮಾಣದ ಮಾನದಂಡ ಅನುಸರಿಸಲಾಗಿದೆ. ಸಿದ್ದರಾಮಯ್ಯ ಅವರು ಈ ಬಗ್ಗೆ ಜನರನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ದೂರಿದರು.

ಲೋಕಸಭಾ ಕ್ಷೇತ್ರಗಳ ಪುನರ್ ವಿಂಗಡಣೆ ಕುರಿತು ಸಿದ್ದರಾಮಯ್ಯ ಅವರ ಅಭಿಪ್ರಾಯಕ್ಕೆ ಸೋಮವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದ ಅವರು, ದಕ್ಷಿಣ ಭಾರತಕ್ಕೆ ಶೇ 24ರಷ್ಟು ಹಾಗೂ ಉತ್ತರ ಭಾರತಕ್ಕೆ ಹೆಚ್ಚು ಪ್ರಾತಿನಿಧ್ಯ ಸಿಕ್ಕಿದೆ ಎಂಬ ಸಿದ್ದರಾಮಯ್ಯ ಅವರ ಆರೋಪದಲ್ಲಿ ಹುರುಳಿಲ್ಲ' ಎಂದರು.

'ಉತ್ತರ ಭಾರತದಲ್ಲಿ ಜನಸಂಖ್ಯೆ ಹೆಚ್ಚಿರುವುದರಿಂದ ಕ್ಷೇತ್ರಗಳ ಸಂಖ್ಯೆ ಹೆಚ್ಚು. ಹೀಗಾಗಿ, ಶೇಕಡಾವಾರು ಆಧಾರದಲ್ಲಿ ಕ್ಷೇತ್ರಗಳನ್ನು ಹೆಚ್ಚಿಸಲಾಗುತ್ತಿದೆ' ಎಂದು ಹೇಳಿದರು.

'1973ರಲ್ಲಿ ಇಂದಿರಾಗಾಂಧಿ ಆಡಳಿತಾವಧಿಯಲ್ಲಿ ನಡೆದ ಕ್ಷೇತ್ರ ಪುನರ್ ವಿಂಗಡಣೆಯಲ್ಲೂ ದಕ್ಷಿಣ ಭಾರತದ ರಾಜ್ಯಗಳಿಗೆ ಶೇ 24ರಷ್ಟು ಪ್ರಾತಿನಿಧ್ಯ ಸಿಕ್ಕಿದೆ. ಕೊನೆಯ ರಾಷ್ಟ್ರವ್ಯಾಪಿ ಕ್ಷೇತ್ರ ಪುನರ್ ವಿಂಗಡಣೆ ಪ್ರಕ್ರಿಯೆ 2008ರಲ್ಲಿ ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಿದ್ದಾಗ ಪೂರ್ಣಗೊಂಡಿತ್ತು' ಎಂದರು.

'ಆಟೊ ಚಾಲಕರು ಪೆಟ್ರೋಲ್ ಬಳಸಲಿ'


ಪ್ರಲ್ಹಾದ ಜೋಶಿ

'ಪೆಟ್ರೋಲ್ ಸದಾ ಲಭ್ಯವಿರುವ ಇಂಧನ. ಸದ್ಯ ಆಟೊ ಚಾಲಕರು ಎಲ್‌ಪಿಜಿ ಬದಲಿಗೆ ಪೆಟ್ರೋಲ್ ಬಳಸುವುದು ಸೂಕ್ತ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

'ದೇಶದಲ್ಲಿ 70 ದಿನಗಳಿಗೆ ಸಾಕಾಗುವಷ್ಟು ಕಚ್ಚಾ ತೈಲದ ಸಂಗ್ರಹವಿದೆ. ಆತಂಕಪಡುವ ಅಗತ್ಯವಿಲ್ಲ. ವಾಣಿಜ್ಯ ಸಿಲಿಂಡರ್‌ಗಳ ವಿತರಣೆಯನ್ನು ಶೇ 70ಕ್ಕೆ ಹೆಚ್ಚಿಸಿದೆ' ಎಂದರು.

'ಶೇ 60ರಷ್ಟು ಎಲ್‌ಪಿಜಿಯನ್ನು ದೇಶದಲ್ಲೇ ಉತ್ಪಾದಿಸಲಾಗುತ್ತಿದೆ. ಶೇ 40ರಷ್ಟು ಆಮದು ಮಾಡಿಕೊಳ್ಳುತ್ತಿದ್ದೇವೆ. ವಿಶ್ವದ ಕೆಲವೇ ದೇಶಗಳಲ್ಲಿ ಆಟೊ ಎಲ್‌ಪಿಜಿ ಲಭ್ಯವಿದೆ' ಎಂದರು.

ಚಟಕೆ ಸುದ್ದಿ

ವಿದ್ಯಾರ್ಥಿ ಕಥಾಸ್ಪರ್ಧೆಗೆ ಆಹ್ವಾನ

ಹುಬ್ಬಳ್ಳಿ: ಇಲ್ಲಿನ 'ಅಕ್ಷರ ಸಾಹಿತ್ಯ ವೇದಿಕೆ'ಯು ಕಥೆಗಾರ ಪ್ರಹ್ಲಾದ ಅಗಸನಕಟ್ಟೆ ಅವರ ಸ್ಮರಣಾರ್ಥ 'ಪ್ರಹ್ಲಾದ ಅಗಸನಕಟ್ಟೆ ವಿದ್ಯಾರ್ಥಿ ಕಥಾಸ್ಪರ್ಧೆ'ಗೆ ಕಥೆಗಳನ್ನು ಆಹ್ವಾನಿಸಿದೆ. ವಿಜೇತರಿಗೆ ₹5 ಸಾವಿರ ನಗದು ಹಾಗೂ ಪ್ರಶಸ್ತಿ ಫಲಕ ನೀಡಲಾಗುವುದು.

ಕಥೆಗಳನ್ನು ಕಳುಹಿಸಲು ಮೇ 15 ಕೊನೆಯ ದಿನ. ಜೂನ್ ತಿಂಗಳಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಬಹುಮಾನ ವಿತರಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ. ಮಾಹಿತಿಗೆ ದೂರವಾಣಿ ಸಂಖ್ಯೆ: 9845779387.

ಚಿರತೆ ಸಾವು: ತನಿಖೆಗೆ ಆದೇಶ

ಮೈಸೂರು: ಜಿಲ್ಲೆಯ ಹುಣಸೂರು ವಿಭಾಗದ ಪಿರಿಯಾಪಟ್ಟಣ ವ್ಯಾಪ್ತಿಯ ಗುಳ್ಳೆದಹಳ್ಳ ರಾಜ್ಯ ಅರಣ್ಯದಿಂದ 2 ಕಿ.ಮೀ. ದೂರದಲ್ಲಿರುವ ಕೊಪ್ಪ ವಿಭಾಗದಲ್ಲಿ ಗುಂಡೇಟಿನಿಂದ ಚಿರತೆ ಸಾವಿಗೀಡಾಗಿದೆ.

ಈ ಬಗ್ಗೆ ಸಮಗ್ರ ತನಿಖೆ ನಡೆಸಬೇಕು ಎಂದು ಸೂಚಿಸಿರುವ ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಅವರು, 'ಹೆಣ್ಣು ಚಿರತೆ ಗುಂಡೇಟಿನಿಂದ ಮೃತಪಟ್ಟಿರುವುದು ಅತ್ಯಂತ ನೋವಿನ ಸಂಗತಿ. ವನ್ಯಜೀವಿ ಅಂಗಾಂಗಕ್ಕಾಗಿ ಕಳ್ಳಬೇಟೆ ಇನ್ನೂ ನಡೆಯುತ್ತಿದೆ ಎಂಬುದಕ್ಕೆ ಇದು ಪುಷ್ಟಿ ನೀಡುತ್ತಿದೆ. ಈ ನಿಟ್ಟಿನಲ್ಲಿ ತನಿಖೆ ನಡೆಸಬೇಕು' ಎಂದು ಸೂಚಿಸಿದ್ದಾರೆ.

ವರ್ಷಕ್ಕೆ ₹3.50 ಲಕ್ಷ ವರಮಾನದ ನಿರೀಕ್ಷೆಯಲ್ಲಿ ಶ್ರೀನಿವಾಸಪುರ ಸರ್ಕಾರಿ ಶಾಲೆ

ಅಡಿಕೆ ಬೆಳೆದು ಸ್ವಾವಲಂಬಿಯತ್ತ ಶಾಲೆ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಮಕ್ಕಳಲ್ಲಿ ಕೃಷಿ ಮತ್ತು ಪರಿಸರ ಪ್ರೇಮ ಬೆಳೆಸುವ ಜತೆಗೆ ಶಾಲೆಯನ್ನೂ ಸ್ವಾವಲಂಬಿಯಾಗಿ ನಡೆಸುವತ್ತ ತಾಲ್ಲೂಕಿನ ಶ್ರೀನಿವಾಸಪುರ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ದಾಪುಗಾಲಿಟ್ಟಿದೆ.

ಅರ್ಧ ಎಕರೆಯಲ್ಲಿ ಬೆಳೆದಿರುವ ಅಡಿಕೆ ಗಿಡಗಳು ಈಗ ಫಸಲು ಬಿಡುವ ಹಂತಕ್ಕೆ ಬಂದಿದ್ದು, ವರ್ಷಕ್ಕೆ ₹3.50 ಲಕ್ಷ ವರಮಾನದ ನಿರೀಕ್ಷೆಯನ್ನು ಶಿಕ್ಷಕರು ಹೊಂದಿದ್ದಾರೆ.

ಈ ಶಾಲೆಯಲ್ಲಿ (1ರಿಂದ 5ನೇ ತರಗತಿ) 30 ಮಕ್ಕಳಿದ್ದು, ಎಲ್‌ಕೆಜಿ ಮತ್ತು ಯುಕೆಜಿಯ 8 ಮಕ್ಕಳಿದ್ದಾರೆ. ಅರ್ಧ ಎಕರೆಯಲ್ಲಿ ಮೂರು ವರ್ಷಗಳ ಹಿಂದೆ 312 ಅಡಿಕೆ ಗಿಡಗಳನ್ನು ನೆಟ್ಟಿದ್ದು, ಈಗ ಫಲವತ್ತಾಗಿ ಬೆಳೆದು ನಿಂತಿವೆ.

ಶಾಲೆಗೆ ಸ್ಮಾರ್ಟ್‌ಕ್ಲಾಸ್ ಅಳವಡಿಸಲು 2019ರಲ್ಲಿ ಶಿಕ್ಷಕರು ಮುಂದಾದರು. ಶಾಲಾ ಅಭಿವೃದ್ಧಿ ಸಮಿತಿ ಮತ್ತು ಪೋಷಕರ ಜತೆ ಸೇರಿ ₹1 ಲಕ್ಷದಷ್ಟು ದೇಣಿಗೆ ಸಂಗ್ರಹಿಸಿ ಸ್ಮಾರ್ಟ್‌ಕ್ಲಾಸ್ ಅಳವಡಿಸಿದರು. ಆ ಸಂದರ್ಭದಲ್ಲಿ ಹಲವರು ದೇಣಿಗೆ ನೀಡಿದರೆ, ಕೆಲವರ ಕೊಂಕು ಮಾತನ್ನೂ ಶಿಕ್ಷಕರು ಕೇಳಿದ್ದರು.

'ಯಾರ ದೇಣಿಗೆಯನ್ನೂ ಬಯಸದೆ ಶಾಲೆ ಅಭಿವೃದ್ಧಿಗೆ ಯೋಚಿಸಿದೆವು. ಶಾಲೆಯ ಆಟದ ಮೈದಾನಕ್ಕೆಂದು ಗ್ರಾಮ ಪಂಚಾಯಿತಿ ಮೀಸಲಿಟ್ಟಿದ್ದ ಜಾಗದ ದಾಖಲೆಗಳನ್ನು ಸರಿಪಡಿಸಿಕೊಂಡು ಅರ್ಧ ಎಕರೆಯಲ್ಲಿ ಮೈದಾನ ಮತ್ತು ಉಳಿದ ಅರ್ಧ ಎಕರೆಯಲ್ಲಿ ಅಡಿಕೆ ಬೆಳೆಯಲು ನಿರ್ಧರಿಸಿದೆವು' ಎಂದು ಶಿಕ್ಷಕರು ಹೇಳುತ್ತಾರೆ.

'ಕೊಳವೆಬಾವಿ ಕೊರೆಯಿಸಲು ₹1.50 ಲಕ್ಷ ಖರ್ಚಾಯಿತು. ಎಲ್ಲಾ ನೆರವನ್ನು ಸಹ ಶಿಕ್ಷಕರು, ಎಸ್‌ಡಿಎಂಸಿ ಅಧ್ಯಕ್ಷರು ಮತ್ತು ಗ್ರಾಮಸ್ಥರು ನೀಡಿದರು. ಅಗತ್ಯ ಬಿದ್ದಾಗ ಶ್ರಮದಾನವನ್ನೂ ಎಲ್ಲರೂ ಮಾಡುತ್ತಾರೆ. ಮೂರು ವರ್ಷಗಳ ನಂತರ ಈಗ ಮೊದಲ ಹೊಂಬಾಳೆಗಳು ಹೊರಟಿವೆ' ಎಂದು ಅವರು ಸಂತಸ ವ್ಯಕ್ತಪಡಿಸಿದರು.

> **ಶಾಲೆಯ ಅಭಿವೃದ್ಧಿಗೆ ಸರ್ಕಾರದ ಮೇಲೆ ಅವಲಂಬಿತರಾಗದೆ ಸ್ವಂತ ಶಕ್ತಿ ಬೆಳೆಸಿಕೊಳ್ಳುವ ಉದ್ದೇಶದಿಂದ ಅಡಿಕೆ ಬೆಳೆಯಲಾಗಿದೆ. ಚಂದ್ರೇಗೌಡ, ಶ್ರೀನಿವಾಸಪುರ ಸರ್ಕಾರಿ ಶಾಲೆ ಮುಖ್ಯಶಿಕ್ಷಕ**


ಶ್ರೀನಿವಾಸಪುರ ಸರ್ಕಾರಿ ಶಾಲೆಯ ಜಾಗದಲ್ಲಿ ಬೆಳೆದಿರುವ ಅಡಕೆ ತೋಟ

'ಅನುಭವ ಆಧಾರಿತ ಶಿಕ್ಷಣ'

ಅಡಿಕೆ ಜತೆಗೆ 40 ಹಣ್ಣಿನ ಗಿಡಗಳನ್ನು ನೆಡಲಾಗಿದೆ. ಪ್ರತಿ ಗಿಡದ ಜವಾಬ್ದಾರಿಯನ್ನು ಒಬ್ಬೊಬ್ಬ ವಿದ್ಯಾರ್ಥಿಗೆ ನೀಡಲಾಗಿದೆ. ಅವರು ನಿತ್ಯ ಗಮನಿಸುತ್ತಾರೆ. ನೀರುಣಿಸುವುದು ಸೇರಿ ಪೋಷಣೆಯನ್ನು ಅವರೇ ಮಾಡುತ್ತಾರೆ ಎಂದು ಮುಖ್ಯಶಿಕ್ಷಕ ಚಂದ್ರೇಗೌಡ ಹೇಳಿದರು.

ನಾಲ್ಕು ತೆಂಗಿನ ಮರಗಳಿವೆ. ತರಕಾರಿ ಬೆಳೆಯಲಾಗುತ್ತದ್ದು, ಬಿಸಿಯೂಟ ಸಿದ್ಧಪಡಿಸಲು ಅವುಗಳನ್ನು ಬಳಸಲಾಗುತ್ತಿದೆ. ಮಕ್ಕಳೇ ಅವುಗಳನ್ನು ಪೋಷಣೆ ಮಾಡುವುದರಿಂದ ಅನುಭವ ಆಧಾರಿತ ಶಿಕ್ಷಣ ದೊರೆಯುತ್ತಿದೆ ಎಂದರು. ಎಲ್ಲಾ ರೀತಿಯಲ್ಲೂ ಶಾಲೆ ಮುಂದಿದ್ದು, ರಾಜ್ಯ ಮಟ್ಟದಲ್ಲಿ ನೀಡುವ ಅತ್ಯುತ್ತಮ ಎಸ್‌ಡಿಎಂಸಿ ಪ್ರಶಸ್ತಿಗೂ ಭಾಜನವಾಗಿದೆ. ಅಕ್ಕ-ಪಕ್ಕದ ಊರಿನವರೂ ತಮ್ಮ ಮಕ್ಕಳನ್ನು ಇಲ್ಲಿಗೆ ಸೇರಿಸುತ್ತಿದ್ದಾರೆ ಎಂದು ವಿವರಿಸಿದರು.

ಮುಸ್ಲಿಮರ ಮುನಿಸು– ಉಳಿದೀತೆ ಕೋಟೆ?

ಶಾಮನೂರು ಕುಟುಂಬಕ್ಕೆ ಕಾಂಗ್ರೆಸ್ ಮನ್ನಣೆ: ಬಿಜೆಪಿಯೊಂದಿಗೆ ನೇರ ಹಣಾಹಣಿ

• ಸಿದ್ದಯ್ಯ ಹಿರೇಮಠ

ದಾವಣಗೆರೆ: 'ಮೂಲಭೂತವಾದ', 'ಭಯೋತ್ಪಾದನೆ', 'ಪಾಕಿಸ್ತಾನ', 'ಹಿಂದುತ್ವ', 'ಜಾತಿ', 'ಧರ್ಮ', 'ರಾಷ್ಟ್ರೀಯತೆ', 'ದೇಶದ್ರೋಹ', ಕೋಮುಗಲಭೆ, ಇತ್ಯಾದಿ...

ಪ್ರಮುಖ ವಿರೋಧಪಕ್ಷವಾದ ಬಿಜೆಪಿಯು ಮೇಲಿನ ಈ ಯಾವುದೇ ಪದಗಳನ್ನು ಬಳಸದೇ, ಈ ವಿಷಯಗಳನ್ನು ಪ್ರಸ್ತಾಪವನ್ನೂ ಮಾಡದೇ ಕ್ಷೇತ್ರದಲ್ಲಿ ಮತಯಾಚಿಸುತ್ತಿದ್ದು, ಮುಸ್ಲಿಮರ ಓಲೈಕೆಯ ಜಪ ಮಾಡುತ್ತಿದೆ.

ಎಂದೆಂದಿಗೂ 'ಕೈ' ಹಿಡಿದು ನಡೆಸಿರುವ ಅಲ್ಪಸಂಖ್ಯಾತರು ಯಾನೆ ಮುಸ್ಲಿಮರ ಮತಗಳು 'ಕೈ'ತಪ್ಪಬಹುದು ಎಂಬ ಆತಂಕ ಬಹುಶಃ ಇತ್ತೀಚಿನ ವರ್ಷಗಳಲ್ಲಿ ಇದೇ ಮೊದಲಿಗೆ ಆಡಳಿತಾರೂಢ ಕಾಂಗ್ರೆಸ್‌ಗೆ ಎದುರಾಗಿದೆ.


'ಮುಸ್ಲಿಮರು ನಮ್ಮೊಂದಿಗೇ ಇದ್ದಾರೆ' ಎಂದು ಕಾಂಗ್ರೆಸ್ ಪದೇಪದೇ ಹೇಳುತ್ತಲೇ ಇದ್ದರೂ ಆ ಸಮುದಾಯದ ವಿಶ್ವಾಸಗಳಿಸಲು ಹಿಂದೆಂದೂ ಮಾಡದ ಪ್ರಯತ್ನವನ್ನು ಮಾಡುತ್ತಿದೆ.

ಉಪ ಚುನಾವಣೆಯ ಪ್ರಚಾರದುದ್ದಕ್ಕೂ ಬಿಜೆಪಿಯು ಮುಸ್ಲಿಮರ ಬಗ್ಗೆ ಬಹುಶಃ ಮೊತ್ತಮೊದಲ ಬಾರಿಗೆ 'ಸಹಾನುಭೂತಿ' ವ್ಯಕ್ತಪಡಿಸುತ್ತಿದೆ. 'ಕಾಂಗ್ರೆಸ್ ಪಕ್ಷ ಅಲ್ಪಸಂಖ್ಯಾತರಿಗೆ ಟಿಕೆಟ್ ನೀಡದೇ ಅನ್ಯಾಯ ಎಸಗಿದೆ' ಎಂದು ಆ ಸಮುದಾಯಕ್ಕೆ ಸೇರಿದವರಿಗಿಂತಲೂ ಹೆಚ್ಚು ಧ್ವನಿ ಎತ್ತಿದೆ.

ಮುಸ್ಲಿಂ ಸಮುದಾಯಕ್ಕೆ ಸೇರಿರುವ ಕೆಲವರು 'ಬೆನ್ನಿಗೆ ಚೂರಿ ಇರಿದ ಕಾಂಗ್ರೆಸ್‌ಗಿಂತ ಬಿಜೆಪಿಯೇ ಒಳಿತು'


ಶ್ರೀನಿವಾಸ ದಾಸಕರಿಯಪ್ಪ


ಸಮರ್ಥ್ ಶಾಮನೂರು


ಅಫ್ಸರ್ ಕೊಡ್ಲಿಪೇಟೆ

ಎಂಬ ಅಭಿಪ್ರಾಯವನ್ನು ಬಹಿರಂಗವಾಗಿ ವ್ಯಕ್ತಪಡಿಸುತ್ತಿದ್ದಾರೆ.

ಕ್ಷೇತ್ರದಲ್ಲಿ ಶಾಮನೂರು ಕುಟುಂಬ ಇದೇ ಮೊದಲ ಬಾರಿಗೆ ಎಂಬಂತೆ ಸರಾಗವಾಗಿ ಗೆಲುವು ಸಾಧಿಸಲಿಕ್ಕಿಲ್ಲ ಎಂಬ ಅಭಿಪ್ರಾಯ ಮತದಾರರಿಂದಲೇ ಕೇಳಿಬರುತ್ತಿದೆ.

ಶಾಮನೂರು ಶಿವಶಂಕರಪ್ಪ ಅವರ ನಿಧನದಿಂದ ತೆರವಾಗಿರುವ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯ ಮತದಾನ (ಏಪ್ರಿಲ್ 9)ಕ್ಕೆ ವೇದಿಕೆ ಸಿದ್ಧಗೊಂಡಿದ್ದು, ಇಂಥವೇ ಕೆಲವು ವಿಶೇಷತೆಗಳಿಂದಾಗಿ ಮಧ್ಯ ಕರ್ನಾಟಕದಲ್ಲಿ ನಡೆದಿರುವ ಉಪ ಚುನಾವಣೆ ರಾಜ್ಯದ ಗಮನ ಸೆಳೆದಿದೆ.

25 ಅಭ್ಯರ್ಥಿಗಳು ಕಣದಲ್ಲಿದ್ದರೂ, ಮೇಲ್ನೋಟಕ್ಕೆ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ನೇರ ಸೆಣಸಾಟವಿದೆ. ಕಾಂಗ್ರೆಸ್‌ನಿಂದ ಬಂಡಾಯವೆದ್ದಿದ್ದ ಒಬ್ಬರು ಮಾತ್ರ ತಟಸ್ಥವಾಗಿ ಇರುವುದಾಗಿ ಘೋಷಿಸಿದ್ದಾರೆ. ಅವರ ಹೊರತಾಗಿ ಮುಸ್ಲಿಂ ಸಮುದಾಯದ 13 ಜನ ಅಭ್ಯರ್ಥಿಗಳು ಕಣದಲ್ಲಿರುವುದು ಕಾಂಗ್ರೆಸ್‌ನ ಭದ್ರಕೋಟೆಗೆ ಅಭದ್ರತೆಯ ಛಾಯೆ ಮೂಡಿಸಿದೆ.

'ಏ ಮೌಕಾ ಹಮ್ಹೇ (ಅಲ್ಪಸಂಖ್ಯಾತರಿಗೆ) ಅಭಿ ನಹೀ ತೋ ಕಭೀ ನಹೀ (ಈ ಅವಕಾಶ ನಮಗೆ ಈಗಿಲ್ಲದಿದ್ದರೆ ಎಂದಿಗೂ ಇಲ್ಲ)' ಎಂಬ ಘೋಷಣೆಯೊಂದಿಗೆ ಕ್ಷೇತ್ರದಾದ್ಯಂತ ಸಂಚರಿಸುತ್ತಿರುವ ಎಸ್‌ಡಿಪಿಐ ಅಭ್ಯರ್ಥಿ ಅಫ್ಸರ್ ಕೊಡ್ಲಿಪೇಟೆ ಪ್ರಚಾರ, ಫಲಿತಾಂಶದ ಮೇಲೆ ಪರಿಣಾಮ ಬೀರುವ ಸಾಧ್ಯತೆಯನ್ನು ದಟ್ಟವಾಗಿಸಿದೆ.

ಶಾಮನೂರು ಶಿವಶಂಕರಪ್ಪ ಅವರ ಮೊಮ್ಮಗ, ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಂಸದೆ ಡಾ.ಪ್ರಭಾ ಅವರ ಹಿರಿಯ ಪುತ್ರ ಸಮರ್ಥ್ ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸುವ ಹುಮ್ಮಸ್ಸಿನಲ್ಲಿದ್ದಾರೆ. ಕ್ಷೇತ್ರದಲ್ಲಿ ಇದೇ ಮೊದಲ ಬಾರಿಗೆ ಗೆದ್ದು 'ಭದ್ರಕೋಟೆ'ಯನ್ನು ಛಿದ್ರಗೊಳಿಸಬಹುದು ಎಂಬ ವಿಶ್ವಾಸ ಕಮಲ ಪಾಳಯದಲ್ಲಿ ಒಡಮೂಡಿದೆ. 'ಸಿದ್ದರಾಮಯ್ಯ ಈಗ ಅಹಿಂದ ವಿರೋಧಿ' ಎನ್ನುತ್ತಿರುವ ಬಿಜೆಪಿಯು, ಸಾಮಾನ್ಯ ವರ್ಗಕ್ಕೆ ಸೇರಿದ ಕ್ಷೇತ್ರದಲ್ಲೂ, 55 ಸಾವಿರದಷ್ಟು ಮತಗಳನ್ನು ಹೊಂದಿರುವ ವೀರಶೈವ ಲಿಂಗಾಯತ ಸಮುದಾಯಕ್ಕೆ ಮಣೆಹಾಕದೇ 20,000 ಮತ ಹೊಂದಿರುವ ಪರಿಶಿಷ್ಟ ಪಂಗಡದ ಶ್ರೀನಿವಾಸ ದಾಸಕರಿಯಪ್ಪ ಅವರಿಗೆ ಟಿಕೆಟ್ ನೀಡಿರುವುದನ್ನು 'ಹೆಗ್ಗಳಿಕೆ' ಎಂದೇ ಹೇಳಿಕೊಳ್ಳುತ್ತಿದೆ.

ನಗರ ವ್ಯಾಪ್ತಿಯಲ್ಲಿದ್ದರೂ ಹಾಗೆ ಕಾಣದ ಹಳೆ ದಾವಣಗೆರೆ ಹಾಗೂ 25ಕ್ಕೂ ಅಧಿಕ ಗ್ರಾಮಗಳನ್ನು ಒಳಗೊಂಡಿರುವ ಈ ಕ್ಷೇತ್ರದಲ್ಲಿ ಎದ್ದು ಕಾಣುವಂಥ ಅಭಿವೃದ್ಧಿ ಆಗಿಲ್ಲ ಎಂಬ ಆರೋಪ ಆಡಳಿತಾರೂಢ ಕಾಂಗ್ರೆಸ್‌ಗೆ ಬಿಸಿತುಪ್ಪವಾಗಿ ಪರಿಣಮಿಸಬಹುದು ಎಂಬ ಭೀತಿ ಒಂದೆಡೆ ಇದ್ದರೆ, ಪಂಚ ಗ್ಯಾರಂಟಿಗಳ ಫಲಾನುಭವಿ ಬಡಜನರು 'ಕೈ'ಬಿಡಲಾರರು ಎಂಬ ಆತ್ಮವಿಶ್ವಾಸವೂ ಮತ್ತೊಂದೆಡೆ ಇದೆ.

ಆಡಳಿತಾರೂಢ ಕಾಂಗ್ರೆಸ್ ಮತ್ತು ಬಿಜೆಪಿಯ ಘಟಾನುಘಟಿಗಳ ದಂಡೇ ಇಲ್ಲಿ ಬೀಡು ಬಿಟ್ಟಿದೆ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಸಚಿವರು, ಶಾಸಕರು ಕ್ಷೇತ್ರವನ್ನು ಎರಡಕ್ಕಿಂತ ಹೆಚ್ಚು ಬಾರಿ ಸುತ್ತುಹಾಕಿ, 'ನಿಮ್ಮ ಮನೆಯ ಮೊಮ್ಮಗನನ್ನು ಗೆಲ್ಲಿಸಿ' ಎಂದು ಕೋರುತ್ತಿದ್ದಾರೆ.

ಅತ್ತ ಬಿಜೆಪಿಯಲ್ಲಿನ ಪ್ರಮುಖರೂ ಮನೆಮನೆಗೆ ತೆರಳಿ 'ನಿಮ್ಮ ಮನೆ ಮಗನಿಗೆ ಮತ ನೀಡಿ' ಎಂದು ಕೋರಿದ್ದಾರೆ. ಸ್ಥಳೀಯ ಮುಖಂಡರೂ ಬಣ ರಾಜಕೀಯ ಬದಿಗಿರಿಸಿದ್ದು, ಆಡಳಿತ ವಿರೋಧಿ ಅಲೆಯು ಕಮಲವನ್ನು ಅರಳಿಸಬಹುದು ಎಂಬ ಭರವಸೆಯಲ್ಲಿದ್ದಾರೆ.

ಮತದಾರರ ವಿವರ

2,31,072 ಒಟ್ಟು ಮತದಾರರ ಸಂಖ್ಯೆ

1,13,339 ಪುರುಷ ಮತದಾರರು

1,17,690 ಮಹಿಳಾ ಮತದಾರರು

43 ಲಿಂಗತ್ವ ಅಲ್ಪಸಂಖ್ಯಾತರು



2023ರ ಚುನಾವಣೆಫಲಿತಾಂಶ

ಗೆದ್ದ ಅಭ್ಯರ್ಥಿ	ಶಾಮನೂರು ಶಿವಶಂಕರಪ್ಪ (ಕಾಂಗ್ರೆಸ್), ಪಡೆದ ಮತ– **84,298**
ಪರಾಜಿತ ಅಭ್ಯರ್ಥಿ	ಬಿ.ಜಿ. ಅಜಯ್‌ಕುಮಾರ್ (ಬಿಜೆಪಿ), ಪಡೆದ ಮತ– **56,410**
ಗೆಲುವಿನ ಅಂತರ	**27,888**

ಕಣದಲ್ಲಿರುವ ಪ್ರಮುಖ ಅಭ್ಯರ್ಥಿಗಳು

ಕಾಂಗ್ರೆಸ್‌ನಿಂದ ಸಮರ್ಥ್ ಶಾಮನೂರು, ಬಿಜೆಪಿಯಿಂದ ಶ್ರೀನಿವಾಸ ದಾಸಕರಿಯಪ್ಪ, ಎಎಪಿಯಿಂದ ಕೆ.ಎಸ್.ಶಿವಕುಮಾರಪ್ಪ, ಎಸ್‌ಡಿಪಿಐನಿಂದ ಅಫ್ಸರ್ ಕೊಡ್ಲಿಪೇಟೆ, ಪಕ್ಷೇತರರಾದ ಖಾದರ್ ಆದಿಲ್ ಬಾಷಾ, ಎಚ್.ಸುಬಾನ್ ಸಾಬ್ ಸೇರಿ 25 ಅಭ್ಯರ್ಥಿಗಳು ಕಣದಲ್ಲಿದ್ದಾರೆ

ಕ್ಷೇತ್ರ ಸಮೀಕ್ಷೆ

ಜಮೀರ್ ಅಹಮದ್ ತಟಸ್ಥ?

ಮುಸ್ಲಿಮರಿಗೆ ಟಿಕೆಟ್ ಕೇಳಿದ್ದ ಸಚಿವ ಜಮೀರ್ ಅಹಮದ್ ಖಾನ್, ಸಮುದಾಯದಲ್ಲಿನ ಟಿಕೆಟ್ ಆಕಾಂಕ್ಷಿಗಳನ್ನು ಎತ್ತಿಕಟ್ಟಿದರು ಎಂಬ ಆರೋಪ ಎದುರಿಸಿದ್ದರು.

ಅವರು ಕ್ಷೇತ್ರಕ್ಕೆ ಬಂದು ಮುನಿಸಿಕೊಂಡವರ ಮನವೊಲಿಸುವ ಕೆಲಸ ಮಾಡಿರಲಿಲ್ಲ. ಏಪ್ರಿಲ್ 5ರಂದು ದಾವಣಗೆರೆಗೆ ಬಂದರೂ ಬಹಿರಂಗ ಸಭೆ ಅಥವಾ ಮುಸ್ಲಿಮರೇ ಹೆಚ್ಚಿರುವ ಕಡೆ ಪ್ರಚಾರ ನಡೆಸಿಲ್ಲ. ಇದು ಅವರೂ ತಟಸ್ಥರಾಗಿರುವ ಸೂಚನೆ ನೀಡಿದೆ.

ಜಾತಿ: ಆಟಕ್ಕಿಲ್ಲ.. ಲೆಕ್ಕಕ್ಕುಂಟು...

ಪ್ರಚಾರದ ವೇಳೆ ಜಾತಿ ಸಮೀಕರಣದ ಬಗ್ಗೆ ಕಾಂಗ್ರೆಸ್ ಮತ್ತು ಬಿಜೆಪಿ ಮುಖಂಡರು ಪ್ರಸ್ತಾಪಿಸದಿದ್ದರೂ ಜಾತಿ, ಉಪಪಂಗಡಗಳ ಲೆಕ್ಕಾಚಾರ ಪ್ರಚಾರದುದ್ದಕ್ಕೂ ಕಂಡುಬಂದಿದೆ.

'ಮುಸ್ಲಿಮರಿಗೆ ಟಿಕೆಟ್ ನೀಡದೆ ಶಾಮನೂರು ಕುಟುಂಬಕ್ಕೇ ಟಿಕೆಟ್ ನೀಡಿದ್ದೇವೆ. ಸಾಮಾನ್ಯ ಕ್ಷೇತ್ರದಲ್ಲಿ ಬಿಜೆಪಿ ಪರಿಶಿಷ್ಟ ಪಂಗಡದ ಶ್ರೀನಿವಾಸ ಅವರನ್ನು ಕಣಕ್ಕಿಳಿಸಿರುವುದು ವೀರಶೈವ ಲಿಂಗಾಯತ ಸಮುದಾಯದವರ ಅಸಮಾಧಾನಕ್ಕೆ ಕಾರಣವಾಗಿದೆ. ಆ ಸಮುದಾಯದ ಮತಗಳೂ ನಮಗೇ ಬೀಳಲಿವೆ' ಎಂಬ ನಂಬಿಕೆಯೂ ಕಾಂಗ್ರೆಸ್‌ನಲ್ಲಿದೆ.

ಆದರೆ, 'ಇದೊಂದು ಭ್ರಮೆ. ಅಹಿಂದ ಸಮುದಾಯದ ಮತಗಳೂ ಈ ಬಾರಿ ನಮ್ಮತ್ತ ವಾಲಲಿವೆ' ಎಂದು ಬಿಜೆಪಿ ಬಹಿರಂಗವಾಗಿಯೇ ಹೇಳಿಕೊಂಡಿದೆ.

ಸುದ್ದಿ 2 ನಿಮಿಷ

ಕನ್ನಡಿಗರ ಸಮಸ್ಯೆ ಬದುಕಿನ ಸವಾಲೂ ಹೌದು: ಅಶ್ವಿನಿ

ಕಾಸರಗೋಡು: 'ಜಿಲ್ಲೆಯ ಕನ್ನಡಿಗರ ಸಮಸ್ಯೆ ಸಾಮಾನ್ಯದ್ದಲ್ಲ. ಅದು ಕನ್ನಡ ಸಂಸ್ಕೃತಿಯ ಅಸ್ಮಿತೆಯನ್ನೇ ಬುಡಮೇಲು ಮಾಡುವ ವ್ಯವಸ್ಥಿತ ಸಂಚು. ಅದು ನನ್ನ ಬದುಕಿನ ಸವಾಲೂ ಹೌದು. ನನ್ನ ಮಕ್ಕಳೂ ಅದನ್ನು ಎದುರಿಸುತ್ತಿದ್ದಾರೆ' ಎಂದು ಕೇರಳ ವಿಧಾನಸಭೆ ಚುನಾವಣೆಯ ಕಾಸರಗೋಡು ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಎಂ.ಎಲ್.ಅಶ್ವಿನಿ ಸೋಮವಾರ ಹೇಳಿದರು.

'ಕನ್ನಡತಿಯಾಗಿ, ಶಿಕ್ಷಕಿಯಾಗಿ ಕನ್ನಡಿಗರು ಇಲ್ಲಿ ಅನುಭವಿಸುತ್ತಿರುವ ಅನಾಥಪ್ರಜ್ಞೆಯನ್ನು ನೇರವಾಗಿ ಅನುಭವಿಸಿದ್ದೇನೆ. ಇದರ ಪರಿಹಾರಕ್ಕೆ ನಡೆಯುತ್ತಿರುವ ಹೋರಾಟದಲ್ಲಿ ನಾನೂ ಭಾಗಿಯಾಗುವೆ. ಚುನಾವಣೆಯಲ್ಲಿ ಗೆದ್ದು ಶಾಸಕಿಯಾದರೆ, ಕನ್ನಡದಲ್ಲಿ ಪ್ರಮಾಣವಚನ ಸ್ವೀಕರಿಸುವುದು ಮಾತ್ರವಲ್ಲ, ವಿಧಾನಸಭೆಯಲ್ಲೂ ಪ್ರಸ್ತಾಪ ಮಾಡುವೆ' ಎಂದು ಬದಿಯಡ್ಕದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಹೇಳಿದರು.



ಎಡರಂಗ, ಐಕ್ಯರಂಗ ಒಕ್ಕೂಟಗಳ ಪ್ರತಿನಿಧಿಗಳೇ ಕಾಸರಗೋಡು ಮತ್ತು ಮಂಜೇಶ್ವರ ವಿಧಾನಸಭೆ ಕ್ಷೇತ್ರಗಳಲ್ಲಿ ಇದುವರೆಗೆ ಗೆಲುವು ಸಾಧಿಸಿದ್ದಾರೆ. ಕ್ಷೇತ್ರದ ಅಭಿವೃದ್ಧಿಗಾಗಿ ಅವರು ಏನು ಮಾಡಿದ್ದಾರೆ ಎಂಬ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಲಿ ಎಂದರು.

ದಾವಣಗೆರೆ: 'ಕೈ'ಗೆ ಮುಸ್ಲಿಮರು ಮತ ಹಾಕಲ್ಲ–ಆರ್. ಅಶೋಕ

ಬೆಂಗಳೂರು: 'ದಾವಣಗೆರೆಯಲ್ಲಿ ಮುಸ್ಲಿಮರು ಕಾಂಗ್ರೆಸ್‌ಗೆ ಓಟು ಹಾಕುವುದಿಲ್ಲ ಎಂದು ಮುಸ್ಲಿಮರೇ ಹೇಳುತ್ತಿದ್ದು, ಇದರಿಂದಾಗಿ ಆ ಕ್ಷೇತ್ರದಲ್ಲಿ ಕಾಂಗ್ರೆಸ್ ಸೋಲು ಖಚಿತ. ಎರಡೂ ಕ್ಷೇತ್ರಗಳಲ್ಲೂ ಬಿಜೆಪಿಯೇ ಗೆಲುವು ಸಾಧಿಸುತ್ತದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.

ಪಕ್ಷದ ಸಂಸ್ಥಾಪನಾ ದಿನದ ಕಾರ್ಯಕ್ರಮದಲ್ಲಿ ಭಾಗವಹಿಸಿ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

ಎರಡೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಸಮಸ್ಯೆ ಇದೆ. ಬಾಗಲಕೋಟೆಯಲ್ಲಿ ಸೋಲುವ ಸುಳಿವು ಸಿಕ್ಕ ತಕ್ಷಣವೇ ಕೇರಳಕ್ಕೆ ಹೋಗಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಬಾಗಲಕೋಟೆಗೆ ದೌಡಾಯಿಸಿದ್ದಾರೆ ಎಂದರು.

'ಅವರ ಪಕ್ಷದವರೇ ಯಡಿಯೂರಪ್ಪ ಭ್ರಷ್ಟ ಅಂದಿದ್ರು'

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: 'ಬಿ.ಎಸ್. ಯಡಿಯೂರಪ್ಪ ಭ್ರಷ್ಟರು ಅಂತ ಅವರದ್ದೇ ಪಕ್ಷದ ವಿಶ್ವನಾಥ, ಬಸನಗೌಡ ಪಾಟೀಲ ಯತ್ನಾಳ ಆರೋಪಿಸಿದ್ದರು. ನಿಜವೋ, ಸುಳ್ಳೋ ಹೇಳಲಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಗ್ರಹಿಸಿದರು.


ಸಿದ್ದರಾಮಯ್ಯ

'ನಂಬಿಕೆ ದ್ರೋಹಕ್ಕೆ ಇನ್ನೊಂದು ಹೆಸರು ಸಿದ್ದರಾಮಯ್ಯ ಎಂದು ಯಡಿಯೂರಪ್ಪ ಹೇಳಿದ್ದಾರಲ್ಲ' ಎಂಬ ಸುದ್ದಿಗಾರರ ಪ್ರಶ್ನೆಗೆ ಅವರು, 'ವಯಸ್ಸಾದ ಮೇಲೆ ಅವರಿಗೆ ಅರಳುಮರಳು. ಯಾರಿಗೆ ದ್ರೋಹ ಮಾಡಿದ್ದೇನೆ ಹೇಳಲಿ ' ಎಂದರು.

'ನಾನು ಬಡವರ ಪರ ಇರುವುದಕ್ಕೆ ಹೀಗೆ ಆರೋಪಿಸುತ್ತಾರೆ. ಬಿಜೆಪಿಗರು ದಲಿತರು, ಮಹಿಳೆಯರು, ಅಲ್ಪಸಂಖ್ಯಾತರು, ಅಹಿಂದ ವರ್ಗದ ವಿರೋಧಿಗಳು' ಎಂದು ಅವರು ಟೀಕಿಸಿದರು.

ಸ್ವಜಾತಿಯವರೇ ಅಭ್ಯರ್ಥಿ ಆದ್ದರಿಂದ ಮುಖ್ಯಮಂತ್ರಿ ಪದೇ ಪದೇ ಪ್ರಚಾರಕ್ಕೆ ಬರುತ್ತಿದ್ದಾರೆ ಎಂಬ ಆರೋಪಕ್ಕೆ ಅವರು, 'ಯಡಿಯೂರಪ್ಪ ಯಾವ ಜಾತಿ? ಯಾರ ಪರ ಮಾಡುತ್ತಿದ್ದಾರೆ. ಅವರೇನೂ ಉಮೇಶ ಮೇಟಿ ಪರ ಮಾಡುತ್ತಿದ್ದಾರೆಯೇ? ಚರಂತಿಮಠ ಲಿಂಗಾಯತರು. ಹಾಗಾದರೆ, ಅವರು ಮಾಡುತ್ತಿರುವುದು ಏನು?' ಎಂದರು.

'2029ರಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲು'

ಕೆಲ ರಾಜಕೀಯ ಪಕ್ಷಗಳಿಂದ ಇಲ್ಲಸಲ್ಲದ ವದಂತಿ • ಕಾಂಗ್ರೆಸ್ ವಿರುದ್ಧ ಮುಂದುವರಿದ ವಾಗ್ದಾಳಿ

ಭವಾನಿಪುರ – ಸೊಭೋಗ / ಹೋಜಾಯ್ (ಪಿಟಿಐ): ದೇಶದಲ್ಲಿ 2029ರ ಸಾರ್ವತ್ರಿಕ ಚುನಾವಣೆಯಿಂದ ಮಹಿಳೆಯರಿಗೆ ಸಂಸತ್ತಿನಲ್ಲಿ ಶೇ 33ರಷ್ಟು ಮೀಸಲಾತಿಯನ್ನು ಜಾರಿಗೆ ತರಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಅಸ್ಸಾಂನ ಬಾರ್ಪೇಟಾದಲ್ಲಿ ಸೋಮವಾರ ನಡೆದ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, ಈ ವಿಷಯ ಕುರಿತು ಚರ್ಚಿಸಲು ಏಪ್ರಿಲ್ 16ರಂದು ಸಂಸತ್ತಿನ ವಿಶೇಷ ಅಧಿವೇಶನ ಕರೆಯಲಾಗಿದೆ ಎಂದು ತಿಳಿಸಿದರು.

ಆದರೆ ಕೆಲ ರಾಜಕೀಯ ಪಕ್ಷಗಳು ಮತ್ತು ನಾಯಕರು ಇದರ ಬಗ್ಗೆ ಇಲ್ಲಸಲ್ಲದ ವದಂತಿಗಳನ್ನು ಹರಡುತ್ತಿದ್ದಾರೆ. ಮಹಿಳಾ ಮೀಸಲಾತಿ ಮಸೂದೆಯ ಅಂಗೀಕಾರವನ್ನು ಖಚಿತಪಡಿಸಿಕೊಳ್ಳಲು ಅಸ್ಸಾಂನ ಮಹಿಳೆಯರು ಎಲ್ಲ ಪಕ್ಷಗಳನ್ನು ಒತ್ತಾಯಿಸಬೇಕು ಎಂದು ಮೋದಿ ಆಗ್ರಹಿಸಿದರು.

ಪಶ್ಚಿಮ ಏಷ್ಯಾದಲ್ಲಿನ ಯುದ್ಧದಿಂದ ದೇಶದ ನಾಗರಿಕರಿಗೆ ವಿಶೇಷವಾಗಿ ಬಡವರು, ಮಧ್ಯಮ ವರ್ಗ ಮತ್ತು ರೈತರ ಮೇಲಾಗುವ ದುಷ್ಪರಿಣಾಮಗಳನ್ನು ತಗ್ಗಿಸಲು ಸರ್ಕಾರ ಶ್ರಮಿಸುತ್ತಿದೆ ಎಂದು ಅವರು ತಿಳಿಸಿದರು.

ಕಾಂಗ್ರೆಸ್ ವಿರುದ್ಧ ಟೀಕೆ: 'ನಮ್ಮ ಸರ್ಕಾರವು 2025ರಲ್ಲಿ ಪಾಕಿಸ್ತಾನದ ಭಯೋತ್ಪಾದಕ ಶಿಬಿರಗಳ ಮೇಲೆ 'ಆಪರೇಷನ್ ಸಿಂಧೂರ' ನಡೆಸುತ್ತಿದ್ದರೆ, ಕಾಂಗ್ರೆಸ್‌ನವರು ಪಕ್ಕದ ದೇಶದ ರಾಗಕ್ಕೆ ತಕ್ಕಂತೆ ಹಾಡುತ್ತಿದ್ದರು. 2016ರ ಸರ್ಜಿಕಲ್ ಸ್ಟ್ರೈಕ್ ನಡೆಸಿದಾಗಲೂ ಕಾಂಗ್ರೆಸ್ ಹಾಗೆಯೇ ವರ್ತಿಸಿತ್ತು' ಎಂದು ಪ್ರಧಾನಿ ಮೋದಿ ಅವರು ಕಾಂಗ್ರೆಸ್ ವಿರುದ್ಧ ಕಟುವಾಗಿ ಟೀಕಿಸಿದರು.

'ಕಾಂಗ್ರೆಸ್‌ಗೆ ಅಭಿವೃದ್ಧಿಯ ಬಗ್ಗೆ ದೂರದೃಷ್ಟಿ ಇಲ್ಲ' ಎಂದು ಆರೋಪಿಸಿದ ಅವರು, ಬಿಜೆಪಿಯು ದೀರ್ಘಾವಧಿ ಬೆಳವಣಿಗೆ ಮತ್ತು ಸರ್ವತೋಮುಖ ಅಭಿವೃದ್ಧಿಯನ್ನು ಕೇಂದ್ರೀಕರಿಸಿದೆ ಎಂದರು.

'ದಶಕಗಳಿಂದ ಮಾಜಿ ಸೈನಿಕರ ಬೇಡಿಕೆಯಾದ 'ಒಂದು ಶ್ರೇಣಿ, ಒಂದು ಪಿಂಚಣಿ' ಯೋಜನೆಯ ಜಾರಿಯನ್ನು ಕಾಂಗ್ರೆಸ್ ನಿರ್ಲಕ್ಷಿಸಿತ್ತು. ಆದರೆ ನಾವು ಅವರ ಬೇಡಿಕೆಗೆ ನ್ಯಾಯ ಒದಗಿಸಿದ್ದೇವೆ. ಇಲ್ಲಿಯವರೆಗೆ ಸೇನಾ ಸಿಬ್ಬಂದಿಯ ಬ್ಯಾಂಕ್ ಖಾತೆಗಳಿಗೆ ₹1.24 ಲಕ್ಷ ಕೋಟಿ ವಿತರಿಸಿದ್ದೇವೆ' ಎಂದು ಪ್ರಧಾನಿ ಮೋದಿ ವಿವರಿಸಿದರು

ಗಾಂಧಿ ಕುಟುಂಬವು ವಂಶಪಾರಂಪರ್ಯ ರಾಜಕೀಯ ಮತ್ತು ಭ್ರಷ್ಟಾಚಾರದಲ್ಲಿ ತೊಡಗಿದೆ ಎಂದು ಅವರು ದೂರಿದರು.

ಕಾಂಗ್ರೆಸ್‌ನದ್ದು 'ಸುಳ್ಳಿನ ಅಂಗಡಿ': ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು 'ಮೊಹಬ್ಬತ್ ಕಿ ದುಕಾನ್' ಹೇಳಿಕೆಗೆ ಪ್ರತಿಕ್ರಿಯಿಸಿದ ಮೋದಿ, ಕಾಂಗ್ರೆಸ್‌ನದ್ದು 'ಮಿಥ್ಯಾ ಕಿ ದುಕಾನ್' (ಸುಳ್ಳಿನ ಅಂಗಡಿ) ಆಗಿದೆ ಎಂದು ಜರೆದರು.

ಹಿಮಾಚಲ ಪ್ರದೇಶ, ಕರ್ನಾಟಕ ಮತ್ತು ತೆಲಂಗಾಣದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದೆ. ಅಲ್ಲಿ ಅವರು ಚುನಾವಣೆಗೂ ಮುನ್ನ ದೊಡ್ಡ ಭರವಸೆಗಳನ್ನು ನೀಡಿದ್ದರು. ಆದರೆ ಅವುಗಳನ್ನು ಇಲ್ಲಿಯವರೆಗೂ ಈಡೇರಿಸಿಲ್ಲ. ಹೀಗಾಗಿ ಕಾಂಗ್ರೆಸ್‌ನ ಸುಳ್ಳು ಭರವಸೆಗಳಿಗೆ ಬಲಿಯಾಗಬೇಡಿ ಎಂದು ಪ್ರಧಾನಿ ಹೇಳಿದರು.


ಅಸ್ಸಾಂನ ಬಾರ್ಪೇಟಾದಲ್ಲಿ ಸೋಮವಾರ ನಡೆದ ಬಿಜೆಪಿ ಚುನಾವಣಾ ರ‍್ಯಾಲಿಯಲ್ಲಿ ಪಾಲ್ಗೊಂಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರಿಗೆ 'ಜಾಪಿ' (ಅಸ್ಸಾಂನ ಸಾಂಪ್ರದಾಯಿಕ ಟೋಪಿ) ನೀಡಿ ಗೌರವಿಸಲಾಯಿತು –ಪಿಟಿಐ

ಯುಸಿಸಿ ಬಗ್ಗೆ ಗಂಭೀರ ಚರ್ಚೆ–ಮೋದಿ

ನವದೆಹಲಿ (ಪಿಟಿಐ): ಬಿಜೆಪಿಯ ಕಾರ್ಯಸೂಚಿಗಳ ಪೈಕಿ ಅಪೂರ್ಣವಾಗಿರುವ ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಮತ್ತು 'ಒಂದು ರಾಷ್ಟ್ರ, ಒಂದು ಚುನಾವಣೆ' ಬಗ್ಗೆ ಗಂಭೀರ ಮತ್ತು ಸಕಾರಾತ್ಮಕ ಚರ್ಚೆಗಳು ನಡೆಯುತ್ತಿವೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದರು.

ಬಿಜೆಪಿ ಸಂಸ್ಥಾಪನಾ ದಿನದಂದು ವರ್ಚುವಲ್ ಆಗಿ ನಡೆದ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, 'ಬಿಜೆಪಿಯು ಪ್ರತಿ ಸವಾಲನ್ನೂ ಎದುರಿಸಲು ಪ್ರಾಮಾಣಿಕವಾಗಿ ಶ್ರಮಿಸುತ್ತಿದೆ ಮತ್ತು ಅದನ್ನು ಮುಂದುವರಿಸುತ್ತದೆ. ಅಲ್ಲದೆ ಸತತ ಪ್ರಯತ್ನದ ಮೂಲಕ ಅವುಗಳನ್ನು ಸಾಧಿಸುತ್ತದೆ ಎಂಬುದು ದೇಶದ ಜನರಿಗೆ ತಿಳಿದಿದೆ' ಎಂದರು.

ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ ಅವರು, ಬಿಜೆಪಿ ಕಾರ್ಯಕರ್ತರು ತುರ್ತು ಪರಿಸ್ಥಿತಿ ಮತ್ತು ಇತರ ಸಂದರ್ಭಗಳಲ್ಲಿ ಕಾಂಗ್ರೆಸ್‌ನಿಂದ ದಬ್ಬಾಳಿಗಳನ್ನು ಎದುರಿಸಿ ಕಷ್ಟಗಳನ್ನು ಸಹಿಸಿಕೊಂಡಿದ್ದಾರೆ ಎಂದು ಅವರು ಸ್ಮರಿಸಿದರು.

ಪಶ್ಚಿಮ ಬಂಗಾಳ ಮತ್ತು ಕೇರಳದಲ್ಲಿ ಹಿಂಸೆಯು ರಾಜಕೀಯ ಸಂಸ್ಕೃತಿಯಾಗಿ ಪರಿವರ್ತನೆ ಆಗಿಬಿಟ್ಟಿದೆ. ಅಲ್ಲಿ ಅನೇಕ ಬಿಜೆಪಿ ಕಾರ್ಯಕರ್ತರು ಪ್ರಾಣತ್ಯಾಗ ಮಾಡಿದ್ದಾರೆ ಎಂದು ಮೋದಿ ತಿಳಿಸಿದರು.

'ನಮ್ಮ ಸರ್ಕಾರವು ಬ್ರಿಟಿಷ್ ಯುಗದ ನೂರಾರು ಕರಾಳ ಕಾನೂನುಗಳನ್ನು ಅಂತ್ಯಗೊಳಿಸಿದೆ. ಪ್ರಜಾಪ್ರಭುತ್ವಕ್ಕಾಗಿ ಹೊಸ ಸಂಸತ್ತಿನ ಕಟ್ಟಡ ನಿರ್ಮಿಸಿದೆ, ಸಾಮಾನ್ಯ ವರ್ಗದ ಬಡವರಿಗೆ ಶೇ 10ರಷ್ಟು ಮೀಸಲಾತಿ ಒದಗಿಸಿದೆ, ತ್ರಿವಳಿ ತಲಾಖ್ ನಿಷೇಧ ಕಾನೂನು, ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣ ಸೇರಿದಂತೆ ಹಲವು ಮಹತ್ವದ ಕಾರ್ಯಗಳನ್ನು ಮಾಡಲಾಗಿದೆ ಎಂದು ಹೇಳಿದರು.

> ಅಸ್ಸಾಂನ ಚಹಾ ಬುಡಕಟ್ಟು ಜನಾಂಗದವರನ್ನು ಕಾಂಗ್ರೆಸ್ ಪಕ್ಷವು ಪ್ರತಿ ಐದು ವರ್ಷಗಳಿಗೊಮ್ಮೆ ಕೊಯ್ಲು ಮಾಡುವ ಮತಬ್ಯಾಂಕ್ ಆಗಿ ಪರಿಗಣಿಸಿದೆ, ಆದರೆ ಅವರ ಏಳಿಗೆಗೆ ಏನನ್ನೂ ಮಾಡಿಲ್ಲ
> **ಜೆ.ಪಿ.ನಡ್ಡಾ,** ಕೇಂದ್ರ ಸಚಿವ

ನ್ಯಾಯಾಂಗ ಅಧಿಕಾರಿಗಳ ಮೇಲೆ ದಾಳಿ: ಪ್ರಕರಣ ಎನ್‌ಐಎಗೆ

ನವದೆಹಲಿ (ಪಿಟಿಐ): ಎಸ್‌ಐಆರ್ ಬಳಿಕ ಚುನಾವಣಾ ಆಯೋಗವು ಪ್ರಕಟಿಸಿದ ಮತದಾರರ ಪಟ್ಟಿಯಲ್ಲಿ ಇಲ್ಲದವರು ಸಲ್ಲಿಸಿದ್ದ ಆಕ್ಷೇಪಣೆಗಳ ವಿಚಾರಣೆ ನಡೆಸುತ್ತಿದ್ದ 7 ನ್ಯಾಯಾಂಗ ಅಧಿಕಾರಿಗಳನ್ನು ಘೇರಾವ್ ಮಾಡಿ, ಅವರ ಮೇಲೆ ದಾಳಿ ನಡೆಸಿದ ಪ್ರಕರಣದ ತನಿಖೆಯನ್ನು ಸುಪ್ರೀಂ ಕೋರ್ಟ್ ತನ್ನ ಪೂರ್ಣ ಅಧಿಕಾರ ಬಳಸಿ ಪಶ್ಚಿಮ ಬಂಗಾಳ ಪೊಲೀಸರಿಂದ ರಾಷ್ಟ್ರೀಯ ತನಿಖಾ ಸಂಸ್ಥೆಗೆ (ಎನ್‌ಐಎ) ಹಸ್ತಾಂತರಿಸಿದೆ.

ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿಗಳಾದ ಜಾಯ್‌ಮಲ್ಯಾ ಬಾಗ್ಚಿ ಮತ್ತು ವಿಪುಲ್ ಎಂ. ಪಂಚೋಲಿ ಅವರ ಪೀಠವು ಘಟನೆ ಕುರಿತು ಸೋಮವಾರ ವಿಚಾರಣೆ ನಡೆಸಿತು. ಪಶ್ಚಿಮ ಬಂಗಾಳದ ಮಾಲ್ಡಾ ಜಿಲ್ಲೆಯಲ್ಲಿ ಏ. 1ರಂದು ಘಟನೆ ನಡೆದಿದೆ. ನ್ಯಾಯಾಂಗ ಅಧಿಕಾರಿಗಳನ್ನು ಸುಪ್ರೀಂ ಕೋರ್ಟ್ ನೇಮಿಸಿತ್ತು.

'ಘಟನೆ ನಡೆದ ದಿನದಂದು ಕೋಲ್ಕತ್ತ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಅವರು ರಾಜ್ಯದ ಮುಖ್ಯ ಕಾರ್ಯದರ್ಶಿ ದುಷ್ಯಂತ್ ನಾರಿಯಾಲಾ ಅವರಿಗೆ ಕರೆ ಮಾಡಿದ್ದರು. ಆದರೆ, ದುಷ್ಯಂತ್ ಅವರು ಕರೆ ಸ್ವೀಕರಿಸಲಿಲ್ಲ. ಇದು ಜಿಲ್ಲಾ ಆಡಳಿತದ ವೈಫಲ್ಯ. ಈ ಬಗ್ಗೆ ಮುಖ್ಯ ನ್ಯಾಯಮೂರ್ತಿ ಅವರಲ್ಲಿ ದುಷ್ಯಂತ್ ಅವರು ಕ್ಷಮೆ ಕೇಳಬೇಕು' ಎಂದು ಪೀಠ ಸೂಚಿಸಿತು.

'ಘಟನೆಯಿಂದಾಗಿ ಪಶ್ಚಿಮ ಬಂಗಾಳದ ಆಡಳಿತಶಾಹಿಯ ವಿಶ್ವಾಸಾರ್ಹತೆಯೇ ಕುಗ್ಗಿ ಹೋಗಿದೆ. ಸರ್ಕಾರಿ ಕಚೇರಿಗೂ ರಾಜಕಾರಣವನ್ನು ತಂದು ಕೂರಿಸಲಾಗಿದೆ' ಎಂದು ಪೀಠ ಆಕ್ರೋಶ ವ್ಯಕ್ತಪಡಿಸಿತು. 'ಘಟನೆ ಸಂಬಂಧ ಪೊಲೀಸರು ಬಂಧಿಸಿರುವ 26 ಮಂದಿ ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ. ಹೀಗಿದ್ದರೂ ಎನ್‌ಐಎ ಅಧಿಕಾರಿಗಳು ಇವರನ್ನು ತನಿಖೆಗೆ ಒಳಪಡಿಸಬಹುದು' ಎಂದು ಪೀಠ ಹೇಳಿದೆ.

ನ್ಯಾಯಮಂಡಳಿ ಸ್ಥಾಪನೆಗೆ ಸೂಚನೆ

ನವದೆಹಲಿ: ಪಶ್ಚಿಮ ಬಂಗಾಳದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ವೇಳೆ ಮತದಾರರ ಹಕ್ಕುಗಳನ್ನು ನಿರ್ಧರಿಸಲು ಮೇಲ್ಮನವಿ ನ್ಯಾಯಮಂಡಳಿಗಳನ್ನು ಸ್ಥಾಪಿಸಲು ಸುಪ್ರೀಂ ಕೋರ್ಟ್ ಸೋಮವಾರ ನಿರ್ದೇಶಿಸಿತು.

ಈ ಉದ್ದೇಶಗಳಿಗಾಗಿ ಹಿರಿಯ ನ್ಯಾಯಮೂರ್ತಿಗಳ ಸಮಿತಿಯನ್ನು ರಚಿಸುವಂತೆ ಸಿಜೆಐ ಸೂರ್ಯಕಾಂತ್ ನೇತೃತ್ವದ ಪೀಠ ಕಲ್ಕತ್ತ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಅವರಿಗೆ ಸೂಚಿಸಿತು. ಇದಕ್ಕೆ ಅಗತ್ಯ ಸೌಕರ್ಯಗಳನ್ನು ಕಲ್ಪಿಸುವಂತೆ ಪೀಠ ಚುನಾವಣಾ ಆಯೋಗಕ್ಕೆ ನಿರ್ದೇಶಿಸಿತು.

ಮೋದಿ, ಪಿಣರಾಯಿ ಅಹಂಕಾರಿಗಳು: ರಾಹುಲ್

ತ್ರಿಶ್ಶೂರ್ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಮತ್ತು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು 'ಅಹಂಕಾರಿ'ಗಳು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸೋಮವಾರ ಟೀಕಿಸಿದರು.

ಜನರೊಂದಿಗೆ ಬೆರೆತು ಕೆಲಸ ಮಾಡುವ ಬದಲಾಗಿ, ಜನರನ್ನು ತುಳಿದು ಅಧಿಕಾರ ನಡೆಸುವ ಮನಃಸ್ಥಿತಿಯನ್ನು ಹೊಂದಿದ್ದಾರೆ ಎಂದು ಆರೋಪಿಸಿದರು.

ಚುನಾವಣಾ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಅವರು, 'ಕೇರಳದಲ್ಲಿ ಮುಂಬರುವ ವಿಧಾನಸಭಾ ಚುನಾವಣೆಯು ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮತ್ತು ಆಡಳಿತಾರೂಢ ಎಲ್‌ಡಿಎಫ್ ನಡುವಣ ಸ್ಪರ್ಧೆ. ಎಲ್‌ಡಿಎಫ್‌ಗೆ ಬಿಜೆಪಿ ಬೆಂಬಲ ಇದೆ. ಕಾಂಗ್ರೆಸ್ ನೇತೃತ್ವದ ಯುಡಿಎಫ್ ಅನ್ನು ತನ್ನ ಪ್ರಮುಖ ರಾಜಕೀಯ ಎದುರಾಳಿಯಾಗಿ ಬಿಜೆಪಿ ಕಾಣುತ್ತಿದೆ' ಎಂದು ಅವರು ಹೇಳಿದರು.

'ಸರ್ಕಾರವು ನೈಜ ಎಡರಂಗದಂತೆ ವರ್ತಿಸುತ್ತಿಲ್ಲ ಎಂದು ಸ್ವತಃ ಸಿಪಿಎಂ ಕಾರ್ಯಕರ್ತರೇ ಹೇಳುತ್ತಿದ್ದಾರೆ' ಎಂದು ಹೇಳಿದರು.

'ಪ್ರಧಾನಿ ನರೇಂದ್ರ ಮೋದಿ ಅವರು ಎಲ್ಲೇ ಹೋದರೂ ದೇವರು, ದೇಗುಲ, ಧರ್ಮದ ಬಗ್ಗೆ ಮಾತನಾಡುತ್ತಾರೆ. ಆದರೆ ಕೇರಳದಲ್ಲಿ ಮಾತ್ರ ಶಬರಿಮಲೆ ಚಿನ್ನ ಕಳವಿನ ಬಗ್ಗೆ ಚಕಾರ ಎತ್ತುತ್ತಿಲ್ಲ. ಮುಖ್ಯಮಂತ್ರಿ ಮತ್ತು ಸಿಪಿಎಂ ರಕ್ಷಿಸುವ ಉದ್ದೇಶದಿಂದ ಈ ಬಗ್ಗೆ ಮಾತನಾಡುತ್ತಿಲ್ಲ' ಎಂದು ಟೀಕಿಸಿದರು.

ಎಲ್‌ಡಿಎಫ್ ತನ್ನ ಪ್ರಚಾರದಲ್ಲಿ 'ಪಿಣರಾಯಿ ಅವರನ್ನು ಬಿಟ್ಟು ಬೇರೆ ಯಾರಿದ್ದಾರೆ' ಎಂಬ ಘೋಷವಾಕ್ಯ ಬಳಸಿಕೊಂಡಿದ್ದಕ್ಕೆ ಆಕ್ಷೇಪ ವ್ಯಕ್ತಪಡಿಸಿರುವ ರಾಹುಲ್ ಗಾಂಧಿ, 'ಮುಖ್ಯಮಂತ್ರಿ ಅವರು ದೇವರಲ್ಲ. ರಾಜ್ಯದಲ್ಲಿ ಮಹಿಳೆಯರು ಸೇರಿ ಸಾವಿರಾರು ಪ್ರತಿಭಾನ್ವಿತರಿದ್ದಾರೆ. ಇದು ರಾಜ್ಯದ ಜನರಿಗೆ ಮಾಡಿರುವ ಅವಮಾನ ಮತ್ತು ಅಹಂಕಾರದ ಪರಮಾವಧಿ' ಎಂದರು.

'ಕೇಂದ್ರೀಯ ತನಿಖಾ ಸಂಸ್ಥೆಗಳು ಪಕ್ಷಪಾತಿ ಧೋರಣೆ ತೋರುತ್ತಿವೆ. ಅವರು ನನ್ನ ಸರ್ಕಾರಿ ನಿವಾಸವನ್ನು ಕಸಿದುಕೊಂಡರು, ವಿಚಾರಣೆ ನಡೆಸಿದರು, ನನ್ನ ವಿರುದ್ಧ ಪ್ರಕರಣ ದಾಖಲಿಸಿದರು. ಆದರೆ ಮುಖ್ಯಮಂತ್ರಿ ಮತ್ತು ಅವರ ಕುಟುಂಬದ ವಿರುದ್ಧ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ' ಎಂದು ದೂರಿದರು.

ಚುನಾವಣಾ ಅಫಿಡವಿಟ್‌ನಲ್ಲಿ ಪತ್ನಿಯ ವಿದೇಶಿ ಆಸ್ತಿಗಳ ಬಗ್ಗೆ ಉಲ್ಲೇಖಿಸಿಲ್ಲ ಎಂದ ಕಾಂಗ್ರೆಸ್

'ಹಿಮಂತ ನಾಮಪತ್ರ ರದ್ದು ಮಾಡಿ'

ಗುವಾಹಟಿ (ಪಿಟಿಐ): ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರು ತಮ್ಮ ಚುನಾವಣಾ ಅಫಿಡವಿಟ್‌ನಲ್ಲಿ ಪತ್ನಿಯ ವಿದೇಶಿ ಆಸ್ತಿಗಳ ಬಗ್ಗೆ ಉಲ್ಲೇಖಿಸಿಲ್ಲ ಎಂದು ಕಾಂಗ್ರೆಸ್ ಆರೋಪಿಸಿದ್ದು, ಅವರ ಉಮೇದುವಾರಿಕೆಯನ್ನು ರದ್ದುಗೊಳಿಸುವಂತೆ ಸೋಮವಾರ ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸಿದೆ.


ಹಿಮಂತ ಬಿಸ್ವ ಶರ್ಮಾ

'ಹಿಮಂತ ಅವರ ಪತ್ನಿ ಮೂರು ವಿದೇಶಿ ಪಾಸ್‌ಪೋರ್ಟ್‌ಗಳನ್ನು ಹೊಂದಿದ್ದಾರೆಯೆ? ದುಬೈನಲ್ಲಿ ಆಸ್ತಿಗಳನ್ನು ಹೊಂದಿದ್ದಾರೆಯೆ? ಅಮೆರಿಕದಲ್ಲಿ ಕಂಪನಿಗಳನ್ನು ಅಥವಾ ಶೆಲ್ ಕಂಪನಿಗಳಲ್ಲಿ ಆಸ್ತಿಗಳನ್ನು ಹೊಂದಿದ್ದಾರೆಯೇ' ಎಂದು ಕಾಂಗ್ರೆಸ್ ಭಾನುವಾರ ಮುಖ್ಯಮಂತ್ರಿಗೆ ಮೂರು ಪ್ರಶ್ನೆಗಳನ್ನು ಕೇಳಿತ್ತು. ಇದರ ನಂತರ ದೂರು ಸಲ್ಲಿಸಲಾಗಿದೆ.

ಜಲುಕ್‌ಬಾರಿ ಕ್ಷೇತ್ರದಲ್ಲಿ ಹಿಮಂತ ಅವರ ಎದುರಾಳಿ ಬಿದಿಶಾ ನಿಯೋಗ್ ಅವರು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರಿಗೆ ಸಲ್ಲಿಸಿದ ದೂರಿನಲ್ಲಿ, ಮುಖ್ಯಮಂತ್ರಿಯು ತಮ್ಮ ವಿದೇಶಿ ಆಸ್ತಿಗಳ ಬಗೆಗಿನ ಮಾಹಿತಿ ಒದಗಿಸದೇ ಇರುವುದರ ಬಗ್ಗೆ ತನಿಖೆ ನಡೆಸುವಂತೆ ಒತ್ತಾಯಿಸಿದ್ದಾರೆ.

'ಫಾರ್ಮ್ 26ರಲ್ಲಿ ಸ್ಪಷ್ಟವಾದ ಶಾಸನಬದ್ಧ ಸೂಚನೆಗಳ ಹೊರತಾಗಿಯೂ, ಹೇಳಲಾದ ಅಫಿಡವಿಟ್ ಯಾವುದೇ ವಿದೇಶಿ ಆಸ್ತಿಗಳನ್ನು ಬಹಿರಂಗಪಡಿಸಿಲ್ಲ. ಆದರೆ, ಅಭ್ಯರ್ಥಿಯ ಪತ್ನಿ ರಿನಿಕಿ ಭುಯಾನ್ ಶರ್ಮಾ ಅವರು ದುಬೈನ ಅಲ್ ಬರ್ಷಾ ಸೌತ್ ಫೋರ್ತ್‌ನಲ್ಲಿರುವ ಎರಡು ಅಮೂಲ್ಯ ಆಸ್ತಿಗಳ ಮಾಲೀಕರಾಗಿದ್ದಾರೆ ಎಂದು ದುಬೈ ಭೂ ಇಲಾಖೆ ಹೇಳುತ್ತದೆ' ಎಂದು ಅವರು ದೂರಿನಲ್ಲಿ ಆರೋಪಿಸಿದ್ದಾರೆ.

'ಅವರ ಈ ಆಸ್ತಿಯ ಮಾಹಿತಿಯನ್ನು ಉದ್ದೇಶಪೂರ್ವಕವಾಗಿ ನೀಡಲಾಗಿಲ್ಲ. ಈ ಕಾರಣ ನೀಡಿ ಅಭ್ಯರ್ಥಿಯ ನಾಮಪತ್ರವನ್ನು ತಿರಸ್ಕರಿಸಬಹುದಾಗಿದೆ' ಎಂದು ಅವರು ಉಲ್ಲೇಖಿಸಿದ್ದಾರೆ.

ಅಸ್ಸಾಂನ 126 ವಿಧಾನಸಭಾ ಸ್ಥಾನಗಳಿಗೆ ಏಪ್ರಿಲ್ 9ರಂದು ಮತದಾನ ನಡೆಯಲಿದೆ.

'ಭಗವದ್ಗೀತೆ ಮೇಲೆ ಪ್ರಮಾಣ ಮಾಡಿ'

ನಗಾಂವ್ (ಅಸ್ಸಾಂ) (ಪಿಟಿಐ): ತಮ್ಮ ಪತ್ನಿ ಹಲವು ಪಾಸ್‌ಪೋರ್ಟ್‌ಗಳನ್ನು ಮತ್ತು ವಿದೇಶಗಳಲ್ಲಿ ಆಸ್ತಿಗಳನ್ನು ಹೊಂದಿಲ್ಲ ಎಂದು ಭಗವದ್ಗೀತೆಯ ಮೇಲೆ ಪ್ರಮಾಣ ಮಾಡಿ ಆರೋಪಗಳನ್ನು ನಿರಾಕರಿಸುವಂತೆ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರಿಗೆ ಕಾಂಗ್ರೆಸ್ ಸಂಸದ ಗೌರವ್ ಗೊಗೊಯ್ ಸೋಮವಾರ ಸವಾಲು ಹಾಕಿದ್ದಾರೆ.


ಗೌರವ್ ಗೊಗೊಯಿ

ರಹಾದಲ್ಲಿ ಚುನಾವಣಾ ರ‍್ಯಾಲಿಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಗೌರವ್ ಅವರು, 'ರಾಜಕೀಯ ಎದುರಾಳಿಗಳ ಬಗ್ಗೆ ಸುಳ್ಳು ಹರಡುತ್ತಾ, ವಿದೇಶಗಳಲ್ಲಿರುವ ತಮ್ಮ ಆಸ್ತಿಗಳು ಮತ್ತು ವ್ಯಾಪಾರಿ ಹಿತಾಸಕ್ತಿಗಳನ್ನು ಮರೆಮಾಚುತ್ತಿದ್ದಾರೆಯೆ' ಎಂದು ಪ್ರಶ್ನಿಸಿದ್ದಾರೆ.

ಪಳನಿಸ್ವಾಮಿ, ಮುರುಗನ್ ನಾಮಪತ್ರ ಸಲ್ಲಿಕೆ

ಚೆನ್ನೈ (ಪಿಟಿಐ): ತಮಿಳುನಾಡಿನ ವಿಧಾನಸಭಾ ಚುನಾವಣೆಗೆ ನಾಮಪತ್ರ ಸಲ್ಲಿಸಲು ಕೊನೆಯ ದಿನವಾದ ಸೋಮವಾರ ಎಐಎಡಿಎಂಕೆ ಮುಖ್ಯಸ್ಥ ಎಡಪ್ಪಾಡಿ ಕೆ. ಪಳನಿಸ್ವಾಮಿ, ಬಿಜೆಪಿ ನಾಯಕರಾದ ಎಲ್. ಮುರುಗನ್, ತಮಿಳಿಸೈ ಸೌಂದರರಾಜನ್, ವನತಿ ಶ್ರೀನಿವಾಸನ್ ಮತ್ತು ಡಿಎಂಡಿಕೆ ನಾಯಕಿ ಪ್ರೇಮಲತಾ ವಿಜಯಕಾಂತ್ ಸೇರಿದಂತೆ ಹಲವು ನಾಯಕರು ಉಮೇದುವಾರಿಕೆ ಸಲ್ಲಿಸಿದರು.

ಬಿಜೆಪಿ ರಾಜ್ಯ ಘಟಕದ ಮುಖ್ಯಸ್ಥರಾದ ನೈನಾರ್ ನಾಗೇಂದ್ರನ್ ಅವರು ವಿರುಧುನಗರ ಜಿಲ್ಲೆಯ ಸತ್ತೂರು ವಿಧಾನಸಭಾ ಕ್ಷೇತ್ರದಿಂದ ನಾಮಪತ್ರ ಸಲ್ಲಿಸಿದರು.

ರಾಜ್ಯಸಭಾ ಸದಸ್ಯರೂ ಆಗಿರುವ ಕೇಂದ್ರ ಸಚಿವ ಎಲ್. ಮುರುಗನ್ ಅವರು ಅವನಸಿ (ಎಸ್.ಸಿ) ಕ್ಷೇತ್ರದಿಂದ, ಬಿಜೆಪಿ ನಾಯಕಿ ಮತ್ತು ಮಾಜಿ ರಾಜ್ಯಪಾಲರಾದ ತಮಿಳಿಸೈ ಸೌಂದರರಾಜನ್ ಅವರು ಚೆನ್ನೈನ ಮೈಲಾಪುರ ಕ್ಷೇತ್ರದಿಂದ ನಾಮಪತ್ರ ಸಲ್ಲಿಸಿದರು.

ಎಐಎಡಿಎಂಕೆ ಮುಖ್ಯಸ್ಥ ಎಡಪ್ಪಾಡಿ ಕೆ. ಪಳನಿಸ್ವಾಮಿ ಅವರು ಸೇಲಂ ಜಿಲ್ಲೆಯ ಎಡಪ್ಪಾಡಿ ಕ್ಷೇತ್ರದಲ್ಲಿ ನಾಮಪತ್ರ ಸಲ್ಲಿಸಿದರು. ಅವರು ಈ ಕ್ಷೇತ್ರದಿಂದ ಆರನೇ ಬಾರಿ ಆಯ್ಕೆ ಬಯಸಿದ್ದಾರೆ.

ಬಿಜೆಪಿ ಮಹಿಳಾ ಮೋರ್ಚಾ ಮುಖ್ಯಸ್ಥ ವನತಿ ಶ್ರೀನಿವಾಸನ್ ಅವರು ಕೊಯಮತ್ತೂರು ಉತ್ತರ ಕ್ಷೇತ್ರದಿಂದ ಉಮೇದುವಾರಿಕೆ ಸಲ್ಲಿಸಿದರು. ಈ ವೇಳೆ ರಾಜಸ್ಥಾನದ ಮುಖ್ಯಮಂತ್ರಿ ಭಜನ್‌ಲಾಲ್ ಶರ್ಮಾ ಮತ್ತು ಬಿಜೆಪಿ ಮುಖಂಡ ಕೆ. ಅಣ್ಣಾಮಲೈ ಸಾಥ್ ನೀಡಿದರು.

ಬಿಜೆಪಿ ಎಲ್‌ಡಿಎಫ್ ಒಳಒಪ್ಪಂದ: ಡಿಕೆಶಿ

ಯುಡಿಎಫ್ ಅಭ್ಯರ್ಥಿಗಳ ಪರ ಕೇರಳದಲ್ಲಿ ಪ್ರಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇರಳ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಮತ್ತು ಎಲ್‌ಡಿಎಫ್ ಒಳಒಪ್ಪಂದ ಮಾಡಿಕೊಂಡಿವೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆರೋಪಿಸಿದರು.

ಯುಡಿಎಫ್ ಅಭ್ಯರ್ಥಿಗಳ ಪರ ಕೇರಳದಲ್ಲಿ ಚುನಾವಣಾ ಪ್ರಚಾರದಲ್ಲಿರುವ ಅವರು, ತಿರುವನಂತಪುರದಲ್ಲಿರುವ ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದರು.

'ಭ್ರಷ್ಟಾಚಾರ ಮುಕ್ತ, ಸ್ವಚ್ಛ, ಪಾರದರ್ಶಕ ಆಡಳಿತ, ಉತ್ತಮ ಕೇರಳಂ ರಾಜ್ಯಕ್ಕಾಗಿ ಯುಡಿಎಫ್‌ಗೆ ಅವಕಾಶ ನೀಡಿ. ಯುಡಿಎಫ್ ಮೈತ್ರಿಕೂಟ ಹೊಣೆಗಾರಿಕೆಯಿಂದ ಕೆಲಸ ಮಾಡಲಿದೆ. ಕೇರಳದ ಅಭಿವೃದ್ಧಿಗೆ ಪೂರಕವಾಗಿ ವ್ಯವಸ್ಥೆ ಬದಲಿಸಿ, ಬಂಡವಾಳ ಹೂಡಿಕೆ ತಂದು, ಉದ್ಯೋಗ ಸೃಷ್ಟಿ ಮಾಡಲಿದೆ' ಎಂದು ಭರವಸೆ ನೀಡಿದರು.

ಎಲ್‌ಡಿಎಫ್ ವಿರುದ್ಧ ವಾಗ್ದಾಳಿ ನಡೆಸಿದ ಅವರು, 'ಕೇರಳಿಗರು ಹೊರ ರಾಜ್ಯಗಳಲ್ಲಿ ದುಡಿದು ತಮ್ಮ ಊರಿಗೆ ಬಂದು ಹಣ ಹೂಡಿಕೆ ಮಾಡುತ್ತಾರೆ. ಇಷ್ಟಾದರೂ ಇಲ್ಲಿನ ಸರ್ಕಾರ ಈ ವಿಚಾರವಾಗಿ ನೀತಿ ರೂಪಿಸಲು ವಿಫಲವಾಗಿದೆ. ಈ ಭಾಗದ ಅಭಿವೃದ್ಧಿ ಮಾಡಿ, ಬಂಡವಾಳ ತಂದು, ಉದ್ಯೋಗ ಸೃಷ್ಟಿಸಿ ರಾಜ್ಯದ ಜಿಡಿಪಿ ಬೆಳೆಯುವಂತೆ ಮಾಡದಿದ್ದ ಮೇಲೆ ಆ ಪಕ್ಷ ಯಾವ ಕಾರಣಕ್ಕೆ ಅಧಿಕಾರದಲ್ಲಿರಬೇಕು' ಎಂದು ಪ್ರಶ್ನಿಸಿದರು.

'ಶಬರಿಮಲೆ ಅಯ್ಯಪ್ಪ ಸ್ವಾಮಿ ದೇವಾಲಯದಲ್ಲಿ ಚಿನ್ನದ ಕಳವು ಪ್ರಕರಣ ಏನಾಯಿತು? ಈ ಪ್ರಕರಣದಲ್ಲಿ ಸಿಬಿಐ ಯಾಕೆ ಮಧ್ಯಪ್ರವೇಶ ಮಾಡಲಿಲ್ಲ? ದೇವರ ಚಿನ್ನವನ್ನೇ ಕದ್ದು ಹಗರಣ ಮಾಡಿದ್ದರೂ ಈ ಬಗ್ಗೆ ಪ್ರಧಾನಿ ಒಂದೇ ಒಂದು ಮಾತು ಆಡುತ್ತಿಲ್ಲವೆಂದರೆ, ಇಲ್ಲಿ ಕೇಂದ್ರದ ಬಿಜೆಪಿ ಸರ್ಕಾರ ಮತ್ತು ಕೇರಳಂ ರಾಜ್ಯದ ಎಲ್‌ಡಿಎಫ್ ಸರ್ಕಾರಗಳ ನಡುವಣ ಒಳ ಒಪ್ಪಂದ ಏನು? ಈ ವಿಚಾರವಾಗಿ ಸ್ಥಳೀಯ ಬಿಜೆಪಿ ನಾಯಕರಿಗಿಂತ ಪ್ರಧಾನಿ ಹಾಗೂ ಕೇರಳಂನ ಮುಖ್ಯಮಂತ್ರಿ ಉತ್ತರಿಸಬೇಕು' ಎಂದು ಆಗ್ರಹಿಸಿದರು.

'ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿರುವ 26 ಲಕ್ಷ ಎಂಜಿನಿಯರ್‌ಗಳ ಪೈಕಿ, ಶೇ 20ರಷ್ಟು ಜನ ಕೇರಳಿಗರು. ಆರೋಗ್ಯ ಕ್ಷೇತ್ರ, ವೈದ್ಯಕೀಯ ಕಾಲೇಜು ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲಿ ಕೇರಳಿಗರು ಯಶಸ್ಸು ಸಾಧಿಸಿದ್ದಾರೆ. ಆದರೆ, ಕೇರಳದ ಎಲ್‌ಡಿಎಫ್ ಸರ್ಕಾರ ರಾಜ್ಯವನ್ನು ಯಶಸ್ಸಿನ ಹಾದಿಯಲ್ಲಿ ಮುನ್ನಡೆಸಲು ವಿಫಲವಾಗಿದೆ' ಎಂದು ಅವರು ಟೀಕಿಸಿದರು.



ಕೇರಳದ ವಟ್ಟಿಯುರ್ಕಾವು ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ. ಮುರಳೀಧರನ್ ಪರವಾಗಿ ಡಿ.ಕೆ ಶಿವಕುಮಾರ್ ಸೋಮವಾರ ರೋಡ್ ಶೋ ನಡೆಸಿದರು

'ವಿದೇಶದಲ್ಲಿರುವ ಕೇರಳಿಗರಿಗೆ ಅವಕಾಶ ಕಲ್ಪಿಸಿ'

'ನಾವು ಯುಎಇಯಲ್ಲಿ ಕೆಲಸ ಮಾಡುತ್ತಿರುವ ಕೇರಳಿಗರ ಸಮೀಕ್ಷೆ ಮಾಡಿಸಿದ್ದು, ಶೇ 90ರಷ್ಟು ಜನ ಅಧಿಕಾರದಲ್ಲಿ ಬದಲಾವಣೆ ಬಯಸಿದ್ದಾರೆ. ಎಲ್ಲರೂ ಕೇರಳಕ್ಕೆ ಬಂದು ಮತದಾನ ಮಾಡಲು ಬಯಸುತ್ತಿದ್ದಾರೆ. ಆದರೆ, ಕೇಂದ್ರ ಸರ್ಕಾರವಾಗಲಿ, ಕೇರಳ ರಾಜ್ಯ ಸರ್ಕಾರವಾಗಲಿ ಅವರು ಬಂದು ಮತದಾನ ಮಾಡಲು ಸಹಕಾರ ನೀಡುತ್ತಿಲ್ಲ. ಮತದಾನ ಅವರ ಹಕ್ಕು, ಪ್ರಜಾಸತ್ತಾತ್ಮಕ ರಾಷ್ಟ್ರದಲ್ಲಿ ಅವರ ಹಕ್ಕು ಚಲಾಯಿಸಲು ಅವಕಾಶ ನೀಡಬೇಕು' ಎಂದು ಶಿವಕುಮಾರ್ ಆಗ್ರಹಿಸಿದರು.

ಪಾಕ್ ಐಎಸ್‌ಐ ಬೆಂಬಲಿತ ಮೂವರ ಬಂಧನ

ಪಂಜಾಬ್ ಸೇರಿ ವಿವಿಧ ರಾಜ್ಯಗಳ ಪೊಲೀಸ್ ಠಾಣೆ ಗುರಿಯಾಗಿಸಿ ದಾಳಿಗೆ ಸಂಚು • ಎರಡು ಕೈಬಾಂಬ್, ವಿದೇಶಿ ಪಿಸ್ತೂಲ್ ವಶ

ಚಂಡೀಗಢ (ಪಿಟಿಐ): ಪಂಜಾಬ್ ಪೊಲೀಸರ ಗುಪ್ತಚರ ವಿಭಾಗವು ಪಾಕಿಸ್ತಾನದ ಐಎಸ್‌ಐ ಬೆಂಬಲಿತ ಭಯೋತ್ಪಾದಕ ಜಾಲದ ಮೂವರನ್ನು ಬಂಧಿಸುವ ಮೂಲಕ ದಾಳಿ ಸಂಚನ್ನು ವಿಫಲಗೊಳಿಸಿದೆ ಎಂದು ಸೋಮವಾರ ಹಿರಿಯ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

'ಬಂಧಿತರಿಂದ ಎರಡು ಕೈಬಾಂಬ್‌ಗಳು, ವಿದೇಶಿ ಪಿಸ್ತೂಲ್ ವಶಕ್ಕೆ ಪಡೆಯಲಾಗಿದೆ. ಕೈಬಾಂಬ್‌ಗಳ ಮೇಲೆ ಪಿಒಎಫ್ (ಪಾಕಿಸ್ತಾನ್ ಆರ್ಡನೆನ್ಸ್ ಫ್ಯಾಕ್ಟರಿ) ಎಂಬ ಗುರುತು ಇದೆ. ಇದು ಗಡಿಯಾಚೆಗಿನ ಸಂಪರ್ಕವನ್ನು ಸೂಚಿಸುತ್ತದೆ' ಎಂದು ಡಿಜಿಪಿ ಗೌರವ್ ಯಾದವ್ ತಿಳಿಸಿದ್ದಾರೆ.

ತರ್ನ್‌ತಾರನ್ ಜಿಲ್ಲೆಯ ಸರಬ್ಜಿತ್ ಸಿಂಗ್, ಅಮೃತಸರ ಜಿಲ್ಲೆಯ ವಿಕ್ರಮ್‌ಜಿತ್ ಸಿಂಗ್ ಹಾಗೂ ಅಮನ್‌ದೀಪ್ ಸಿಂಗ್ ಬಂಧಿತರು.

ಮಹಿಳೆಯರನ್ನು ಉಗ್ರರ ಜಾಲಕ್ಕೆ ನೇಮಿಸಲು ಸಂಚು

ಹೈದರಾಬಾದ್: ವಿಜಯವಾಡದ ಯುವಕರ ಭಯೋತ್ಪಾದನಾ ನಂಟು ಪ್ರಕರಣದಲ್ಲಿ, ಬಂಧಿತರು 'ಐವಾತೀನ್' ಹೆಸರಿನಲ್ಲಿ ಮಹಿಳಾ ವಿಭಾಗವನ್ನು ಪ್ರಾರಂಭಿಸಲು ಯೋಜಿಸಿದ್ದರು ಎಂದು ಗುಪ್ತಚರ ದಳದ ಅಧಿಕಾರಿಗಳು ಹೇಳಿದ್ದಾರೆ. ಈ ಸಂಘಟನೆಯ ನಾಯಕತ್ವವನ್ನು ಹೈದರಾಬಾದ್‌ನ ಸಯೀದಾ ಬೇಗಂ ವಹಿಸಿಕೊಳ್ಳಬೇಕಿತ್ತು ಎಂದು ತಿಳಿದುಬಂದಿದೆ.

ಮಹಿಳೆಯರನ್ನು ನೇಮಕ ಮಾಡಿ ಭಾರತದಾದ್ಯಂತ ದಾಳಿ ನಡೆಸಲು ಅವರಿಗೆ ಬಂದೂಕುಗಳು, ಸ್ನೈಪರ್ ರೈಫಲ್‌ಗಳು ಮತ್ತು ಸ್ಫೋಟಕಗಳ ಬಳಕೆಯಲ್ಲಿ ತರಬೇತಿ ನೀಡಲು ಈ ಗುಂಪು ಯೋಜಿಸಿತ್ತು ಎಂದು ವರದಿಯಾಗಿದೆ.

ಇತ್ತೀಚೆಗೆ ಹೈದರಾಬಾದ್‌ನಲ್ಲಿ ಸಯೀದಾ ಬೇಗಂ ಅವರನ್ನು ಬಂಧಿಸಲಾಗಿದೆ. ಮಹಿಳೆಯರನ್ನು ಈ ಜಾಲಕ್ಕೆ ಸೇರಿಸಿಕೊಳ್ಳುವಲ್ಲಿ ಭಯೋತ್ಪಾದಕರಿಗೆ ಅವರು ಸಹಾಯ ಮಾಡಿದ್ದಾರೆ ಎಂದು ಶಂಕಿಸಲಾಗಿದೆ.

'ಪಾಕ್‌ನ ಐಎಸ್‌ಐ ನಿರ್ದೇಶನದಂತೆ ಪಂಜಾಬ್ ಸೇರಿ ವಿವಿಧ ರಾಜ್ಯಗಳ ಪೊಲೀಸ್ ಠಾಣೆಗಳನ್ನು ಗುರಿಯಾಗಿಸಿ ದಾಳಿ ನಡೆಸಲು ಇವರು ಸಂಚು ರೂಪಿಸಿದ್ದರು ಎಂಬುದು ಪ್ರಾಥಮಿಕ ತನಿಖೆಯಲ್ಲಿ ಗೊತ್ತಾಗಿದೆ. ಇನ್ನೂ ಹಲವರಿಗೆ ಶೋಧ ನಡೆದಿದೆ' ಎಂದು ಡಿಜಿಪಿ ತಿಳಿಸಿದ್ದಾರೆ.

'ಪಾಕಿಸ್ತಾನ್ ಇಂಟೆಲಿಜೆನ್ಸ್ ಆಪರೇಟಿವ್ಸ್ ಜೊತೆ ವಿಕ್ರಮ್‌ಜಿತ್ ಸಿಂಗ್‌ಗೆ ಸಂಪರ್ಕ ಇದ್ದು, ಈತ ಗುಜರಾತ್‌ನ ದೀಸಾದಿಂದ ಕಾರ್ಯಾಚರಣೆ ನಡೆಸುತ್ತಿದ್ದ. ಗುಜರಾತ್ ಎಟಿಎಸ್ ಈ ಮಾಹಿತಿ ನೀಡಲಾಗಿದೆ. ಸಾಮಾಜಿಕ ಮಾಧ್ಯಮ ಮೂಲಕ ಇವರು ಸಂಪರ್ಕ ಸಾಧಿಸುತ್ತಿದ್ದರು' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ವಿಶೇಷ ಕಾರ್ಯಾಚರಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಡ್ರೋನ್‌ಗಳಲ್ಲಿ ಶಸ್ತ್ರಾಸ್ತ್ರ ಸಾಗಣೆ: ತನಿಖೆ ಆರಂಭ



ನವದೆಹಲಿ (ಪಿಟಿಐ): ಭಾರತ–ಪಾಕಿಸ್ತಾನದ ಗಡಿಯುದ್ದಕ್ಕೂ ಡ್ರೋನ್‌ಗಳ ಮೂಲಕ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳ ಕಳ್ಳಸಾಗಣೆ ಬಗ್ಗೆ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ತನಿಖೆ ಆರಂಭಿಸಿದೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಈ ಕಳ್ಳಸಾಗಣೆಯ ಮೂಲಕ ಭಾರತದಲ್ಲಿ ಭಯೋತ್ಪಾದಕ ದಾಳಿ ನಡೆಸುವ ದೊಡ್ಡ ಮಟ್ಟದ ಪಿತೂರಿ ಇರುವ ಸಾಧ್ಯತೆ ಇದೆ ಎಂದು ಶಂಕಿಸಲಾಗಿದೆ. ಮೂಲಗಳ ಪ್ರಕಾರ ಈ ಪ್ರಕರಣವನ್ನು ಪ್ರಾಥಮಿಕವಾಗಿ ಪಂಜಾಬ್ ಪೊಲೀಸರು ದಾಖಲಿಸಿದ್ದರು.

ಕೇಂದ್ರ ಗೃಹ ಸಚಿವಾಲಯದ ನಿರ್ದೇಶನದ ಮೇರೆಗೆ, ಪಾಕಿಸ್ತಾನ ಮೂಲದ ಭಯೋತ್ಪಾದಕ ಶಹಜಾದ್ ಭಟ್ಟಿ, ಆತನ ಭಾರತೀಯ ಸಹಚರ ಶುಭಂ ಕುಮಾರ್ ಮತ್ತು ಇತರ ಶಂಕಿತ ವ್ಯಕ್ತಿಗಳ ಪಾತ್ರದ ಬಗ್ಗೆ ತನಿಖೆ ನಡೆಸಲು ಪ್ರಕರಣ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಭಟ್ಟಿ ನಿರ್ದೇಶನದ ಮೇರೆಗೆ ಆತನ ಭಾರತೀಯ ಸಹಚರರು ಪಂಜಾಬ್, ದೆಹಲಿ ಮತ್ತು ದೇಶದ ಇತರ ಭಾಗಗಳಲ್ಲಿ ಸ್ಫೋಟಗಳನ್ನು ನಡೆಸುವ ಉದ್ದೇಶದಿಂದ ಭಾರತ–ಪಾಕಿಸ್ತಾನ ಗಡಿಯಾದ್ಯಂತ ಡ್ರೋನ್‌ಗಳ ಮೂಲಕ ಶಸ್ತ್ರಾಸ್ತ್ರಗಳು, ಮದ್ದುಗುಂಡುಗಳು ಮತ್ತು ಸುಧಾರಿತ ಸ್ಫೋಟಕ ಸಾಧನಗಳನ್ನು (ಐಇಡಿ) ಹಾಕಿದ್ದಾರೆ ಎಂಬ ವಿಶ್ವಾಸಾರ್ಹ ಮಾಹಿತಿಯನ್ನು ಅನುಸರಿಸಿ ರಾಜ್ಯ ವಿಶೇಷ ಕಾರ್ಯಾಚರಣೆ ಸೆಲ್ (ಎಸ್‌ಎಸ್‌ಒಸಿ) ಪಡೆದುಕೊಂಡಿತ್ತು. ಈ ಸಂಬಂಧ ರಾಜ್ಯ ಪೊಲೀಸರು ಫೆಬ್ರುವರಿ 10ರಂದು ಎಫ್‌ಐಆರ್ ದಾಖಲಿಸಿದ್ದರು.

ವಿಚಾರಣೆಯಿಂದಲೇ ಹಿಂದೆ ಸರಿಯಿರಿ: ಕೇಜ್ರಿವಾಲ್ ಮನವಿ

ನವದೆಹಲಿ (ಪಿಟಿಐ): ನ್ಯಾಯಮೂರ್ತಿ ಸ್ವರ್ಣಕಾಂತ ಶರ್ಮಾ ಅವರು ಅಬಕಾರಿ ನೀತಿ ಪ್ರಕರಣದ ವಿಚಾರಣೆಯಿಂದ ಹಿಂದಕ್ಕೆ ಸರಿಯಬೇಕು ಎಂದು ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರು ದೆಹಲಿ ಹೈಕೋರ್ಟ್‌ಗೆ ಸೋಮವಾರ ಮನವಿ ಮಾಡಿದರು.



ಅರವಿಂದ ಕೇಜ್ರಿವಾಲ್

ಅಬಕಾರಿ ನೀತಿ ಹಗರಣದ ಪ್ರಕರಣದಲ್ಲಿ ಕೇಜ್ರಿವಾಲ್ ಸೇರಿದಂತೆ ಇತರ ಎಲ್ಲ ಆರೋಪಿಗಳನ್ನು ಹೈಕೋರ್ಟ್ ಖುಲಾಸೆಗೊಳಿಸಿರುವುದನ್ನು ಪ್ರಶ್ನಿಸಿ, ಸಿಬಿಐ ಸಲ್ಲಿಸಿರುವ ಅರ್ಜಿಯ ವಿಚಾರಣೆಯಿಂದ ಸ್ವರ್ಣ ಅವರನ್ನು ಹಿಂದಕ್ಕೆ ಕರೆಸಿಕೊಳ್ಳಿ ಎಂದು ನ್ಯಾಯಾಲಯಕ್ಕೆ ಖುದ್ದು ಹಾಜರಾದ ದೆಹಲಿಯ ಮಾಜಿ ಮುಖ್ಯಮಂತ್ರಿ ಕೋರಿದರು.

ಕೇಜ್ರಿವಾಲ್ ಅವರ ಮನವಿ ಅರ್ಜಿಯನ್ನು ಪರಿಶೀಲಿಸಿದ ನ್ಯಾಯಮೂರ್ತಿ ಶರ್ಮಾ ಅವರು, ಏ. 13ರಂದು ವಿಚಾರಣೆಗೆ ಪಟ್ಟಿ ಮಾಡಿದರು.

'ಬೇರೆ ಯಾರಾದರೂ ಅರ್ಜಿ ಸಲ್ಲಿಸಲು ಬಯಸಿದರೆ, ದಯವಿಟ್ಟು ಸಲ್ಲಿಸಿ. ನಾನು ಒಮ್ಮೆಗೆ ನಿರ್ಧರಿಸಬಹುದು' ಎಂದು ನ್ಯಾಯಮೂರ್ತಿ ಹೇಳಿದರು.

ಸಿಬಿಐ ಪರ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, 'ನ್ಯಾಯಾಲಯವು ರಂಗ ಸಜ್ಜಿಕೆಯಲ್ಲ. ಕೇಜ್ರಿವಾಲ್ ಅವರು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ವತಃ ಹಾಜರಾಗಿ ವಾದ ಮಂಡಿಸುವುದಾದರೆ, ಅವರ ವಕೀಲರನ್ನು ಬದಲಾಯಿಸಬೇಕು' ಎಂದು ವಾದ ಮಂಡಿಸಿದರು.

ನ್ಯಾಯಾಂಗದ ವಿರುದ್ಧ ಕೇಜ್ರಿವಾಲ್ ಅವರ ಆರೋಪ ಕ್ಷುಲ್ಲಕ. ಸಲ್ಲಿಸಿರುವ ಅರ್ಜಿಯು ತಿರಸ್ಕರಿಸಲು ಯೋಗ್ಯವಾದದ್ದು ಎಂದು ಹೇಳಿದರು.

'ಈ ದೇಶದಲ್ಲಿ ಕೆಲವರು ಎಲ್ಲರ ವಿರುದ್ಧವೂ ಆಧಾರರಹಿತ ಆರೋಪ ಮಾಡುತ್ತಿದ್ದಾರೆ. ಇಂತಹವರನ್ನು ಗಂಭೀರವಾಗಿ ಪರಿಗಣಿಸಬೇಕಿದೆ. ಇದು ಸಂಸ್ಥೆಯ ವಿರುದ್ಧದ ಆರೋಪವಾಗಿದೆ' ಎಂದರು.



ನವದೆಹಲಿಯ ಬಿಜೆಪಿ ಕಚೇರಿಯಲ್ಲಿ ನಡೆದ ಪಕ್ಷದ '47ನೇ ಸಂಸ್ಥಾಪನಾ ದಿನ' ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರು ಪಕ್ಷದ ಹಿರಿಯ ನಾಯಕರ ಪ್ರತಿಮೆಗಳಿಗೆ ನಮನ ಸಲ್ಲಿಸಿದರು –ಪಿಟಿಐ ಚಿತ್ರ

'ವಿಕಸಿತ ಭಾರತ ರೂಪಿಸಲು ಶ್ರಮಿಸಿ'

ನವದೆಹಲಿ (ಪಿಟಿಐ): 2047ರ ಹೊತ್ತಿಗೆ ಪ್ರಧಾನಿ ನರೇಂದ್ರ ಮೋದಿ ಅವರ 'ವಿಕಸಿತ ಭಾರತ' ರೂಪಿಸುವ ಗುರಿ ಮುಟ್ಟಲು ಪಕ್ಷದ ಕಾರ್ಯಕರ್ತರು ಮತ್ತು ಮುಖಂಡರು ದೇಶದಾದ್ಯಂತ ಜನರನ್ನು ಒಗ್ಗೂಡಿಸುವಂತೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಸೋಮವಾರ ಕರೆ ನೀಡಿದ್ದಾರೆ.


ಬಿಜೆಪಿಯ 47ನೇ ಸಂಸ್ಥಾಪನಾ ದಿನದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಬಿಜೆಪಿಯನ್ನು ವಿಶ್ವದ ಅತಿದೊಡ್ಡ ರಾಜಕೀಯ ಪಕ್ಷವನ್ನಾಗಿ ಕಟ್ಟುವಲ್ಲಿ 'ತ್ಯಾಗ ಮತ್ತು ಬಲಿದಾನ' ನೀಡಿದ ನಾಯಕರು ಮತ್ತು ಕಾರ್ಯಕರ್ತರ ಪ್ರೇರಣೆ ಪಡೆದು ಪಕ್ಷವನ್ನು ಇನ್ನಷ್ಟು ಎತ್ತರಕ್ಕೆ ಬೆಳಸಬೇಕಿದೆ' ಎಂದು ಹೇಳಿದರು.

'2047ರ ವೇಳೆಗೆ ವಿಕಸಿತ ಭಾರತ ರೂಪಿಸಲು ಮತ್ತು ಪಂಚಾಯಿತಿಯಿಂದ ಸಂಸತ್ತಿನವರೆಗೂ 'ಭಗವಾಧ್ವಜ' (ಕೇಸರಿ) ಹಾರಿಸುವ ಕನಸು ಈಡೇರಿಸಲು ಮುಂದಡಿ ಇಡಬೇಕಿದೆ' ಎಂದರು.

ಖಂಡು ಕುಟುಂಬಕ್ಕೆ ಗುತ್ತಿಗೆ: ಸಿಬಿಐ ತನಿಖೆಗೆ ಆದೇಶ

ಪ್ರಜಾವಾಣಿ ವಾರ್ತೆ

ನವದೆಹಲಿ: ಅರುಣಾಚಲ ಪ್ರದೇಶದಲ್ಲಿ ಮುಖ್ಯಮಂತ್ರಿ ಪೇಮಾ ಖಂಡು ಅವರ ಕುಟುಂಬ ಸದಸ್ಯರ ಒಡೆತನದ ಕಂಪನಿಗಳಿಗೆ ಅಭಿವೃದ್ಧಿ ಕಾರ್ಯಗಳ ಗುತ್ತಿಗೆಗಳನ್ನು ನೀಡಲಾದ ಬಗ್ಗೆ ಸಿಬಿಐ ತನಿಖೆಗೆ ಸುಪ್ರೀಂ ಕೋರ್ಟ್ ಸೋಮವಾರ ಆದೇಶಿಸಿದೆ.



ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್, ಸಂದೀಪ್ ಮೆಹ್ತಾ ಹಾಗೂ ಎನ್.ವಿ.ಅಂಜಾರಿಯಾ ಅವರನ್ನೊಳಗೊಂಡ ಪೀಠವು, 'ಎರಡು ವಾರಗಳಲ್ಲಿ ಸಿಬಿಐ ತನಿಖೆ ಆರಂಭಿಸಬೇಕು. 2015ರ ಜನವರಿಯಿಂದ 2025ರ ಡಿಸೆಂಬರ್ ವರೆಗಿನ ಸರ್ಕಾರಿ ಕಾಮಗಾರಿಗಳ ಒಪ್ಪಂದಗಳು, ಕಾರ್ಯಾದೇಶಗಳು ಹಾಗೂ ಕಾಮಗಾರಿಗಳ ಕಾರ್ಯಗತಗೊಳಿಸುವಿಕೆ ಸೇರಿದಂತೆ ಎಲ್ಲ ಆಯಾಮಗಳ ಬಗ್ಗೆ ತನಿಖೆ ನಡೆಸಬೇಕು' ಎಂದು ನಿರ್ದೇಶನ ನೀಡಿದೆ. ಈ ವಿಷಯದಲ್ಲಿ 16 ವಾರಗಳಲ್ಲಿ ಸ್ಥಿತಿಗತಿ ವರದಿಯನ್ನು ಸಲ್ಲಿಸಬೇಕು ಎಂದೂ ಸೂಚಿಸಿದೆ.

ಆದೇಶ ಪ್ರಕಟಿಸಿದ ನ್ಯಾಯಮೂರ್ತಿ ವಿಕ್ರಮ್‌ನಾಥ್, 'ಎರಡು ವಾರಗಳಲ್ಲಿ ಸಿಬಿಐ ಪ್ರಾಥಮಿಕ ತನಿಖೆ ಆರಂಭಿಸಬೇಕು ಹಾಗೂ ಕಾನೂನಿನ ಪ್ರಕಾರ ಮುಂದುವರಿಯಬೇಕು' ಎಂದರು.

ತನಿಖೆಗೆ ಅರುಣಾಚಲ ಪ್ರದೇಶ ಸರ್ಕಾರ ಪೂರ್ಣ ಸಹಕಾರ ನೀಡಬೇಕು. ಸಿಬಿಐ ಜತೆಗೆ ಸಮನ್ವಯಕ್ಕಾಗಿ ಮುಖ್ಯ ಕಾರ್ಯದರ್ಶಿಯವರು ನೋಡಲ್ ಅಧಿಕಾರಿಯನ್ನು ನೇಮಿಸಬೇಕು. ಪ್ರಕರಣಕ್ಕೆ ಸಂಬಂಧಿಸಿದ ಯಾವುದೇ ದಾಖಲೆ ನಾಶವಾಗದಂತೆ ನೋಡಿಕೊಳ್ಳಬೇಕು ಎಂದು ಪೀಠ ತಾಕೀತು ಮಾಡಿದೆ.

ಈ ಪ್ರಕರಣದ ಬಗ್ಗೆ ನ್ಯಾಯಪೀಠವು ಫೆಬ್ರುವರಿ 17ರಂದು ಆದೇಶ ಕಾಯ್ದಿರಿಸಿತ್ತು. ಖಂಡು ಸಂಬಂಧಿಕರ ವಿರುದ್ಧ ಕೇಳಿಬಂದಿರುವ ಭ್ರಷ್ಟಾಚಾರ ಪ್ರಕರಣಗಳ ಕುರಿತು ಸಿಬಿಐ ಅಥವಾ ವಿಶೇಷ ತನಿಖಾ ದಳದಿಂದ (ಎಸ್‌ಐಟಿ) ತನಿಖೆ ನಡೆಸಬೇಕು ಎಂದು ಕೋರಿ ಸ್ವಯಂಸೇವಾ ಸಂಘಟನೆಗಳಾದ 'ವಾಲಂಟರಿ ಅರುಣಾಚಲ ಸೇನಾ' ಹಾಗೂ 'ಸೇವ್ ಮಾನ್ ರೀಜನ್ ಫೆಡರೇಷನ್' ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ದಾವೆ ಹೂಡಿದ್ದವು.

ಖಂಡು ಅವರ ಕುಟುಂಬ ಸದಸ್ಯರಿಗೆ ಸಂಬಂಧಿಸಿದ ನಾಲ್ಕು ಕಂಪನಿಗಳಿಗೆ ₹1,270 ಕೋಟಿ ಮೊತ್ತದ ಗುತ್ತಿಗೆಗಳನ್ನು ನೀಡಲಾಗಿದೆ. ರಾಜ್ಯವನ್ನು ಮುಖ್ಯಮಂತ್ರಿ ಖಾಸಗಿ ಕಂಪನಿಯಂತೆ ನಡೆಸುತ್ತಿದ್ದಾರೆ ಎಂದೂ ಆರೋಪಿಸಿದ್ದವು.

ಖುದ್ದು ಹಾಜರಾಗಲು ಗೃಹ ಇಲಾಖೆ ಕಾರ್ಯದರ್ಶಿಗೆ ಸೂಚನೆ



ನವದೆಹಲಿ (ಪಿಟಿಐ): ಪೊಲೀಸ್ ಠಾಣೆಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಕೆಯಲ್ಲಿ ಸೂಕ್ತ ಸಲಹೆ ಪಡೆಯಲು ಮಂಗಳವಾರ ತನ್ನ ಮುಂದೆ ಹಾಜರಾಗುವಂತೆ ಗೃಹ ಇಲಾಖೆ ಕಾರ್ಯದರ್ಶಿಗೆ ಸುಪ್ರೀಂ ಕೋರ್ಟ್ ಸೂಚನೆ ನೀಡಿದೆ.

ಕಳೆದ ಹತ್ತು ತಿಂಗಳಲ್ಲಿ ಪೊಲೀಸರ ವಶದಲ್ಲಿರುವಾಗಲೇ 11 ಮಂದಿ ಮೃತಪಟ್ಟಿದ್ದಾರೆಂದು ಹಿಂದಿ ಪತ್ರಿಕೆಯೊಂದು ವರದಿ ಮಾಡಿತ್ತು. ಇದರ ಬೆನ್ನಲ್ಲೇ ನ್ಯಾಯಮೂರ್ತಿ ವಿಕ್ರಮ್ ನಾಥ್ ಹಾಗೂ ನ್ಯಾ.ಸಂದೀಪ್ ಮೆಹ್ತಾ ಅವರನ್ನೊಳಗೊಂಡ ಪೀಠವು ಈ ಸ್ವಯಂ ಪ್ರೇರಿತ ದೂರು ದಾಖಲಿಸಿ ವಿಚಾರಣೆ ಕೈಗೆತ್ತಿಕೊಂಡಿತ್ತು.

ಭದ್ರತಾ ಸಮಸ್ಯೆಯನ್ನು ಮುಂದಿಟ್ಟುಕೊಂಡು, ಚೀನಾದ ಸಂಸ್ಥೆಯೊಂದು ತಯಾರಿಸಿದ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ತೆಗೆದುಹಾಕಲಾಗಿದೆ ಎಂಬ ಮಾಧ್ಯಮ ವರದಿಯ ಕುರಿತು ಕೇಂದ್ರದ ಪರ ಹಾಜರಾದ ವಕೀಲರನ್ನು ಪ್ರಶ್ನಿಸಿತು.

'ಸರ್ಕಾರವು ನಿರ್ದಿಷ್ಟ ಕಂಪನಿಯ ಕ್ಯಾಮೆರಾಗಳನ್ನು ಮಾತ್ರ ತೆಗೆದುಹಾಕಲು ಸೂಚಿಸಿದೆ. ಈ ವಿಚಾರದಲ್ಲಿ ಸರ್ಕಾರದಿಂದ ಅಧಿಕೃತ ಆದೇಶ ಹೊರಬಿದ್ದಿಲ್ಲ' ಎಂದು ಹೆಚ್ಚುವರಿ ಸಾಲಿಸಿಟರ್ ಜನರಲ್ ರಾಜ ಠಾಕ್ರೆ ತಿಳಿಸಿದರು.

'ಈಗಾಗಲೇ ಬಹಳಷ್ಟು ರಾಜ್ಯಗಳು ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಕೆ ಮಾಡಿದ್ದು, ಕೇಂದ್ರೀಕೃತ ಡ್ಯಾಶ್‌ಬೋರ್ಡ್ ರಚಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿದೆ' ಎಂದು ಅಮಿಕಸ್ ಕ್ಯೂರಿ ಆಗಿರುವ ಹಿರಿಯ ವಕೀಲ ಸಿದ್ಧಾರ್ಥ ದಾವೆ ನ್ಯಾಯಪೀಠದ ಗಮನಸೆಳೆದರು.

'ಕೇರಳವು ಈ ವಿಚಾರದಲ್ಲಿ ಮಾದರಿಯಾಗಿದೆ. ಇದಕ್ಕಾಗಿ ಕೇಂದ್ರ ಸರ್ಕಾರವೇ ಶೇಕಡ 60ರಷ್ಟು ಅನುದಾನ ಒದಗಿಸುತ್ತದೆ' ಎಂದು ತಿಳಿಸಿದರು.

ಈ ವಿಚಾರ ಪರಿಗಣಿಸಿದ ನ್ಯಾಯಮೂರ್ತಿ ವಿಕ್ರಮ್‌ನಾಥ್, 'ಕೇರಳವು ಮಾದರಿಯಾಗಿದ್ದರೆ, ಬೇರೆ ರಾಜ್ಯಗಳನ್ನು ಏಕೆ ಅನುಸರಿಸಬಾರದು?' ಎಂದು ಕೇಳಿದರು.

'ಸುಪ್ರೀಂ ಕೋರ್ಟ್ ಈ ಹಿಂದೆ ಹೊರಡಿಸಿದ ಆದೇಶದಲ್ಲಿ ಗುರುತಿಸಿದ ಸಮಸ್ಯೆಗಳ ಕುರಿತು ಚರ್ಚಿಸಲು ನಡೆದ ಸಭೆಯಲ್ಲಿಅಧೀನ ಕಾರ್ಯದರ್ಶಿಯೊಬ್ಬರು ಭಾಗವಹಿಸಿದ್ದರು' ಎಂದು ಠಾಕ್ರೆ ನ್ಯಾಯಪೀಠದ ಗಮನಸೆಳೆದರು.

ಇದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ನ್ಯಾಯಪೀಠ, ಮಂಗಳವಾರ ನಡೆಯುವ ವಿಚಾರಣೆ ವೇಳೆ ಗೃಹ ಇಲಾಖೆಯ ಕಾರ್ಯದರ್ಶಿಗೆ ಖುದ್ದು ಹಾಜರಿರುವಂತೆ ಸೂಚನೆ ನೀಡಿ, ಸೂಕ್ತ ನಿರ್ದೇಶನ ನೀಡಲು ತಿಳಿಸಿದೆ.

ಅರ್ಜಿದಾರರ ಪರವಾಗಿ ಹಿರಿಯ ವಕೀಲ ಪ್ರಶಾಂತ್ ಭೂಷಣ್ ವಾದ ಮಂಡಿಸಿ, 'ಮುಖ್ಯಮಂತ್ರಿಯವರ ಕುಟುಂಬ ಸದಸ್ಯರ ಕಂಪನಿಗಳಿಗೆ ಕಾನೂನುಬಾಹಿರವಾಗಿ ಅನೇಕ ಕಾಮಗಾರಿಗಳ ಗುತ್ತಿಗೆಗಳನ್ನು ವಹಿಸಲಾಗಿದೆ. ಖಂಡು ಪತ್ನಿ ಒಡೆತನದ ನಿರ್ಮಾಣ ಕಂಪನಿ ಮೆಸರ್ಸ್ ಬ್ರಾಂಡ್ ಈಗಲ್ಸ್‌ಗೆ ಹೆಚ್ಚಿನ ಸಂಖ್ಯೆಯ ಗುತ್ತಿಗೆಗಳನ್ನು ನೀಡಲಾಗಿದೆ. ಇದು ಹಿತಾಸಕ್ತಿ ಸಂಘರ್ಷಕ್ಕೆ ಸಾಕ್ಷಿ' ಎಂದು ಆರೋಪಿಸಿದ್ದರು.

ದೋರ್ಜಿ ಖಂಡು (ಪೇಮಾ ಖಂಡು ತಂದೆ) ಅವರು ಮುಖ್ಯಮಂತ್ರಿಯಾಗಿದ್ದಾಗ, ಕಂಪನಿಯು ಪೇಮಾ ಅವರ ಹೆಸರಿನಲ್ಲಿತ್ತು. ಈ ಕಂಪನಿಗೆ ಟೆಂಡರ್ ಪ್ರಕ್ರಿಯೆಗಳಿಲ್ಲದೆ ಗುತ್ತಿಗೆಗಳನ್ನು ಕೊಡಲಾಗಿತ್ತು ಎಂದೂ ದೂರಿದ್ದರು.

2015ರಿಂದ 2025ರ ವರೆಗೆ ಗುತ್ತಿಗೆಗಳ ವಿವರ ಇರುವ ಸಮಗ್ರ ಪ್ರಮಾಣಪತ್ರ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ನ್ಯಾಯಪೀಠವು 2025ರ ಡಿಸೆಂಬರ್ 2ರಂದು ನಿರ್ದೇಶನ ನೀಡಿತ್ತು.

ಸಿಇಸಿ ಪದಚ್ಯುತಿ ಪ್ರತಿಪಕ್ಷಗಳ ನೋಟಿಸ್ ತಿರಸ್ಕಾರ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ಪದಚ್ಯುತಗೊಳಿಸುವ ನಿರ್ಣಯವನ್ನು ಮಂಡಿಸುವ ಕುರಿತು ವಿರೋಧ ಪಕ್ಷಗಳು ಎರಡೂ ಸದನಗಳಲ್ಲಿ ನೀಡಿದ್ದ ನೋಟಿಸ್ ಅನ್ನು ಲೋಕಸಭೆ ಸ್ಪೀಕರ್ ಓಂ ಬಿರ್ಲಾ, ರಾಜ್ಯಸಭೆ ಸಭಾಪತಿ ಸಿ.ಪಿ.ರಾಧಾಕೃಷ್ಣನ್ ಸೋಮವಾರ ತಿರಸ್ಕರಿಸಿದ್ದಾರೆ.

ವಿರೋಧ ಪಕ್ಷಗಳು ನೋಟಿಸ್ ನೀಡಿದ 25 ದಿನಗಳ ಬಳಿಕ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ನೋಟಿಸ್ ತಿರಸ್ಕರಿಸಿದ ಬಗ್ಗೆ ಸ್ಪೀಕರ್, ಸಭಾಪತಿ ಅವರು ಪ್ರತ್ಯೇಕ ಆದೇಶ ನೀಡಿದ್ದಾರೆ. '1968ರ ನ್ಯಾಯಾಧೀಶರು (ವಿಚಾರಣೆ) ಕಾಯ್ದೆಯ ಸೆಕ್ಷನ್ 3 ನೀಡಿದ ಅಧಿಕಾರವನ್ನು ಬಳಸಿ, ನೋಟಿಸ್ ಅನ್ನು ತಿರಸ್ಕರಿಸಲಾಗಿದೆ' ಎಂದು ಸ್ಪೀಕರ್, ಸಭಾಪತಿ ನೀಡಿದ ಆದೇಶದಲ್ಲಿ ಹೇಳಲಾಗಿದೆ.

ಸೇವಾ ಕಾಯಂ: ಭೂಮಾಪಕರ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಪರವಾನಗಿ ಇರುವ ಭೂಮಾಪಕರ ಸೇವೆಯನ್ನು 'ಒಂದು ಬಾರಿ ವಿಶೇಷ ನೇಮಕಾತಿ' ಅಡಿ ಸೇವೆಯಲ್ಲಿ ಕಾಯಂಗೊಳಿಸಲು ಆಗ್ರಹಪಡಿಸಿ ಅಖಿಲ ಕರ್ನಾಟಕ ಸರ್ಕಾರಿ ಪರವಾನಗಿ ಭೂಮಾಪಕರ ಸಂಘದ ಸದಸ್ಯರು ಸೋಮವಾರ ಇಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು.

ಬೆಳಗಾವಿ, ಕಲಬುರಗಿ ವಿಭಾಗಗಳ ಅಪಾರ ಸಂಖ್ಯೆಯಲ್ಲಿ ಸೇರಿದ್ದ ಭೂಮಾಪಕರು, ರಾಣಿ ಚನ್ನಮ್ಮ ವೃತ್ತದಲ್ಲಿ ಮಾನವಸರಪಳಿ ನಿರ್ಮಿಸಿದರು. 'ನೇಮಕಾತಿಗೆ ಸರ್ಕಾರ ನಿರ್ಲಕ್ಷ್ಯ ತೋರುತ್ತಿದೆ' ಎಂದು ಆರೋಪಿಸಿದರು.

'ಕಾಯಂ ಭೂಮಾಪಕರಷ್ಟೇ ಕೆಲಸವನ್ನು ಪರವಾನಗಿ ಭೂಮಾಪಕರೂ ಮಾಡುತ್ತಾರೆ. ನಮಗೆ ಮಾಸಿಕ ₹12 ಸಾವಿರ ಸಂಭಾವನೆ ನೀಡಿ ಅನ್ಯಾಯ ಮಾಡಲಾಗುತ್ತಿದೆ. ಜೀತದಾಳುಗಳಂತೆ ನಡೆಸಿಕೊಳ್ಳಲಾಗುತ್ತಿದೆ. ನಮ್ಮ ಬೇಡಿಕೆಗಳಿಗೆ ಸ್ಪಂದಿಸುತ್ತಿಲ್ಲ' ಎಂದು ಪ್ರತಿಭಟನಾಕಾರರು ಕಿಡಿಕಾರಿದರು.



ಸೇವೆ ಕಾಯಂಗೆ ಆಗ್ರಹಿಸಿ ಅಖಿಲ ಕರ್ನಾಟಕ ಸರ್ಕಾರಿ ಪರವಾನಗಿ ಭೂಮಾಪಕರ ಸಂಘದ ಸದಸ್ಯರು ಬೆಳಗಾವಿಯಲ್ಲಿ ಸೋಮವಾರ ಬೃಹತ್ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಮುಖಂಡರಾದ ರವೀಂದ್ರ ಕೋರೆ, ಪ್ರವೀಣ ಹೆಗಡೆ, ಶಿಲ್ಪಾ ಟಿ.ಎಸ್., ಕೆ.ಪಿ. ಭಾರ್ಗವ, ಮಂಜುನಾಥ ಅಗಸಿಮನಿ, ಶಿವಾನಂದ ಮುಗಳಿಹಾಳ ನೇತೃತ್ವ ವಹಿಸಿದ್ದರು. ರೈತ ಮುಖಂಡರಾದ ಚೂನಪ್ಪ ಪೂಜೇರಿ, ಶಶಿಕಾಂತ ಗುರೂಜಿ ಬೆಂಬಲ ಸೂಚಿಸಿದರು.

ಪ್ರತಿಭಟನೆ ಕಾರಣ ರಾಣಿ ಚನ್ನಮ್ಮ ವೃತ್ತವನ್ನು ಸಂಪರ್ಕಿಸುವ ನಾಲ್ಕೂ ದಿಕ್ಕಿನ ರಸ್ತೆಗಳಲ್ಲಿ ಎರಡು ತಾಸು ಸಂಚಾರ ದಟ್ಟಣೆ ಉಂಟಾಯಿತು.

ಎನ್‌ಸಿಇಆರ್‌ಟಿ ವಿವಾದಿತ ಪಠ್ಯ ತಜ್ಞರಿಂದ ಸುಪ್ರೀಂ ಕೋರ್ಟ್‌ಗೆ ಮೊರೆ

ನವದೆಹಲಿ (ಪಿಟಿಐ): ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಪರಿಷತ್ತು (ಎನ್‌ಸಿಇಆರ್‌ಟಿ) ಪ್ರಕಟಿಸಿದ್ದ ಪಠ್ಯಪುಸ್ತಕದಲ್ಲಿನ ನ್ಯಾಯಾಂಗದ ಅಧ್ಯಾಯಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನಿಂದ ನಿರ್ಬಂಧನೆಗೆ ಒಳಗಾದ ಮೂವರು ತಜ್ಞರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ.

ಸುಪ್ರೀಂ ಕೋರ್ಟ್ ತಮ್ಮ ವಿರುದ್ಧ ಮಾಡಿರುವ ಅವಲೋಕನಗಳನ್ನು ಮರುಪರಿಶೀಲಿಸುವಂತೆ ಕೋರಿ ತಜ್ಞರಾದ ಪ್ರೊ. ಮೈಕೆಲ್ ಡ್ಯಾನಿನೊ, ಸುಪರ್ಣ ದಿವಾಕರ್ ಮತ್ತು ಅಲೋಕ್ ಪ್ರಸನ್ನ ಕುಮಾರ್ ಅವರು ಅರ್ಜಿ ಸಲ್ಲಿಸಿದ್ದಾರೆ.

ಎನ್‌ಸಿಇಆರ್‌ಟಿ ಪ್ರಕಟಿಸಿದ್ದ 8ನೇ ತರಗತಿಯ ಪಠ್ಯಪುಸ್ತಕದಲ್ಲಿನ ನ್ಯಾಯಾಂಗ ವಿಷಯಕ್ಕೆ ಸಂಬಂಧಿಸಿದಂತೆ ಸ್ವಯಂ ಪ್ರೇರಿತವಾಗಿ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ಅದರಲ್ಲಿನ ವಿಷಯಗಳು ನ್ಯಾಯಾಂಗದ ಘನತೆಯನ್ನು ಕುಗ್ಗಿಸುವಂತಿವೆ ಎಂಬುದಾಗಿ ಹೇಳಿತ್ತು. ಈ ಸಂಬಂಧ ಕ್ಷಮೆ ಕೋರಿದ್ದ ಎನ್‌ಸಿಇಆರ್‌ಟಿ ಈ ಪುಸ್ತಕಗಳನ್ನು ಮಾರುಕಟ್ಟೆಯಿಂದ ಹಿಂತೆಗೆದುಕೊಂಡಿತ್ತು.

ಈ ಪಠ್ಯ ರಚನೆಯಲ್ಲಿ ಮತ್ತು ಅದನ್ನು ಅಂತಿಮಗೊಳಿಸುವಲ್ಲಿ ತೊಡಗಿದ್ದ ತಜ್ಞರನ್ನು ಭಾರತದಲ್ಲಿ ಯಾವುದೇ ಪಠ್ಯ ಪುಸ್ತಕ ರಚನಾ ಕಾರ್ಯಗಳಿಗೆ ನಿಯೋಜಿಸಬಾರದು ಎಂದು ಸುಪ್ರೀಂ ಕೋರ್ಟ್ ನಿರ್ದೇಶಿಸಿತ್ತು.

ಈ ಮೂವರು ತಜ್ಞರು ಆದೇಶ ಮಾರ್ಪಡಿಸುವಂತೆ ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬಹುದು ಎಂದು ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿ ಜಾಯ್‌ಮಾಲ್ಯಾ ಬಾಗ್ಚಿ, ನ್ಯಾಯಮೂರ್ತಿ ವಿಪುಲ್ ಎಂ. ಪಂಚೋಲಿ ಅವರ ನ್ಯಾಯಪೀಠ ತಿಳಿಸಿತ್ತು.

ಅದರಂತೆ ಈ ತಜ್ಞರು ಸಿಜೆಐ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ಜಾಯ್‌ಮಾಲ್ಯಾ ಬಾಗ್ಚಿ ಅವರ ಪೀಠಕ್ಕೆ ತಮ್ಮ ನಿಲುವನ್ನು ವಿವರಿಸಲು ಅರ್ಜಿಗಳನ್ನು ಸಲ್ಲಿಸಿದರು. ಆದರೆ ಈ ಅರ್ಜಿಗಳು ಸೋಮವಾರ ಪಟ್ಟಿಯಾಗಲಿಲ್ಲ. ಅರ್ಜಿಯಲ್ಲಿರುವ ದೋಷಗಳನ್ನು ಸರಿಪಡಿಸಿದ ಬಳಿಕ ಅವುಗಳನ್ನು ಪಟ್ಟಿ ಮಾಡಲು ಪೀಠ ಆದೇಶಿಸಿತು.

ಮೂವರು ತಜ್ಞರ ಪರವಾಗಿ ಹಿರಿಯ ವಕೀಲರಾದ ಅರವಿಂದ್ ದಾತಾರ್, ಗೋಪಾಲ್ ಶಂಕರನಾರಾಯಣನ್ ಮತ್ತು ಜೆ. ಸಾಯಿ ದೀಪಕ್ ನ್ಯಾಯಾಲಯಕ್ಕೆ ಹಾಜರಾದರು.

'ಪಠ್ಯ ಪುಸ್ತಕ ರಚನೆ ವೇಳೆ ಅನುಸರಿಸುವ ಪ್ರಕ್ರಿಯೆಯನ್ನು ತಿಳಿಸಲು ಬಯಸಿದ್ದೇವೆ. ಇದು ಸಾಮೂಹಿಕ ಪ್ರಕ್ರಿಯೆಯಾಗಿದ್ದು, ಒಬ್ಬ ವ್ಯಕ್ತಿಗೆ ಸೀಮಿತವಲ್ಲ. ಅಷ್ಟಕ್ಕೂ ಈ ಲೇಖಕರು ರಾತ್ರೋರಾತ್ರಿ ಪಲಾಯನ ಮಾಡುವವರಲ್ಲ, ಬದಲಿಗೆ ಗೌರವ ಹೊಂದಿರುವವರು' ಎಂದು ವಕೀಲರು ಪೀಠಕ್ಕೆ ತಿಳಿಸಿದರು.

ಕೆಪಿಎಸ್‌ಸಿ ಅಕ್ರಮ: ನಾಳೆಯಿಂದ ಧರಣಿ

ಪ್ರಜಾವಾಣಿ ವಾರ್ತೆ

ಧಾರವಾಡ: 'ಕರ್ನಾಟಕ ಲೋಕಸೇವಾ ಆಯೋಗದಲ್ಲಿ (ಕೆಪಿಎಸ್‌ಸಿ) ನಡೆದಿರುವ ಅಕ್ರಮಗಳ ತನಿಖೆಯನ್ನು ಸಿಬಿಐಗೆ ವಹಿಸಬೇಕು ಎಂದು ಆಗ್ರಹಿಸಿ ಏಪ್ರಿಲ್ 8ರಿಂದ ಧಾರವಾಡ ಜಿಲ್ಲಾಧಿಕಾರಿ ಕಚೇರಿ ಎದುರು ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸಲಾಗುವುದು, ಇದಕ್ಕೆ ಪೊಲೀಸ್ ಇಲಾಖೆಯ ಅನುಮತಿ ಕೋರಲಾಗಿದೆ' ಎಂದು ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಸಂಘಟನೆ (ಅಕ್ಸಾ) ಅಧ್ಯಕ್ಷ ಕಾಂತಕುಮಾರ ತಿಳಿಸಿದರು.



ಕಾಂತಕುಮಾರ್

'ಕೆಪಿಎಸ್‌ಸಿಯಲ್ಲಿ ಭ್ರಷ್ಟಾಚಾರ ವ್ಯಾಪಕವಾಗಿದೆ. ಸಿಬಿಐನಿಂದ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಬೇಕು' ಎಂದು ಪತ್ರಿಕಾಗೋಷ್ಠಿಯಲ್ಲಿ ಒತ್ತಾಯಿಸಿದರು.



'ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಹಲವು ಸುಧಾರಣೆ ಕ್ರಮಗಳನ್ನು ಅಳವಡಿಸಿಕೊಂಡಿದೆ. ಕೆಇಎ ಮೂಲಕವೇ ನೇಮಕಾತಿ ಪ್ರಕ್ರಿಯೆ ನಡೆಸಬೇಕು. ಕೆಪಿಎಸ್‌ಸಿಯಿಂದ ನಡೆಸಬಾರದು. ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಪ್ರಸನ್ನ ಅವರನ್ನು ವರ್ಗಾವಣೆ ಮಾಡಬಾರದು' ಎಂದೂ ಒತ್ತಾಯಿಸಿದರು.

'ಸರ್ಕಾರ ಈಗಾಗಲೇ ಹೇಳಿರುವಂತೆ 56 ಸಾವಿರ ಹುದ್ದೆಗಳ ಭರ್ತಿಗೆ ನೇಮಕಾತಿ ಪ್ರಕ್ರಿಯೆಯನ್ನು ಶೀಘ್ರ ಆರಂಭಿಸಬೇಕು. ಒಳಮೀಸಲಾತಿ ವಿಷಯ ಮುಂದಿಟ್ಟು ವಿಳಂಬ ಮಾಡಬಾರದು. ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 2.84 ಲಕ್ಷ ಹುದ್ದೆಗಳ ಭರ್ತಿಗೆ ಹಂತಹಂತವಾಗಿ ನೇಮಕಾತಿ ಪ್ರಕ್ರಿಯೆ ನಡೆಸಬೇಕು' ಎಂದು ಕೋರಿದರು.

ಜಗ್ಗಿ ಹತ್ಯೆ ಪ್ರಕರಣ: ಅಮಿತ್ ಜೋಗಿಗೆ ಜೀವಾವಧಿ ಶಿಕ್ಷೆ

ರಾಯಪುರ (ಪಿಟಿಐ): 2003ರಲ್ಲಿ ನಡೆದಿದ್ದ ಎನ್‌ಸಿಪಿ ನಾಯಕ ರಾಮಾವತಾರ ಜಗ್ಗಿ ಅವರ ಹತ್ಯೆ ಪ್ರಕರಣದಲ್ಲಿ, ಮಾಜಿ ಮುಖ್ಯಮಂತ್ರಿ ಅಜಿತ್ ಜೋಗಿ ಅವರ ಮಗ ಅಮಿತ್ ಜೋಗಿಗೆ ಛತ್ತೀಸಗಢ ಹೈಕೋರ್ಟ್ ಜೀವಾವಧಿ ಶಿಕ್ಷೆ ವಿಧಿಸಿದೆ.



ಅಮಿತ್ ಜೋಗಿ

'ಈ ಪಿತೂರಿಯ ಹಿಂದಿನ ಸೂತ್ರಧಾರ ಅಮಿತ್ ಜೋಗಿ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಮುಖ್ಯ ನ್ಯಾಯಮೂರ್ತಿ ರಮೇಶ್ ಸಿನ್ಹಾ ಮತ್ತು ನ್ಯಾಯಮೂರ್ತಿ ಅರವಿಂದ್ ಕುಮಾರ್ ವರ್ಮಾ ಅವರನ್ನೊಳಗೊಂಡ ವಿಭಾಗೀಯ ಪೀಠವು ಏಪ್ರಿಲ್ 2ರಂದು ಈ ಆದೇಶ ನೀಡಿತ್ತು. ಅದರ ಪ್ರತಿ ಸೋಮವಾರ ಲಭ್ಯವಾಗಿದೆ.

ಅಮಿತ್ ಜೋಗಿಯನ್ನು ಖುಲಾಸೆಗೊಳಿಸಿ ವಿಚಾರಣಾ ನ್ಯಾಯಾಲಯ ನೀಡಿದ್ದ 2007ರ ಆದೇಶವನ್ನು ರದ್ದುಗೊಳಿಸಿದ್ದ ವಿಭಾಗೀಯ ಪೀಠ, 'ಇದು ಸ್ಪಷ್ಟವಾಗಿ ಕಾನೂನುಬಾಹಿರ, ವಿಕೃತ ಮತ್ತು ದಾಖಲೆಯಲ್ಲಿರುವ ಸಾಕ್ಷ್ಯಗಳಿಗೆ ವಿರುದ್ಧವಾಗಿದೆ' ಎಂದು ಹೇಳಿದೆ. ಅಪರಾಧಿಗೆ ₹1 ಸಾವಿರ ದಂಡ ವಿಧಿಸಿದೆ. ದಂಡ ಪಾವತಿಸಲು ವಿಫಲರಾದರೆ ಹೆಚ್ಚುವರಿಯಾಗಿ 6 ತಿಂಗಳು ಜೈಲು ಶಿಕ್ಷೆ ಅನುಭವಿಸಬೇಕು ಎಂದು ಹೇಳಿದೆ.

2003ರ ಜೂನ್ 4ರಂದು ರಾಯಪುರದಲ್ಲಿ ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಎನ್‌ಸಿಪಿ ನಾಯಕ ಜಗ್ಗಿ ಅವರ ಮೇಲೆ ಗುಂಡು ಹಾರಿಸಲಾಗಿತ್ತು. ಗಾಯಗೊಂಡಿದ್ದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಮರುದಿನ ಮೃತಪಟ್ಟಿದ್ದರು. ಆ ಸಮಯದಲ್ಲಿ ಅಜಿತ್ ಜೋಗಿ ಮುಖ್ಯಮಂತ್ರಿಯಾಗಿದ್ದರು.

ಕೇಂದ್ರ ಪೆಟ್ರೋಲಿಯಂ ಸಚಿವರಿಗೆ ಸಚಿವ ಮುನಿಯಪ್ಪ ಪತ್ರ

ಪೆಟ್ರೋಲ್, ಅನಿಲ ಪೂರೈಕೆ ಹೆಚ್ಚಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಪೆಟ್ರೋಲ್ ಮತ್ತು ಅನಿಲ ಪೂರೈಕೆಯ ಸಮಸ್ಯೆ ಗಂಭೀರ ಸ್ವರೂಪ ಪಡೆದಿದೆ. ತಕ್ಷಣವೇ ಪೂರೈಕೆ ಹೆಚ್ಚಿಸಲು ಹಾಗೂ ರಾಜ್ಯಗಳ ನಡುವೆ ಸಮಾನ ಹಂಚಿಕೆ ಖಚಿತಪಡಿಸುವಂತೆ ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಅವರು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಈ ಕುರಿತು ಕೇಂದ್ರ ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್ ಪುರಿ ಅವರಿಗೆ ಪತ್ರ ಬರೆದಿರುವ ಅವರು, ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಕರ್ನಾಟಕಕ್ಕೆ ಆದ್ಯತೆ ನೀಡಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದಾರೆ.

ಕೇಂದ್ರ ಸರ್ಕಾರದೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಸಮಸ್ಯೆ ಪರಿಹಾರಕ್ಕೆ ಅಗತ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಸಚಿವರು ತಿಳಿಸಿದ್ದಾರೆ.

ಆಟೊ ಗ್ಯಾಸ್: ಏ.10ಕ್ಕೆ ಸಭೆ

ಏಪ್ರಿಲ್ 10ರಂದು ತೈಲ ಕಂಪನಿಗಳ ಅಧಿಕಾರಿಗಳು ಮತ್ತು ಸಂಬಂಧಪಟ್ಟವರ ಜೊತೆ ಸಭೆ ನಡೆಸಿ ಆಟೊ ಎಲ್‌ಪಿಜಿ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಲಾಗುವುದು ಎಂದು ಮುನಿಯಪ್ಪ ತಿಳಿಸಿದರು.



ಕೆ.ಎಚ್. ಮುನಿಯಪ್ಪ

ತಮ್ಮನ್ನು ಭೇಟಿ ಮಾಡಿದ ಪೀಸ್ ಆಟೊ ಆ್ಯಂಡ್ ಟ್ಯಾಕ್ಸಿ ಡ್ರೈವರ್ಸ್ ಅಸೋಸಿಯೇಷನ್ ನಿಯೋಗದ ಜೊತೆಗೆ ಚರ್ಚೆ ನಡೆಸಿದ ಬಳಿಕ ಮಾತನಾಡಿದ ಅವರು, ಗೃಹ ಬಳಕೆ ಸಿಲಿಂಡರ್‌ಗಳನ್ನು ಸಮರ್ಪಕವಾಗಿ ಪೂರೈಸಲಾಗುತ್ತಿದೆ. ಆಟೊ ಗ್ಯಾಸ್ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಕೆಲ ಎಲ್‌ಪಿಜಿ ಸ್ಟೇಷನ್‌ಗಳಲ್ಲಿ ಎರಡು ಪಟ್ಟು ವಸೂಲು ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದೆ. ಸಂಬಂಧಪಟ್ಟ ಸ್ಟೇಷನ್ ಮಾಲೀಕರನ್ನು ಕರೆದು ಚರ್ಚೆ ನಡೆಸಲಾಗುವುದು ಎಂದು ಭರವಸೆ ನೀಡಿದರು.

ಯುದ್ಧದ ಪರಿಣಾಮ ಎಲ್‌ಪಿಜಿ ಗ್ಯಾಸ್ ಹಾಗೂ ಇಂಧನ ಕೊರತೆ ಉಂಟಾಗಿದೆ. ಇದರಿಂದ ಜನರ ದೈನಂದಿನ ಬದುಕು ಸಂಕಷ್ಟಕ್ಕೆ ಸಿಲುಕಿದೆ. ಸಿಎನ್‌ಜಿ ಕೊರತೆಯಿಂದ ಆಟೊ ಚಾಲಕರು, ವಾಣಿಜ್ಯ ಗ್ಯಾಸ್ ಕೊರತೆಯಿಂದ ಹೋಟೆಲ್ ಮತ್ತು ಆಹಾರ ಉದ್ಯಮ ತೊಂದರೆ ಅನುಭವಿಸುತ್ತಿವೆ.

ಕೇಂದ್ರ ಸರ್ಕಾರವು ಸಮಯೋಚಿತ ಕ್ರಮಗಳನ್ನು ಕೈಗೊಳ್ಳುವಲ್ಲಿ ವಿಫಲವಾಗಿದೆ. ವಿದೇಶಾಂಗ ನೀತಿ ಮತ್ತು ಇಂಧನ ನಿರ್ವಹಣೆಯ ನಡುವೆ ಸಮನ್ವಯದ ಕೊರತೆ ಕಾಣಿಸಿಕೊಂಡಿದ್ದು, ಅದರ ಹೊರೆ ಜನರ ಮೇಲೆ ಬಿದ್ದಿದೆ. ಕೆಲವು ರಾಜ್ಯಗಳಿಗೆ ಹೆಚ್ಚು ಆದ್ಯತೆ ನೀಡಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

'ಹಳ್ಳಿಗೆ ನಡೆಯಿರಿ': ಬಿಜೆಪಿ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಸಂಸ್ಥಾಪನಾ ದಿನದ ಅಂಗವಾಗಿ ಇದೇ 7 ರಿಂದ 12 ರವರೆಗೆ 'ಹಳ್ಳಿಗೆ ನಡೆಯಿರಿ' ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು.

ಪಕ್ಷದ ಕಚೇರಿಯಲ್ಲಿ ಸೋಮವಾರ ಆಯೋಜಿಸಿದ್ದ, ಬಿಜೆಪಿ ಸಂಸ್ಥಾಪನಾ ದಿನದ ಕಾರ್ಯಕ್ರಮದಲ್ಲಿ ಭಾಗವಹಿಸಿ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

'ಹಳ್ಳಿಗೆ ನಡೆಯಿರಿ' ಕಾರ್ಯಕ್ರಮವನ್ನು ದೊಡ್ಡ ರೀತಿಯಲ್ಲಿ ಆಯೋಜಿಸಲಾಗಿದೆ. ಸಾರ್ವಜನಿಕ ಸ್ಥಳದಲ್ಲಿ ಸ್ವಚ್ಛತೆ ಹಮ್ಮಿಕೊಳ್ಳಲಾಗಿದೆ. ಪಕ್ಷಕ್ಕಾಗಿ ದುಡಿದವರಿಗೆ ಗೌರವ ಸಲ್ಲಿಸುವ ಕಾರ್ಯಕ್ರಮ ನಡೆಸಲಾಗುವುದು. ಇದೇ ವೇಳೆ ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ ಫಲಾನುಭವಿಗಳ ಸಂಪರ್ಕ ಅಭಿಯಾನವನ್ನೂ ಮಾಡಲಾಗುವುದು ಎಂದು ಹೇಳಿದರು.



ಬಿಜೆಪಿ ಸಂಸ್ಥಾಪನಾ ದಿನದ ಕಾರ್ಯಕ್ರಮದಲ್ಲಿ ವಿರೋಧ ಪಕ್ಷದ ನಾಯಕ ಆರ್‌.ಅಶೋಕ, ಸಂಸದ ಪಿ.ಸಿ.ಮೋಹನ್‌, ಶಾಸಕ ಸಿ.ಎನ್‌.ಅಶ್ವತ್ಥನಾರಾಯಣ ಪಾಲ್ಗೊಂಡಿದ್ದರು

'1975 ರಲ್ಲಿ ಇಂದಿರಾಗಾಂಧಿಯವರ ದುರಾಡಳಿತ ಮತ್ತು ಸರ್ವಾಧಿಕಾರದಿಂದ ತುರ್ತುಪರಿಸ್ಥಿತಿ ಬಂತು. ಅದನ್ನು ವಿರೋಧಿಸಿ ಜನಸಂಘವು ಜನತಾ ಪಕ್ಷದಲ್ಲಿ ವಿಲೀನವಾಯಿತು. 1980 ರಲ್ಲಿ ಜನಸಂಘ ಜನತಾಪಕ್ಷದಿಂದ ಹೊರಬಂದು ಬಿಜೆಪಿಯನ್ನು ಸ್ಥಾಪಿಸಲಾಯಿತು. ಅಟಲ್ ಬಿಹಾರಿ ವಾಜಪೇಯಿ, ಎಲ್.ಕೆ.ಅಡ್ವಾಣಿ, ಮುರಳಿ ಮನೋಹರ ಜೋಷಿ ಅವರು ಪಕ್ಷದ ನೇತೃತ್ವ ವಹಿಸಿದ್ದರು. ಈಗ ಪಕ್ಷ ಆಲದ ಮರದ ರೀತಿ ಇಡೀ ದೇಶದಲ್ಲಿ ವ್ಯಾಪಿಸಿದೆ. ಅತಿದೊಡ್ಡ ಪಕ್ಷದ ಸದಸ್ಯ ಎಂದು ಹೇಳಿಕೊಳ್ಳಲು ಹೆಮ್ಮೆ ಇದೆ' ಎಂದರು.

ಪೊಲೀಸ್ ಅಧಿಕಾರಿ ಅಮಾನತು

ಬಿಜ್ನೋರ್ (ಉತ್ತರ ಪ್ರದೇಶ) (ಪಿಟಿಐ): ವಿಡಿಯೊವೊಂದರಲ್ಲಿ ಎಕೆ–47 ರೈಫಲ್ ಮತ್ತು ಹ್ಯಾಂಡ್ ಗ್ರೆನೇಡ್‌ಗಳನ್ನು ಪ್ರದರ್ಶಿಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಯನ್ನು ದೋಷಮುಕ್ತಗೊಳಿಸಿದ್ದ ಪೊಲೀಸ್ ಅಧಿಕಾರಿ ಸತ್ಯೇಂದ್ರ ಸಿಂಗ್ ಅವರನ್ನು ಅಮಾನತುಗೊಳಿಸಲಾಗಿದೆ.

ಜೊತೆಗೆ ಸರ್ಕಲ್ ಆಫೀಸರ್ ನಿತೀಶ್ ಪ್ರತಾಪ್ ಸಿಂಗ್ ಅವರನ್ನು ಹುದ್ದೆಯಿಂದ ವಜಾಗೊಳಿಸಲಾಗಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಅಭಿಷೇಕ್ ಝಾ ಸೋಮವಾರ ತಿಳಿಸಿದರು.

ವಿಡಿಯೊದಲ್ಲಿ ಕಂಡುಬಂದ ಆಯುಧಗಳನ್ನು ಆಟಿಕೆ ಎಂದು ವರದಿ ನೀಡಿ, ಆರೋಪಿ ಅಕಿಬ್ ಅವರನ್ನು ಸತ್ಯೇಂದ್ರ ಸಿಂಗ್ ಆರೋಪ ಮುಕ್ತಗೊಳಿಸಿದ್ದರು. ಜಿಲ್ಲೆಯಲ್ಲಿ ಕಳೆದ ನವೆಂಬರ್‌ನಲ್ಲಿ ಮೀರತ್‌ನ ಅಕಿಬ್ ಎಂಬ ವ್ಯಕ್ತಿ ಎಕೆ–47 ರೈಫಲ್, ಹ್ಯಾಂಡ್ ಗ್ರೆನೇಡ್‌ಗಳನ್ನು ಪ್ರದರ್ಶಿಸಿ ಮಾಡಿದ್ದ ವಿಡಿಯೊ ಹೆಚ್ಚು ವೈರಲ್ ಆಗಿತ್ತು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಲೋಕದಲ್ಲಿ ಯಾವ ಮಾನವನೂ ಪೂರ್ಣ ಸುಖಿಯೂ ಅಲ್ಲ; ಪೂರ್ಣ ದುಃಖಿಯೂ ಅಲ್ಲ.

–ಗೌತಮ ಬುದ್ಧ

ಸಂಪಾದಕೀಯ

‘ಉದ್ಯೋಗ ಖಾತರಿ’ ತ್ರಿಶಂಕು ಸ್ಥಿತಿ ಗ್ರಾಮೀಣರ ಸಂಕಷ್ಟಕ್ಕೆ ಕೊನೆಯೆಲ್ಲಿ?

ಉದ್ಯೋಗ ಭದ್ರತೆ ಮತ್ತು ಸಾಮಾಜಿಕ ನ್ಯಾಯದ ಸಂಕೇತವಾಗಿದ್ದ ‘ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ’ಯನ್ನು (ಮನರೇಗಾ) ಅಪ್ರಸ್ತುತಗೊಳಿಸಿರುವ ಹಾಗೂ ‘ವಿಬಿ-ಜಿ ರಾಮ್ ಜಿ’ ಯೋಜನೆ ಅನುಷ್ಠಾನಗೊಳಿಸದೆ ಇರುವುದರ ಪರಿಣಾಮ ಕಿತ್ತೂರು ಮತ್ತು ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಸ್ಪಷ್ಟವಾಗಿ ಕಾಣಿಸುತ್ತಿದೆ. ಉದ್ಯೋಗ ವಂಚಿತರ ಸಂಕಷ್ಟಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡೂ ನೇರ ಕಾರಣವಾಗಿವೆ. ಜನಸಾಮಾನ್ಯರ ಬದುಕಿನ ಬಗ್ಗೆ ಸರ್ಕಾರಗಳ ಉದಾಸೀನ, ಮುನ್ನೆಚ್ಚರಿಕೆಯ ಕೊರತೆ ಹಾಗೂ ಆಡಳಿತದ ವೈಫಲ್ಯಗಳ ಕಾರಣದಿಂದಾಗಿ ಉದ್ಯೋಗ ಖಾತರಿ ಕಾರ್ಯಕ್ರಮಗಳು ನನೆಗುದಿಗೆ ಬಿದ್ದಿವೆ. ಇದರಿಂದಾಗಿ, ಬೆಳಗಾವಿ, ಧಾರವಾಡ, ಬಳ್ಳಾರಿ, ವಿಜಯಪುರ, ವಿಜಯನಗರ, ಬಾಗಲಕೋಟೆ, ಗದಗ, ಕಲಬುರಗಿ, ಬೀದರ್, ಕೊಪ್ಪಳ, ಯಾದಗಿರಿ ಜಿಲ್ಲೆಗಳ ಬಡಜನರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಉದ್ಯೋಗ ಖಾತರಿ ಯೋಜನೆ ಅಡಿಯಲ್ಲಿ ಕೆಲಸಕ್ಕೆ ಬೇಡಿಕೆ ಇದ್ದರೂ, ಅನುದಾನ ಮತ್ತು ಅನುಮೋದನೆ ಇಲ್ಲದ ಕಾರಣದಿಂದಾಗಿ ಕೆಲಸ ಸೃಷ್ಟಿಯಾಗುತ್ತಿಲ್ಲ. ಕೂಲಿ ಕಾರ್ಮಿಕರು ಕೆಲಸ ಹುಡುಕಿಕೊಂಡು ವಲಸೆ ಹೋಗಲು ಶುರು ಮಾಡಿದ್ದಾರೆ. ಉದ್ಯೋಗ ಖಾತರಿ ಯೋಜನೆಗಳನ್ನು ಗ್ರಾಮೀಣ ಭಾರತದ ಆರ್ಥಿಕ ಬೆನ್ನೆಲುಬಿನ ರೂಪದಲ್ಲಿ ಗುರ್ತಿಸಲಾಗುತ್ತದೆ. ಈ ಯೋಜನೆಗಳನ್ನು ದುರ್ಬಲಗೊಳಿಸುವ ಅಥವಾ ನಿರ್ಲಕ್ಷಿಸುವ ನೀತಿ ನಿರ್ಧಾರಗಳು, ಸಮಾಜದ ಅತ್ಯಂತ ದುರ್ಬಲ ವರ್ಗಗಳ ಬದುಕಿನ ಮೇಲೆ ನೇರವಾಗಿ ಹೊಡೆತ ನೀಡುತ್ತವೆ; ಆರ್ಥಿಕ ಅಸಮಾನತೆಯನ್ನು ಹೆಚ್ಚಿಸುವುದರ ಜೊತೆಗೆ, ಮಹಿಳೆಯರು ಮತ್ತು ಮಕ್ಕಳನ್ನು ಹೆಚ್ಚಿನ ಅಸಹಾಯಕತೆಗೆ ತಳ್ಳುತ್ತವೆ.



‘ಮನರೇಗಾ’ ಅಪ್ರಸ್ತುತಗೊಳ್ಳುತ್ತಿದೆ; ವಿಬಿ–ಜಿ ರಾಮ್ ಜಿ ಅನುಷ್ಠಾನಗೊಂಡಿಲ್ಲ. ಯೋಜನೆಗಳು ನನೆಗುದಿಗೆ ಬಿದ್ದಿರುವುದರ ಪರಿಣಾಮ ಬಡಜನರ ಮೇಲಾಗಿದೆ.

ಗ್ರಾಮೀಣ ಭಾಗದ ಬಡಜನರಿಗೆ ವರ್ಷದಲ್ಲಿ 125 ದಿನಗಳ ಕೆಲಸವನ್ನು ಖಾತರಿಪಡಿಸುವ ‘ಮನರೇಗಾ’ ಕಲ್ಯಾಣ ಯೋಜನೆ, ಉದ್ಯೋಗ ಭದ್ರತೆ ಮತ್ತು ಸಾಮಾಜಿಕ ನ್ಯಾಯದ ಸಂಕೇತವೂ ಆಗಿತ್ತು. ಆ ಯೋಜನೆಯನ್ನು ಅಪ್ರಸ್ತುತಗೊಳಿಸಿದ ಕೇಂದ್ರ ಸರ್ಕಾರ, ‘ವಿಕಸಿತ ಭಾರತ್ ಗ್ಯಾರಂಟಿ ಫಾರ್ ರೋಜ್‌ಗಾರ್ ಮತ್ತು ಆಜೀವಿಕ ಮಿಷನ್’ (ವಿಬಿ–ಜಿ ರಾಮ್ ಜಿ) ಹೆಸರಿನ ಕಾರ್ಯಕ್ರಮವನ್ನು 2025ರ ಡಿಸೆಂಬರ್‌ನಲ್ಲಿ ಜಾರಿಗೊಳಿಸಿತ್ತು. ಆದರೆ, ಇಲ್ಲಿಯವರೆಗೆ ಹೊಸ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ನಿಯಮ ಮತ್ತು ಮಾರ್ಗಸೂಚಿ ರಚನೆ ಮಾಡದೆ ಇರುವುದರಿಂದ ನೂತನ ಯೋಜನೆ ಅನುಷ್ಠಾನವಾಗಿಲ್ಲ. ಮನರೇಗಾ ಅಡಿ ಹೊಸ ಕಾಮಗಾರಿ ತೆಗೆದುಕೊಳ್ಳುವುದನ್ನು 2026ರ ಜನವರಿಯಿಂದ ಸ್ಥಗಿತಗೊಳಿಸಲಾಗಿದೆ. ಪ್ರಸ್ತುತ, ಬಾಕಿ ಇರುವ ಕಾಮಗಾರಿಗಳನ್ನಷ್ಟೇ ಮುಂದುವರಿಸಲಾಗುತ್ತಿದೆ. ಜನರಿಂದ ಬೇಡಿಕೆ ಇದ್ದರೂ ಕೆಲಸ ಒದಗಿಸಲು ಸಾಧ್ಯವಾಗದ ಪರಿಸ್ಥಿತಿಯಿದೆ. ಗ್ರಾಮೀಣ ಭಾಗಗಳಲ್ಲಿ ಉದ್ಯೋಗಾವಕಾಶಗಳು ಕ್ಷೀಣಿಸುವುದನ್ನು ಆರ್ಥಿಕ ಸಮಸ್ಯೆಯ ರೂಪದಲ್ಲಷ್ಟೇ ನೋಡುವುದು ಸಾಧ್ಯವಿಲ್ಲ. ಗ್ರಾಮೀಣ ಕುಟುಂಬಗಳು ವಲಸೆ ಹೋಗಬೇಕಾದ ಸ್ಥಿತಿ ಸೃಷ್ಟಿಯಾಗುವುದು ಸಾಮಾಜಿಕ ಬಿಕ್ಕಟ್ಟುಗಳನ್ನೂ ಸೃಷ್ಟಿಸಲಿದೆ. ವಲಸೆಯಿಂದ ಕುಟುಂಬಗಳು ವಿಘಟಿತವಾಗುತ್ತವೆ. ಮಕ್ಕಳು ಶಾಲೆಯಿಂದ ದೂರವುಳಿಯುವ ಸ್ಥಿತಿ ಸೃಷ್ಟಿಯಾಗಬಹುದು. ಊರಿನಿಂದ ಊರಿಗೆ ಅಲೆದಾಡುವ ಸ್ಥಿತಿ ಮಹಿಳೆಯರನ್ನು ಅಸುರಕ್ಷತೆಯ ಆತಂಕದಲ್ಲಿ ಉಳಿಸುತ್ತದೆ. ಇಂಥ ಅಸುರಕ್ಷಿತ ಸಂದರ್ಭ ಬಾಲ್ಯವಿವಾಹಗಳಿಗೆ ಪೂರಕ ಸ್ಥಿತಿ ಸೃಷ್ಟಿಸುತ್ತದೆ.

ಕೇಂದ್ರ ಸರ್ಕಾರದ ‘ವಿಬಿ–ಜಿ ರಾಮ್ ಜಿ’ ಯೋಜನೆಯ ಬಗ್ಗೆ ರಾಜ್ಯ ಸರ್ಕಾರ ತೀವ್ರ ವಿರೋಧ ವ್ಯಕ್ತಪಡಿಸಿದೆ. ‘ಮನರೇಗಾ’ ಕಾರ್ಯಕ್ರಮವನ್ನು ಅಪ್ರಸ್ತುತಗೊಳಿಸುವ ಕೇಂದ್ರದ ಕ್ರಮ ಕಾಂಗ್ರೆಸ್ ಪಕ್ಷಕ್ಕೆ ಮಹಾತ್ಮ ಗಾಂಧಿಯ ಸ್ವರಾಜ್ಯದ ಆಶಯವನ್ನು ನೇಪಥ್ಯಕ್ಕೆ ತಳ್ಳುವ ಪ್ರಯತ್ನದಂತೆ ಕಾಣಿಸಿದೆ. ವಿರೋಧ ಪಕ್ಷಗಳ ಪ್ರತಿರೋಧವನ್ನು ಲೆಕ್ಕಿಸದೆ ‘ವಿಬಿ–ಜಿ ರಾಮ್ ಜಿ’ ಯೋಜನೆಯನ್ನು ಪ್ರಕಟಿಸುವಲ್ಲಿ ಕೇಂದ್ರ ಸರ್ಕಾರ ಉತ್ಸಾಹ ವ್ಯಕ್ತಪಡಿಸಿತ್ತು. ಹೊಸ ಯೋಜನೆಯು 2047ರ ‘ವಿಕಸಿತ ಭಾರತ’ ಗುರಿಸಾಧನೆಗೆ ಪೂರಕವಾಗಿದೆ ಎಂದೂ ಸರ್ಕಾರ ಹೇಳಿತ್ತು. ಈಗಿನ ಸ್ಥಿತಿ ನೋಡಿದರೆ, ಯೋಜನೆಯನ್ನು ಜಾರಿಗೊಳಿಸುವಲ್ಲಿ ಸರ್ಕಾರಕ್ಕೆ ಇಚ್ಛಾಶಕ್ತಿ ಇದ್ದಂತಿಲ್ಲ. ಕೇಂದ್ರದ ಯೋಜನೆಯನ್ನು ವಿರೋಧಿಸುತ್ತಿರುವ ರಾಜ್ಯ ಸರ್ಕಾರ ಕೂಡ, ಉದ್ಯೋಗ ಖಾತರಿ ಯೋಜನೆಯಿಂದ ವಂಚಿತರಾಗುವ ಗ್ರಾಮೀಣರಿಗೆ ಪರ್ಯಾಯ ಸೃಷ್ಟಿಸುವ ಬಗ್ಗೆ ಯೋಚಿಸಿಲ್ಲ. ಅಪ್ಪ–ಅಮ್ಮನ ಜಗಳದಲ್ಲಿ ಕೂಸು ಬಡವಾದಂತೆ, ಸರ್ಕಾರಗಳ ಸಂಘರ್ಷದಲ್ಲಿ ಬಡಜನ ನಲುಗುತ್ತಿದ್ದಾರೆ. ರಾಜಕೀಯ ಸಂಘರ್ಷವನ್ನು ಮರೆತು, ಗ್ರಾಮೀಣರ ಸಂಕಷ್ಟವನ್ನು ನಿವಾರಿಸಲು ರಾಜ್ಯ ಹಾಗೂ ಕೇಂದ್ರ ಸರ್ಕಾರ ತಕ್ಷಣವೇ ಕಾರ್ಯೋನ್ಮುಖವಾಗಬೇಕು.

ಚಾವಡಿ

ಆತ್ಮಾವಲೋಕನಕ್ಕೆ ಸಕಾಲ



ಪರ ರಾಜ್ಯದವರಿಗೆ ಕರ್ನಾಟಕದಲ್ಲಿ ಸಾಕಷ್ಟು ಉದ್ಯೋಗಗಳಿವೆ. ಶ್ರಮಜೀವಿಗಳು ಅವರು. ಕಡಿಮೆ ಸಂಬಳಕ್ಕೆ ಹೆಚ್ಚು ದುಡಿಯುವರು. ಹಾಗಾಗಿ ವಿಪರೀತ ಬೇಡಿಕೆ. ಇಂದು ಆಳಾಗಿ ಬಂದವರು ನಾಳೆ ಅರಸರೂ ಆಗಬಲ್ಲರು. ನಾವು ಎಲ್ಲಿ ತಪ್ಪಿದ್ದೇವೆ? ಸ್ವವಿಮರ್ಶೆ ಮಾಡಿಕೊಳ್ಳಲು ಇದು ಸಕಾಲ.

ಸವಿತಾ ನಾಗಭೂಷಣ, ಕವಯಿತ್ರಿ, ‘ಫೇಸ್‌ಬುಕ್’ನಿಂದ

ಕಿಡಿನುಡಿ



ಸಾರಾಸಗಟಾಗಿ ಒಂದು ರಾಜ್ಯದ ಜನರನ್ನೇ ಅನಕ್ಷರಸ್ಥರು ಎಂದು ಲೇವಡಿ ಮಾಡಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಮನಃಸ್ಥಿತಿ ಎಂತಹದ್ದು? ಹಾಗಾದರೆ, ಕಾಂಗ್ರೆಸ್ ಪಕ್ಷವನ್ನು ನಿರಂತರವಾಗಿ ಅಧಿಕಾರದಿಂದ ದೂರವಿಟ್ಟಿರುವ ಭಾರತೀಯರೂ ಅನಕ್ಷರಸ್ಥರೇನು?

ಸಿ.ಟಿ. ರವಿ, ಬಿಜೆಪಿ ವಿಧಾನ ಪರಿಷತ್ ಸದಸ್ಯ

25 ವರ್ಷಗಳ ಹಿಂದೆ

ಶನಿವಾರ, 7-4-2001

• ಕುಡಿಯುವ ನೀರಿಗಾಗಿ ಪ್ರತಿ ಜಿಲ್ಲೆಗೆ 50 ಲಕ್ಷ

ಹಾಸನ, ಏ. 6– ಹೆಚ್ಚುತ್ತಿರುವ ಬೇಸಿಗೆಯ ಈ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎಲ್ಲಿಯೂ ಉಂಟಾಗದಂತೆ ಸರ್ಕಾರ ಎಚ್ಚರ ವಹಿಸಿದೆ. ಕುಡಿಯುವ ನೀರು ಪೂರೈಸುವ ಕಾರ್ಯಕ್ರಮಗಳನ್ನು ಸಮರ್ಥವಾಗಿ ನಿರ್ವಹಿಸಲು ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ತಲಾ 50 ಲಕ್ಷ ರೂಪಾಯಿ ಬಿಡುಗಡೆ ಮಾಡುವುದಾಗಿ ಕಂದಾಯ ಸಚಿವ ಎಚ್.ಕೆ. ಶ್ರೀಕಂಠಯ್ಯ ಪ್ರಕಟಿಸಿದರು.

ಶ್ರವಣಬೆಳಗೊಳದಲ್ಲಿ ನಡೆದ ಮಹಾವೀರ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಕುಡಿಯುವ ನೀರು ಪೂರೈಕೆಗೆ ಸರ್ಕಾರ ಹೆಚ್ಚು ಗಮನಕೊಟ್ಟಿದೆ. ಮುಖ್ಯ ಕಾರ್ಯದರ್ಶಿ ಅಧ್ಯಕ್ಷರಾಗಿರುವ ಸಮಿತಿ ಎಲ್ಲಾ ಜಿಲ್ಲೆಗಳಿಗೂ ತಲಾ 50 ಲಕ್ಷ ರೂಪಾಯಿ ಬಿಡುಗಡೆಗೆ ತೀರ್ಮಾನಿಸಿದೆ ಎಂದರು.

• ವಿನ್ಸೆಂಜ್ ಜಾರ್ಜ್‌ಗೆ ಸೋನಿಯಾ ಕೊಕ್

ನವದೆಹಲಿ, ಏ. 6– ಆದಾಯ ಮೀರಿ ಆಸ್ತಿ ಮಾಡಿಕೊಂಡಿರುವ ಆಪಾದನೆ ಎದುರಿಸುತ್ತಿರುವ ತಮ್ಮ ಆಪ್ತ ಕಾರ್ಯದರ್ಶಿ ವಿನ್ಸೆಂಟ್ ಜಾರ್ಜ್ ಅವರನ್ನು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಕೊನೆಗೂ ಹೊರಹಾಕಿದ್ದಾರೆ. ಅನಾರೋಗ್ಯದ ನೆಪ ಹೇಳಿ ಜಾರ್ಜ್ ಅನಿರ್ದಿಷ್ಟ ಕಾಲದ ರಜೆ ಮೇಲೆ ತೆರಳಿದ್ದಾರೆ.

75 ವರ್ಷಗಳ ಹಿಂದೆ

ಶನಿವಾರ, 7-4-1951

• ಪ್ರೊ. ಐನ್‌ಸ್ಟೀನ್ ಕಮ್ಯುನಿಸ್ಟರೇ?

ವಾಷಿಂಗ್ಟನ್, ಏ. 6– ವಿಶ್ವವಿಖ್ಯಾತ ವಿಜ್ಞಾನಿ ಪ್ರೊ. ಆಲ್ಬರ್ಟ್ ಐನ್‌ಸ್ಟೀನರು ಅನೇಕ ಶಾಂತಿ ಸಂಸ್ಥೆಗಳ ಅಥವಾ ಕಮ್ಯುನಿಸ್ಟ್ ಸಂಸ್ಥೆಗಳ ಸಂಬಂಧ ಹೊಂದಿರುವರೆಂದು ಅಮೆರಿಕದ ಪ್ರಜಾಪ್ರತಿನಿಧಿಗಳ ಸಭೆಯ ಅಮೆರಿಕನ್ ವಿರುದ್ಧ ಚಟುವಟಿಕೆಗಳ ಸಮಿತಿಯು ವರದಿ ಮಾಡಿದೆ.

ಮೇಲೆ ಹೇಳಿದ ಸಂಸ್ಥೆಗಳ ಸದಸ್ಯರಾಗಿರುವರೆಂದು ಹೇಳಲಾದ ಅನೇಕ ಪ್ರಮುಖ ಅಮೆರಿಕನ್ನರ ಹೆಸರುಗಳ ಪಟ್ಟಿಯಲ್ಲಿ ಪ್ರೊ. ಐನ್‌ಸ್ಟೀನರ ಹೆಸರನ್ನೂ ಸೇರಿಸಲಾಗಿದೆ. ಈ ಸಂಸ್ಥೆಗಳ ಸ್ವಭಾವ ಎಂತಹದು ಎಂಬುದು ಗೊತ್ತಾದಾಗಲಾಗಲಿ, ಅಥವಾ ತಮ್ಮ ಹೆಸರುಗಳನ್ನು ತಮಗೆ ಗೊತ್ತಿಲ್ಲದೆಯೇ, ತಮ್ಮ ಅನುಮತಿಯಿಲ್ಲದೆಯೇ ಪ್ರಚಾರಕ್ಕೆ ಬಳಸಿಕೊಂಡಾಗ, ಮೇಲಿನ ಪಟ್ಟಿಯಲ್ಲಿನ ಅನೇಕರು ಈ ಸಂಸ್ಥೆಗಳೊಡನೆ ತಮ್ಮ ಸಂಬಂಧವನ್ನು ತ್ಯಜಿಸಬಹುದೆಂದೂ ವರದಿ ತಿಳಿಸಿದೆ.

ವಿಜ್ಞಾನ: ಸೃಷ್ಟಿಯೊ? ವಿನಾಶವೊ?



ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

‘ವಿಜ್ಞಾನವು ಮನುಕುಲಕ್ಕೆ ಸಿಕ್ಕ ಸುಂದರ ಉಡುಗೊರೆ. ಅದನ್ನು ನಾವು ವಿಕೃತಗೊಳಿಸಬಾರದು’ ಎಂದಿದ್ದರು ಎ.ಪಿ.ಜೆ. ಅಬ್ದುಲ್ ಕಲಾಂ. ಆದರೆ, ವಿಜ್ಞಾನವನ್ನು ವಿಕೃತಗೊಳಿಸುವ ಪ್ರಯತ್ನ ಇರಾನ್ ಜೊತೆಗಿನ ಅಮೆರಿಕ–ಇಸ್ರೇಲ್ ಯುದ್ಧದಲ್ಲಿ ಸ್ಪಷ್ಟವಾಗಿ ಕಾಣಿಸುತ್ತಿದೆ.

ಇದುವರೆಗೆ ಮನುಷ್ಯ ಮಾಡಿದ ಉತ್ತಮ ಕೆಲಸಗಳನ್ನು ಮಸುಕಾಗಿಸುವಂತೆ ಯುದ್ಧ ನಡೆಯುತ್ತಿದೆ. ವಿಜ್ಞಾನ–ತಂತ್ರಜ್ಞಾನದ ಫಲಗಳಾದ ಅತ್ಯಾಧುನಿಕ ವಿಮಾನ, ಕ್ಷಿಪಣಿ, ಡ್ರೋನ್‌ಗಳು ಕ್ಷಣಮಾತ್ರದಲ್ಲಿ ಶತ್ರು ನೆಲೆಗಳನ್ನು ಧ್ವಂಸಗೊಳಿಸುತ್ತಿವೆ. ಶಾಹೆದ್ 136, ಲುಕಾಸ್, ಎಂಕ್ಯು 9 ರೀಪರ್, ಫೈಬರ್ ಆಪ್ಟಿಕ್ ಡ್ರೋನ್‌ಗಳು ಮತ್ತು ಕಮಿಕಜ್, ಟೊಮಹಾಕ್, ಕೊರ್‍ರಮ್ಶರ್ ಕ್ಷಿಪಣಿಗಳು ಸದ್ದು ಮಾಡುತ್ತಿವೆ. ಅಪಾರ ಪ್ರಮಾಣದ ಆಸ್ತಿ–ಜೀವ ನಾಶವಾಗುತ್ತಿದೆ. ಇರಾನ್‌ನ ಶಾಲೆಯ ಮೇಲೆ ಬಾಂಬ್ ಕೆಡವಿ 168 ಕಂದಮ್ಮಗಳನ್ನು ಕೊಂದು ರಕ್ಕಸತನ ಮೆರೆದಿರುವ ಯುದ್ಧಪಡೆಗಳು ವಿಜ್ಞಾನ, ತಂತ್ರಜ್ಞಾನದ ನೆರವಿನಿಂದ ಯುದ್ಧವನ್ನು ಹಿಂದೆಂದಿಗಿಂತ ಘೋರಮಯ ಮಾಡಿವೆ. ಇರಾನ್ ಅನ್ನು ಮಣಿಸಲು ಅಮೆರಿಕ ಕಳೆದೆರಡು ದಶಕಗಳಲ್ಲಿ 8 ಟ್ರಿಲಿಯನ್ ಡಾಲರ್ (ಭಾರತದ ಆರ್ಥಿಕತೆಯ ಎರಡು ಪಟ್ಟು) ಹಣ ವ್ಯಯಿಸಿದೆ ಎನ್ನಲಾಗಿದೆ.

ನಾಗರಿಕತೆಯ ವಿಕಾಸದಲ್ಲಿ ವಿಜ್ಞಾನವು ನಮಗೆ ಪ್ರಬಲವಾದ ಶಕ್ತಿ ನೀಡಿದೆ. ಮನುಷ್ಯನ ಬದುಕನ್ನು ಸುಗಮಗೊಳಿಸಿದೆ, ಜ್ಞಾನದ ದಿಗಂತವನ್ನು ವಿಸ್ತರಿಸಿದೆ. ಆದರೂ, ಯುದ್ಧ ಸಂದರ್ಭಗಳಲ್ಲಿ ವಿನಾಶದ ಹರಿಕಾರನಾಗಿ ವಿಜ್ಞಾನ ಮಾರ್ಪಡುತ್ತದೆ ಎಂಬುದು ಇತಿಹಾಸದ ಕಟು ವಾಸ್ತವ. ಯುದ್ಧ ಮತ್ತು ವಿಜ್ಞಾನದ ನಡುವಿನ ಈ ಅಸಂಗತ ಸಂಬಂಧವು ಆಯುಧಗಳ ತಯಾರಿಕೆಗೆ ಸೀಮಿತವಾಗಿಲ್ಲ; ಇದು ಜಾಗತಿಕ ಆರ್ಥಿಕತೆ ಮತ್ತು ಪರಿಸರದ ಮೇಲೆ ಸರಿಪಡಿಸಲಾಗದಂತಹ ಗಂಭೀರ ಪರಿಣಾಮಗಳನ್ನು ಬೀರುತ್ತಿದೆ. ವಿಜ್ಞಾನವು ಯುದ್ಧಕ್ಕೆ ನೀಡಿದ ವೇಗ ಮತ್ತು ನಿಖರತೆಯು ಇಂದು ಇಡೀ ಭೂಮಿಯ ಅಸ್ತಿತ್ವವನ್ನೇ ಪ್ರಶ್ನಿಸುವಂತೆ ಮಾಡಿದೆ. ಎರಡನೇ ಮಹಾಯುದ್ಧ ಕಾಲದ ಅಣುಬಾಂಬ್‌ನಿಂದ ಹಿಡಿದು ಇಂದಿನ ಅತ್ಯಾಧುನಿಕ ಡ್ರೋನ್, ಕ್ಷಿಪಣಿ ತಂತ್ರಜ್ಞಾನಗಳು ವಿಜ್ಞಾನದ ಪ್ರತಿ ಹೆಜ್ಜೆಯನ್ನೂ ಯುದ್ಧಭೂಮಿಯಲ್ಲಿ ರಕ್ತಸಿಕ್ತವಾಗಿಸಿವೆ.

ರಾಡಾರ್, ಜಿಪಿಎಸ್ ಮತ್ತು ಇಂಟರ್ನೆಟ್‌ನಂತಹ ಆಧುನಿಕ ಸೌಲಭ್ಯಗಳು ಮೂಲತಃ ಮಿಲಿಟರಿ ಅಗತ್ಯಗಳಿಗಾಗಿ ಸಂಶೋಧನೆ ಆದವುಗಳು. ಇವುಗಳ ಬಳಕೆಗೆ ವಿಜ್ಞಾನವು ಶಕ್ತಿಯನ್ನು ನೀಡುತ್ತದೆಯೇ ಹೊರತು, ಆ ಶಕ್ತಿಯನ್ನು ಬಳಸುವ ನೈತಿಕ ವಿವೇಕವನ್ನಲ್ಲ.

ಮಾನವಕುಲದ ಇತಿಹಾಸದಲ್ಲಿ ವಿಜ್ಞಾನ ಮತ್ತು ಯುದ್ಧದ ನಡುವಿನ ಸಂಬಂಧವು ಅತ್ಯಂತ ಸಂಕೀರ್ಣ ಹಾಗೂ ವಿರೋಧಾಭಾಸಗಳಿಂದ ಕೂಡಿದೆ. ವಿಜ್ಞಾನವು ಮೂಲಭೂತವಾಗಿ ಸತ್ಯದ ಅನ್ವೇಷಣೆ ಮತ್ತು ಮಾನವನ ಬದುಕನ್ನು ಸುಗಮಗೊಳಿಸುವ ಉದ್ದೇಶವನ್ನು ಹೊಂದಿದ್ದರೂ, ಅನೇಕ ವೈಜ್ಞಾನಿಕ ಮೈಲಿಗಲ್ಲುಗಳು ಯುದ್ಧದ ಭೀಕರತೆಯಿಂದಲೇ ಜನ್ಮತಾಳಿವೆ.

ಯುದ್ಧದ ಆರ್ಥಿಕ ಅಡ್ಡಪರಿಣಾಮಗಳು ದೇಶವೊಂದರ ದಶಕಗಳ ಪ್ರಗತಿಯನ್ನು ಕ್ಷಣಮಾತ್ರದಲ್ಲಿ ಶೂನ್ಯಕ್ಕೆ ತಳ್ಳುತ್ತವೆ. ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಬಳಸಿ ನಿರ್ಮಿಸಿದ ಬೃಹತ್ ಮೂಲಸೌಕರ್ಯಗಳು, ಕಾರ್ಖಾನೆಗಳು ಮತ್ತು ಸಂಪರ್ಕ ಸೇವೆಗಳು ಯುದ್ಧದ ಕಿಚ್ಚಿಗೆ ಮೊದಲು ಬಲಿಯಾಗುತ್ತವೆ. ಯುದ್ಧದ ಸಮಯದಲ್ಲಿ ಒಂದು ರಾಷ್ಟ್ರದ ಬಹುಪಾಲು ಆರ್ಥಿಕ ಬಂಡವಾಳ (ಬಜೆಟ್) ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ಬಳಕೆಯಾಗುವ ಬದಲು, ವಿನಾಶಕಾರಿ ಆಯುಧಗಳ ಖರೀದಿಗೆ ಮತ್ತು ಸೈನ್ಯದ ನಿರ್ವಹಣೆಗೆ ವ್ಯಯವಾಗುತ್ತದೆ. ಇದು ಶಿಕ್ಷಣ, ಆರೋಗ್ಯ ಮತ್ತು ಸಮಾಜ ಕಲ್ಯಾಣ ಯೋಜನೆಗಳ ಮೇಲೆ ನೇರ ದುಷ್ಪರಿಣಾಮ ಬೀರುತ್ತದೆ. ಜಾಗತಿಕ ಮಾರುಕಟ್ಟೆಯಲ್ಲಿ ತೈಲ ಬೆಲೆ ಏರಿಕೆ, ಪೂರೈಕೆ ಸರಪಳಿಯ ಕಡಿತ ಮತ್ತು ಹಣದುಬ್ಬರವು ಜನಸಾಮಾನ್ಯರ ಬದುಕನ್ನು ದುಸ್ತರಗೊಳಿಸುತ್ತದೆ. ವಿಜ್ಞಾನವು ಹೊಸ ಆವಿಷ್ಕಾರಗಳ ಮೂಲಕ ಆರ್ಥಿಕತೆಯನ್ನು ಎತ್ತಿ ಹಿಡಿಯಬೇಕಾದ ಜವಾಬ್ದಾರಿ ಹೊಂದಿದ್ದರೂ, ಯುದ್ಧದ ನೆರಳಿನಲ್ಲಿ ಅದು ಆಯುಧ ವ್ಯಾಪಾರದ ಲಾಭಕೋರತನಕ್ಕೆ ಸೀಮಿತವಾಗುತ್ತದೆ. ಯುದ್ಧ ಮುಗಿದ ನಂತರದ ಪುನರ್ ನಿರ್ಮಾಣ ಕಾರ್ಯಕ್ಕೆ ತಗಲುವ ವೆಚ್ಚವು ಆ ದೇಶವನ್ನು ಸಾಲದ ಸುಳಿಗೆ ಸಿಲುಕಿಸಿ, ಆರ್ಥಿಕ ಗುಲಾಮಗಿರಿಗೆ ತಳ್ಳುತ್ತದೆ.

> ವಿಶ್ವಮಾನವ ಸಂದೇಶ ಈಗ ಹೆಚ್ಚು ಅನ್ವಯ ಆಗಬೇಕಾಗಿರುವುದು ವಿಜ್ಞಾನಿಗಳಿಗೆ. ಅವರು, ವಿಶ್ವದ ಹಿತಚಿಂತನೆಯ ವಕ್ತಾರಿಕೆ ವಹಿಸಬೇಕಾದ ಅಗತ್ಯವನ್ನು ಪ್ರಸಕ್ತ ಘೋರ ಯುದ್ಧಗಳು ಸೃಷ್ಟಿಸಿವೆ. ವಿಜ್ಞಾನವನ್ನು ಜೀವಪರವನ್ನಾಗಿ ಉಳಿಸಿಕೊಳ್ಳುವ ನೈತಿಕ ಹೊಣೆಗಾರಿಕೆಯ ನಿರ್ವಹಣೆಯಲ್ಲಿ ವಿಜ್ಞಾನಿಗಳೇ ಮೊದಲಿಗರಾಗಬೇಕು.

ಪರಿಸರದ ಮೇಲೆ ಯುದ್ಧವು ಬೀರುವ ಕೆಟ್ಟ ಪರಿಣಾಮಗಳು ಮನುಷ್ಯನ ಕಲ್ಪನೆಗೂ ನಿಲುಕದಂತವು. ಆಧುನಿಕ ಯುದ್ಧಗಳು ಬರೀ ಭೂಮಿಯ ಮೇಲಿನ ದಾಳಿಯಲ್ಲ, ಅವು ಪ್ರಕೃತಿಯ ವಿರುದ್ಧದ ದಾಳಿಗಳಾಗಿವೆ. ಸ್ಫೋಟಕಗಳ ಬಳಕೆ, ರಾಸಾಯನಿಕ ಅಸ್ತ್ರಗಳು ಮತ್ತು ಅಣ್ವಸ್ತ್ರ ಪರೀಕ್ಷೆಗಳು ಮಣ್ಣು, ನೀರು ಮತ್ತು ಗಾಳಿಯನ್ನು ದೀರ್ಘಕಾಲದವರೆಗೆ ವಿಷಪೂರಿತಗೊಳಿಸುತ್ತವೆ. ಯುದ್ಧ ವಿಮಾನಗಳು ಮತ್ತು ಟ್ಯಾಂಕರ್‌ಗಳು ಹೊರಹಾಕುವ ಬೃಹತ್ ಪ್ರಮಾಣದ ಇಂಗಾಲದ ಡೈ ಆಕ್ಸೈಡ್ ಜಾಗತಿಕ ತಾಪಮಾನ ಏರಿಕೆಗೆ ನೇರ ಕಾರಣವಾಗುತ್ತದೆ. ಅರಣ್ಯಗಳ ನಾಶ, ವನ್ಯಜೀವಿಗಳ ಸಾವು ಮತ್ತು ಜೀವವೈವಿಧ್ಯದ ಹಾನಿಯು ಪರಿಸರ ಸಮತೋಲನವನ್ನು ಏರುಪೇರು ಮಾಡುತ್ತದೆ. ಕಾಡು ಮತ್ತು ಬೆಳೆನಾಶ ಮಾಡಲು ವಿಯೆಟ್ನಾಂ ಯುದ್ಧದಲ್ಲಿ ಬಳಸಲಾದ ‘ಏಜೆಂಟ್ ಆರೆಂಜ್’ ರೀತಿಯ ರಾಸಾಯನಿಕ ವಿಷ ನಲವತ್ತು ಲಕ್ಷ ಜನರ ಆರೋಗ್ಯ ಕೆಡಿಸಿತ್ತು. ಹತ್ತು ಲಕ್ಷ ಜನ ಶಾಶ್ವತ ಅನಾರೋಗ್ಯಕ್ಕೀಡಾದರು. ವಿಷದ ಪ್ರಭಾವ ಇಂದಿಗೂ ಅಲ್ಲಿನ ಮಣ್ಣಿನಲ್ಲಿ ಜೀವಂತವಾಗಿದೆ ಎಂದರೆ, ಯುದ್ಧದಿಂದ ಆದ ಪರಿಸರ ಹಾನಿಯ ತೀವ್ರತೆಯನ್ನು ಅರಿಯಬಹುದು.

ವಿಜ್ಞಾನವು ಪರಿಸರ ಸಂರಕ್ಷಣೆಗೆ ದಾರಿ ತೋರಿಸಬೇಕಾದ ಈ ಕಾಲದಲ್ಲಿ, ಯುದ್ಧದ ಮೂಲಕ ಪರಿಸರ ನಾಶಕ್ಕೆ ಕಾರಣವಾಗುತ್ತಿರುವುದು ವಿಜ್ಞಾನದ ಮೂಲ ಉದ್ದೇಶಕ್ಕೆ ವಿರುದ್ಧವಾಗಿದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ವಿಜ್ಞಾನಿಗಳು ಪ್ರಯೋಗಾಲಯದ ಉತ್ಸವಮೂರ್ತಿಗಳಾಗದೆ, ನೈತಿಕ ದಿಕ್ಸೂಚಿಗಳಾಗಿ ಕಾರ್ಯ ನಿರ್ವಹಿಸಬೇಕು. ಐನ್‌ಸ್ಟೈನ್, ಜೆ. ರಾಬರ್ಟ್ ಓಪನ್ ಹೈಮರ್ ಮತ್ತು ಸ್ಟೀಫನ್ ಹಾಕಿಂಗ್ ಅವರಂತಹ ಮಹಾನ್ ವಿಜ್ಞಾನಿಗಳು ಯುದ್ಧದ ಅಪಾಯಗಳ ಬಗ್ಗೆ ಜಗತ್ತನ್ನು ಪದೇ ಪದೇ ಎಚ್ಚರಿಸಿದ್ದರು. ಗಾಂಧೀಜಿ ದೃಷ್ಟಿಯಲ್ಲಿ ಎಲ್ಲ ಯುದ್ಧಗಳು ಮಾನವೀಯತೆಯ ವಿರುದ್ಧದ ಕೆಲಸಗಳೇ. ವಿಜ್ಞಾನವು ಆತ್ಮಸಾಕ್ಷಿಯ ಅಡಿಯಲ್ಲಿ ಕೆಲಸ ಮಾಡಬೇಕು ಮತ್ತು ಅದು ಅಹಿಂಸೆಯ ಹಾದಿಯಲ್ಲಿ ಸಾಗಬೇಕು ಎಂಬುದು ಗಾಂಧೀಜಿಯ ಆಶಯವಾಗಿತ್ತು.

ವಿಜ್ಞಾನಕ್ಕೆ ಭೌಗೋಳಿಕ ಗಡಿಗಳಿಲ್ಲ. ವಿಜ್ಞಾನಿಯೊಬ್ಬನ ನಿಷ್ಠೆ ತನ್ನ ದೇಶದ ಸರ್ಕಾರಕ್ಕೆ ಮಾತ್ರ ವಾಗಿರದೆ, ಇಡೀ ‘ಮಾನವೀಯತೆ’ಗೆ ಇರಬೇಕು. ವಿಜ್ಞಾನವು ಮನುಷ್ಯನ ಬುದ್ಧಿಶಕ್ತಿಯ ಸಂಕೇತವಾದರೆ, ನೈತಿಕ ಸಂಹಿತೆಯು ಅವನ ವಿವೇಕದ ಸಂಕೇತವಾಗಿದೆ. ಯುದ್ಧಗಳಾದಾಗ ವಿಜ್ಞಾನಿಗಳು ಬರೀ ಸಂಶೋಧಕರಾಗಿ ಉಳಿಯದೆ, ಸಮಾಜದ ಜಾಗೃತ ಮನಸ್ಸುಗಳಾಗಿ ಕಾರ್ಯನಿರ್ವಹಿಸಬೇಕು. ತಮ್ಮ ಸಂಶೋಧನೆಯು ಮನುಕುಲದ ಉಳಿವಿಗಾಗಿ ಇರಬೇಕೇ ಹೊರತು ಅಳಿವಿನ ಪಾಲಾಗಬಾರದು ಎಂಬ ನೈತಿಕ ಹೊಣೆಗಾರಿಕೆ ಅವರ ಮೇಲಿದೆ. ಸಂಶೋಧನೆಯು ದುರುಪಯೋಗ ಆಗದಂತೆ ನೋಡಿಕೊಳ್ಳುವ ‘ನೈತಿಕ ಸಂಹಿತೆ’ಗೆ ಅವರು ಬದ್ಧರಾಗಿರಬೇಕು. ಶಾಂತಿನಿಷ್ಠೆ ಮತ್ತು ಮಾನವ ಹಕ್ಕುಗಳ ಗೌರವವು ವಿಜ್ಞಾನಿಯೊಬ್ಬನ ವೃತ್ತಿ ಜೀವನದ ಅವಿಭಾಜ್ಯ ಅಂಗವಾಗಬೇಕು. ಈ ಹಿನ್ನೆಲೆಯಲ್ಲೇ 1957ರಲ್ಲಿ ‘ಪಗ್ವಾಶ್ ಕಾನ್ಫರೆನ್ಸ್’ ರೀತಿಯ ಅಂತರರಾಷ್ಟ್ರೀಯ ವೇದಿಕೆಗಳು ಉಗಮಿಸಿದವು. ಐನ್‌ಸ್ಟೈನ್ ಮತ್ತು ಬರ್ಟ್ರಂಡ್ ರಸೆಲ್ ಅವರ ಪ್ರಣಾಳಿಕೆಯಿಂದ ಪ್ರೇರಿತವಾದ ಈ ಸಂಸ್ಥೆಯು ವಿಜ್ಞಾನಿಗಳು ರಾಜಕೀಯವನ್ನು ಬದಿಗಿಟ್ಟು ಶಾಂತಿಗಾಗಿ ಒಂದಾಗಬೇಕು ಎಂದು ಪ್ರತಿಪಾದಿಸಿತು.ತನ್ನ ಶಾಂತಿ ಹೋರಾಟಕ್ಕಾಗಿ 1995ರಲ್ಲಿ ನೊಬೆಲ್ ಶಾಂತಿ ಪ್ರಶಸ್ತಿ ಪಡೆದ ಈ ಸಂಸ್ಥೆ ವಿಜ್ಞಾನ ಮತ್ತು ಶಾಂತಿಯ ನಡುವಿನ ಸಂಬಂಧವನ್ನು ಮತ್ತಷ್ಟು ಗಟ್ಟಿಗೊಳಿಸಿತು.

ವಿಜ್ಞಾನಿಗಳು ರಾಜಕೀಯ ನಾಯಕರಿಗೆ ಮತ್ತೊಮ್ಮೆ ಬುದ್ಧಿ ಹೇಳಬೇಕಿದೆ. ಯುದ್ಧದ ಆರ್ಥಿಕ ಮತ್ತು ಪರಿಸರನಾಶದ ಅಂಕಿಅಂಶಗಳನ್ನು ನೀಡಿ, ಶಾಂತಿಯ ಮಹತ್ವವನ್ನು ಮನವರಿಕೆ ಮಾಡಿಕೊಡಬೇಕು. ಯುದ್ಧ ಸಾಮಗ್ರಿಗಳ ಮೇಲಿನ ಹೂಡಿಕೆಯನ್ನು ಕಡಿಮೆ ಮಾಡಿ, ಹವಾಮಾನ ವೈಪರೀತ್ಯ ಮತ್ತು ಸಾಂಕ್ರಾಮಿಕ ರೋಗಗಳ ವಿರುದ್ಧ ಹೋರಾಡಲು ವಿಜ್ಞಾನವನ್ನು ಬಳಸುವಂತೆ ಒತ್ತಾಯಿಸಬೇಕು. ಅವರ ಮಾತು ಮೀರಿ ಯುದ್ಧ ನಡೆದರೆ ಅದು ವಿಜ್ಞಾನದ ಸೋಲಲ್ಲ, ಬದಲಾಗಿ ಅದು ರಾಜತಾಂತ್ರಿಕತೆಯ ಮತ್ತು ಮಾನವೀಯತೆಯ ಸೋಲಾಗಿದೆ. ವಿಜ್ಞಾನವು ತೀಕ್ಷ್ಣ ಕತ್ತಿಯಿದ್ದಂತೆ; ಅದನ್ನು ಜೀವ ಉಳಿಸಲು ಅಥವಾ ತೆಗೆಯಲು ಬಳಸಬೇಕೇ ಎಂಬುದು ಮನುಷ್ಯನ ನೈತಿಕ ಆಯ್ಕೆಗೆ ಬಿಟ್ಟದ್ದು. ವಿಜ್ಞಾನಿಗಳು ವಿಶ್ವಪ್ರಜೆಗಳಾಗಿ ಜಾಗತಿಕ ಹಿತಾಸಕ್ತಿಯನ್ನು ಎತ್ತಿ ಹಿಡಿದಾಗ ಮಾತ್ರ ಈ ಭೂಮಿಯು ಮುಂದಿನ ಪೀಳಿಗೆ ಸುರಕ್ಷಿತವಾಗಿ ಉಳಿಯಲು ಸಾಧ್ಯ. ವಿಜ್ಞಾನದ ಯಶಸ್ಸು ಯುದ್ಧದ ಗೆಲುವಿನಲ್ಲಿಲ್ಲ, ಬದಲಾಗಿ ಜಾಗತಿಕ ಶಾಂತಿ ಮತ್ತು ಸುಸ್ಥಿರ ಅಭಿವೃದ್ಧಿಯಲ್ಲಿದೆ.

ಜನರ ತೆರಿಗೆ ಹಣದಿಂದ ಸವಲತ್ತು ಪಡೆಯುವ ವಿಜ್ಞಾನಿಗಳು ಯುದ್ಧದ ವಿರುದ್ಧ ಗಟ್ಟಿದನಿ ಎತ್ತಬೇಕು. ಬೀದಿಗಿಳಿದು ಪ್ರತಿಭಟಿಸಬೇಕು. ಜನಸಾಮಾನ್ಯರಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವ ತರ್ಕ ಬದ್ಧ ಚಿಂತನೆಯನ್ನು ಉತ್ತೇಜಿಸಬೇಕು. ವಿಜ್ಞಾನವು ಮನುಕುಲದ ಕಣ್ಣೀರನ್ನು ಒರೆಸುವ ಮತ್ತು ಹಸುರು ಭೂಮಿಯನ್ನು ಉಳಿಸುವ ಸಂಜೀವಿನಿಯಾಗಬೇಕು. ವಿಜ್ಞಾನದ ಗುರಿ ವಿನಾಶವಲ್ಲ, ಬದಲಾಗಿ ವಿಶ್ವ ಕಲ್ಯಾಣ ಎಂಬ ಸತ್ಯವನ್ನು ಈಗ ವಿಜ್ಞಾನಿಗಳೇ ಎತ್ತಿಹಿಡಿಯಬೇಕಾಗಿದೆ.



ವಾಚಕರ ವಾಣಿ

ಪದವಿ ಪ್ರಮಾಣಪತ್ರ: ವಿಳಂಬ ಸಲ್ಲದು

ಬೆಂಗಳೂರು ನಗರ ವಿಶ್ವವಿದ್ಯಾಲಯದ ಐದನೇ ಘಟಿಕೋತ್ಸವವು ಇತ್ತೀಚೆಗೆ ನಡೆದಿದೆ. 37,923 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗಿದೆ. ಆದರೆ, 3ನೇ ಘಟಿಕೋತ್ಸವದಲ್ಲಿ ಪದವಿ ಪಡೆದ ವಿದ್ಯಾರ್ಥಿಗಳಿಗೆ ಇಂದಿಗೂ ಪದವಿ ಪ್ರಮಾಣ ಪತ್ರ ವಿತರಿಸಿಲ್ಲ. ಇದರಿಂದ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಹಾಗೂ ವಿವಿಧ ಉದ್ಯೋಗ ಪ್ರಕ್ರಿಯೆಗಳಲ್ಲಿ ಪಾಲ್ಗೊಳ್ಳಲು ತೊಂದರೆಯಾಗಿದೆ. ಪದವಿ ಪ್ರಮಾಣ ಪತ್ರವು ವಿದ್ಯಾರ್ಥಿಗಳು ಭವಿಷ್ಯ ರೂಪಿಸಿಕೊಳ್ಳಲು ಅವಶ್ಯಕ ದಾಖಲಾಗಿದೆ. ಯಶಸ್ವಿಯಾಗಿ ಘಟಿಕೋತ್ಸವ ನಡೆಸುವುದಕ್ಕಷ್ಟೆ ಕುಲಪತಿ ಹಾಗೂ ಮೌಲ್ಯಮಾಪನ ವಿಭಾಗದ ಕುಲಸಚಿವರು ಸೀಮಿತಗೊಳ್ಳಬಾರದು.

ಯಶವಂತ್ ಪಿ., ಬೆಂಗಳೂರು

ಡಿಸಿ ಕಚೇರಿಗಾಗಿ ಮರಗಳ ಹನನ ಬೇಡ

ಬರಪೀಡಿತ ಪ್ರದೇಶ ಚಿತ್ರದುರ್ಗಕ್ಕೀಗ ಗಂಡಾಂತರದ ದಿನಗಳು. ಸಸ್ಯಕಾಶಿಯಂತೆ ಇರುವ ತೋಟಗಾರಿಕೆ ಇಲಾಖೆಯನ್ನು ಬೇರೆಡೆ ಸ್ಥಳಾಂತರಿಸಿ, ಆ ಜಾಗದಲ್ಲೀಗ ಜಿಲ್ಲಾಧಿಕಾರಿ ಕಚೇರಿ ನಿರ್ಮಿಸಲು ಉದ್ದೇಶಿಸಲಾಗಿದೆ. ಈ ಹಿಂದೆ ಊರ ಹೊರಗೆ ಇರುವ ವೈದ್ಯಕೀಯ ಕಾಲೇಜು ಕಟ್ಟಡವನ್ನೇ ಜಿಲ್ಲಾಧಿಕಾರಿ ಕಚೇರಿಯನ್ನಾಗಿ ಮಾಡುವ ತೀರ್ಮಾನವಾಗಿತ್ತು. ಕಚೇರಿ ಹೊರಗಡೆ ಇದ್ದರೆ ಸಾರ್ವಜನಿಕರಿಗೆ ತೊಂದರೆ ಯಾದೀತೆಂದು ಆಲೋಚಿಸಿದ್ದು ಸರಿ. ಆದರೆ, ತೋಟಗಾರಿಕೆ ಇಲಾಖೆ ಜಾಗದಲ್ಲಿ ರುವ ಸುಮಾರು ಎರಡು ಸಾವಿರ ಮರಗಳು, ಹೂವು ಹಣ್ಣುಗಳಿರುವ ಗಿಡಗಳನ್ನು ನಾಶಪಡಿಸಿ ಡಿಸಿ ಕಚೇರಿ ನಿರ್ಮಿಸುವುದು ಎಷ್ಟು ಸರಿ? ಈಗಿರುವ ಜಿಲ್ಲಾಧಿಕಾರಿ ವಸತಿಗೃಹ ಹಾಗೂ ನ್ಯಾಯಾಧೀಶರ ವಸತಿಗೃಹಗಳಿರುವ ಜಾಗ ದಲ್ಲಿಯೇ ಜಿಲ್ಲಾಧಿ ಕಾರಿ ಕಚೇರಿ ನಿರ್ಮಿಸಿ, ಊರಾಚೆ ವಸತಿಗೃಹ ನಿರ್ಮಿಸಬಹುದು. ತೋಟಗಾರಿಕೆ ಕಚೇರಿ ಊರೊಳಗಿದ್ದರೆ ರೈತರಿಗೆ ಅನುಕೂಲವಲ್ಲವೆ?

ಬಿ.ಎಲ್. ವೇಣು, ಚಿತ್ರದುರ್ಗ

ಕೆಪಿಎಸ್‌ಸಿ ರದ್ದು ನಿಜಕ್ಕೂ ಸಾಧ್ಯವೇ?

ಕೆಪಿಎಸ್‌ಸಿ ಕುರಿತ ‘ಪ್ರಜಾವಾಣಿ’ಯ ಸರಣಿ ವರದಿಗಳು (ಅನುಭವ ಮಂಟಪ) ಆಯೋಗದ ಭ್ರಷ್ಟಾಚಾರದ ಕರಾಳತೆಯನ್ನು ಬಿಚ್ಚಿಟ್ಟಿವೆ. ಈ ನಡುವೆಯೇ ಕೆಲವರು ಆಯೋಗವನ್ನೇ ರದ್ದುಗೊಳಿಸಬೇಕೆಂದು ಒತ್ತಾಯಿಸುತ್ತಿದ್ದಾರೆ. ಆದರೆ, ಕೆಪಿಎಸ್‌ಸಿಯು ಸಂವಿಧಾನದ 315(1) ವಿಧಿ ಅಡಿ ಸ್ಥಾಪಿತವಾದ ಸ್ವಾಯತ್ತ ಸಾಂವಿಧಾನಿಕ ಸಂಸ್ಥೆ. ಇದರ ರದ್ದತಿಗೆ ಸಾಂವಿಧಾನಿಕ ತಿದ್ದುಪಡಿ ಅನಿವಾರ್ಯ. ಆದರೆ, ಅದಕ್ಕೆ ಪರ್ಯಾಯವಾಗಿ ಜಂಟಿ ಲೋಕ ಸೇವಾ ಆಯೋಗದ ರಚನೆ (315(2) ವಿಧಿ) ಮತ್ತು ಯುಪಿಎಸ್‌ಸಿಗೆ ಜವಾಬ್ದಾರಿ ಮತ್ತು ಕಾರ್ಯಗಳನ್ನು ಹಸ್ತಾಂತರಿಸುವ (315(4) ವಿಧಿ) ಕುರಿತಂತೆ ಅವಲೋಕಿಸಬಹುದು. ಯಾವುದೇ ರಾಜ್ಯದ ರಾಜ್ಯಪಾಲರ ಕೋರಿಕೆ ಮೇರೆಗೆ ಯುಪಿಎಸ್‌ಸಿ, ರಾಷ್ಟ್ರಪತಿಯ ಅನುಮೋದನೆಯೊಂದಿಗೆ, ರಾಜ್ಯದ ಎಲ್ಲಾ ಅಥವಾ ಯಾವುದೇ ಅಗತ್ಯ ಪೂರೈಸಲು ಒಪ್ಪಿಕೊಳ್ಳಲು ಅವಕಾಶವಿದೆ. ಪಾರದರ್ಶಕತೆ ಕಾಯ್ದುಕೊಂಡಿರುವ ಯುಪಿಎಸ್‌ಸಿಗೆ, ಕೆಪಿಎಸ್‌ಸಿಯ ಕಾರ್ಯಗಳನ್ನು ಹಸ್ತಾಂತರಿಸುವುದು ಉಚಿತ.

ಸುಭಾನ್ ಆರ್. ರಿತ್ತಿ , ರಾಣೆಬೆನ್ನೂರು

ಸಮುದಾಯದ ನಾಯಕರಿಗೆ ಪಕ್ಷಗಳ ಮಣೆ

ಪರಿಶಿಷ್ಟ ಜಾತಿ ಮತ್ತು ಪಂಗಡ, ಒಬಿಸಿ, ಅಲ್ಪಸಂಖ್ಯಾತರ ಅಭಿವೃದ್ಧಿ ಎಂದರೆ ಇಡೀ ಸಮುದಾಯವನ್ನು ಪ್ರಗತಿಯ ಪಥದಲ್ಲಿ ಕೊಂಡೊಯ್ಯುವುದಾಗಿದೆ. ಆದರೆ, ಇತ್ತೀಚಿನ ದಿನಮಾನಗಳಲ್ಲಿ ಆ ಸಮುದಾಯಗಳ ಪ್ರಮುಖ ನಾಯಕರು ಅಭಿವೃದ್ಧಿಯಾದರೆ ಅವರ ಸಮುದಾಯವೇ ಅಭಿವೃದ್ಧಿಯಾದಂತೆ ಎಂದು ರಾಜಕೀಯ ಪಕ್ಷಗಳು ಹೊಸ ಸೂತ್ರ ಹೆಣೆದಿವೆ. ಸಮುದಾಯದ ನಾಯಕನಿಗೆ ಚುನಾವಣೆಗೆ ಸ್ಪರ್ಧಿಸಲು ಟಿಕೆಟ್ ನೀಡಿದರೆ ಇಡೀ ಸಮುದಾಯದ ಅಭಿವೃದ್ಧಿ ಹೇಗಾಗುತ್ತದೆ? ಜಾತಿಯ ಹೆಸರು ಬಳಸಿಕೊಂಡು ಟಿಕೆಟ್ ಪಡೆಯುವವರಿಂದ ಆ ಜಾತಿಯ ಜನರಿಗೆ ಆಗುವ ಲಾಭವೂ ಅತ್ಯಲ್ಪ. ಜನರಿಗೆ ಸವಲತ್ತು ಕಲ್ಪಿಸಲು ಒತ್ತು ನೀಡಬೇಕಿದೆ.

ಶಾಂತಿನಿಕೇತನ ಆಚಾರ್ಯ, ಧಾರವಾಡ

ವಿದೇಶಿ ದೇಣಿಗೆ: ಲೆಕ್ಕಾಚಾರದ ತಾರತಮ್ಯ

ವಿದೇಶಿ ದೇಣಿಗೆ (ನಿಯಂತ್ರಣ) ತಿದ್ದುಪಡಿ ಮಸೂದೆಯು ಎನ್‌ಜಿಒ ಚಟುವಟಿಕೆಗಳ ಮೇಲೆ ನಿಯಂತ್ರಣ ಸಾಧಿಸಲಿದೆ. ವಿದೇಶಗಳಿಂದ ದೇಣಿಗೆ ಪಡೆದು ದೇಶದಲ್ಲಿ ಅಹಿತಕರ ಚಟುವಟಿಕೆ ನಡೆಸುವ ಸಂಸ್ಥೆಗಳ ಮೇಲೆ ನಿಗಾ ಇಡುವುದು ಸರಿಯಾದ ಕ್ರಮ. ದೇಶದ ಸಾರ್ವಭೌಮತ್ವಕ್ಕೆ ಧಕ್ಕೆ ತರುವ ಸಂಘಟನೆ ಅಥವಾ ಸಂಸ್ಥೆಗಳನ್ನು ನಿಯಂತ್ರಿಸಬೇಕಿದೆ. ಆದರೆ, ಪಿಎಂ ಕೇರ್ ಫಂಡ್‌ನ ಲೆಕ್ಕ ಹಾಗೂ ಜಗತ್ತಿನ ಅತಿದೊಡ್ಡ ಸಂಘಟನೆಯಾದ ಆರ್‌ಎಸ್‌ಎಸ್‌ಗೆ ಹರಿದು ಬರುತ್ತಿರುವ ದೇಣಿಗೆಯ ಲೆಕ್ಕ ಪರಿಶೋಧನೆ ಬೇಡವೆ? ರಾಜಕೀಯ ಪಕ್ಷಗಳಿಗೆ ಬರುತ್ತಿರುವ ದೇಣಿಗೆ ಬಗ್ಗೆಯೂ ಪರಿಶೀಲಿಸಬೇಕಿದೆ. ಬಲಾಢ್ಯರಿಗೊಂದು, ಜನಸಾಮಾನ್ಯರಿಗೊಂದು ನ್ಯಾಯ ಕಲ್ಪಿಸುವುದು ಸರಿಯಲ್ಲ. ದೇಶದ ನಾಗರಿಕರ ಮುಂದೆ ಪಾರದರ್ಶಕವಾಗಿ ಲೆಕ್ಕ ಮಂಡಿಸಿದಾಗಲಷ್ಟೆ ‘ದೇಶ ಸೇವಕರು’ ಎಂಬುದಕ್ಕೆ ಅರ್ಥ ಬರುತ್ತದೆ.

ಮಹೇಶ ಅಶೋಕ ಶಿಂಗೆ, ಚಿಕ್ಕೋಡಿ

ಕಾರ್ಪೊರೇಟ್ ಸಂಸ್ಥೆಗಳು ಮತ್ತು ನೈತಿಕತೆ

ಮಾಹಿತಿ ತಂತ್ರಜ್ಞಾನ ವಲಯದಲ್ಲಿ ಇತ್ತೀಚೆಗೆ ನಡೆಯುತ್ತಿರುವ ಸರಣಿ ವಜಾ ಪ್ರಕ್ರಿಯೆಗಳು ಕಳವಳಕಾರಿ. ವರ್ಷವೊಂದರಲ್ಲೇ 50 ಸಾವಿರಕ್ಕೂ ಹೆಚ್ಚು ಉದ್ಯೋಗಿಗಳು ಕೆಲಸ ಕಳೆದುಕೊಂಡಿರುವುದು ಬರೀ ಅಂಕಿ-ಅಂಶವಲ್ಲ, ಸಾವಿರಾರು ಕುಟುಂಬಗಳ ಅಸ್ಥಿರತೆ. ಕಂಪನಿಗಳು ಲಾಭದಲ್ಲಿದ್ದರೂ ವೆಚ್ಚ ಕಡಿತಕ್ಕಾಗಿ ಅನುಭವಿಗಳನ್ನು ಕೈಬಿಡುವುದು ನೈತಿಕವಾಗಿ ಸರಿಯಲ್ಲ. ಕೃತಕ ಬುದ್ಧಿಮತ್ತೆ ಬೆಳವಣಿಗೆಯನ್ನು ಉದ್ಯೋಗ ಕಸಿದುಕೊಳ್ಳುವ ಅಸ್ತ್ರವಾಗಿ ಬಳಸುವ ಬದಲು ಅದನ್ನು ಮಾನವ ಶಕ್ತಿಯ ಪೂರಕವಾಗಿ ಬಳಸಿಕೊಳ್ಳಬೇಕು. ‘ಮರುಕೌಶಲ’ ತರಬೇತಿ ನೀಡಬೇಕು.

ವಿಜಯಕುಮಾರ ಎಚ್.ಕೆ., ರಾಯಚೂರು

ಚುರುಮುರಿ

ಪೊಲಿಟಿಕಲ್ ಲೀಗ್



• ಲಿಂಗರಾಜು ಡಿ.ಎಸ್.

‘ನಮ್ಮ ಮಂಡ್ಯದಿಂದ ಮಣ್ಣು ತಕ್ಕೋಗಿ ಸೂಪರ್ ಪಿಚ್ಚು ತಯಾರು ಮಾಡ್ಯವುರಂತಲ್ಲಾ ಅಣ್ಯೆ...’ ನಾನು ಖುಷಿಪಟ್ಟೆ.

‘ನೋಡಪ್ಪೋ, ರಾಜಕೀಯದೋರು ಪುಗಸಟ್ಟೆ ಐಪಿಎಲ್ ಟಿಕೇಟು ಕೊಡ್ಸಿ ಅಂತ ಜುಲುಮೆ ಮಾಡಿ ಮಾನಮರ್ವಾದೆಗೆ ಮಣ್ಣಾಕ್ಕಬುಟ್ರು. ಇವರುನ್ನ ಸಂತೇಲಿ ಹರಾಜಾಕಿದ್ರೂ ಯಾರೂ ತಕ್ಕೋಕಿಲ್ಲ’ ಯಂಟಪ್ಪಣ್ಣ ಸಿಟ್ಟಾಯ್ತು.

‘ಐಪಿಎಲ್ಲಲ್ಲಿ ಕ್ರಿಕೆಟ್ಟಿನೋರ ಹರಾಜು ಹಾಕಿದಂಗೆ ರಾಜಕಾರಣಿಗಳನ್ನೂ ಹರಾಜು ಹಾಕಿದ್ರೆ ಯಂಗಿದ್ದತ್ತು ಅಂತ?’ ತಿಪ್ಪಣ್ಣ ವಿಚಾರ ಸ್ಫೋಟಿಸಿದ.

‘ಕರೆಟ್ಟು ಕಲಾ. ಕೈ ವಾರಿಯರ್ಸ್, ಕಮಲ ಕೇಸರೀಸ್, ದಳ ಸೆಕ್ಯುಲರ್ಸ್ ಅಂತ ಮೂರು ಫ್ರಾಂಚೈಸಿಗಳೂ ಹಾಲಿ–ಮಾಜಿ ಶಾಸಕರ ಕುಟುಂಬಕ್ಕೆ ಚುನಾವಣೆ ಟಿಕೇಟು ಕೊಟ್ಟು, ಉಳಿದ ಸೀಟಿಗೆ ಅನ್–ಕ್ಯಾಪ್ಡ್ ಕ್ಯಾಂಡಿಡೇಟ್ ಖರೂದಿ ಮಾಡ್ತವೆ. ಶಾಸಕರಾದ ಮ್ಯಾಲೆ ಇವು ಸದನಕ್ಕೂ ಬರದೆ ಬಾಯಿಗೆ ಕ್ಯಾಪ್ ಹಾಕ್ಯಂದಿರತವೆ’ ಅಂದ್ರು ತುರೇಮಣೆ.

‘ಕ್ಯಾಪ್ಟನ್ಸಿಗೆ ಸ್ಟಾರ್ ಪ್ಲೇಯರ್ಸು ಸಿದ್ದಣ್ಣ–ಡಿಕೆ, ಇಜಿಯಣ್ಣ–ಅಸೋಕಣ್ಣರ ಜಗಳವೇ ಮುಗಿದಿಲ್ಲ. ಯಂಗೋ ದಳ ಸೆಕ್ಯುಲರ್ಸ್‌ನಲ್ಲಿ ಮಾತ್ರ ಕ್ಯಾಪ್ಟನ್ಸಿಗೆ ಕಿತ್ತಾಟವಿಲ್ಲ ಬುಡು’ ಅಂತು ಯಂಟಪ್ಪಣ್ಣ.

‘ರವಿಯಣ್ಣ, ಪ್ರಿಯಾಂಕಣ್ಣ, ಚಲವಾದಿ ಇವರೆಲ್ಲಾ ಇಂಪ್ಯಾಕ್ಟ್ ಪ್ಲೇಯರ್ಸ್ ಆಗಿರತರೆ. ಹಂಗೇ ಫ್ರಾಂಚೈಸಿ ವಿರುದ್ಧ ಅಡ್ಡ ಮಾತಾಡಿದೋರು ಈಸ್ಪೂರಣ್ಣ, ಯತ್ನಾಳಾತರೆ ಗೊತ್ತಿರಲಿ’ ಅಂತಂದೆ.

‘ಸುನಿಲಣ್ಣ, ಮಾದೇವಣ್ಣ, ಜಾರಕಿಹೊಳಿ, ಪರಮಣ್ಣ, ಜಮೀರಣ್ಣ ರಿಟೆನ್ಷನ್ ಪ್ಲೇಯರುಗಳು ಅಲ್ವೇನ್ರೋ?’ ಅಂತ ಯಂಟಪ್ಪಣ್ಣ ಪ್ರಶ್ನಿಸಿತು.

‘ಟೀಂ ಕೋಚುಗಳು ಯಾರಣ್ಯೆ?’ ಅಂದ ತಿಪ್ಪಣ್ಣ.

‘ದಳ ಸೆಕ್ಯುಲರ್ಸಿಗೆ ದೇವಜ್ಜೋರು, ಕಮಲ ಕೇಸರೀಸಿಗೆ ಆಪರೇಷನ್ ಎಕ್ಸ್‌ಪರ್ಟ್ ರಾಜಾವುಲಿ. ಕೈವಾರಿಯರ್ಸಿಗೆ ಕೋಚು ಯಾರು ಅಂತ ತೀರ್ಮಾನಾಗಿಲ್ಲ’ ತುರೇಮಣೆ ವಿವರಿಸಿದರು.

‘ನನಗೊಂದು ಅನುಮಾನ. ಹಾಲಿ ಶಾಸಕರು, ಸಂಸದರ ಮಕ್ಕಳು–ಮರಿಗಳಿಗೇ ಟಿಕೇಟು ಕೊಟ್ಕಹೋದರೆ ಕಾರ್ಯಕರ್ತರು ಬಾವುಟ ಕಟ್ಟಕ್ಕಷ್ಟೇ ಲಾಯಕ್ಕೋ? ರಾಜಕೀಯದೇಲಿ ಗುಂಪುಗಾರಿಕೆ ತುಂಬಿ ತುಳುಕುತ್ತಿರೋವಾಗ ಸೀಟು ಹರಾಜಿನ ಗೆಜ್ಜೆಪೂಜೆ ಯಾಕೆ?’ ತಿಪ್ಪಣ್ಣನ ಅನುಮಾನಕ್ಕೆ ಯಾರೂ ಉತ್ತರ ಕೊಡ್ಲಿಲ್ಲ.

ಸಂಗತ

ವಿನ್ಯಾಸ–ಬಳಕೆದಾರ: ದೂರುವುದು ಯಾರನ್ನು?

ಆನ್‌ಲೈನ್ ವೇದಿಕೆಗಳ ವ್ಯಸನಕ್ಕೆ ಬಳಕೆದಾರರನ್ನು ಹೊಣೆ ಮಾಡುವುದು ಸಹಜ. ಆದರೆ, ಈ ವೇದಿಕೆಗಳ ಸ್ವರೂಪ ಅಪಾಯಕಾರಿ ಆಗಿರುವುದನ್ನು ಗಮನಿಸಬೇಕು.

• ರೂಪಾ ಕುಡ್ವ

ಮೆಟಾ ಹಾಗೂ ಯೂಟ್ಯೂಬ್ ವಿರುದ್ಧ ಪ್ರಕರಣ ದಾಖಲಿಸಿದ್ದ ಯುವತಿಯ ಪರವಾಗಿ ಲಾಸ್‌ಏಂಜಲೀಸ್‌ನ ನ್ಯಾಯಮೂರ್ತಿಯೊಬ್ಬರು ಮಾರ್ಚ್ 25ರಂದು ಮಹತ್ವದ ತೀರ್ಪು ನೀಡಿದ್ದಾರೆ. ತಂತ್ರಜ್ಞಾನ ವೇದಿಕೆಗಳ ವಿನ್ಯಾಸದ ಆಯ್ಕೆಯಲ್ಲಿನ ಪರಿವರ್ತನಾ ದೃಷ್ಟಿಕೋನಕ್ಕೆ ಆ ತೀರ್ಪು ಅಡಿಗೆರೆ ಎಳೆಯುವಂತಿದೆ.

ಸಾಮಾಜಿಕ ಮಾಧ್ಯಮದ ಪರಿಣಾಮಗಳು, ತೆರೆಯನ್ನೇ ನೋಡುತ್ತಾ ಸುದೀರ್ಘ ಸಮಯ ಕಳೆಯುವ ನಡವಳಿಕೆ, ಯುವಜನರಲ್ಲಿನ ಉದ್ವೇಗ... ಈ ವಿಷಯಗಳ ಕುರಿತ ಆತಂಕದ ಚರ್ಚೆಗೆ ಅಮೆರಿಕ ನ್ಯಾಯಾಲಯದ ತೀರ್ಪು ಹೊಸ ದಿಕ್ಕು ಕಲ್ಪಿಸಿದೆ. ನಾವು ಈವರೆಗೆ ಪರಿಣಾಮಗಳ ಬಗ್ಗೆ ಮಾತನಾಡುತ್ತಿದ್ದೆವು. ಈ ತೀರ್ಪು ಕೇಂದ್ರೀಕರಿಸಿರುವುದು ವಿನ್ಯಾಸವನ್ನು.

ಮೆಟಾ ಹಾಗೂ ಯೂಟ್ಯೂಬ್ ವೇದಿಕೆಗಳ ವಿನ್ಯಾಸ ಅಪಾಯಕಾರಿಯಾಗಿದ್ದು, ಆ ಕುರಿತು ಸೂಕ್ತ ಎಚ್ಚರಿಕೆ ನೀಡದೆ ಇದ್ದುದರಿಂದ ತಮಗೆ ಸಾಕಷ್ಟು ಹಾನಿಯಾಗಿದೆ ಎನ್ನುವುದು ಅರ್ಜಿದಾರರ ವಾದವಾಗಿತ್ತು. ಆನ್‌ಲೈನ್ ವೇದಿಕೆಗಳನ್ನು ಹಾನಿ ಉಂಟುಮಾಡುವ ಸಾಧ್ಯತೆ ಇರುವಂತೆಯೇ ವಿನ್ಯಾಸ ಮಾಡಲಾಗಿರುತ್ತದೆ ಎಂಬ ಅರ್ಜಿದಾರರ ವಾದವನ್ನು ನ್ಯಾಯಮೂರ್ತಿ ಒಪ್ಪಿಕೊಂಡಿದ್ದಾರೆ. ಬಳಕೆ ದಾರರ ನಡಾವಳಿಯಿಂದ ವ್ಯವಸ್ಥೆಯ ವಿನ್ಯಾಸದತ್ತ ಚರ್ಚೆಯನ್ನು ತಿರುಗಿಸುವಷ್ಟು ಮುಖ್ಯವಾದ ವಾದವಿದು. ವೈಯಕ್ತಿಕ ಜವಾಬ್ದಾರಿ ಎಂಬುದರಿಂದ ಹಂಚಿಕೆಯಾದ ಹೊಣೆಗಾರಿಕೆ ಯತ್ತಲೂ ಚರ್ಚೆಯನ್ನು ಇದು ತಿರುಗಿ ಸಬಲ್ಲದು. ವಿನ್ಯಾಸದ ಆಯ್ಕೆಗಳನ್ನು ತಟಸ್ಥ ಎಂದು ನೋಡುವುದೀಗ ಸಾಧ್ಯವೇ ಇಲ್ಲ.



ಆನ್‌ಲೈನ್ ವೇದಿಕೆಗಳಲ್ಲಿ ಬಳಕೆದಾರರಿಗೆ ಇರುವ ವಿಶೇಷ ಅವಕಾಶಗಳನ್ನು ತಂತಾನೇ ಅಸಾಮಾನ್ಯ ಎನ್ನುವ ಹಾಗಿಲ್ಲ. ಬಹುತೇಕರು ಅವು ಸುಲಭಗ್ರಾಹ್ಯ, ಸಹಾಯಕ ಎಂದೇ ನಂಬಿರುತ್ತಾರೆ. ವೆಬ್ ಪುಟಗಳನ್ನು ತೆರೆ ಯಲು ಕ್ಲಿಕ್ ಮಾಡುವ ಸನ್ನಿವೇಶ ಈಗಿಲ್ಲ; ನಿರಂತರವಾಗಿ ಸ್ಕ್ರಾಲ್ ಮಾಡುವ ಜಮಾನವಿದು. ಬಿತ್ತರಗೊಳ್ಳುವ ಸರಕಿಗೆ ಅಂತ್ಯವೆನ್ನುವುದೇ ಇಲ್ಲ. ವಿಡಿಯೊಗಳು ಸ್ವಯಂಚಾಲಿತ. ಅನುಭವಕ್ಕೆ ಪಾರವೇ ಇಲ್ಲ. ನೋಟಿಫಿಕೇಷನ್‌ಗಳು ಮೊಬೈಲ್ ಪರದೆಯತ್ತ ಮತ್ತೆ ಮತ್ತೆ ನಮ್ಮನ್ನು ಎಳೆದು ತರುತ್ತವೆ. ಆಸಕ್ತಿಗೆ ತಕ್ಕಂತೆ ‘ಅಲ್ಗಾರಿದಂ’ ವಸ್ತು–ವಿಷಯಗಳನ್ನು ಒಟ್ಟು ಮಾಡಿ ಮುಂದಿಡುತ್ತದೆ. ಇಂಥವನ್ನು ನೋಡುವುದರಿಂದ ಹೊರಬರಲು ಪ್ರಜ್ಞಾಪೂರ್ವಕ ಪ್ರಯತ್ನ ಅಗತ್ಯ.

ವ್ಯಕ್ತಿಗತವಾಗಿ ನೋಡಿದರೆ, ಈ ಎಲ್ಲ ಸೌಕರ್ಯಕ್ಕೂ ಸಮರ್ಥನೆಗಳಿವೆ. ಸಮಗ್ರವಾಗಿ ಗಮನಿಸಿದರೆ, ಪೂರ್ಣ ವಿರಾಮ ಹಾಕುವಂತಹ ಇದಮಿತ್ಥಂ ಎಂಬ ಸೌಕರ್ಯವೇ ಆನ್‌ಲೈನ್ ವ್ಯವಸ್ಥೆಯಲ್ಲಿ ಇಲ್ಲ. ಬಳಕೆದಾರರನ್ನು ಒಳಗೊಳ್ಳುವುದು ಈ ವಿನ್ಯಾಸದ ಮೂಲ ಉದ್ದೇಶ.

ಆನ್‌ಲೈನ್‌ನಲ್ಲೇ ಮುಳುಗಿರುತ್ತಾರೆ, ಗಮನ ಕೇಂದ್ರೀಕರಿಸುವುದಿಲ್ಲ, ಅಶಿಸ್ತಿನ ಮೂಟೆಗಳು ಎಂದೆಲ್ಲ ವ್ಯಕ್ತಿಗತವಾಗಿ ಟೀಕಿಸುತ್ತೇವೆ. ಇಂತಹ ತೀರ್ಮಾನಕ್ಕೆ ಬರುವುದು ತಪ್ಪಲ್ಲ. ಆದರೆ, ಇದಕ್ಕೆ ವ್ಯಕ್ತಿಯ ವರ್ತನೆಯೊಂದೇ ಕಾರಣವಲ್ಲ. ಅವನ ಅಥವಾ ಅವಳ ಆಯ್ಕೆಗೆ ಆನ್‌ಲೈನ್ ವ್ಯವಸ್ಥೆ ಸೃಷ್ಟಿಸಿರುವ ವಾತಾವರಣವೂ ಮುಖ್ಯವಾಗುತ್ತದೆ. ಅವುಗಳ ಪ್ರಜ್ಞಾ ಪೂರ್ವಕ ವಿನ್ಯಾಸವೇ ಇದಕ್ಕೆ ಕಾರಣ.

ಇದು ತಂತ್ರಜ್ಞಾನಕ್ಕಷ್ಟೇ ಸೀಮಿತವಲ್ಲ. ಕೆಲಸ ಮಾಡಿಸಿಕೊಳ್ಳುವ ಕಂಪನಿಗಳಲ್ಲಿ ವಿಶೇಷ ಭತ್ಯೆಗಳು ನೌಕರರ ವರ್ತನೆಯ ಮೇಲೆ ಹೆಚ್ಚು ಪರಿಣಾಮ ಬೀರುತ್ತವೆಯೇ ವಿನಾ ಗೊತ್ತುಪಡಿಸಿದ ಮೌಲ್ಯಗಳಲ್ಲ. ಹಣಕಾಸು ಸೇವೆ, ಮಾರಾಟ ಕ್ಷೇತ್ರಗಳಲ್ಲಿ ನಿರ್ದಿಷ್ಟ ಗುರಿ ನಿಗದಿಪಡಿಸುವುದು ಉತ್ತಮ ಫಲಿತಾಂಶ ಕೊಡುತ್ತದೆ. ತಾವು ನಿರ್ಮಿಸಿರುವ ವ್ಯವಸ್ಥೆಯಲ್ಲೇ ಫಲಿತಾಂಶವನ್ನು ಹೊರತರಲು ನಡೆಸುವ ಕಸರತ್ತುಗಳನ್ನು ನೋಡಿ ದಿಗ್ಗಜರೇ ಚಕಿತಗೊಂಡಿರುವ ಉದಾಹರಣೆಗಳಿವೆ.

ಸಾಮಾಜಿಕ ಮಾಧ್ಯಮದ ವೇದಿಕೆಗಳಲ್ಲಿ ಚಲನಶೀಲತೆ ಕಣ್ಣಿಗೆ ರಾಚುತ್ತದೆ. ಪ್ರಮಾಣ ಅಷ್ಟು ಅಗಾಧ ವಾಗಿದ್ದು, ಪ್ರತಿಕ್ರಿಯೆಗಳು ಕೂಡ ಥಟ್ಟನೆ ಮೂಡುತ್ತಾ ಹೋಗುತ್ತವೆ.

ಪ್ರತಿಯೊಂದು ವಿನ್ಯಾಸದ ಆಯ್ಕೆಗೆ ನಿರ್ದಿಷ್ಟ ಮಾನದಂಡ ಇರುತ್ತದೆ. ಬಳಕೆದಾರರು ಎಷ್ಟು ಕಾಲ ಆನ್‌ಲೈನ್ ವೇದಿಕೆಯಲ್ಲಿ ಇದ್ದರು, ನಿರ್ದಿಷ್ಟ ವಸ್ತು–ವಿಷಯವನ್ನು ಎಷ್ಟು ಹೊತ್ತು ಓದಿದರು, ಮತ್ತೆ ಆ ವೆಬ್ ಪುಟಕ್ಕೆ ಎಷ್ಟು ಅಂತರದಲ್ಲಿ ಮರಳಿದರು ಎನ್ನುವುದನ್ನೆಲ್ಲ ತಂತ್ರಜ್ಞಾನ ಸೂಕ್ಷ್ಮವಾಗಿ ಗಮನಿಸುತ್ತದೆ. ಜಾಹೀರಾತು ಪ್ರಣೀತ ವ್ಯವಸ್ಥೆಯಲ್ಲಿ ಈ ರೀತಿಯ ವಿನ್ಯಾಸ ರೂಪಿಸುವುದು ಅಸಹಜವೇನೂ ಅಲ್ಲ. ಆದರೆ, ಈ ಮಾನದಂಡಗಳು ತಟಸ್ಥವಲ್ಲ. ಅವು ನಿರ್ಧಾರಗಳನ್ನು ತೆಗೆದುಕೊಳ್ಳಲು ಪ್ರೇರೇಪಿಸುತ್ತವೆ. ಎಷ್ಟು ಹೊತ್ತು ವೆಬ್ ಪುಟ ಓದುತ್ತಾರೆ ಎನ್ನುವುದನ್ನು ಗಮನಿಸುವ ವ್ಯವಸ್ಥೆಯಲ್ಲಿ ‘ಓದಿದ್ದು ಸಾಕು’ ಎಂಬ ಎಚ್ಚರಿಕೆಯೂ ಇರಬೇಕೆನ್ನುವುದು ತಾರ್ಕಿಕವಾಗಿ ಒಪ್ಪತಕ್ಕದ್ದು. ಬಳಕೆದಾರರೇ ಎಲ್ಲದಕ್ಕೂ ಜವಾಬ್ದಾರರು ಎಂದೋ, ವೇದಿಕೆಗಳೇ ಕಾರಣ ಎಂದೋ ಒಂದು ಕಡೆ ನಿಲ್ಲುವಷ್ಟು ಸರಳವಾದ ವಿಷಯ ಇದಲ್ಲ. ವಾಸ್ತವದಲ್ಲಿ ಇದು ಇನ್ನೂ ಸಂಕೀರ್ಣ ವಿದ್ಯಮಾನ.

ಈಗ ವ್ಯಕ್ತಿಗಳಿಗೆ ಸಾಮಾಜಿಕ ಮಾಧ್ಯಮದ ವೇದಿಕೆ ಬಳಸುವ ವಿಷಯದಲ್ಲಿ ಆಯ್ಕೆಗಳ ಅರಿವಿದೆ. ಆದರೆ, ವಿನ್ಯಾಸ ತಟಸ್ಥವಾಗಿ ಇರದೇ ಇದ್ದರೆ, ಅದು ಉದ್ದೀಪಿಸುತ್ತದೆ. ಶಿಕ್ಷಣ, ಆರೋಗ್ಯ ಸೇವೆ, ಹಣಕಾಸು ಸೌಕರ್ಯ ಕ್ಷೇತ್ರಗಳಲ್ಲಿ ಆನ್‌ಲೈನ್ ವೇದಿಕೆಗಳು ಪರಿವರ್ತನೆ ತಂದಿರುವುದು ಸತ್ಯ. ಆದರೆ, ಅವನ್ನು ಮೊಗೆದುಕೊಳ್ಳುವ ಧಾವಂತ ಬಳಕೆದಾರರಲ್ಲಿ ಮೂಡಿಸುವುದರಿಂದ ಅನಾಹುತಗಳೂ ಆಗಬಹುದು. ಇದು ಬರೀ ಆನ್‌ಲೈನ್ ವೇದಿಕೆಗಳ ವಿನ್ಯಾಸಕ್ಕಷ್ಟೇ ಸಂಬಂಧಿಸಿದ್ದಲ್ಲ, ಮನುಷ್ಯನ ಒಟ್ಟಾರೆ ವರ್ತನೆಯ ಮೇಲೆ ಉದ್ದೀಪಿಸುವ ಯಾವುದೇ ವಿನ್ಯಾಸಕ್ಕೂ ಅನ್ವಯಿಸುವಂಥದ್ದು. ವಿನ್ಯಾಸದ ಆಯ್ಕೆಗಳು ತಟಸ್ಥವಾಗಿದ್ದಲ್ಲಿ ಮಾತ್ರ ಸಮಸ್ಯೆಗಳೆಲ್ಲವನ್ನೂ ಬಳಕೆದಾರರ ತಲೆಗೇ ಕಟ್ಟಬಹುದು.

ಲೇಖಕಿ: ಕ್ರಿಸಿಲ್ ಹಾಗೂ ಒಎನ್‌ಐ ಸಂಸ್ಥೆಗಳ ಮಾಜಿ ಮುಖ್ಯಸ್ಥೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ನರಮೇಧದ ಅಸ್ತ್ರದಿಂದ ಮಾನವೀಯತೆಯನ್ನೇ 'ಮಣ್ಣು' ಮಾಡಿದ ದುರಂತ ಕಥೆ

ಪ್ಯಾಲೆಸ್ಟೀನ್ ಕಣ್ಣೀರು



ಆಕ್ರಮಿತ ಪ್ಯಾಲೆಸ್ಟೀನ್‌ನಲ್ಲಿನ ಸ್ಥಿತಿಗತಿ ಮತ್ತು ಅಲ್ಲಿ ಇಸ್ರೇಲ್ ಮೆರೆದಿರುವ ಕ್ರೌರ್ಯದ ಬಗ್ಗೆ ವಿಶ್ವಸಂಸ್ಥೆ ವರದಿಯು ಹತ್ಯೆಗಳ, ಹಿಂಸೆಯ ಮತ್ತು ನರಮೇಧಕ್ಕೆ ಕಾರಣವಾಗಿರುವ ಮನುಷ್ಯರ ಅಮಾನವೀಯತೆಯ ಮತ್ತೊಂದು ಹೇಯ ಅಧ್ಯಾಯವನ್ನು ದಾಖಲಿಸಿದೆ. ಈ ವರದಿಯಲ್ಲಿರುವುದು ಆತ್ಮಸಾಕ್ಷಿಯ ಧ್ವನಿ. ಜಗತ್ತಿನ ಕಣ್ಣ ಮುಂದೆಯೇ ಇಂತಹ ದುರಂತಗಳು ನಡೆಯುತ್ತಿದ್ದರೂ, ಅದನ್ನು ಗಮನಿಸದಿರುವುದು ರಾಜಕಾರಣದ ವೈಫಲ್ಯ ಮಾತ್ರವಲ್ಲ, ಅಂತಃಸಾಕ್ಷಿಯ ಅಧಃಪತನವೂ ಹೌದು

• ಎ.ವಿ.ಎಸ್.ನಂಬೂದಿರಿ

ಪ್ಯಾಲೆಸ್ಟೀನ್‌ನಲ್ಲಿ 1967ರಿಂದಲೂ ಆಕ್ರಮಣಕ್ಕೆ ಒಳಗಾಗಿರುವ ಪ್ರದೇಶಗಳ ಮಾನವ ಹಕ್ಕುಗಳ ಸ್ಥಿತಿಗತಿಗಳನ್ನು ಅಧ್ಯಯನ ಮಾಡಲು ವಿಶ್ವಸಂಸ್ಥೆಯು ನೇಮಿಸಿದ್ದ ಫ್ರಾನ್ಸೆಸ್ಕಾ ಅಲ್ಬನೀಸ್ ಅವರು ನೀಡಿರುವ ವರದಿಯು ನಮ್ಮ ಕಾಲದ ಅತ್ಯಂತ ಅಮಾನುಷ ಮತ್ತು ಕ್ರೌರ್ಯದ ಕಥೆಯನ್ನು ಹೇಳುತ್ತದೆ. ಇದು ಕಟ್ಟುಕಥೆ ಅಲ್ಲ, ವಾಸ್ತವ ಎನ್ನುವ ಕಾರಣಕ್ಕಾಗಿ ಜಗತ್ತು ನಾಚಿಕೆಪಡಬೇಕಿದೆ ಮತ್ತು ತನ್ನ ನಡುವೆಯೇ ಮಾನವೀಯತೆಯನ್ನು 'ಮಣ್ಣು' ಮಾಡುವ ಇಂತಹ ಕೃತ್ಯ ನಡೆದಿದ್ದಕ್ಕಾಗಿ ಅಪರಾಧಿ ಪ್ರಜ್ಞೆಯಿಂದಲೂ ಬಳಲಬೇಕಿದೆ.

ವ್ಯಕ್ತಿಗಳು ಅಥವಾ ಗುಂಪುಗಳು ಕ್ರೂರ ಕೃತ್ಯಗಳನ್ನು ಎಸಗುವುದು ಅಸಹಜವೇನಲ್ಲ. ದುಷ್ಟ ಸೇನೆಗಳು ಮತ್ತು ಕೂಟಗಳೂ ಅಂತಹ ಕೃತ್ಯಗಳಲ್ಲಿ ತೊಡಗುತ್ತವೆ. ಆದರೆ, ಆಕ್ರಮಿತ ಪ್ಯಾಲೆಸ್ಟೀನ್‌ನಲ್ಲಿ ಇಸ್ರೇಲ್ ಅತ್ಯಂತ ನಿರ್ಭೀತಿಯಿಂದ ನಡೆಸುತ್ತಿರುವಂಥ ಸಂಘಟಿತ ಮತ್ತು ವ್ಯವಸ್ಥಿತ ಹಿಂಸೆಯನ್ನು ಇತಿಹಾಸದಲ್ಲಿ ಯಾವುದೇ ರಾಷ್ಟ್ರ ನಡೆಸಿದ ಉದಾಹರಣೆ ಸಿಗುವುದು ಅಪರೂಪ. ಪ್ಯಾಲೆಸ್ಟೀನ್‌ನ ಜನರನ್ನು ದಮನ ಮಾಡಲು, ಕಿರುಕುಳ ನೀಡಲು ಮತ್ತು ಕೊಲ್ಲಲು ಇಸ್ರೇಲ್ (ಸೇನೆ ಮತ್ತು ಪೊಲೀಸ್ ಬಲ ಸೇರಿದಂತೆ) ಪ್ರಭುತ್ವವು ಅಳವಡಿಸಿಕೊಂಡಿದ್ದ ಅತ್ಯಂತ ಅಮಾನವೀಯ ತಂತ್ರಗಳನ್ನು ವಿಶ್ವಸಂಸ್ಥೆಯ ವರದಿ ವಿವರಿಸುತ್ತದೆ. ಇದು, ಇಸ್ರೇಲ್ ಆಡಳಿತ ಮತ್ತು ಪ್ಯಾಲೆಸ್ಟೀನ್‌ನ ಸಮಸ್ತ ಜನರನ್ನು ಗುರಿಯಾಗಿಸಿಕೊಂಡಿರುವ ಅದರ ನೀತಿಗಳು ಮತ್ತು ಕ್ರಿಯೆಗಳ ಕುರಿತ ಗಂಭೀರ ದೋಷಾರೋಪವಾಗಿದೆ.

ವರದಿ ಬಹಿರಂಗಪಡಿಸಿರುವ ಅಂಶಗಳು ಅತ್ಯಂತ ಗಂಭೀರವಾದುದಾಗಿವೆ. ಪ್ಯಾಲೆಸ್ಟೀನ್‌ನ ನಾಗರಿಕರ ಮೇಲೆ– ಬಂಧಿತರನ್ನಷ್ಟೇ ಅಲ್ಲದೆ ಹೊರಗಡೆ ಇದ್ದವರ ಮೇಲೂ– ಇಸ್ರೇಲ್ ಕಿರುಕುಳದ ತಂತ್ರಗಳನ್ನು ವ್ಯವಸ್ಥಿತವಾಗಿ ಪ್ರಯೋಗಿಸಿದೆ. ತನ್ನ ಮೇಲಿನ ದಾಳಿ ತಡೆಗಟ್ಟುವುದು ಮತ್ತು ಅದಕ್ಕೆ ಶಿಕ್ಷೆ ನೀಡುವ ನೆಪದಲ್ಲಿ ಅದು ಪ್ಯಾಲೆಸ್ಟೀನ್‌ನಲ್ಲಿ ಜನಾಂಗೀಯ ಹತ್ಯೆಯ ಅಪರಾಧ ಎಸಗಿದೆ.

ಪ್ಯಾಲೆಸ್ಟೀನ್ ಜನರ ಮೇಲೆ ಹಿಡಿತ ಸಾಧಿಸಲು ಇಸ್ರೇಲ್ ತನ್ನ ನೀತಿ ಮತ್ತು ಕ್ರಿಯೆಗಳಲ್ಲಿ ಸಂಘಟಿತ ಹಿಂಸೆಯನ್ನೂ ಒಂದು ಭಾಗವಾಗಿಸಿಕೊಂಡಿದೆ ಎನ್ನುವುದಕ್ಕೆ ಸಾಕಷ್ಟು ಪುರಾವೆಗಳಿವೆ. ಬಂಧಿಸಿ ಕಿರುಕುಳ ನೀಡುವುದು ಮತ್ತು ಜನರನ್ನು ಬಲವಂತವಾಗಿ ಸ್ಥಳಾಂತರಗೊಳಿಸುವುದು, ಸಾಮೂಹಿಕ ಹತ್ಯೆಗೈಯುವುದು, ಬದುಕಿನ ಅತ್ಯವಶ್ಯಕ ವಸ್ತುಗಳ ಅಭಾವ ಉಂಟುಮಾಡುವುದು, ವಿನಾಶ ಸೃಷ್ಟಿಸಿ ದೀರ್ಘಕಾಲದ ನೋವು ಮತ್ತು ನರಳಿಕೆಗೆ ಕಾರಣವಾಗುವ ಮೂಲಕ ತನ್ನ ನೀತಿಗಳನ್ನು ಜಾರಿ ಮಾಡುತ್ತಿದೆ. ಪ್ಯಾಲೆಸ್ಟೀನ್ ಪ್ರದೇಶದ ಜನರನ್ನು ನಾಶಮಾಡಲು, ಅವರ ಘನತೆಯನ್ನು ಕಸಿಯಲು ಮತ್ತು ಅವರನ್ನು ಅವರ ನೆಲದಿಂದ ಹೊರಹಾಕಲು ನಿರಂತರವಾದ, ವ್ಯಾಪಕವಾದ, ಭಯಾನಕವಾದ ಆಡಳಿತವನ್ನು ರೂಪಿಸಿಕೊಂಡಿದೆ ಎಂದು ವರದಿ ಉಲ್ಲೇಖಿಸಿದೆ.

ಈ ಹಿಂಸಾಚಾರ ಕೇವಲ ಸಾಂದರ್ಭಿಕವಾದುದಲ್ಲ; ವಲಸಿಗ ವಸಾಹತುಶಾಹಿ (ಸೆಟ್ಲರ್ ಕಲೋನಿಯಲಿಸಂ) ನೀತಿ ಹೊಂದಿರುವ ಇಸ್ರೇಲ್, ಅಮಾನವೀಯತೆ, ಕ್ರೌರ್ಯ ಹಾಗೂ ಸಾಮೂಹಿಕ ಕಿರುಕುಳದ ಮೂಲಕ ಪ್ಯಾಲೆಸ್ಟೀನ್‌ನಲ್ಲಿ ಹಿಂಸೆ ತಾಂಡವವಾಡುವಂತೆ ಮಾಡುತ್ತಿದೆ. ಅಲ್ಲಿನವರಿಗೆ ಘನತೆಯ ಬದುಕು ನಿರಾಕರಿಸಲಾಗಿದ್ದು, ಅವರನ್ನು ಹಕ್ಕುಗಳಿಲ್ಲದ ಮತ್ತು ನಿರ್ಲಕ್ಷಿತ ಜನಸಮುದಾಯವಾಗಿ, ನಿಯಂತ್ರಿಸಬಹುದಾದ ಅಥವಾ ನಾಶಪಡಿಸಬಹುದಾದ ವಸ್ತುಗಳಾಗಿ ಕಾಣಲಾಗುತ್ತಿದೆ ಎಂದು ವರದಿ ಹೇಳುತ್ತಿದೆ.

ವಿವಿಧ ಮಾಧ್ಯಮ ವರದಿಗಳು ಮತ್ತು ಅಲ್ಲಿನ ಪರಿಸ್ಥಿತಿಯನ್ನು ಅರಿತವರ ಮಾತುಗಳು ಅಲ್ಬನೀಸ್ ಅವರ ವರದಿಗೆ ಪೂರಕವಾಗಿವೆ. ಇಸ್ರೇಲ್ ಅಧಿಕಾರಿಗಳು ಅವರಿಗೆ ಅಡ್ಡಿಯುಂಟುಮಾಡಿದರೂ, 300 ದಾಖಲೆಗಳಿಂದ, ದೂರದ ಪ್ರದೇಶಗಳ ಸಂತ್ರಸ್ತರಿಂದ, ಇಸ್ರೇಲ್‌ನ ಹೋರಾಟಗಾರರು ಸೇರಿದಂತೆ ಹಲವರಿಂದ ಅವರು ಮಾಹಿತಿ ಸಂಗ್ರಹಿಸಿದ್ದಾರೆ. ಹಲವು ಉಲ್ಲೇಖಗಳು, ಮಾಧ್ಯಮ ವರದಿಗಳು, ಚಿತ್ರಗಳು, ದಾಖಲೆಗಳು ಮತ್ತು ಇತರ ಸಾಕ್ಷ್ಯಗಳನ್ನು ಒಳಗೊಂಡಿರುವ ವರದಿಯು ಸಮಗ್ರವಾಗಿದೆ ಮತ್ತು ವಿಸ್ತೃತವಾಗಿದೆ.

2023ರ ಅಕ್ಟೋಬರ್‌ಗೂ ಮೊದಲು ಎಂದೂ ಕಾಣದಿದ್ದ ಸ್ವರೂಪದಲ್ಲಿ ಸಾಮೂಹಿಕ ಪ್ರತೀಕಾರ ಮತ್ತು ವಿನಾಶಕಾರಿ ಉದ್ದೇಶದ ಕಿರುಕುಳವನ್ನು ವ್ಯಾಪಕವಾಗಿ ಬಳಸಲಾಗಿದೆ. ಇಸ್ರೇಲ್ ಭದ್ರತೆ ಕಾಪಾಡುವ ದಿಸೆಯಲ್ಲಿ ಅನುಷ್ಠಾನಗೊಳಿಸಿದ ನಿಯಮಗಳು ಕ್ರೌರ್ಯವನ್ನು ಸಹಜ ವಿದ್ಯಮಾನವನ್ನಾಗಿಸಿವೆ. ಇಸ್ರೇಲ್ ಅಧ್ಯಕ್ಷ ಐಸಾಕ್ ಹರ್ಜೋಗ್ ಅವರು ಪ್ಯಾಲೆಸ್ಟೀನಿಯರನ್ನು ಗುರಿಯಾಗಿಸಿಕೊಳ್ಳುವ ಬಗ್ಗೆ ಮಾತನಾಡಿದ್ದು, 'ದೇಶದ ಎಲ್ಲರೂ ಬಾಧ್ಯಸ್ಥರು' ಎಂದಿದ್ದಾರೆ. ಪ್ಯಾಲೆಸ್ಟೀನ್‌ನ ಬಂದಿಗಳಿಗೆ 'ಭಯೋತ್ಪಾದಕರು' ಎನ್ನುವ ಹಣೆಪಟ್ಟಿ ಹಚ್ಚಲಾಗಿದ್ದು, ಅವರಿಗೆ ಕೈಕೋಳ ಹಾಕಿ, ಕಬ್ಬಿಣದ ಹಾಸಿಗೆ, ತೆರೆದ ಶೌಚದ ಕತ್ತಲ ಕೋಣೆಗಳಲ್ಲಿ ಇರಿಸಲಾಗಿತ್ತು.

ಇಸ್ರೇಲಿ ಸೈನಿಕರು ಇಡೀ ಜನಸಮುದಾಯದ ಮೇಲೆ ಹೇಗೆ ಹತೋಟಿ ಸಾಧಿಸಿದರು; ಹಿರಿಯರು, ಅಂಗವಿಕಲರು, ಗರ್ಭಿಣಿಯರು ಮತ್ತು ಮಕ್ಕಳನ್ನೂ ಬಿಡದಂತೆ ವಶಕ್ಕೆ ಪಡೆದರು ಎಂಬುದನ್ನು ವರದಿ ವಿವರಿಸುತ್ತದೆ. ಸಾಮಾಜಿಕ ಕಾರ್ಯಕರ್ತರು, ವೈದ್ಯರು, ರಾಜಕಾರಣಿಗಳು, ಮಾನವ ಹಕ್ಕು ಹೋರಾಟಗಾರರು ಮತ್ತು ಪತ್ರಕರ್ತರು– ಹೀಗೆ ನಿರ್ದಿಷ್ಟ ಗುಂಪುಗಳನ್ನು ಗುರಿಯಾಗಿಸಿಕೊಂಡು ವಶಕ್ಕೆ ಪಡೆಯಲಾಯಿತು ಮತ್ತು ಅವರಿಗೆ ತೀವ್ರ ಹಿಂಸೆ ನೀಡಲಾಯಿತು ಎಂಬ ವಿವರಗಳೂ ಇವೆ. ಲೈಂಗಿಕ ಕಿರುಕುಳವು ನಿಯಮದ ಅವಿಭಾಜ್ಯ ಅಂಗವಾಗಿತ್ತು. ಮಹಿಳೆಯರು, ಮಕ್ಕಳು ಮತ್ತು ಪುರುಷರು–ಎಲ್ಲರನ್ನೂ ಇದಕ್ಕೆ ಒಳಪಡಿಸಲಾಯಿತು. ಇದರ ಬಗೆಗಿನ ಕೆಲವು ವಿವರಗಳು ಬೀಭತ್ಸವಾಗಿವೆ.

ಸಾಮೂಹಿಕ ಸ್ಥಳಾಂತರ, ಸೆರೆ, ನೆರವು ಮತ್ತು ಆಹಾರದ ನಿರಾಕರಣೆ, ಸೇನಾ ಮತ್ತು ವಸಾಹತುಶಾಹಿ ಹಿಂಸಾಚಾರ ಹಾಗೂ ವ್ಯಾಪಕ ಕಣ್ಗಾವಲು ಮತ್ತು ಭಯೋತ್ಪಾದನೆಯ ಮೂಲಕ ಆಕ್ರಮಿತ ಪ್ಯಾಲೆಸ್ಟೀನ್ ಸಾಮೂಹಿಕ ಶಿಕ್ಷೆಗೆ ಗುರಿಯಾದ ತಾಣವಾಯಿತು. ಆಹಾರ, ನೀರು, ವೈದ್ಯಕೀಯ ಸೇವೆ ಮುಂತಾದ ಜೀವನಾವಶ್ಯಕ ವಸ್ತು/ಸೇವೆಗಳನ್ನು ನಿರಾಕರಿಸುವ ಮೂಲಕ ನರಮೇಧದ ಹಿಂಸೆಯನ್ನು ಸಾಮೂಹಿಕ ಚಿತ್ರಹಿಂಸೆಯ ಸಾಧನವಾಗಿ ಪರಿವರ್ತಿಸಲಾಗಿದೆ. ಇದು ದೀರ್ಘಕಾಲೀನ ಮಾನಸಿಕ ಮತ್ತು ದೈಹಿಕ ಪರಿಣಾಮಗಳನ್ನು ಬೀರುತ್ತದೆ.



ಫ್ರಾನ್ಸೆಸ್ಕಾ ಅಲ್ಬನೀಸ್

ಹತ್ತು ಲಕ್ಷಕ್ಕೂ ಹೆಚ್ಚು ಮಂದಿಯ ಮನೆಗಳನ್ನು ನೆಲಸಮ ಮಾಡಲಾಗಿದೆ. ಸಾವಿರಾರು ಮಂದಿ ಹತ್ಯೆಗೀಡಾಗಿದ್ದಾರೆ. ಕಿರುಕುಳ ಮತ್ತು ಎಲ್ಲ ರೀತಿಯ ಸಂಕಟಗಳಿಗೆ ಈಡು ಮಾಡಲಾದವರ ಸಂಖ್ಯೆಯೂ ದೊಡ್ಡದು. ಅನೇಕರನ್ನು ಶಾಶ್ವತವಾಗಿ ಗಾಯಾಳುಗಳನ್ನಾಗಿ ಮಾಡಿ, ಅವರ ಬದುಕು ದಿಕ್ಕುಗೆಡುವಂತೆ ಮಾಡಲಾಗಿದೆ. ಪ್ಯಾಲೆಸ್ಟೀನ್‌ನ ಜನರನ್ನು ಒಂದು ಗುಂಪನ್ನಾಗಿ ಸಾಮೂಹಿಕ ಕಿರುಕುಳಕ್ಕೆ ಈಡು ಮಾಡಿ, ಅವರ ಆತ್ಮಸ್ಥೈರ್ಯ ಕುಸಿಯುವಂತೆ ಮಾಡಿ, ಅವರ ಸ್ವಾಯತ್ತೆಯನ್ನು ಕಸಿದು, ಕೊನೆಗೆ ಅವರು ತಮ್ಮ ನೆಲ ತೊರೆದು ಪಲಾಯನಗೈಯುವಂತೆ ಕ್ರೌರ್ಯ ಮೆರೆಯಲಾಗಿದೆ ಎಂದು ವರದಿ ಉಲ್ಲೇಖಿಸಿದೆ.

ದಮನವನ್ನು ಊರ್ಜಿತಗೊಳಿಸಲು ಕಾನೂನನ್ನು ಬದಲಾಯಿಸಲಾಗಿದೆ. ನರಮೇಧದ ಈ ನೀತಿ ಮತ್ತು ಕ್ರಿಯೆಗಳನ್ನು ರೂಪಿಸುವ ಹಿಂದೆ ಇಸ್ರೇಲ್ ಸರ್ಕಾರವು ಪ್ರಮುಖ ಪಾತ್ರವಹಿಸಿದೆ. ಗಾಜಾದ ಆಚೆಗೂ ಹಿಂಸಾಚಾರ ಹರಡಿದ್ದು, ಶಸ್ತ್ರಸಜ್ಜಿತ ಸೈನಿಕರು ಮತ್ತು ಹಿಂಸಾಚಾರ ಮಾಡುವ ವಲಸಿಗರು ಪೂರ್ವ ಜೆರುಸಲೇಂ ಒಳಗೊಂಡಂತೆ ವೆಸ್ಟ್ ಬ್ಯಾಂಕ್‌ನಲ್ಲಿ ಜನಾಂಗೀಯ ನಿರ್ಮೂಲನೆ ಮತ್ತು ವರ್ಣಭೇದದಲ್ಲಿ ತೊಡಗಿದ್ದಾರೆ. ಇಸ್ರೇಲ್ ಹೊಸ ನಕ್ಬಾ (ಬಲವಂತದ ಸ್ಥಳಾಂತರ) ಸೃಷ್ಟಿಸಲು ಯತ್ನಿಸುತ್ತಿದೆ ಎಂದು ಅಲ್ಬನೀಸ್ ಅವರು ಎಚ್ಚರಿಸಿದ್ದಾರೆ.

ಈ ವರದಿಯನ್ನು ಓದುವಾಗ ಮನಸ್ಸು ಕದಡುತ್ತದೆ. ಇಸ್ರೇಲ್ ಅನ್ನು ಮಾತೃಭೂಮಿಯಾಗಿಸಿಕೊಂಡಿರುವ ಯಹೂದಿಗಳು ಸ್ವತಃ ಹಿಟ್ಲರ್ ಆಡಳಿತದ ಜರ್ಮನಿ ನಡೆಸಿದ್ದ ಇತಿಹಾಸದ ಅತ್ಯಂತ ಕ್ರೂರ ನರಮೇಧದ ಸಂತ್ರಸ್ತರು. ಆ ಘೋರ ಕೃತ್ಯದಿಂದ ಅವರಿಗಾದ ಕೆಟ್ಟ ಅನುಭವವು ಇಂತಹ ಅಪರಾಧ ಕೃತ್ಯಗಳ ಕುರಿತಾಗಿ ಅವರಲ್ಲಿ ನೈತಿಕವಾದ ಜುಗುಪ್ಸೆಯನ್ನು ಹುಟ್ಟುಹಾಕಬೇಕಿತ್ತು. ಇಡೀ ಜಗತ್ತಿನಲ್ಲಿ ಜನಾಂಗೀಯ ಹತ್ಯೆಯಂತಹ ಪೈಶಾಚಿಕ ಕೃತ್ಯಗಳನ್ನು ತಿರಸ್ಕರಿಸುವ ಮತ್ತು ಅವುಗಳ ಬಗ್ಗೆ ಸಂವೇದನೆ ಹೊಂದಿರುವವರಲ್ಲಿ ಇಸ್ರೇಲಿಗರು ಮುಂಚೂಣಿಯಲ್ಲಿರಬೇಕು. ಆದರೆ, ಇಂತಹ ಹಿಂಸಾಚಾರವೇ ಇಸ್ರೇಲ್ ದೇಶದ ನೀತಿಯಾಗಿರುವುದು ಕಳವಳದ ಸಂಗತಿ. ಇಲ್ಲಿ ಮನಃಶಾಸ್ತ್ರದ ಪಾಠ ಇದೆಯೇ? ಸಂತ್ರಸ್ತರು ಪೀಡಕ ಮನಃಸ್ಥಿತಿಯನ್ನು ಬೆಳೆಸಿಕೊಳ್ಳುತ್ತಾರೆಯೇ?

ಸ್ವಯಂರಕ್ಷಣೆ ಅಥವಾ ರಾಷ್ಟ್ರೀಯ ಭದ್ರತೆಗೆ ಇದು ಅಗತ್ಯವಾದ ಕ್ರಮ ಎಂದು ಹೇಳುತ್ತಾ ನರಮೇಧದ ಸ್ವರೂಪವನ್ನು ಬದಲಾಯಿಸಲು ಸಾಧ್ಯವಿಲ್ಲ. ಕಾನೂನು ಕಟ್ಟಳೆಗಳು ಜಾರಿಯಲ್ಲಿರುವ ಸಮಾಜದಲ್ಲಿ ಒಬ್ಬನನ್ನು ಹತ್ಯೆ ಮಾಡುವುದೂ ತಪ್ಪಾಗುತ್ತದೆ. ಕ್ರೂರ ಮತ್ತು ಅಮಾನವೀಯವಾದ ರೀತಿಗಳಲ್ಲಿ ಒಂದು ದೇಶವು ಜನರನ್ನು ಕೊಲ್ಲುವುದು ದೇಶ, ಅಂತರರಾಷ್ಟ್ರೀಯ ಕಾನೂನು ಮತ್ತು ನಿಯಮಗಳನ್ನು ಉಲ್ಲಂಘಿಸುವುದು ಮಾತ್ರವಲ್ಲದೆ, ಜಗತ್ತಿನ ಅಂತಃಸಾಕ್ಷಿಯನ್ನೂ ಛಿದ್ರಗೊಳಿಸುತ್ತದೆ.

ಆಕ್ರಮಿತ ಪ್ಯಾಲೆಸ್ಟೀನ್‌ನ ಜನರಿಗೆ ನೀಡುತ್ತಿರುವ ಎಲ್ಲ ರೀತಿಯ ಹಿಂಸೆ ಮತ್ತು ಅವರೊಂದಿಗಿನ ಅಮಾನವೀಯ ವರ್ತನೆಯನ್ನು ತಕ್ಷಣವೇ ನಿಲ್ಲಿಸಬೇಕು, ಆ ಪ್ರದೇಶದಲ್ಲಿ ತಾರತಮ್ಯ ಎಸಗುತ್ತಿರುವ ಆಡಳಿತವನ್ನು ವಜಾಗೊಳಿಸಬೇಕು. ಅಲ್ಲಿನ ಜನರಿಗೆ ಪರಿಹಾರ ನೀಡಬೇಕು ಹಾಗೂ ಇಂತಹ ಕೃತ್ಯಗಳನ್ನು ಪುನರಾವರ್ತಿಸಬಾರದು ಎಂದು ವರದಿಯು ಇಸ್ರೇಲ್‌ಗೆ ಶಿಫಾರಸು ಮಾಡಿದೆ. ಅಲ್ಲದೇ, ನರಮೇಧ, ಹಿಂಸಾಕೃತ್ಯಗಳ ಬಗ್ಗೆ ತನಿಖೆ ನಡೆಸಬೇಕು ಎಂದು ಅಂತರರಾಷ್ಟ್ರೀಯ ಕ್ರಿಮಿನಲ್ ನ್ಯಾಯಾಲಯಕ್ಕೆ ಶಿಫಾರಸು ಮಾಡಿದೆ. ಇಸ್ರೇಲ್ ಸೇನೆಯ ಮುಖ್ಯಸ್ಥ ಹಾಗೂ ಇತರ ಅಧಿಕಾರಿಗಳನ್ನು ಬಂಧಿಸಬೇಕು ಎಂದೂ ಅದು ಹೇಳಿದೆ. ವರದಿಯಲ್ಲಿ ಕೆಲವರ ಹೆಸರುಗಳನ್ನೂ ಉಲ್ಲೇಖಿಸಲಾಗಿದೆ.

ಇಸ್ರೇಲ್ ಒಂದು ಜನಾಂಗೀಯ ತಾರತಮ್ಯ ಎಸಗುವ ರಾಷ್ಟ್ರ ಎಂದು ಪರಿಗಣಿಸುವಂತೆ ವಿವಿಧ ದೇಶಗಳು ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳಿಗೂ ಅದು ಕರೆ ನೀಡಿದೆ. ಇಸ್ರೇಲ್ ವಿರುದ್ಧ ಅಂತರರಾಷ್ಟ್ರೀಯ ನಿರ್ಬಂಧಗಳನ್ನು ಹೇರಬೇಕು. ಜೊತೆಗೆ, ಇಸ್ರೇಲ್‌ನಿಂದ ಸೇನಾ ಸಲಕರಣೆಗಳ ಖರೀದಿ ಮತ್ತು ಅದು ನಡೆಸುವ ಮಾರಾಟದ ಮೇಲೂ ನಿಷೇಧ ಹೇರಬೇಕು ಎಂದೂ ವರದಿ ಸಲಹೆ ನೀಡಿದೆ. ಈ ಕ್ರಮಗಳನ್ನು ತಕ್ಷಣವೇ ತೆಗೆದುಕೊಳ್ಳಬೇಕು. ವಿಳಂಬವಾದರೆ, ಇಂತಹ ಕೃತ್ಯಗಳನ್ನು ತಡೆಯಲು, ನಿಲ್ಲಿಸಲು ಮತ್ತು ಅಪರಾಧಿಗಳನ್ನು ಶಿಕ್ಷಿಸಲು ರೂಪಿಸಿರುವ ಅಂತರರಾಷ್ಟ್ರೀಯ ಕಾನೂನು ಮತ್ತು ವಿಶ್ವಸಂಸ್ಥೆಯೇ ಕ್ರೌರ್ಯದ ವ್ಯವಸ್ಥೆಯೊಂದಕ್ಕೆ ತಳವೂರಲು ಅವಕಾಶ ನೀಡಿದಂತಾಗುತ್ತದೆ ಎಂದೂ ವರದಿ ಹೇಳಿದೆ. ಆದರೆ, ಇಸ್ರೇಲ್ ಇದಕ್ಕೆಲ್ಲ ಗಮನಕೊಡುವುದಿಲ್ಲ ಮತ್ತು ಜಗತ್ತಿಗೆ ಇಸ್ರೇಲ್ ವಿರುದ್ಧ ಕ್ರಮ ಕೈಗೊಳ್ಳುವುದೂ ಸಾಧ್ಯವಿಲ್ಲ ಎಂಬುದು ನಮಗೆ ಗೊತ್ತಿದೆ.

ಹೊಸದಾಗಿ ಅಸ್ತಿತ್ವಕ್ಕೆ ಬಂದಿದ್ದ ಇಸ್ರೇಲ್‌ನ ಬ್ರಿಟಿಷ್ ವಸಾಹತುಶಾಹಿ ನೀತಿ ಮತ್ತು ವಲಸಿಗ ವಸಾಹತುಶಾಹಿ ನೀತಿಗಳು ಪ್ಯಾಲೆಸ್ಟೀನಿಯರನ್ನು ಅವರ ನೆಲದಿಂದ ಹೊರಗೆ ಕಳುಹಿಸುವ ಉದ್ದೇಶವನ್ನು ಹೊಂದಿದ್ದವು. ಇತಿಹಾಸದಲ್ಲಿ, ಇತರೆ ದಾಖಲೆಗಳಲ್ಲಿ ಮತ್ತು ಸಾಹಿತ್ಯದಲ್ಲಿ ಇಂತಹ ಹಿಂಸಾಚಾರಗಳು ನಡೆದಿರುವ ಬಗ್ಗೆ ಉಲ್ಲೇಖಗಳಿವೆ. ಯಹೂದಿಗಳ ಬಗ್ಗೆ ಸಹಾನುಭೂತಿ ತೋರುವ ಅಂಶಗಳಿರುವ ಲಿಯೋನ್ ಉರಿಸ್ ಅವರ 'ಎಕ್ಸೋಡಸ್' ಎಂಬ ಕಾಲ್ಪನಿಕ ಕೃತಿಯಲ್ಲೂ ಇಂತಹ ಹಿಂಸಾಚಾರ ಕಣ್ಣಿಗೆ ರಾಚುವಂತಿದೆ. ಜನರನ್ನು ಕೊಲ್ಲಲು, ದುರ್ಬಲಗೊಳಿಸಲು, ಪ್ಯಾಲೆಸ್ಟೀನಿಯನ್ನರನ್ನು ಅವರ ನೆಲದಿಂದಲೇ ಹೊರಗಟ್ಟಲು ಹಾಗೂ ದೊಡ್ಡದಾದ ಇಸ್ರೇಲ್ ರಾಷ್ಟ್ರವನ್ನು ಸೃಷ್ಟಿಸಲು ಈ ನೀತಿಗಳು ಈಗಲೂ ಜಾರಿಯಲ್ಲಿವೆ. ಈಗ ನಡೆಯುತ್ತಿರುವ ನರಮೇಧ ಕೂಡ ಪ್ಯಾಲೆಸ್ಟೀನ್ ಜನರನ್ನು ಹೊರಗಟ್ಟುವ ಇಸ್ರೇಲ್‌ನ ಶತಮಾನದಷ್ಟು ಹಳೆಯ ವಲಸಿಗ ವಸಾಹತು ಯೋಜನೆಯ ಭಾಗ ಎಂದು ವರದಿ ಹೇಳಿದೆ. ಗೋಲನ್ ಹೈಟ್ಸ್ ಮತ್ತು ಸಿರಿಯಾದಲ್ಲಿನ ಬಫರ್ ವಲಯವು ವಿಶ್ವಸಂಸ್ಥೆಯು 1974ರಲ್ಲಿ ಗುರುತಿಸಿರುವ ವಲಯವನ್ನು ಮೀರಿ ನಿಂತಿದೆ. ದಕ್ಷಿಣ ಲೆಬನಾನ್‌ನಲ್ಲಿ ಗುರುತಿಸಿರುವ ಬಫರ್ ವಲಯವನ್ನು ಸ್ವಾಧೀನ ಪಡಿಸಿಕೊಳ್ಳಲು ಬಯಸುವುದಾಗಿ ಇಸ್ರೇಲ್ ಈಗ ಘೋಷಿಸಿದೆ. ಈಗಿನ ನರಮೇಧಕ್ಕೂ ಒಂದು ಉದ್ದೇಶ ಇದೆ; ಅದು ಗ್ರೇಟರ್ ಇಸ್ರೇಲ್ ಅನ್ನು ಸ್ಥಾಪಿಸುವುದು.

ಜಗತ್ತಿನ ಇತಿಹಾಸವು ಓಟ್ಟೋಮನ್ ಸಾಮ್ರಾಜ್ಯದಲ್ಲಿ 1914–1915ರಲ್ಲಿ ನಡೆದ ಅಮೆರಿಕದ ನರಮೇಧ, 1994ರ ರ್‍ವಾಂಡನ್ ನರಮೇಧದಂತಹ ಹಲವು ಕೃತ್ಯಗಳಿಗೆ ಸಾಕ್ಷಿಯಾಗಿದೆ. ಇವುಗಳೊಂದಿಗೆ 1937ರ ನಾಂಜಿಂಗ್ ಹತ್ಯಾಕಾಂಡದಂತಹ ಸಾಮೂಹಿಕ ದೌರ್ಜನ್ಯಗಳೂ ನಡೆದಿವೆ. ಯುರೋಪ್‌ನ ವಲಸಿಗ ವಸಾಹತುಶಾಹಿಯು ಅಮೆರಿಕದ ಮೂಲನಿವಾಸಿಗಳನ್ನು ಬೃಹತ್ ಪ್ರಮಾಣದಲ್ಲಿ ಹತ್ಯೆ ಮಾಡಿದ್ದು, ಈಗ ಪ್ಯಾಲೆಸ್ಟೀನ್‌ನಲ್ಲಿ ಇಸ್ರೇಲ್ ನಡೆಸುತ್ತಿರುವ ಕ್ರೂರ ಕೃತ್ಯಗಳಿಗೆ ಸಮನಾದುದು. ಇವುಗಳನ್ನು ಇತಿಹಾಸದಲ್ಲಿ ದಾಖಲಿಸಲಾಗಿದೆ. ವಿಶ್ವಸಂಸ್ಥೆಯ ಈಗಿನ ವರದಿಯು ಹತ್ಯೆಗಳ, ಹಿಂಸೆಯ ಮತ್ತು ನರಮೇಧಕ್ಕೆ ಕಾರಣವಾಗಿರುವ ಮನುಷ್ಯರ ಅಮಾನವೀಯತೆಯ ಮತ್ತೊಂದು ಹೇಯ ಅಧ್ಯಾಯವನ್ನು ದಾಖಲಿಸಿದೆ. ಈ ವರದಿಯಲ್ಲಿರುವುದು ಆತ್ಮಸಾಕ್ಷಿಯ ಧ್ವನಿ. ಜಗತ್ತಿನ ಕಣ್ಣ ಮುಂದೆಯೇ ಇಂತಹ ದುರಂತಗಳು ನಡೆಯುತ್ತಿದ್ದರೂ, ಅದನ್ನು ಗಮನಿಸದಿರುವುದು ರಾಜಕಾರಣದ ವೈಫಲ್ಯ ಮಾತ್ರವಲ್ಲ, ಅಂತಃಸಾಕ್ಷಿಯ ಅಧಃಪತನವೂ ಹೌದು.

ಅಲ್ಬನೀಸ್ ಅವರ ವರದಿಯು ಒಂದು ಭಯಾನಕ ಕ್ರೌರ್ಯದ ಕಥೆಗೆ ಸಾಕ್ಷಿಯಾಗಿದೆ. ಬೈಬಲ್‌ನ ಕರುಣೆ ಮತ್ತು ತ್ಯಾಗದ ಬೋಧನೆಗಳಿಂದ ಪವಿತ್ರವಾಗಿರುವ ನೆಲದಲ್ಲಿ ಕೂಡ ಈಗಿನ ನಾಯಕರ ಅಧಿಕಾರದ ಭಾಷೆಯು ಇತಿಹಾಸದ ನೈತಿಕ ಧ್ವನಿ ಉಡುಗುವಂತೆ ಮಾಡಿದೆ ಎಂಬ ಕಹಿ ಸತ್ಯಕ್ಕೆ ಜಗತ್ತನ್ನು ಈ ವರದಿ ಮುಖಾಮುಖಿಯಾಗಿಸುತ್ತದೆ.

ಲೇಖಕ: 'ಡೆಕ್ಕನ್ ಹೆರಾಲ್ಡ್'ನ ನಿವೃತ್ತ ಸಹಸಂಪಾದಕ ಮತ್ತು ಸಂಪಾದಕೀಯ ಸಲಹೆಗಾರ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ **ಆಮ್ ಆದ್ಮಿ ಪಕ್ಷದ ಮುಖಂಡ,** ರಾಜ್ಯಸಭಾ ಸದಸ್ಯ ರಾಘವ್ ಛಡ್ಡಾ ಅವರು ಮಾತನಾಡುತ್ತಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಅವರನ್ನು ಮೇಲ್ಮನೆಯ ಉಪನಾಯಕ ಸ್ಥಾನದಿಂದ ಪಕ್ಷವು ಇತ್ತೀಚೆಗೆ ಕೆಳಗಿಳಿಸಿದೆ. ಅದರ ನಂತರ ಮಾತನಾಡಿರುವ ವಿಡಿಯೊ ಇದಾಗಿದೆ; ತಮ್ಮನ್ನು 'ಅಮಾನತುಗೊಂಡ ಸಂಸದ' ಎಂದು ಕರೆದುಕೊಂಡಿರುವ ಛಡ್ಡಾ ಅವರು, 'ನನ್ನನ್ನು ಯಾವ ಆಧಾರದಲ್ಲಿ ತೆಗೆದುಹಾಕಲಾಗಿದೆ' ಎಂದು ಪ್ರಶ್ನಿಸಿದ್ದಾರೆ ಎಂದು ವಿಡಿಯೊ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.



✓ **ವಿಡಿಯೊದ ಕೀಫ್ರೇಮ್‌ಗಳನ್ನು** ಇನ್‌ವಿಡ್ ಟೂಲ್ ಮತ್ತು ಗೂಗಲ್ ಲೆನ್ಸ್ ಮೂಲಕ ಪರಿಶೀಲಿಸಿದಾಗ, ಇದೇ ವಿಡಿಯೊ ಅನ್ನು ಹಲವರು ಇಂಥದ್ದೇ ಪ್ರತಿಪಾದನೆಯೊಂದಿಗೆ ಹಂಚಿಕೊಂಡಿರುವುದು ಕಂಡಿತು. ಈ ಹುಡುಕಾಟವು 2023ರ ಆ.11ರಂದು ಎನ್‌ಡಿಟಿವಿಯಲ್ಲಿ ಪ್ರಕಟವಾದ ವರದಿಗೆ ಸಂಪರ್ಕ ಕಲ್ಪಿಸಿತು. ವರದಿಯೊಂದಿಗೆ ಅಪ್‌ಲೋಡ್ ಮಾಡಲಾಗಿದ್ದ ವಿಡಿಯೊ ಮತ್ತು ಸಾಮಾಜಿಕ ಜಾಲತಾಣಗಳಲ್ಲಿನ ವಿಡಿಯೊ ಬಹುತೇಕ ಒಂದೇ ಆಗಿರುವುದು ಕಂಡಿತು. ರಾಷ್ಟ್ರೀಯ ರಾಜಧಾನಿ ಪ್ರದೇಶ ದೆಹಲಿ ಸರ್ಕಾರದ (ತಿದ್ದುಪಡಿ) ಮಸೂದೆ 2023ರ ಸಂಬಂಧ ಛಡ್ಡಾ ಅವರು ನಿಯಮಗಳ ಗಂಭೀರ ಉಲ್ಲಂಘನೆ ಮಾಡಿದ್ದು, ಅವರನ್ನು ರಾಜ್ಯಸಭೆಯಿಂದ ಅಮಾನತು ಮಾಡಲಾಗಿದೆ ಎಂದು ವರದಿ ಉಲ್ಲೇಖಿಸಿತ್ತು. ನಿರ್ದಿಷ್ಟ ಪದದ ಮೂಲಕ ಗೂಗಲ್‌ನಲ್ಲಿ ಹುಡುಕಿದಾಗ ಹಲವು ಪತ್ರಿಕೆಗಳಲ್ಲಿ ಈ ಸುದ್ದಿ 20023ರ ಆ.11ರಂದು ಪ್ರಕಟವಾಗಿರುವುದು ಕಂಡಿತು. ಹಳೆಯ ವಿಡಿಯೊ ಅನ್ನು ಸದ್ಯದ ವಿದ್ಯಮಾನಗಳೊಂದಿಗೆ ತಪ್ಪಾಗಿ ಬೆಸೆದು, ಸುಳ್ಳು ಸುದ್ದಿ ಹರಡಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಸಣ್ಣ ಸಂಗತಿಗಳ ಮಹತ್ವ

ನುಡಿ ಬೆಳಗು



ದೀಪಾ ಹಿರೇಗುತ್ತಿ

ಒಂದು ಮನೆ. ಎಲ್ಲ ಮನೆಗಳಲ್ಲಿ ಇರುವಂತೆ ಆ ಮನೆಯಲ್ಲೂ ಹಲವಾರು ವಸ್ತುಗಳು. ಮನೆಯ ನಡುಮನೆಯಲ್ಲೊಂದು ಸುಂದರ ಕುಸುರಿ ಕೆಲಸದ ಬಾಗಿಲು. ಅದಕ್ಕೊಂದು ಹೊಳೆವ ಬೀಗ. ಅದಕ್ಕೊಂದು ಕೀಲಿಕೈ. ಹೊರಗಡೆ ಹೋಗುವಾಗ ಆ ಕೋಣೆಯ ಬೀಗ ಹಾಕಿ ಬೀಗದ ಕೈ ಅನ್ನು ಅಲ್ಲಿಯೇ ಇತರ ವಸ್ತುಗಳ ನಡುವೆ ಹೊರಗಿನವರಿಗೆ ಗೊತ್ತಾಗದ ಜಾಗದಲ್ಲಿಟ್ಟು ಹೋಗುತ್ತಿದ್ದರು ಮನೆಯವರು.

ಒಂದು ದಿನ ಮನೆಯವರೆಲ್ಲ ಹೊರಗೆ ಹೋಗಿದ್ದರು. ಆ ದಿನ ಸಂಜೆ ಚೆಂದದ ಬಾಗಿಲು ಹೇಳಿತು: 'ಇಲ್ಲಿ ಇರುವ ಎಲ್ಲಾ ವಸ್ತುಗಳಲ್ಲಿ ನಾನೇ ಬಹಳ ಬಲಶಾಲಿ. ಈ ಮನೆಯ ಮುಖ್ಯ ಕೋಣೆಯನ್ನು ನಾನು ಕಾಯುತ್ತೇನೆ. ನನ್ನನ್ನು ನಂಬಿಯೇ ಈ ಮನೆಯವರು ಎಲ್ಲರೂ ಹೊರಹೋಗಿದ್ದಾರೆ. ನಾನಿಲ್ಲದೇ ಇದ್ದರೆ ಯಾರು ಬೇಕಾದರೂ ಒಳಗೆ ಹೋಗಿ ಎಲ್ಲವನ್ನೂ ಕದ್ದುಕೊಂಡು ಹೋಗಬಹುದು'.

ಅದನ್ನು ಕೇಳಿದ ಬೀಗವೂ ಹೇಳಿತು: 'ನಿಜ, ನೀನು ಗಟ್ಟಿಯಿದ್ದಿ. ಮತ್ತು ನಾನು ನಿನ್ನನ್ನು ಜೋಪಾನವಾಗಿರಿಸುತ್ತೇನೆ. ನನ್ನ ಸಹಕಾರವಿಲ್ಲದೇ ಯಾರೂ ಬಾಗಿಲನ್ನು ತೆರೆಯಲಾರರು'.

ಅಲ್ಲಿಯೇ ಇದ್ದ ಪುಟಾಣಿ ಕೀಲಿಕೈ ಅವರ ಮಾತನ್ನು ಕೇಳುತ್ತ ಸುಮ್ಮನೆ ಇತ್ತು. ಅದಕ್ಕೆ ಬಾಗಿಲು ಬೀಗದ ಕೈ ಕಡೆ ನೋಡಿ, 'ಏನು ಸುಮ್ಮನೆ ಕುಳಿತೆಯಲ್ಲ, ನೀನಿಷ್ಟು ಪುಟ್ಟ ಗಾತ್ರ. ನೀನೇನು ಮಾಡುತ್ತೀಯಾ' ಅಂದಿತು.

ಬೀಗದ ಕೈ ಸಣ್ಣ ಧ್ವನಿಯಲ್ಲಿ, 'ಹೆಚ್ಚೇನೂ ಮಾಡಲ್ಲ ನಾನು ಬಿಡಿ' ಅಂದಿತು.


ಅವತ್ತು ರಾತ್ರಿಯೇ ಹೊರಗಡೆ ಹೋದ ಮನೆಯ ಜನರು ಮರಳಿ ಬಂದರು. ತಾಯಿ ಒಳಬಂದವರೇ ಸಣ್ಣ ಬೀಗದ ಕೈ ಹುಡುಕಿ ಕುಸುರಿಯ ಬಾಗಿಲನ್ನು ತೆರೆದರು. ಬಾಗಿಲು ಮತ್ತು ಬೀಗ ಎರಡೂ ಮುಖಮುಖ ನೋಡಿಕೊಂಡವು. ಬೀಗ ಹೇಳಿತು: 'ಬೀಗದ ಕೈ ಇಲ್ಲದೇ ಇದ್ದರೆ ನಾನು ಮುಚ್ಚಿಯೇ ಇರುತ್ತಿದ್ದೆ. ಅಥವಾ ನನ್ನನ್ನು ಒಡೆದು ಹಾಕುತ್ತಿದ್ದರು'. ಬಾಗಿಲೂ ಹೇಳಿತು: 'ಹೌದು, ಬೀಗದ ಕೈ ಇಲ್ಲದಿದ್ದರೆ ನಾನು ಯಾವಾಗಲೂ ಮುಚ್ಚಿಯೇ ಇರುತ್ತಿದ್ದೆ'.

ಸಣ್ಣ ಕೀಲಿಕೈ ಮುಗುಳ್ನಕ್ಕು ಹೇಳಿತು: 'ದೊಡ್ಡ ಬಾಗಿಲಾಗಲೀ ಚಿಕ್ಕ ಬಾಗಿಲಾಗಲಿ ಅವನ್ನು ತೆರೆಯಲು ಪುಟ್ಟ ಕೀಲಿಕೈ ಬೇಕೇ ಬೇಕು. ಎಷ್ಟು ದೊಡ್ಡ ಬಾಗಿಲಾದರೂ ಬೀಗ ಮತ್ತು ಬೀಗದ ಕೈ ಇಲ್ಲದಿದ್ದರೆ ಅದು ಸುಭದ್ರವಲ್ಲ. ಹಾಗಂತ ಬಾಗಿಲು ಇಲ್ಲದಿದ್ದರೆ ಕೀಲಿಕೈಗೂ ಬೆಲೆಯಿಲ್ಲ, ಬೀಗಕ್ಕೂ ಬೆಲೆಯಿಲ್ಲ'.

ಅವತ್ತಿನಿಂದ ಬಾಗಿಲು ಮತ್ತು ಬೀಗ ಎರಡೂ ಒಂದು ವಸ್ತುವಿನ ಪ್ರಾಮುಖ್ಯವನ್ನು ಗಾತ್ರದಿಂದ ಅಳೆಯಬಾರದು ಎಂಬುದನ್ನು ಅರ್ಥ ಮಾಡಿಕೊಂಡವು.

ಪುಟ್ಟ ಕೀಲಿ ಕೈ ದೊಡ್ಡ ಬಾಗಿಲನ್ನು ತೆರೆದ ಹಾಗೆ ದೊಡ್ಡ ಅವಕಾಶಗಳನ್ನು ಸಣ್ಣ ಸಂಗತಿಗಳು ಒದಗಿಸುತ್ತವೆ. ಇಷ್ಟು ಸಣ್ಣ ಕೆಲಸವೆ? ಇದೇನು ಮಹಾ ಎಂಬ ನಿರ್ಲಕ್ಷ್ಯದಿಂದ ಅವಕಾಶಗಳು ಕೈತಪ್ಪಿಯೂ ಹೋಗಬಹುದು. ಪ್ರೀತಿಯ ಶಿಕ್ಷಕರ ಒಂದು ಸಣ್ಣ ಪ್ರೋತ್ಸಾಹದಾಯಕ ನುಡಿ ವಿದ್ಯಾರ್ಥಿ ಸಾಧನೆ ಮಾಡಲು ಸ್ಫೂರ್ತಿಯಾಗಬಹುದು. ನಾನಿದ್ದೇನೆ ಎಂಬ ಗೆಳೆಯನ ಭರವಸೆ ಕಷ್ಟವನ್ನು ಎದುರಿಸುವ ಸ್ಥೈರ್ಯ ಕೊಡಬಹುದು. ದಿನಕ್ಕೆ ಹತ್ತೇ ನಿಮಿಷ ಕಲಿಯುವ ಹೊಸ ಕೌಶಲದಿಂದ ಬದುಕಿನ ದಿಕ್ಕೇ ಬದಲಾಗಬಹುದು. ನಾವು ಯಾವಾಗಲೂ ದೊಡ್ಡ ಅವಕಾಶಗಳಿಗಾಗಿ ಕಾಯುತ್ತೇವೆ. ಆದರೆ ದಿನವೂ ನಾವು ಮಾಡುವ ಪುಟ್ಟ ಕೆಲಸಗಳೇ ಆ ಅವಕಾಶವನ್ನು ನಿರ್ಮಿಸುತ್ತವೆ ಎಂಬುದನ್ನು ಮರೆತುಬಿಡುತ್ತೇವೆ. ಸಣ್ಣ ಸಂಗತಿಗಳ ಮಹತ್ವವನ್ನು ಅರ್ಥ ಮಾಡಿಕೊಂಡರೆ ಬದುಕನ್ನೂ ಅರ್ಥ ಮಾಡಿಕೊಂಡಂತೆ. ❖

ಗುಂಡಣ್ಣ



ಪದಬಂಧ 6366


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಇದು ಪುಷ್ಪದ ಪಲ್ಲಂಗ (3)
3.ಲೋಪದೋಷಗಳನ್ನು ಸರಿಪಡಿಸುವವನು (4)
5.ಘಟಾನುಘಟಿ ಹಿಡಿದಿರುವ ಮಡಕೆ (2)
6.ಮೊದಲು ಬೆಲೆಯಿದ್ದರೂ ಈತ ಯಾರೂ ದಿಕ್ಕಿಲ್ಲದವನು (4)
7.ನಿಷೇಧಿಸಿರುವ ಪ್ರದೇಶಕ್ಕೆ ಪ್ರವೇಶ ಮಾಡುವುದು (7)
10.ಇದು ಹೂವಿನ ಶರ (4)
11.ಶುನಕದ ಬಳಿಯಿರುವ ಗಿಳಿ (2)
13.ಕೆಟ್ಟ ವಾಸನೆಯಿದು (4)
14.ದಡಿಯನು ಹಿಡಿದಿರುವ ವಿಶೇಷ ವಾದ್ಯ (3)

ಮೇಲಿಂದ ಕೆಳಕ್ಕೆ

1.ಹೂದೋಟದಲ್ಲಿ ಹೂಡಿದ ಯುಕ್ತಿ (2)
2.ಚಟದಲ್ಲಿ ಕಾಣಿಸಿರುವ ನಿಸ್ಸಾರ (3)
4.ಉಪಾಧ್ಯಾಯನಿಲ್ಲಿ ತಿರುಗಿದ್ದಾನಲ್ಲಾ? (3)
5.ಉಲ್ಟಾ ನಿಂತಿರುವವ, ಪಾಪರಹಿತ ವ್ಯಕ್ತಿ (3)
6.ತಿರುವುಮುರುವಾಗಿರುವ ತಪ್ಪು (3)
8.ಹಂತ ಹಂತವಾಗಿ ಎಂದು ಹೀಗನ್ನಿ (3)
9.ನೂರು ಎಂದು ಈ ರೀತಿ ಹೇಳಿ (3)
10.ಒಳ್ಳೆಯ ಅದೃಷ್ಟ (3)
11.ಒಳ್ಳೆ ಫಲವನ್ನು ಕೊಡುವುದು (3)
12.ಗಡಿಬಿಡಿಯಿಂದಲೇ ಪ್ರವೇಶಿಸಿರುವ ಎಲ್ಲೆ (2)



6365ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಹತ್ಯಾಕಾಂಡ 3.ಕಾಡತೂಸು
5.ಜಟಕ 7.ಕುರು
9.ರಥ 11.ನಾಕ
12.ವನ 14.ಆನನ
16.ತಳಹದಿ 17.ದಿಗಂಬರ

ಮೇಲಿಂದ ಕೆಳಕ್ಕೆ:
1.ಹಲಾಕು 2.ಡಜ
3.ಕಾಕ 4.ಸುಪಥ
6.ಟಪಾಲು 8.ರುದ್ರನಾಟಕ
9.ರಜತೋತ್ಸವ 10.ಯೌವ್ವನ
11.ನಾಪಿತ 13.ನಶ್ವರ
14.ಆದಿ 15.ನದಿ

ಸುಡೊಕು 6749

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

2		8		7			6	
			4		2			1
	3			5		2		4
		4		3			5	
5	7	2	6		9			8
				2			4	6
3				1			9	
		5	8		3	6		7
1				6				3

6748 ಸುಡೊಕು

9	5	3	8	6	4	7	1	2
7	4	6	1	3	2	9	5	8
8	1	2	7	5	9	6	3	4
2	8	7	6	1	5	4	9	3
3	6	4	2	9	7	1	8	5
5	9	1	4	8	3	2	7	6
6	7	5	3	4	1	8	2	9
4	2	9	5	7	8	3	6	1
1	3	8	9	2	6	5	4	7

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

07 ಏಪ್ರಿಲ್ 2026 ಮಂಗಳವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಕೃಷ್ಣ ಪಂಚಮಿ ಗಂ. 16-35 ನಕ್ಷತ್ರ: ಜ್ಯೇಷ್ಠ ಆಹೋರಾತ್ರ ಯೋಗ: ವ್ಯತೀಪಾತ ಗಂ. 16-17 ಕರಣ: ತೈತಿಲ ಗಂ 16-35 ಮೀನ ಮಾಸದ 24 ನೇ ದಿನ. ಮಳೆ ನಕ್ಷತ್ರ : ರೇವತಿ 3 ನೇ ಪಾದ. ರಾಹುಕಾಲ : ಮಧ್ಯಾಹ್ನ 03-00 - 04-30 , ಸೂರ್ಯೋದಯ : 06-26 ಸೂರ್ಯಾಸ್ತ: 06-39, ಮುಸ್ಲಿಂ ದಿನಾಂಕ : 18 ಶವ್ವಾಲ್, ಅದೃಷ್ಟ ಸಂಖ್ಯೆ : 5, 8

ಮೇಷ: ಮನೆಯ ಹತ್ತಿರದ ನೀವು ನಂಬುವ ದೇವಸ್ಥಾನದ ಸೇವೆ ಮಾಡುವುದರಿಂದ ಗೊಂದಲಗಳು ನಿವಾರಣೆಯಾಗಲಿವೆ. ರಾಸಾಯನಿಕ ವಸ್ತುಗಳ ಬಳಕೆಯಲ್ಲಿ ಜಾಗ್ರತೆ ಇರಲಿ.

ವೃಷಭ: ಕುಟುಂಬ ನಿರ್ವಹಣೆಯಲ್ಲಿ ಒಡಹುಟ್ಟಿದವರ ತಪ್ಪು ಕಲ್ಪನೆಗಳಿಗೆ ಆತ್ಮ-ವಿಶ್ವಾಸದ ಮಾತುಗಳು ನಿಜವನ್ನು ತೋರಿಸಿಕೊಡುತ್ತವೆ. ಬುದ್ಧಿವಂತಿಕೆಯಿಂದ ಕೆಲಸ ಕಾರ್ಯಗಳಲ್ಲಿ ಯಶಸ್ಸುಗಳಿಸಿಕೊಳ್ಳುವಿರಿ. ಹಳದಿ ವಸ್ತ್ರ ಶುಭ ತರಲಿದೆ.

ಮಿಥುನ: ಭಾವನೆಗಳ ಜೊತೆಗೆ ಅಭಿಪ್ರಾಯವು ಬದಲಾಗುವ ಕಾಲ ಇದಾಗಿದೆ. ಹಾಗಾಗಿ ಯಾವುದೇ ವಿಷಯದಲ್ಲಿ ನಿರ್ಧಾರ ತೆಗೆದುಕೊಳ್ಳುವುದು ಸರಿಯಲ್ಲ. ಸಂಸಾರದ ವಿಷಯಗಳತ್ತ ಗಮನ ಹರಿಸಿ.

ಕರ್ಕಾಟಕ: ವೃತ್ತಿ ಜೀವನದಲ್ಲಿ ಸಹೋದ್ಯೋಗಿಗಳ ಮಾತಿನಂತೆ ನಡೆದುಕೊಳ್ಳುವುದು ಉತ್ತಮ. ಕೈಗೊಂಡ ಪೂರ್ವನಿಯೋಜಿತ ಕಾರ್ಯಗಳೆಲ್ಲಾ ಉತ್ತಮ ರೀತಿಯಲ್ಲಿ ನಡೆದು ಹೋಗುವುದು.

ಸಿಂಹ: ಸಂಚಾರದ ವೃತ್ತಿಯಲ್ಲಿ ಅಧಿಕ ಶ್ರಮ ಮತ್ತು ಜವಾಬ್ದಾರಿಗಳಿದ್ದರೂ ಅದಕ್ಕೆ ತಕ್ಕ ಪ್ರತಿಫಲ ಹೊಂದುವಿರಿ. ಅಪರೂಪದ ಅವಕಾಶಗಳಿಂದ ವರ್ಚಸ್ಸನ್ನು ಬೆಳೆಸಿಕೊಳ್ಳುವಿರಿ.

ಕನ್ಯಾ: ಬಂಧುಗಳ ಟೀಕೆಯ ಮಾತುಗಳು ಸ್ವಂತ ವಾಹನ ಖರೀದಿಸುವ ಸನ್ನಿವೇಶಕ್ಕೆ ನಾಂದಿಯಾಗಲಿವೆ. ಗುರಿ ಸಾಧನೆಗಳ ಬಗ್ಗೆ ಲಕ್ಷ್ಯವಿರಿಸಲು ಮಕ್ಕಳಿಗೆ ಬುದ್ಧಿ ಹೇಳುವುದು ಒಳ್ಳೆಯದು. ಸಣ್ಣ ವಿಹಾರಕ್ಕೆ ತೆರಳುವಿರಿ.

ತುಲಾ: ವೃತ್ತಿರಂಗದಲ್ಲಿ ಹಿರಿಯ ಅಧಿಕಾರಿಗಳ ಒತ್ತಡದ ಮೇರೆಗೆ ಅನಿವಾರ್ಯ ಗ್ರಾಹಕರಿಗೆ ಮೋಸ ಮಾಡಬೇಕಾದ ಸಂದರ್ಭಗಳು ಎದುರಾಗಲಿವೆ. ಮರೆಯಲಾರದ ಘಟನೆಯೊಂದು ಸಂಗಾತಿಯೊಂದಿಗೆ ನಡೆಯಲಿದೆ.

ವೃಶ್ಚಿಕ: ಮಕ್ಕಳ ನಡವಳಿಕೆಯಿಂದ ಅಗೌರವಕ್ಕೆ ಕಾರಣವಾಗುವಿರಿ. ನೈತಿಕವಾಗಿ ಪರಸ್ಪರ ಬೆಂಬಲವಾಗಿರುವ ಸ್ನೇಹ ಸಂಬಂಧ ಮುಂದುವರಿಯಲಿದೆ. ಹೈನು ವ್ಯವಸಾಯದಲ್ಲಿ ಆದಾಯ ವೃದ್ಧಿ.


ಧನು: ಹಣಕಾಸಿನ ಕೊರತೆ ಇರುವುದಿಲ್ಲ. ವಿದೇಶಿ ವಸ್ತುಗಳ ಖರೀದಿಗೆ ಧನ ವ್ಯಯವಾಗುವುದನ್ನು ಕಡಿಮೆ ಮಾಡುವುದು ಉತ್ತಮ. ಲೆಕ್ಕಪರಿಶೋಧಕರಿಗೆ ಆದಾಯದಿಂದ ತೃಪ್ತಿ.

ಮಕರ: ಕುಟುಂಬದ ಆಸ್ತಿಯ ವಿಷಯಕ್ಕೆ ಸಂಬಂಧಿಸಿದಂತೆ ಮನಸ್ತಾಪ ಬರದಂತೆ ನೋಡಿಕೊಳ್ಳುವುದು ಉತ್ತಮ. ನೂತನ ದಂಪತಿಗೆ ಸಂಸಾರದಲ್ಲಿ ಸಂತೋಷದ ಅನುಭವ ಸಿಗಲಿದೆ. ರೋಮಾಂಚನಕಾರಿ ವಿಷಯಗಳು ಕಾದಿವೆ.

ಕುಂಭ: ನಂಬಿಕಸ್ಥರಿಂದ ಮೋಸ ಕೃತ್ಯಗಳು ನಡೆಯಲಿವೆ. ವ್ಯವಹಾರಗಳ ಬಗ್ಗೆ ನೀವೇ ಹೆಚ್ಚಿನ ಗಮನಹರಿಸುವುದು ಉತ್ತಮ. ನಾಯಕತ್ವದ ಹೊಣೆ ನಿಭಾಯಿಸುವುದು ಅನಿವಾರ್ಯ.

ಮೀನ: ಹಣವಂತರ ಸಹಾಯ ಹಸ್ತ ನಿಮ್ಮ ಮೇಲಿದೆ. ಮಂಗಳ ಕಾರ್ಯಗಳಿಗೆ ಹೆದರುವ ಅವಶ್ಯಕತೆ ಇಲ್ಲ. ಶಸ್ತ್ರ ವೈದ್ಯ ವೃತ್ತಿಯವರಿಗೆ ಸವಾಲು ಎನ್ನಿಸುವ ಪರಿಸ್ಥಿತಿಯನ್ನು ಎದುರಿಸಬೇಕಾಗುವುದು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	22,713
ಇಂದಿನ ಅಂತ್ಯ:	22,968
ದಿನದ ಗರಿಷ್ಠ:	22,998
	255

ಮೊಟ್ಟೆ ಧಾರಣೆ (ಎನ್‌ಇಸಿಸಿ)	
ಬೆಂಗಳೂರು	
100 ಕ್ಕೆ	₹455
12 ಕ್ಕೆ	₹72
ಮೈಸೂರು: 100 ಕ್ಕೆ	₹460

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹224
ಆರ್‌ಎಸ್‌ಎಸ್-5	₹218
ಗುಡ್ ಲಾಟ್	₹197

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹530-765
ದ್ವಿತಳಿ (ಬಿ.ವಿ)	₹550-825

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)	
ಅರಸೀಕೆರೆ	₹18000-19000
ಬೆಂಗಳೂರು	₹29000-35000
ತಿಪಟೂರು	₹30000-32218

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1770 (1780)
ಸೋಯಾ (ರಿಫೈನ್ಡ್)	₹1590 (1590)
ಸೂರ್ಯಕಾಂತಿ (ರಿಫೈನ್ಡ್)	₹1700 (1720)
ಪಾಮೋಲಿನ್	₹1500 (1490)

ಮುಂಬೈ ಧಾರಣೆ (ಶೇಂಗಾ) 06-04-2026	
ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	10700-10800
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9700-9800
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1780 (1790)
ಒಂದು ವಾರದ ಡೆಲಿವರಿ	1775 (1785)
ಪಾಮ್ ವಾರದ ಡೆಲಿವರಿ	1598 (1488)
ಸೂರ್ಯಕಾಂತಿ ಎಣ್ಣೆ ಕಚ್ಚಾ	1595 (1600)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,48,400 (1,48,200)
ಬೆಳ್ಳಿ ಕೆ.ಜಿಗೆ	2,34,000 (2,34,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ರಸಗೊಬ್ಬರ: ಅನಿಲ ಪೂರೈಕೆ ಹೆಚ್ಚಳ

ಶೇ 90ರ ಮಟ್ಟಕ್ಕೆ ಪೂರೈಕೆ • ಅಮೆರಿಕ, ಆಸ್ಟ್ರೇಲಿಯಾ, ರಷ್ಯಾದಿಂದ ಖರೀದಿ: ಕೇಂದ್ರ

ನವದೆಹಲಿ (ಪಿಟಿಐ): ರಸಗೊಬ್ಬರ ತಯಾರಿಕಾ ಘಟಕಗಳಿಗೆ ನೈಸರ್ಗಿಕ ಅನಿಲ ಪೂರೈಕೆಯನ್ನು ಅವುಗಳ ಅಗತ್ಯದ ಶೇ 90ರ ಮಟ್ಟಕ್ಕೆ ಹೆಚ್ಚು ಮಾಡಲಾಗಿದೆ.



ತೈಲೋತ್ಪನ್ನಗಳ ಮಾರಾಟ ಕಂಪನಿಗಳು ದ್ರವೀಕೃತ ನೈಸರ್ಗಿಕ ಅನಿಲವನ್ನು (ಎಲ್‌ಎನ್‌ಜಿ) ಮಾರುಕಟ್ಟೆಯಲ್ಲಿನ ತಕ್ಷಣದ ಲಭ್ಯತೆ ಆಧಾರದಲ್ಲಿ (ಸ್ಪಾಟ್ ಮಾರ್ಕೆಟ್) ಖರೀದಿಸಲು ಆರಂಭಿಸಿದ ನಂತರದಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ.

ಪಶ್ಚಿಮ ಏಷ್ಯಾದಲ್ಲಿನ ಯುದ್ಧವು ಕೊಲ್ಲಿ ರಾಷ್ಟ್ರಗಳಿಂದ ಭಾರತಕ್ಕೆ ಇಂಧನ ಆಮದು ಮಾಡಿಕೊಳ್ಳುವ ವ್ಯವಸ್ಥೆಯಲ್ಲಿ ಅಡಚಣೆ ಸೃಷ್ಟಿಸಿದ ನಂತರದಲ್ಲಿ ಕೇಂದ್ರ ಸರ್ಕಾರವು ಯೂರಿಯಾ ಉತ್ಪಾದನಾ ಘಟಕಗಳಿಗೆ ಅನಿಲ ಪೂರೈಕೆಯನ್ನು ಅವುಗಳ ಅಗತ್ಯದ ಶೇ 60ರ ಮಟ್ಟಕ್ಕೆ ಮಿತಿಗೊಳಿಸಿತ್ತು. ನಂತರದಲ್ಲಿ ಇದನ್ನು ಶೇ 80ರವರೆಗೆ ಹೆಚ್ಚಿಸಲಾಗಿತ್ತು.

> **ಮನೆಗಳಲ್ಲಿ ಅಡುಗೆಗೆ ಬಳಸುವ ಎಲ್‌ಪಿಜಿ ಕೊಲ್ಲಿ ರಾಷ್ಟ್ರಗಳಿಂದ ಸರಿಯಾಗಿ ಪೂರೈಕೆ ಆಗುತ್ತಿಲ್ಲ. ಹೀಗಿದ್ದರೂ ಮನೆಗಳಿಗೆ ಅವುಗಳ ಪೂರೈಕೆಯನ್ನು ಅಗತ್ಯಕ್ಕೆ ಅನುಗುಣವಾಗಿ ಮಾಡಲಾಗುತ್ತಿದೆ**
> **ಸುಜಾತಾ ಶರ್ಮ,** ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಜಂಟಿ ಕಾರ್ಯದರ್ಶಿ


ಸೋಮವಾರದಿಂದ ಅನ್ವಯ ಆಗುವಂತೆ ಅನಿಲ ಪೂರೈಕೆಯನ್ನು ರಸಗೊಬ್ಬರ ತಯಾರಿಕಾ ಘಟಕಗಳ ಆರು ತಿಂಗಳ ಸರಾಸರಿ ಬಳಕೆಯ ಶೇ 90ರ ಮಟ್ಟಕ್ಕೆ ಹೆಚ್ಚು ಮಾಡಲಾಗಿದೆ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಕತಾರ್‌ನಿಂದ ಎಲ್‌ಎನ್‌ಜಿ ಪೂರೈಕೆ ಆಗುತ್ತಿಲ್ಲ. ಆದರೆ ಭಾರತದ ಕಂಪನಿಗಳು ಅಮೆರಿಕ, ಆಸ್ಟ್ರೇಲಿಯಾ ಮತ್ತು ರಷ್ಯಾದಿಂದ ಅದನ್ನು ಖರೀದಿಸುತ್ತಿವೆ.

ಪೂರೈಕೆ ಹೆಚ್ಚಿರುವ ಕಾರಣದಿಂದಾಗಿ ವಿವಿಧ ವಲಯಗಳಿಗೆ ಅನಿಲ ಪೂರೈಕೆಯನ್ನು ಹೆಚ್ಚು ಮಾಡಲಾಗಿದೆ. ಇತರ ಕೈಗಾರಿಕಾ ವಲಯಗಳಿಗೆ, ವಾಣಿಜ್ಯ ವಲಯಗಳಿಗೆ ಅನಿಲ ಪೂರೈಕೆಯನ್ನು ಶೇ 10ರಷ್ಟು ಹೆಚ್ಚು ಮಾಡಲಾಗುತ್ತದೆ ಎಂದು ಸುಜಾತಾ ಅವರು ಹೇಳಿದ್ದಾರೆ.

ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳಲ್ಲಿ ಬಳಸುವ ವಾಣಿಜ್ಯ ಎಲ್‌ಪಿಜಿಯನ್ನು ಬಿಕ್ಕಟ್ಟು ಆರಂಭವಾಗುವುದಕ್ಕಿಂತ ಮೊದಲಿನ ಬೇಡಿಕೆಯ ಶೇ 70ರ ಪ್ರಮಾಣದಲ್ಲಿ ಪೂರೈಸಲಾಗುತ್ತಿದೆ.

ಸೆನ್ಸೆಕ್ಸ್ 787 ಅಂಶ ಹೆಚ್ಚಳ



ಮುಂಬೈ (ಪಿಟಿಐ): ಪಶ್ಚಿಮ ಏಷ್ಯಾದ ಸಂಘರ್ಷವನ್ನು ಶಮನ ಮಾಡುವ ಉದ್ದೇಶದಿಂದ ಕದನ ವಿರಾಮ ಘೋಷಿಸುವ ಕುರಿತು ಮಾತುಕತೆ ನಡೆಯುತ್ತಿವೆ ಎಂಬ ವರದಿಗಳ ಹಿನ್ನೆಲೆಯಲ್ಲಿ ಕಚ್ಚಾ ತೈಲದ ಬೆಲೆ ತುಸು ಇಳಿಕೆ ಕಂಡಿದೆ. ಇದು ಸೋಮವಾರದ ವಹಿವಾಟಿನಲ್ಲಿ ದೇಶದ ಷೇರುಪೇಟೆ ಸೂಚ್ಯಂಕಗಳ ಏರಿಕೆಗೆ ಕಾರಣವಾಯಿತು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 787 ಅಂಶ ಹೆಚ್ಚಳವಾಗಿ, 74,106ಕ್ಕೆ ಕೊನೆಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 255 ಅಂಶ ಏರಿಕೆಯಾಗಿ, 22,968ಕ್ಕೆ ಅಂತ್ಯಗೊಂಡಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ದರವು ಶೇ 0.71ರಷ್ಟು ಇಳಿಕೆಯಾಗಿದ್ದು, ಪ್ರತೀ ಬ್ಯಾರಲ್ ದರವು 108.3 ಡಾಲರ್ ಆಗಿದೆ.

ಅಡಿಕೆ ಧಾರಣೆ

ಪುತ್ತೂರು	
ಕೋಕ	20000-34500
ಹೊಸತು	30000-50000
ಹಳತು	50000-55500
ಸಾಗರ	
ಬಿಳಿಗೋಟು	10109-35200
ಚಾಲಿ	22129-43899
ಕೋಕ	11099-36309
ಕೆಂಪುಗೋಟು	20999-37170
ರಾಶಿ	31829-55309
ಸಿಪ್ಪೆಗೋಟು	8599-22779
ಶಿವಮೊಗ್ಗ	
ಸರಕು	56300-98106

ಶಿವಮೊಗ್ಗ (ಮುಂದುವರಿದುದು)	
ಬೆಟ್ಟೆ	49100-63330
ರಾಶಿ	43366-55596
ಗೊರಬಲು	28511-38662
ಸಿದ್ದಾಪುರ	
ಬಿಳಿಗೋಟು	27699-38569
ಚಾಲಿ	40869-49599
ಕೋಕ	23889-34219
ಕೆಂಪುಗೋಟು	28900-36900
ರಾಶಿ	48099-53899
ತಟ್ಟಿಬೆಟ್ಟೆ	36299-48699
ಶಿರಸಿ	
ಬೆಟ್ಟೆ	34896-49609
ಬಿಳಿಗೋಟು	29019-42699

ಶಿರಸಿ (ಮುಂದುವರಿದುದು)	
ಚಾಲಿ	45009-50001
ಕೆಂಪುಗೋಟು	24019-35223
ರಾಶಿ	49699-53499
ಯಲ್ಲಾಪುರ	
ಆಪಿ	60179-60179
ಬಿಳಿಗೋಟು	13009-38499
ಚಾಲಿ	38899-50009
ಕೋಕ	16000-33410
ಕೆಂಪುಗೋಟು	18099-38969
ರಾಶಿ	48800-57369
ತಟ್ಟಿಬೆಟ್ಟೆ	36969-50999
ಕುಮಟಾ	
ಚಾಲಿ	46988-46988

ತಿಪಟೂರು ಮಾರುಕಟ್ಟೆಯಲ್ಲಿ ಕ್ವಿಂಟಲ್ ₹32,218ಕ್ಕೆ ಮಾರಾಟ

ಮತ್ತೊಮ್ಮೆ ದಾಖಲೆ ಬರೆದ ಕೊಬ್ಬರಿ ದರ

• ಕೆ.ಜೆ.ಮರಿಯಪ್ಪ

ತುಮಕೂರು: ಉಂಡೆ ಕೊಬ್ಬರಿ ಧಾರಣೆ ಮತ್ತೊಮ್ಮೆ ದಾಖಲೆ ಬರೆದಿದ್ದು, ತಿಪಟೂರು ಎಪಿಎಂಸಿ ಮಾರುಕಟ್ಟೆಯಲ್ಲಿ ಸೋಮವಾರ ನಡೆದ ಹರಾಜಿನಲ್ಲಿ ಕ್ವಿಂಟಲ್ ₹32,218ಕ್ಕೆ ಮಾರಾಟವಾಗಿದೆ.

ಕನಿಷ್ಠ ₹30,000, ಮಾದರಿ ₹31,860ಕ್ಕೆ ಖರೀದಿ ನಡೆದಿದೆ. ಒಟ್ಟು 1,621 ಕ್ವಿಂಟಲ್ ಆವಕವಾಗಿತ್ತು. ಹಿಂದಿನ ವರ್ಷದ ಜೂನ್ 30ರಂದು ನಡೆದ ಹರಾಜಿನಲ್ಲಿ ಕ್ವಿಂಟಲ್ ₹31,606ಕ್ಕೆ ಮಾರಾಟವಾಗುವ ಮೂಲಕ ದಾಖಲೆ ನಿರ್ಮಿಸಿತ್ತು. ಹಿಂದಿನ ಎಲ್ಲ ದಾಖಲೆಗಳನ್ನು ಮುರಿದು ಈಗ ಹೊಸ ದಾಖಲೆಗೆ ನಾಂದಿ ಹಾಡಿದೆ.



ಬೆಲೆ ಏರಿಕೆಯಾಗುತ್ತಿರುವುದು ತೆಂಗು ಬೆಳೆಗಾರರಿಗೆ ಹರ್ಷ ತಂದಿದ್ದರೂ, ರೈತರ ಬಳಿ ಕೊಬ್ಬರಿ ದಾಸ್ತಾನು ಇಲ್ಲವಾಗಿದೆ. ಮಾರುಕಟ್ಟೆಯಲ್ಲಿ ಆವಕ ಕಡಿಮೆಯಾಗಿರುವುದು ಬೆಲೆ ಏರಿಕೆಗೆ ಪ್ರಮುಖ ಕಾರಣವಾಗಿದೆ. ಮುಂದಿನ ದಿನಗಳಲ್ಲಿ ಬೆಲೆ ಮತ್ತಷ್ಟು ಹೆಚ್ಚಳವಾಗ ಬಹುದು ಎಂದು ವರ್ತಕರು ಹೇಳುತ್ತಿದ್ದಾರೆ.

ತಿಪಟೂರು ಎಪಿಎಂಸಿ ಮಾರುಕಟ್ಟೆಯಲ್ಲಿ ಪ್ರತಿ ಸೋಮವಾರ, ಗುರುವಾರ ಹರಾಜು ನಡೆಯುತ್ತದೆ. ಸಾಮಾನ್ಯವಾಗಿ ಪ್ರತಿ ಹರಾಜಿನ ಸಮಯದಲ್ಲೂ 3 ಸಾವಿರ ಕ್ವಿಂಟಲ್‌ಗಿಂತ ಹೆಚ್ಚಿನ ಪ್ರಮಾಣದಲ್ಲಿ ಕೊಬ್ಬರಿ ಮಾರುಕಟ್ಟೆಗೆ ಬರುತ್ತಿತ್ತು. ಆದರೆ ಸೋಮವಾರದ ಹರಾಜಿಗೆ ಕೇವಲ 1,621 ಕ್ವಿಂಟಲ್ ಬಂದಿದೆ.

ಉತ್ತರ ಭಾರತದ ರಾಜ್ಯಗಳು ಸೇರಿದಂತೆ ಬೇರೆ ಕಡೆಗಳಿಂದ ಕೊಬ್ಬರಿಗೆ ಹೆಚ್ಚು ಬೇಡಿಕೆ ಇಲ್ಲವಾಗಿದೆ. ಸೋಮವಾರ ವರ್ತಕರ ಮಂಡಿಗಳಿಗೆ ಹೆಚ್ಚು ಕೊಬ್ಬರಿ ಬಂದಿರಲಿಲ್ಲ. ಆವಕ ಕುಸಿದಿರುವುದು ಬೆಲೆ ಏರಿಯಾಗುವಂತೆ ಮಾಡಿದೆ ಎಂದು ಕೊಬ್ಬರಿ ರವಾನೆದಾರರೊಬ್ಬರು ತಿಳಿಸಿದರು.

ಈ ವರ್ಷದ ಆರಂಭದಲ್ಲೇ ₹31 ಸಾವಿರ ದಾಟುವ ಮೂಲಕ ಬೆಲೆ ಏರಿಕೆ ಸುಳಿವು ನೀಡಿತ್ತು. ₹30 ಸಾವಿರದಿಂದ ₹31ರ ಸಾವಿರದ ನಡುವೆ ಮಾರಾಟವಾಗುತ್ತಿದ್ದ ಕೊಬ್ಬರಿ ₹32 ಸಾವಿರ ದಾಟಿದೆ. ಸಾಮಾನ್ಯವಾಗಿ ಜೂನ್ ತಿಂಗಳಿಂದ ದೀಪಾವಳಿ ವೇಳೆಗೆ ಧಾರಣೆ ಹೆಚ್ಚಳವಾಗುತಿತ್ತು.

ಕೊಬ್ಬರಿ ಉತ್ಪಾದನೆ ಗಣನೀಯವಾಗಿ ಇಳಿದಿದೆ. ಮಾರುಕಟ್ಟೆಯಲ್ಲಿ ಎಳನೀರಿಗೆ ಉತ್ತಮ ಬೆಲೆ ಸಿಗುತ್ತಿದ್ದು, ಬಹಳಷ್ಟು ರೈತರು ಎಳನೀರು ಮಾರಾಟ ಮಾಡುತ್ತಿದ್ದಾರೆ. ಕಾಯಿ ಒಣಗಿಸಿ ಕೊಬ್ಬರಿ ಮಾಡುವುದು ಕಡಿಮೆಯಾಗುತ್ತಿದ್ದು, ಆವಕ ತಗ್ಗುವಂತೆ ಮಾಡಿದೆ.

‘ಆಹಾರ ವಸ್ತುಗಳ ಪೂರೈಕೆ ಅಬಾಧಿತ’

ಅಗತ್ಯ ವಸ್ತುಗಳ ಬೆಲೆಯಲ್ಲಿ ‘ಅಸಾಮಾನ್ಯ ಅಸ್ಥಿರತೆ’ ಕಂಡುಬಂದಿಲ್ಲ: ಕೇಂದ್ರ

ನವದೆಹಲಿ (ಪಿಟಿಐ): ದೇಶದಾದ್ಯಂತ ಚಿಲ್ಲರೆ ಮಾರುಕಟ್ಟೆ ಹಾಗೂ ಸಗಟು ಮಾರುಕಟ್ಟೆಯ ಮೇಲೆ ನಿರಂತರವಾಗಿ ನಿಗಾ ಇರಿಸಿರುವುದಾಗಿ ಕೇಂದ್ರ ಸರ್ಕಾರ ಹೇಳಿದ್ದು, ಪಶ್ಚಿಮ ಏಷ್ಯಾದಲ್ಲಿನ ಬಿಕ್ಕಟ್ಟಿನ ಕಾರಣದಿಂದಾಗಿ ಅಗತ್ಯ ವಸ್ತುಗಳ ಬೆಲೆಯಲ್ಲಿ ‘ಅಸಾಮಾನ್ಯ ಅಸ್ಥಿರತೆ’ ಕಂಡುಬಂದಿಲ್ಲ ಎಂದು ತಿಳಿಸಿದೆ.

ಸಾರ್ವಜನಿಕ ಪಡಿತರ ವ್ಯವಸ್ಥೆ (ಪಿಡಿಎಸ್) ಮೂಲಕ ಹಂಚಿಕೆ ಮಾಡಲು ಬೇಕಿರುವ ಅಕ್ಕಿ ಹಾಗೂ ಗೋಧಿಯ ದಾಸ್ತಾನು ಸಾಕಷ್ಟಿದೆ. ಅಗತ್ಯವಾದ ಆಹಾರ ವಸ್ತುಗಳ ಅಕ್ರಮ ದಾಸ್ತಾನು ಹಾಗೂ ಅವುಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡುವುದರ ವಿರುದ್ಧ ರಾಜ್ಯ ಸರ್ಕಾರಗಳು ಕಠಿಣ ಕ್ರಮ ಜರುಗಿಸಬೇಕು ಎಂದು ಸೂಚಿಸಿದೆ.

> **ಈರುಳ್ಳಿ, ಆಲೂಗೆಡ್ಡೆ ಮತ್ತು ಟೊಮೆಟೊ ಉತ್ಪಾದನೆಯು ಹಿಂದಿನ ವರ್ಷದ ಮಟ್ಟದಲ್ಲಿಯೇ ಇದೆ. ಹೀಗಾಗಿ ಪೂರೈಕೆಯಲ್ಲಿ ಸಮಸ್ಯೆ ಇಲ್ಲ**
> **ಅನುಪಮ್ ಮಿಶ್ರಾ,** ಗ್ರಾಹಕ ವ್ಯವಹಾರಗಳ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ

ಪಶ್ಚಿಮ ಏಷ್ಯಾ ಸಮರದ ಕುರಿತಾಗಿ ಅಂತರ್ ಸಚಿವಾಲಯ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಗ್ರಾಹಕ ವ್ಯವಹಾರಗಳ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ಅನುಪಮ್ ಮಿಶ್ರಾ, ‘ದೇಶದ ಆಹಾರ ಭದ್ರತೆಯ ಸ್ಥಿತಿ ಮೇಲೆ ಕೇಂದ್ರವು ಕಣ್ಣಿಟ್ಟಿದೆ’ ಎಂದು ತಿಳಿಸಿದರು.



ಆಹಾರ ವಸ್ತುಗಳ ಬೆಲೆ ಮೇಲೆ ನಿಗಾ ಇರಿಸಲಾಗಿದೆ, ಅವುಗಳ ಪೂರೈಕೆ ಸರಿಯಾಗಿ ಆಗುವಂತೆ ನೋಡಿಕೊಳ್ಳಲಾಗುತ್ತಿದೆ, ಆಹಾರ ವಸ್ತುಗಳ ಅಕ್ರಮ ದಾಸ್ತಾನು ಹಾಗೂ ಕಾಳಸಂತೆಯಲ್ಲಿ ಅವುಗಳ ಮಾರಾಟ ತಡೆಯಲು ಪ್ರಯತ್ನ ನಡೆದಿದೆ ಎಂದು ಅವರು ವಿವರಿಸಿದರು.

ಇಲಾಖೆಯು 40 ಅಗತ್ಯ ವಸ್ತುಗಳ ಬೆಲೆಯ ವಿವರವನ್ನು ದೇಶದ 528 ಕೇಂದ್ರಗಳಿಂದ ನಿತ್ಯ ತರಿಸಿಕೊಳ್ಳುತ್ತದೆ.

ಈ ವರ್ಷ ದ್ವಿದಳ ಧಾನ್ಯಗಳ ಉತ್ಪಾದನೆಯು ಹಿಂದಿನ ವರ್ಷಕ್ಕಿಂತ ಹೆಚ್ಚಾಗಿದೆ. ಕೇಂದ್ರ ಸರ್ಕಾರದ ಬಳಿ ದ್ವಿದಳ ಧಾನ್ಯದ ಹೆಚ್ಚುವರಿ ಸಂಗ್ರಹ 28 ಲಕ್ಷ ಟನ್ ಇದೆ. 2027ರ ಮಾರ್ಚ್‌ವರೆಗೆ ತೊಗರಿಬೇಳೆ ಹಾಗೂ ಉದ್ದಿನ ಬೇಳೆಯನ್ನು ಮುಕ್ತವಾಗಿ ಆಮದು ಮಾಡಿಕೊಳ್ಳಲು ಅವಕಾಶ ನೀಡಲಾಗಿದೆ ಎಂದು ಮಿಶ್ರಾ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಸೇವಾ ವಲಯದ ಪ್ರಗತಿ ಇಳಿಕೆ

ನವದೆಹಲಿ (ಪಿಟಿಐ): ದೇಶದ ಸೇವಾ ವಲಯದ ಚಟುವಟಿಕೆ ಮಾರ್ಚ್ ತಿಂಗಳಿನಲ್ಲಿ 14 ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆ ಆಗಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆಯ ಮಾಸಿಕ ಸಮೀಕ್ಷೆ ತಿಳಿಸಿದೆ.

ಸೇವಾ ವಲಯದ ಹೊಸ ಬೇಡಿಕೆಗಳಲ್ಲಿ ಇಳಿಕೆ ಆಗಿರುವುದೇ ವಲಯದ ಚಟುವಟಿಕೆ ನಿಧಾನವಾಗಲು ಕಾರಣ ಎಂದು ಸೋಮವಾರ ತಿಳಿಸಿದೆ.

ಎಚ್‌ಎಸ್‌ಬಿಸಿ ಇಂಡಿಯಾ ಸರ್ವಿಸಸ್ ಪಿಎಂಐ ಬ್ಯುಸಿನೆಸ್ ಆ್ಯಕ್ಟಿವಿಟಿ ಸೂಚ್ಯಂಕವು ಫೆಬ್ರುವರಿಯಲ್ಲಿ 58.1ರಷ್ಟು ದಾಖಲಾಗಿತ್ತು. ಇದು ಮಾರ್ಚ್‌ನಲ್ಲಿ 57.5ಕ್ಕೆ ಇಳಿದಿದೆ. ಜನವರಿಯಲ್ಲಿ ಇದು 58.5 ಆಗಿತ್ತು.

ಪರ್ಚೇಸಿಂಗ್ ಮ್ಯಾನೇಜರ್ಸ್ ಸೂಚ್ಯಂಕವು (ಪಿಎಂಐ) 50ಕ್ಕಿಂತ ಹೆಚ್ಚಿನ ಮಟ್ಟದಲ್ಲಿದ್ದರೆ ಅದನ್ನು ಬೆಳವಣಿಗೆ ಎಂದು, 50ಕ್ಕಿಂತ ಕೆಳಕ್ಕೆ ಬಂದರೆ ಅದನ್ನು ಕುಸಿತ ಎಂದು ಪರಿಗಣಿಸಲಾಗುತ್ತದೆ.

‘ದೇಶದ ಸೇವಾ ವಲಯದ ಚಟುವಟಿಕೆ ಮಾರ್ಚ್‌ನಲ್ಲಿ ವಿಸ್ತರಣೆಯ ಹಾದಿಯಲ್ಲಿ ಇದ್ದರೂ, ಕಳೆದ ಎರಡು ತಿಂಗಳಿನಿಂದ ವಲಯದ ಬೆಳವಣಿಗೆ ಪ್ರಮಾಣ ಇಳಿದಿದೆ. ಆಫ್ರಿಕಾ, ಏಷ್ಯಾ, ಆಸ್ಟ್ರೇಲಿಯಾ, ಯುರೋಪ್, ಅಮೆರಿಕ ಮತ್ತು ಪಶ್ಚಿಮ ಏಷ್ಯಾದಿಂದ ಹೊಸ ರಫ್ತು ಕಾರ್ಯಾದೇಶದಲ್ಲಿ ಹೆಚ್ಚಳವಾಗಿದೆ’ ಎಂದು ಎಚ್‌ಎಸ್‌ಬಿಸಿ ಇಂಡಿಯಾದ ಮುಖ್ಯ ಅರ್ಥಶಾಸ್ತ್ರಜ್ಞೆ ಪ್ರಾಂಜುಲ್ ಭಂಡಾರಿ ಹೇಳಿದ್ದಾರೆ.



ಚಿನ್ನದ ದರ ₹2,300, ಬೆಳ್ಳಿ ₹5 ಸಾವಿರ ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಏರಿಕೆಯಾಗಿದೆ.

10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹2,300 ಹೆಚ್ಚಳವಾಗಿ, ₹1,53,800ರಂತೆ ಮಾರಾಟವಾಗಿದೆ. ಬೆಳ್ಳಿ ದರವು ಕೆ.ಜಿಗೆ ₹5 ಸಾವಿರ ಏರಿಕೆಯಾಗಿ, ₹2.42 ಲಕ್ಷಕ್ಕೆ ತಲುಪಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಚಿನ್ನ ಮತ್ತು ಬೆಳ್ಳಿ ದರದಲ್ಲಿ ಇತ್ತೀಚೆಗೆ ಇಳಿಕೆಯಾಗಿತ್ತು. ಇದರಿಂದ ಈ ಲೋಹಗಳ ಖರೀದಿಯು ಹೆಚ್ಚಳವಾಗಿದ್ದರಿಂದ, ಸೋಮವಾರ ಇದರ ಬೆಲೆಯಲ್ಲಿ ಏರಿಕೆ ಆಗಿದೆ ಎಂದು ಮಾರುಕಟ್ಟೆ ವಿಶ್ಲೇಷಕರು ಹೇಳಿದ್ದಾರೆ.

‘ಚಿನ್ನ ಮತ್ತು ಬೆಳ್ಳಿ ಖರೀದಿಗೆ ವರ್ತಕರು ಮುಂದಾಗಿರುವುದು, ಕಚ್ಚಾ ತೈಲ ಬೆಲೆ ಮತ್ತು ಡಾಲರ್ ಮೌಲ್ಯ ಇಳಿಕೆಯು ಈ ಲೋಹಗಳ ದರ ಹೆಚ್ಚಳಕ್ಕೆ ಕಾರಣವಾದವು’ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಸರಕುಗಳ ವಿಭಾಗದ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ಹೇಳಿದ್ದಾರೆ.

‘ವಿವೇಕದ ವಿತ್ತೀಯ ನೀತಿಯಿಂದ ಬಲ’

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರ ಪಾಲಿಸಿದ ವಿವೇಕಯುತವಾದ ವಿತ್ತೀಯ ನೀತಿಯು ಬಂಡವಾಳ ವೆಚ್ಚವನ್ನು ಮುಂದುವರಿಸಲು ಹಾಗೂ ಯುದ್ಧದಿಂದಾಗಿ ತೊಂದರೆಗೆ ಒಳಗಾಗಿರುವ ವಲಯಗಳಿಗೆ ನೆರವು ಒದಗಿಸುವ ಬಲವನ್ನು ತಂದುಕೊಟ್ಟಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಪರಿಸ್ಥಿತಿಯನ್ನು ನಿಭಾಯಿಸಲು ಆರ್‌ಬಿಐ ರೆಪೊ ದರವನ್ನು ಇನ್ನಷ್ಟು ತಗ್ಗಿಸಬಹುದು ಎಂದು ಅವರು ಹೇಳಿದ್ದಾರೆ.

ಭಾರಿ ಮೊತ್ತದ ಸಾಲ ಹೊತ್ತಿರುವ ಹಾಗೂ ಭಾರಿ ಪ್ರಮಾಣದ ವಿತ್ತೀಯ ಕೊರತೆ ಹೊಂದಿರುವ ಹಲವು ದೇಶಗಳು ಇಂದು ಹಣಕಾಸಿನ ವಿಚಾರವಾಗಿ ಹೆಚ್ಚಿನ ಆಯ್ಕೆಗಳನ್ನು ಹೊಂದಿಲ್ಲ. ಒಂದೋ ವೆಚ್ಚ ತಗ್ಗಿಸಬೇಕು ಅಥವಾ ಅಸ್ಥಿರತೆಗೆ ಗುರಿಯಾಗಬೇಕು ಎಂಬಂತಹ ಸ್ಥಿತಿಯನ್ನು ಅವು ಎದುರಿಸುತ್ತಿವೆ ಎಂದು ನಿರ್ಮಲಾ ಅವರು ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ.

‘ಆದರೆ ಭಾರತವು ಹಣಕಾಸಿನ ವಿಚಾರದಲ್ಲಿ ಹೆಚ್ಚಿನ ಕ್ರಮಗಳನ್ನು ಕೈಗೊಳ್ಳುವ ಅವಕಾಶ ಇರಿಸಿಕೊಂಡಿದೆ. ಬಂಡವಾಳ ವೆಚ್ಚ ಮುಂದುವರಿಸಲು, ರೆಪೊ ದರವನ್ನು ತಗ್ಗಿಸಲು, ತೊಂದರೆಗೆ ಒಳಗಾದ ವಲಯಗಳನ್ನು ಗುರಿಯಾಗಿಸಿಕೊಂಡು ನೆರವು ಕ್ರಮಗಳನ್ನು ಜಾರಿಗೆ ತರಲು ಅವಕಾಶ ಇದೆ. ದಶಕದಿಂದ ಪಾಲಿಸಿಕೊಂಡು ಬಂದಿರುವ ಹಣಕಾಸಿನ ಶಿಸ್ತಿನ ಲಾಭ ಇದು’ ಎಂದು ಅವರು ವಿವರಿಸಿದ್ದಾರೆ.

ಭಾರತದಲ್ಲಿ ಸರ್ಕಾರದ ಸಾಲ ಹಾಗೂ ಜಿಡಿಪಿ ನಡುವಿನ ಅನುಪಾತವು ಶೇ 81ರಷ್ಟು ಇದೆ. ಈ ಪ್ರಮಾಣವು ವಿಶ್ವದ ಪ್ರಮುಖ ಅರ್ಥ ವ್ಯವಸ್ಥೆಗಳ ಪೈಕಿ ಜರ್ಮನಿ ನಂತರ ಅತ್ಯಂತ ಕಡಿಮೆ ಎಂದು ನಿರ್ಮಲಾ ಅವರು ಹೇಳಿದ್ದಾರೆ.

ಡೊನಾಲ್ಡ್ ಟ್ರಂಪ್ ಅವರು ಇರಾನ್ ವಿರುದ್ಧ ಅಶ್ಲೀಲ ಪದವನ್ನು ಬಳಸಿರುವುದು ಅವರ ಹತಾಶೆಯ ದ್ಯೋತಕವೇ?

• ಹೌದು • ಇಲ್ಲ • ಗೊತ್ತಿಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಕೊಲ್ಲಿ ದಾಟಿದ 2 ಹಡಗು

ನವದೆಹಲಿ (ಪಿಟಿಐ): ಎಲ್‌ಪಿಜಿ ಹೊತ್ತ ಭಾರತೀಯ ಧ್ವಜ ಹೊಂದಿರುವ ಎರಡು ಹಡಗುಗಳು ಕೊಲ್ಲಿ ದಾಟಿವೆ. ಗ್ರೀನ್ ಆಶಾ, ಗ್ರೀನ್ ಸಾನ್ವಿ ಎಂಬ ಹೆಸರಿನ ಹಡಗುಗಳು ಹೊರ್ಮುಜ್‌ನ ಪೂರ್ವದಲ್ಲಿ ಸಂಚರಿಸುತ್ತಿದ್ದು, 3ನೇ ಹಡಗು ಜಾಗ್ ವಿಕ್ರಮ್ ಇನ್ನೂ ಹೊರ್ಮುಜ್ ಜಲಸಂಧಿ ಯ ಪಶ್ಚಿಮದಲ್ಲಿದೆ ಎಂದು ಶಿಪ್ ಟ್ರ್ಯಾಕಿಂಗ್ ದತ್ತಾಂಶವು ತಿಳಿಸಿದೆ.

ಕದನ ವಿರಾಮ ಪ್ರಸ್ತಾವ ಇರಾನ್‌ನಿಂದ ತಿರಸ್ಕಾರ

ಒಂದನೇ ಪುಟದಿಂದ...

ಯುದ್ಧವನ್ನು ಕೊನೆಗಾಣಿಸುವ ನಿಟ್ಟಿನಲ್ಲಿ ಎರಡು ಹಂತದಲ್ಲಿ ಒಪ್ಪಂದ ನಡೆಯಲಿದೆ ಎಂದು ಪ್ರಸ್ತಾವದಲ್ಲಿ ಉಲ್ಲೇಖಿಸಲಾಗಿತ್ತು.

ಈ ಪ್ರಸ್ತಾವ ಕುರಿತು ಪಾಕಿಸ್ತಾನದ ಸೇನಾ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಆಸೀಮ್ ಮುನೀರ್ ಅವರು ಭಾನುವಾರ ರಾತ್ರಿಯೇ ಅಮೆರಿಕದ ಉಪಾಧ್ಯಕ್ಷ ಜೆ.ಡಿ. ವಾನ್ಸ್, ಸ್ಟೀವ್ ವಿಟ್ಕೋಫ್ ಹಾಗೂ ಅಬ್ಬಾಸ್ ಅರಾಘ್ಚಿ ಜೊತೆಗೂ ಮಾತುಕತೆ ನಡೆಸಿದ್ದರು ಎಂದು ಮೂಲಗಳು ತಿಳಿಸಿವೆ.

‘ಇಸ್ಲಾಮಾಬಾದ್ ಒಪ್ಪಂದ’ದ ಹೆಸರಿನಲ್ಲಿ ಜಲಸಂಧಿಗೆ ಪ್ರಾದೇಶಿಕ ಚೌಕಟ್ಟು ವಿಧಿಸುವುದನ್ನು ಪ್ರಸ್ತಾವದಲ್ಲಿ ವ್ಯಕ್ತಪಡಿಸಲಾಗಿತ್ತು.

ಇರಾನ್ ಬೇಡಿಕೆಯೇನು?: ಇರಾನ್ ಮೊದಲಿನಿಂದಲೂ ಶಾಶ್ವತ ಕದನ ವಿರಾಮ ಬಯಸುತ್ತಿದ್ದು, ಅಮೆರಿಕ ಹಾಗೂ ಇಸ್ರೇಲ್‌ನಿಂದ ಭವಿಷ್ಯದಲ್ಲಿ ಯಾವುದೇ ರೀತಿಯ ದಾಳಿ ನಡೆಯುವುದಿಲ್ಲ ಎಂಬ ಖಾತರಿ ಬೇಕಿದೆ ಎನ್ನುವುದನ್ನು ಸ್ಪಷ್ಟವಾಗಿ ತಿಳಿಸಿದೆ. ಈ ಕುರಿತು ಪಾಕಿಸ್ತಾನ, ಟರ್ಕಿ, ಈಜಿಪ್ಟ್‌ಗೆ ಈ ಸಂದೇಶವನ್ನು ರವಾನಿಸಿದೆ.

ಆರ್ಥಿಕ ದಿಗ್ಬಂಧನವನ್ನು ಹಿಂದಕ್ಕೆ ಪಡೆಯುವ ಬದಲಾಗಿ ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದುವುದಿಲ್ಲ ಎಂಬ ಇರಾನ್‌ನ ಬದ್ಧತೆಯ ಒಪ್ಪಂದವು ಜಾರಿಗೆ ಬರಲಿದೆ ಎಂದು ಮೂಲಗಳು ತಿಳಿಸಿವೆ.

ಯುಎಇ ಮೇಲೆ ಇರಾನ್ ಡ್ರೋನ್ ದಾಳಿ: ಸಂಯುಕ್ತ ಅರಬ್ ಒಕ್ಕೂಟದ ಫುಜೈರಾ ಪಟ್ಟಣದಲ್ಲಿದ್ದ ಟೆಲಿ ಕಮ್ಯುನಿಕೇಷನ್ ಕಟ್ಟಡದ ಮೇಲೆ ಇರಾನ್ ಡ್ರೋನ್ ದಾಳಿ ನಡೆಸಿದ್ದು, ಕಟ್ಟಡಕ್ಕೆ ಹಾನಿಯಾಗಿದೆ ಎಂದು ಸರ್ಕಾರಿ ಸ್ವಾಮ್ಯದ ‘ಡಬ್ಲ್ಯುಎಎಂ’ ಸುದ್ದಿಸಂಸ್ಥೆ ವರದಿ ಮಾಡಿದೆ. ಸರ್ಕಾರಿ ಸ್ವಾಮ್ಯದ ಟೆಲಿಕಾಂ ಕಂಪನಿಯಾಗಿದ್ದು, ದಾಳಿಯಲ್ಲಿ ಯಾವುದೇ ಜೀವ ಹಾನಿಯಾಗಿಲ್ಲ ಎಂದು ಮೂಲಗಳು ಖಚಿತಪಡಿಸಿವೆ.

ಯುದ್ಧ ಮುಂದುವರಿಯಲಿದೆ: ಇರಾನ್ ಸೇನೆ ವಕ್ತಾರ

‘ಇರಾನ್‌ನ ರಾಜಕೀಯ ನಾಯಕರು ಬಯಸುವವರೆಗೂ ಅಮೆರಿಕ ಹಾಗೂ ಇಸ್ರೇಲ್ ವಿರುದ್ಧ ಯುದ್ಧ ಮುಂದುವರಿಯಲಿದೆ’ ಎಂದು ಇರಾನ್‌ನ ಸೇನೆಯ ವಕ್ತಾರರು ತಿಳಿಸಿದ್ದಾರೆ.

‘ಶತ್ರುಗಳು ಖಂಡಿತವಾಗಿಯೂ ವಿಷಾದಿಸಬೇಕು. ಈ ಯುದ್ಧದ ನಂತರ ನಾವು ಸುರಕ್ಷಿತ ಹಂತಕ್ಕೆ ತಲುಪಬೇಕು, ಮತ್ತೊಂದು ಯುದ್ಧಕ್ಕೆ ಸಾಕ್ಷಿಯಾಗಬಾರದು’ ಎಂದು ಸೇನಾ ವಕ್ತಾರ ಮೊಹಮ್ಮದ್ ಅಕ್ರಮಿನಿಯಾ ತಿಳಿಸಿದ್ದಾರೆ.

ಅಮೆರಿಕ-ಇಸ್ರೇಲ್ ವೈಮಾನಿಕ ದಾಳಿ; ಪ್ರತಿದಾಳಿ ನಡೆಸಿದ ಇರಾನ್

ಇರಾನ್‌ನಲ್ಲಿ 25 ಮಂದಿ ಸಾವು

ದುಬೈ/ಜೆರುಸಲೇಂ (ಎಪಿ/ಪಿಟಿಐ): ಇರಾನ್ ಮೇಲೆ ಇಸ್ರೇಲ್ ಮತ್ತು ಅಮೆರಿಕ ಸೋಮವಾರ ಸರಣಿ ದಾಳಿಗಳನ್ನು ನಡೆಸಿದ್ದು, 25ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ.

ಟೆಹರಾನ್‌ನಲ್ಲಿ ಮೂವರು, ಎಸ್ಲಾಮ್‌ಶಾರ್ ಬಳಿ 15 ಮಂದಿ, ಕೋಮ್ ನಗರದ ವಸತಿ ಪ್ರದೇಶದಲ್ಲಿ ಐವರು ಮೃತಪಟ್ಟಿದ್ದಾರೆ. ಇತರ ನಗರಗಳ ಮೇಲೆ ನಡೆದ ದಾಳಿಯಲ್ಲಿ ಆರು ಮಂದಿ ಅಸುನೀಗಿದ್ದಾರೆ.


ಟೆಹರಾನ್‌ನ ಶರೀಫ್ ತಾಂತ್ರಿಕ ವಿಶ್ವವಿದ್ಯಾಲಯವನ್ನು ಗುರಿಯಾಗಿಸಿಕೊಂಡು ಸೋಮವಾರ ಬೆಳಿಗ್ಗೆ ವೈಮಾನಿಕ ದಾಳಿ ನಡೆಸಲಾಗಿದೆ. ವಿ.ವಿ.ಯ ಕಟ್ಟಡಗಳಿಗೆ ಮತ್ತು ಕ್ಯಾಂಪಸ್‌ನ ಪಕ್ಕದಲ್ಲಿರುವ ನೈಸರ್ಗಿಕ ಅನಿಲ ವಿತರಣಾ ಕೇಂದ್ರಕ್ಕೆ ಹಾನಿಯಾಗಿದೆ.

ಯುದ್ಧ ಆರಂಭವಾದ ಬಳಿಕ, ದೇಶದ ಎಲ್ಲ ಶಾಲೆ–ಕಾಲೇಜುಗಳು ಆನ್‌ಲೈನ್ ತರಗತಿಗಳನ್ನು ನಡೆಸುತ್ತಿವೆ. ಹೀಗಿರುವಾಗ, ವಿದ್ಯಾರ್ಥಿಗಳಿಲ್ಲದೆ ಖಾಲಿ ಇರುವ ವಿಶ್ವವಿದ್ಯಾಲಯದ ಆವರಣದಲ್ಲಿ ಯಾವುದನ್ನು ಗುರಿಯಾಗಿಸಿ ಈ ದಾಳಿ ನಡೆಸಲಾಗಿದೆ ಎಂಬುದು ತಕ್ಷಣಕ್ಕೆ ಗೊತ್ತಾಗಿಲ್ಲ.

ಈ ವಿಶ್ವವಿದ್ಯಾಲಯವು ಸೇನೆಯೊಂದಿಗೆ, ಅದರಲ್ಲೂ ವಿಶೇಷವಾಗಿ ರೆವಲ್ಯೂಷನರಿ ಗಾರ್ಡ್‌ನ ನಿಯಂತ್ರಣದಲ್ಲಿರುವ ಬ್ಯಾಲಿಸ್ಟಿಕ್ ಕ್ಷಿಪಣಿ ಯೋಜನೆಯಲ್ಲಿ ಕೆಲಸ ಮಾಡುತ್ತಿರುವುದಕ್ಕಾಗಿ, ಹಲವು ದೇಶಗಳು ಕಳೆದ ಕೆಲವು ವರ್ಷಗಳಿಂದ ಅದರ ಮೇಲೆ ನಿರ್ಬಂಧಗಳನ್ನು ಹೇರಿವೆ.

ಇಸ್ರೇಲ್ ಹಾಗೂ ಅಮೆರಿಕದ ದಾಳಿಗೆ ಪ್ರತಿಯಾಗಿ ಇರಾನ್ ಸಹ ಇಸ್ರೇಲ್ ಮತ್ತು ಅದರ ಕೊಲ್ಲಿ ರಾಷ್ಟ್ರಗಳ ಮೇಲೆ ಕ್ಷಿಪಣಿ ದಾಳಿ ನಡೆಸಿದೆ.

ಇರಾನ್‌ನ ಕ್ಷಿಪಣಿಗಳು ಉತ್ತರ ಇಸ್ರೇಲ್‌ನ ಹೈಫಾ ನಗರದ ಮೇಲೆ ಅಪ್ಪಳಿಸಿದ್ದು, ಅಲ್ಲಿ ವಸತಿ ಕಟ್ಟಡದ ಅವಶೇಷಗಳಲ್ಲಿ ಸಿಲುಕಿ ನಾಲ್ವರು ಮೃತಪಟ್ಟಿದ್ದಾರೆ.



ಇರಾನ್ ನಡೆಸಿದ ಕ್ಷಿಪಣಿ ದಾಳಿಯಿಂದ ಇಸ್ರೇಲ್‌ನ ರಮತ್ ಗನ್ ಪ್ರದೇಶದ ಕಟ್ಟವೊಂದಕ್ಕೆ ಹಾನಿಯಾಗಿದ್ದು, ಅದರ ಅವಶೇಷಗಳು ಕಾರುಗಳ ಮೇಲೆ ಬಿದ್ದು ಜಖಂಗೊಂಡವು —ಎಎಫ್‌ಪಿ ಚಿತ್ರ

ಪಾರ್ಸ್ ಪೆಟ್ರೋಕೆಮಿಕಲ್ ಘಟಕದ ಮೇಲೆ ದಾಳಿ

ದುಬೈ (ಎಪಿ): ಇರಾನ್‌ನ ದಕ್ಷಿಣ ಭಾಗದಲ್ಲಿರುವ ಅತೀ ದೊಡ್ಡ ನೈಸರ್ಗಿಕ ಅನಿಲ ಘಟಕದ ‘ಪಾರ್ಸ್ ಪೆಟ್ರೋಕೆಮಿಕಲ್ ಘಟಕ’ ದ ಮೇಲೆ ಇಸ್ರೇಲ್ ಸೋಮವಾರ ದಾಳಿ ನಡೆಸಿದೆ.

ಸೇನೆಯು ದಾಳಿ ನಡೆಸಿರುವುದನ್ನು ಇಸ್ರೇಲ್ ರಕ್ಷಣಾ ಸಚಿವ ಇಸ್ರೇಲ್ ಕಾಟ್ಜ್ ಖಚಿತಪಡಿಸಿದ್ದಾರೆ.

‘ಇರಾನ್‌ನ ಅರ್ಧದಷ್ಟು ಪೆಟ್ರೋಕೆಮಿಕಲ್ ಉತ್ಪಾದಿಸುವ ಘಟಕದ ಮೇಲೆ ಪ್ರಬಲ ದಾಳಿ ನಡೆಸಿದ್ದೇವೆ. ಮಾತುಕತೆ ಮುಂದುವರಿದರೂ ಕೂಡ ಇರಾನ್‌ಗೆ ಯಾವುದೇ ವಿನಾಯಿತಿ ಇಲ್ಲ’ ಎಂದು ಇಸ್ರೇಲ್‌ನ ರಕ್ಷಣಾ ಇಲಾಖೆಯ ವಕ್ತಾರ ಲೆಫ್ಟಿನೆಂಟ್ ಕರ್ನಲ್ ನಡವ್ ಶೋಶನಿ ತಿಳಿಸಿದ್ದಾರೆ.

ಇರಾನ್ ನಡೆಸಿದ ಕ್ಷಿಪಣಿಗಳು ಮತ್ತು ಡ್ರೋನ್ ದಾಳಿಯನ್ನು ಕುವೈತ್, ಯುನೈಟೆಡ್ ಅರಬ್ ಎಮಿರೇಟ್ಸ್, ಸೌದಿ ಅರೇಬಿಯಾ ದೇಶಗಳ ವಾಯು ರಕ್ಷಣಾ ವ್ಯವಸ್ಥೆಗಳು ನಿಷ್ಕ್ರಿಯಗೊಳಿಸಿವೆ.

ರಾಜತಾಂತ್ರಿಕ ಮಾತುಕತೆಗೆ ಅವಕಾಶ ಕೊಡಿ: ‘ನಾಗರಿಕ ಮೂಲಸೌಕರ್ಯ, ಅದರಲ್ಲೂ ವಿಶೇಷವಾಗಿ ಇಂಧನ ಸೌಲಭ್ಯಗಳನ್ನು ಗುರಿಯಾಗಿಸಿ ದಾಳಿ ನಡೆಸುವುದು ಕಾನೂನುಬಾಹಿರ ಮತ್ತು ಸ್ವೀಕಾರಾರ್ಹವಲ್ಲ. ಹೀಗಾಗಿ, ರಾಜತಾಂತ್ರಿಕ ಮಾತುಕತೆಗೆ ಅವಕಾಶ ನೀಡಬೇಕು’ ಎಂದು ಯುರೋಪಿಯನ್ ಕೌನ್ಸಿಲ್ ಅಧ್ಯಕ್ಷ ಆಂಟೋನಿಯೊ ಕೋಸ್ಟಾ ಅವರು ಸಾಮಾಜಿಕ ಮಾಧ್ಯಮ ‘ಎಕ್ಸ್’ನಲ್ಲಿ ಕರೆ ನೀಡಿದ್ದಾರೆ.

‘ಸಂಘರ್ಷದ ತೀವ್ರತೆಯು ಕದನ ವಿರಾಮ ಅಥವಾ ಶಾಂತಿಯನ್ನು ತರುವುದಿಲ್ಲ. ಮಾತುಕತೆಗಳಿಂದ ಮಾತ್ರ ಇದು ಸಾಧ್ಯ. ಪ್ರಮುಖವಾಗಿ ಪ್ರಾದೇಶಿಕ ಪಾಲುದಾರರು ನಡೆಸುತ್ತಿರುವ ಈಗಿನ ಪ್ರಯತ್ನಗಳಿಂದ ಮಾತ್ರ ಶಾಂತಿ ಲಭಿಸಲು ಸಾಧ್ಯ’ ಎಂದು ಹೇಳಿದ್ದಾರೆ.

ಈವರೆಗೆ 1,900 ಮಂದಿ ಸಾವು: ಯುದ್ಧ ಪ್ರಾರಂಭವಾದ ಬಳಿಕ ಈವರೆಗೆ ಇರಾನ್‌ನಲ್ಲಿ 1,900ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ.

ಲೆಬನಾನ್‌ನಲ್ಲಿ 1,400ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದು, 10 ಲಕ್ಷಕ್ಕೂ ಹೆಚ್ಚು ಜನರು ಸ್ಥಳಾಂತರಗೊಂಡಿದ್ದಾರೆ.

ಬೇಟೆ ನಿಲ್ಲುವುದಿಲ್ಲ: ಇಸ್ರೇಲ್

‘ಇರಾನ್‌ನ ಉಕ್ಕು ಮತ್ತು ಪೆಟ್ರೋಕೆಮಿಕಲ್ ಕೈಗಾರಿಕೆಗಳನ್ನು ತೀವ್ರವಾಗಿ ಹಾನಿಗೊಳಿಸಲಾಗಿದೆ. ಅದರ ಮೂಲಸೌಕರ್ಯ ನಾಶಗೊಳಿಸುವುದನ್ನು ಮುಂದುವರಿಸುತ್ತೇವೆ. ಇದು ಭಯೋತ್ಪಾದಕ ಆಡಳಿತದ ಅವನತಿ ಮತ್ತು ಪತನಕ್ಕೆ ಕಾರಣವಾಗುತ್ತದೆ. ಇಸ್ರೇಲ್ ಮೇಲೆ ದಾಳಿ ಮಾಡುವ ಮತ್ತು ಭಯೋತ್ಪಾದನೆಯನ್ನು ಉತ್ತೇಜಿಸುವ ಅವರ ಸಾಮರ್ಥ್ಯವನ್ನು ಕುಂದಿಸುತ್ತದೆ’ ಎಂದು ಇಸ್ರೇಲ್ ರಕ್ಷಣಾ ಸಚಿವ ಇಸ್ರೇಲ್ ಕಾಟ್ಜ್ ಹೇಳಿದ್ದಾರೆ.

ಇಸ್ರೇಲ್ ರಕ್ಷಣಾ ಪಡೆಗಳ ಮುಖ್ಯಸ್ಥ ಲೆಫ್ಟಿನೆಂಟ್ ಜನರಲ್ ಇಯಾಲ್ ಜಮೀರ್ ಮತ್ತು ಸೇನೆಯ ಹಿರಿಯ ಅಧಿಕಾರಿಗಳೊಂದಿಗೆ ಯುದ್ಧ ಪರಿಸ್ಥಿತಿಯ ಮೌಲ್ಯಮಾಪನ ಕುರಿತು ಸಭೆ ನಡೆಸಿದ ಕಾಟ್ಜ್, ‘ರೆವಲ್ಯೂಷನರಿ ಗಾರ್ಡ್‌ನವರು ನಾಗರಿಕರ ಮೇಲೆ ಗುಂಡು ಹಾರಿಸುತ್ತಿದ್ದಾರೆ. ನಾವು ಭಯೋತ್ಪಾದಕರ ನಾಯಕರನ್ನು ನಿರ್ಮೂಲನೆ ಮಾಡುತ್ತಿದ್ದೇವೆ’ ಎಂದು ತಿಳಿಸಿದ್ದಾರೆ.

‘ಇರಾನ್ ನಾಯಕರು ತಾವು ಗುರಿಯಾಗಿದ್ದೇವೆ ಎಂಬ ಭೀತಿಯಲ್ಲೇ ಬದುಕುತ್ತಿದ್ದಾರೆ. ನಾವು ಅವರನ್ನು ಒಬ್ಬೊಬ್ಬರನ್ನಾಗಿ ಬೇಟೆಯಾಡುವುದನ್ನು ಮುಂದುವರಿಸುತ್ತೇವೆ’ ಎಂದು ಹೇಳಿದ್ದಾರೆ.

‘ಇರಾನ್ ಅಣು ಸ್ಥಾವರದ ಹತ್ತಿರದ ಪ್ರದೇಶಗಳ ಮೇಲಿನ ದಾಳಿ ನಿಲ್ಲಿಸಿ’

ಇರಾನ್‌ನ ಬುಶಹರ್‌ನಲ್ಲಿರುವ ಕಾರ್ಯನಿರ್ವಹಿಸುತ್ತಿರುವ 1,000 ಮೆಗಾವಾಟ್ ಸಾಮರ್ಥ್ಯದ ಅಣು ಸ್ಥಾವರದ ಹತ್ತಿರಲ್ಲೇ ದಾಳಿ ನಡೆಸಲಾಗಿದೆ. ಅಣು ಸ್ಥಾವರವನ್ನು ಗುರಿಯಾಗಿಸಿ ನಡೆಸುವ ದಾಳಿಗಳು ನಿಲ್ಲಬೇಕು. ಯುದ್ಧ ಆರಂಭವಾದಾಗಿನಿಂದ ಅಮೆರಿಕ–ಇಸ್ರೇಲ್ ಈ ಸ್ಥಾವರದ ಹತ್ತಿರದ ಪ್ರದೇಶಗಳ ಮೇಲೆ ನಾಲ್ಕು ಬಾರಿ ದಾಳಿ ನಡೆಸಿವೆ. ಒಮ್ಮೆಯಂತೂ ಸ್ಥಾವರದಿಂದ 75 ಮೀಟರ್ ದೂರದಲ್ಲಿ ದಾಳಿ ನಡೆದಿದೆ. ಅಣು ಸ್ಥಾವರದ ಮೇಲೆ ಮತ್ತು ಅದರ ಸುತ್ತಮುತ್ತಲ ಪ್ರದೇಶದಲ್ಲಿ ಎಂದಿಗೂ ಯಾರೂ ದಾಳಿ ನಡೆಸಬಾರದು

ರಾಫೆಲ್ ಗ್ರೋಸಿ, ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ಪರಮಾಣು ಶಕ್ತಿ ಸಂಸ್ಥೆಯ (ಐಎಇಎ) ನಿರ್ದೇಶಕ (‘ಎಕ್ಸ್’ ಪೋಸ್ಟ್)

‘ಖುದ್ಸ್ ಫೋರ್ಸ್’ ನಾಯಕನ ಹತ್ಯೆ

ಜೆರುಸಲೇಂ (ಎಪಿ): ಇರಾನ್‌ನ ರೆವಲ್ಯೂಷನರಿ ಗಾರ್ಡ್‌ನ ರಹಸ್ಯ ಘಟಕವಾದ ‘ಖುದ್ಸ್ ಫೋರ್ಸ್’ ನಾಯಕ ಅಸ್ಗರ್ ಬಕೇರಿ ಅವರನ್ನು ಹತ್ಯೆ ಮಾಡಿರುವುದಾಗಿ ಇಸ್ರೇಲ್ ಸೇನೆ ಘೋಷಿಸಿದೆ. ‘ಬಕೇರಿ ಅವರು ಇಸ್ರೇಲ್ ಮತ್ತು ಅಮೆರಿಕದ ಗುರಿಗಳ ಮೇಲೆ ದಾಳಿಗಳನ್ನು ಯೋಜಿಸುತ್ತಿದ್ದರು. ಇಸ್ರೇಲ್, ಸಿರಿಯಾ ಮತ್ತು ಲೆಬನಾನ್‌ನಲ್ಲಿ ಕಾರ್ಯಾಚರಣೆಗಳನ್ನು ನಡೆಸುತ್ತಿದ್ದರು’ ಎಂದು ಶೋಶನಿ ತಿಳಿಸಿದ್ದಾರೆ.



ಪಿಚ್ಚರ್‌ನಲ್ಲಿ ತಕ ತಕ ಹೆಜ್ಜೆ...

ಇತ್ತೀಚೆಗೆ ತುಳು ಹಾಗೂ ಕನ್ನಡ ಭಾಷೆಗಳಲ್ಲಿ ನಿರ್ಮಾಣವಾಗುತ್ತಿರುವ ಸಿನಿಮಾಗಳ ಸಂಖ್ಯೆ ಹೆಚ್ಚುತ್ತಿದೆ. 'ಬಿಗ್‌ಬಾಸ್' ಖ್ಯಾತಿಯ ರೂಪೇಶ್ ಶೆಟ್ಟಿ ನಟಿಸಿ, ನಿರ್ದೇಶಿಸಿದ 'ಜೈ', ರಾಜೇಂದ್ರ ಸಿಂಗ್ ಬಾಬು ನಿರ್ದೇಶನದ 'ವೀರ ಕಂಬಳ' ಬಳಿಕ 'ಪಿಚ್ಚರ್' ಎಂಬ ಸಿನಿಮಾ ತುಳು ಹಾಗೂ ಕನ್ನಡದಲ್ಲಿ ಜುಲೈ 24ರಂದು ತೆರೆಗೆ ಬರಲಿದೆ.

ಈ ಸಿನಿಮಾ ಮೂಲಕ ನಟ ಗಣೇಶ್ ದಂಪತಿ ನಿರ್ಮಾಣ ಕ್ಷೇತ್ರಕ್ಕೆ ಇಳಿದಿದ್ದು, ಗೋಲ್ಡನ್ ಮೂವೀಸ್ ಲಾಂಛನದಲ್ಲಿ ಶಿಲ್ಪಾ ಗಣೇಶ್ ಸಿನಿಮಾ ನಿರ್ಮಾಣ ಮಾಡಿದ್ದಾರೆ. ಗಣೇಶ್ ಅವರು ಈ ಸಿನಿಮಾವನ್ನು ಪ್ರಸ್ತುತಪಡಿಸುತ್ತಿದ್ದಾರೆ.

ಸಂದೀಪ ಬೆದ್ರ ನಿರ್ದೇಶನದ ಚೊಚ್ಚಲ ಸಿನಿಮಾದಲ್ಲಿ ನಿತ್ಯಪ್ರಕಾಶ್ ಬಂಟ್ವಾಳ ನಾಯಕನಾಗಿ ನಟಿಸಿದ್ದಾರೆ. ಇತ್ತೀಚೆಗೆ ಸಿನಿಮಾದ ಮೊದಲ ಹಾಡು 'ತಕ ತಕ ನಲಿಪುಗ' ಬಿಡುಗಡೆಯಾಗಿದೆ. ಕನ್ನಡದಲ್ಲೂ 'ತಕ ತಕ ಕುಣಿಸಕ' ಎಂಬ ಸಾಹಿತ್ಯದೊಂದಿಗೆ ಹಾಡು ರಿಲೀಸ್ ಆಗಿದೆ. ಕನ್ನಡ ಹಾಗೂ ತುಳು ಭಾಷೆಯಲ್ಲಿರುವ ಈ ಚಿತ್ರದ ಮೊದಲ ಹಾಡಿಗೆ ಕನ್ನಡದಲ್ಲಿ ಚೇತನ್ ಕುಮಾರ್ ಹಾಗೂ ತುಳುವಿನಲ್ಲಿ ಅನೂಪ್ ಭಂಡಾರಿ ಸಾಹಿತ್ಯ ಬರೆದಿದ್ದಾರೆ. ಹಾಡಿಗೆ ಸ್ಯಾಮುಯೆಲ್ ಎಬಿ ಸಂಗೀತ ನೀಡಿದ್ದಾರೆ. ಚಿತ್ರದಲ್ಲಿ ನಾಲ್ಕು ಹಾಡುಗಳಿದ್ದು, ಉಳಿದ ಹಾಡುಗಳು ಸದ್ಯದಲ್ಲೇ ಬಿಡುಗಡೆಯಾಗಲಿವೆ ಎಂದಿದೆ ಚಿತ್ರತಂಡ.

'ಕೌಟುಂಬಿಕ, ಹಾಸ್ಯ ಕಥಾಹಂದರದ ಈ ಚಿತ್ರದಲ್ಲಿ ಮನರಂಜನೆಯೇ ಪ್ರಧಾನವಾಗಿದೆ. ಈಗಾಗಲೇ ಮಂಗಳೂರು, ಬಂಟ್ವಾಳ, ಕಾಶ್ಮೀರ ಮುಂತಾದ ಕಡೆ ಚಿತ್ರೀಕರಣ ನಡೆದಿದೆ. ಸಿನಿಮಾ ಸದ್ಯ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ' ಎಂದು ಮಾಹಿತಿ ನೀಡಿದೆ ಚಿತ್ರತಂಡ. ಸಹಾಯಕ, ಸಹ ನಿರ್ದೇಶಕರಾಗಿ ಕೆಲಸ ಮಾಡಿರುವ ಸಂದೀಪ್, ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ಬರೆದಿದ್ದಾರೆ.

ನಾಯಕಿಯಾಗಿ ಅಮೃತ ಸುದು ಬಣ್ಣಹಚ್ಚಿದ್ದು, ತುಳು ರಂಗಭೂಮಿ ಹಾಗೂ ಚಿತ್ರರಂಗದ ದೇವದಾಸ್ ಕಾಪಿಕಾಡ್, ನವೀನ್ ಡಿ. ಪಡೀಲ್, ಅರವಿಂದ್ ಬೋಳಾರ್, ಭೋಜರಾಜ್ ವಾಮಂಜೂರ್, ಸಾಯಿಕೃಷ್ಣ, ವಜ್ರಧೀರ್ ಜೈನ್, ಸದಾಶಿವ ಅಮಿನ್, ಪ್ರಸನ್ನ ಶೆಟ್ಟಿ ಬೈಲೂರ್, ಸಂದೀಪ್ ಶೆಟ್ಟಿ ಮಾಣಿ, ಉಮೇಶ್ ಪೂಜಾರ್, ಜಯಶೀಲ ಮರೋಳಿ, ರೂಪ ವರ್ಕಾಡಿ ಮುಂತಾದವರು ತಾರಾಬಳಗದಲ್ಲಿದ್ದಾರೆ. ಸಂತೋಷ್ ರೈ ಪಾತಾಜೆ ಹಾಗೂ ಚಂದ್ರಶೇಖರ್ ಕೆ.ಎಸ್ ಛಾಯಾಚಿತ್ರಗ್ರಹಣ, ರಾಜು ಆರ್ಯನ್ ಸಂಕಲನ, ಧನಂಜಯ್ ಬಿ ಹಾಗೂ ಶ್ರೀರಾಜು ನೃತ್ಯ ನಿರ್ದೇಶನ, ರಾಧೇಶ್ ಹಾಗೂ ಸಂತೋಷ್ ಪೂಜಾರಿ ಕಲಾ ನಿರ್ದೇಶನ ಮತ್ತು ಥ್ರಿಲ್ಲರ್ ಮಂಜು ಸಾಹಸ ನಿರ್ದೇಶನ ಮಾಡಿದ್ದಾರೆ.

ಏ.10ಕ್ಕೆ 'ಪೀಟರ್' ತೆರೆಗೆ



ರವೀಕ್ಷಾ, ರಾಜೇಶ್, ಜಾನ್ವಿ

ಪೃಥ್ವಿ ಅಂಬಾರ್ ನಟನೆಯ 'ದೂರದರ್ಶನ' ಸಿನಿಮಾ ನಿರ್ದೇಶಿಸಿದ್ದ ಸುಕೇಶ್ ಶೆಟ್ಟಿ ನಿರ್ದೇಶನದ 'ಪೀಟರ್' ಬಿಡುಗಡೆಗೆ ದಿನಾಂಕ ನಿಗದಿಯಾಗಿದೆ. ಸಿನಿಮಾ ಏ.10ರಂದು ತೆರೆಕಾಣಲಿದೆ.

'ಪೀಟರ್' ಚಿತ್ರದಲ್ಲಿ ಮಣ್ಣಿನ ಸೊಗಡಿನ ಕಥೆಯನ್ನು ಎಳೆಯನ್ನಾಗಿಸಿಕೊಂಡು ಕೌತುಕ ತುಂಬಿದ ಪ್ರೇಮಕಥೆಯನ್ನು ಸುಕೇಶ್ ತೆರೆಗೆ ತರಲಿದ್ದಾರೆ. ಚಿತ್ರದ ಟ್ರೇಲರ್ ಈಗಾಗಲೇ ಬಿಡುಗಡೆಯಾಗಿದ್ದು, ಇತ್ತೀಚೆಗೆ ಚಿತ್ರದ ಹಾಡುಗಳ ಬಿಡುಗಡೆ ಸಮಾರಂಭ ನಡೆಯಿತು.

'ಸಿನಿಮಾದ ಪ್ರತಿ ಹಂತದಲ್ಲಿ ನಾವು ಹೊಸತನ ಕೊಟ್ಟಿದ್ದೇವೆ. ನೋಡುಗರು ಚಿತ್ರಮಂದಿರದಲ್ಲಿ ಕುಳಿತು ಕೊಡಗಿನ ಭಾಗಮಂಡಲದಲ್ಲಿ ನಡೆಯುವ ರೋಚಕ ಕಥೆಯನ್ನು ಅನುಭವಿಸಬಹುದು. ಅದಕ್ಕೆ ತಕ್ಕಂತೆ ಕಥೆ ಹೆಣೆಯಲಾಗಿದೆ. ಶಬ್ದ ವಿನ್ಯಾಸ, ಪರಿಸರ ಇದೆಲ್ಲದರಿಂದ ಪ್ರೇಕ್ಷಕ ಹೊಸ ಅನುಭವ ಪಡೆಯುವುದು ನಿಶ್ಚಿತ. ಕರ್ನಾಟಕ ಮಾತ್ರವಲ್ಲದೆ ಕೇರಳ, ತಮಿಳುನಾಡು, ಹೈದರಾಬಾದ್‌ನಲ್ಲೂ ಚಿತ್ರದ ಪ್ರಚಾರ ಕೆಲಸ ನಡೆಯುತ್ತಿದೆ. ರಾಜ್ಯದಲ್ಲಿ ಬಿಡುಗಡೆಯಾದ ಎರಡು ವಾರಗಳ ಬಳಿಕ ಹೊರ ರಾಜ್ಯಗಳಲ್ಲಿ ಸಿನಿಮಾ ಬಿಡುಗಡೆಯಾಗಲಿದೆ' ಎಂದಿದ್ದಾರೆ ಸುಕೇಶ್ ಶೆಟ್ಟಿ.

ನಟ ರಾಜೇಶ್ ಧ್ರುವ ಅವರಿಗೆ ಇದು ಎರಡನೇ ಸಿನಿಮಾ. 'ಪೀಟರ್ ರಾಕ್ಷಸನೂ ಹೌದು, ರಕ್ಷಕನೂ ಹೌದು. ಅವನ ಜೀವನದಲ್ಲಿ ಚೆಂಡೆ ತುಂಬಾ ಮುಖ್ಯವಾಗಿರುತ್ತದೆ. ಅದರ ರಕ್ಷಣೆಗೆ ಹೇಗೆ ಮುಂದಾಗುತ್ತಾನೆ ಹಾಗೂ ಅವನ ವೈಯಕ್ತಿಕ ಜೀವನದ ರಕ್ಷಣೆಗೆ ಹೇಗೆ ರಾಕ್ಷಸ ಆಗುತ್ತಾನೆ' ಎನ್ನುವುದು ಚಿತ್ರದ ಕಥೆ ಎನ್ನುತ್ತಾರೆ ರಾಜೇಶ್. ಚಿತ್ರದಲ್ಲಿ ನಾಯಕಿಯಾಗಿ ಜಾನ್ವಿ ನಟಿಸಿದ್ದಾರೆ. ರವೀಕ್ಷಾ ಶೆಟ್ಟಿ, ರಘು ಪಾಂಡೇಶ್ವರ್, ಪ್ರತಿಮಾ ನಾಯಕ್, ರಾಮನಾಡ ಗೌಡ, ವರುಣ್ ಪಟೇಲ್, ಭರತ್, ದೀನಾ, ರಾಧಾಕೃಷ್ಣ ಕುಂಬ್ಳೆ, ರಕ್ಷಿತ್ ದೊಡ್ಡೇರಾ ತಾರಾಗಣದಲ್ಲಿದ್ದಾರೆ. ರಿತ್ವಿಕ್ ಮುರಳೀಧರ್ ಸಂಗೀತ ಸಂಯೋಜನೆ, ಗುರುಪ್ರಸಾದ್ ನಾರ್ನಾಡ್ ಛಾಯಾಚಿತ್ರಗ್ರಹಣ, ನವೀನ್ ಶೆಟ್ಟಿ ಸಂಕಲನ ಚಿತ್ರಕ್ಕಿದೆ.

ವೃದ್ಧಿ ಸ್ಟುಡಿಯೋಸ್ ಬ್ಯಾನರ್‌ನಡಿಯಲ್ಲಿ ರವಿ ಹಿರೇಮಠ್ ಮತ್ತು ರಾಕೇಶ್ ಹೆಗ್ಗಡೆ ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಕೆವಿಎನ್ ಪ್ರೊಡಕ್ಷನ್ಸ್ ಈ ಚಿತ್ರವನ್ನು ವಿತರಿಸುತ್ತಿದೆ.

'ದಿಲ್‌ದಾರ್' ಶ್ರೇಯಸ್ ಮಂಜು



ಶ್ರೇಯಸ್ ಮಂಜು ನಟನೆಯ ಹೊಸ ಸಿನಿಮಾ 'ದಿಲ್‌ದಾರ್' ಬಿಡುಗಡೆಗೆ ಸಜ್ಜಾಗುತ್ತಿದೆ. ಶ್ರೇಯಸ್ ಜನ್ಮದಿನದ ಸಂದರ್ಭದಲ್ಲಿ ಹೊಸ ಟೀಸರ್ ಬಿಡುಗಡೆಗೊಳಿಸಿದೆ ಚಿತ್ರತಂಡ.

ಆ್ಯಕ್ಷನ್ ಜಾನರ್‌ನ ಈ ಸಿನಿಮಾವನ್ನು ಮಧು ಗೌಡ ಗಂಗೂರ್ ನಿರ್ದೇಶಿಸಿದ್ದಾರೆ. ಬಹುತೇಕ ಚಿತ್ರೀಕರಣದ ಕೆಲಸಗಳನ್ನು ಪೂರ್ಣಗೊಳಿಸಿರುವ ತಂಡ ಬಿಡುಗಡೆಗೆ ತಯಾರಿ ಆರಂಭಿಸಿದೆ. ಈ ಸಿನಿಮಾ ಈವತ್ತಿನ ಹೊಸ ತಲೆಮಾರಿಗೆ ಹೊಂದಿಕೆಯಾಗುವಂತಹ ವಿಶಿಷ್ಟ ಕಥೆಯನ್ನೊಳಗೊಂಡಿದೆ ಎಂಬುವುದು ನಿರ್ದೇಶಕರ ಮಾತು. ಎನ್ಸಿಯೆಂಟ್ ಮೂವೀಸ್ ಬ್ಯಾನರ್‌ನಡಿಯಲ್ಲಿ ಆರ್.ಸಂತೋಷ್ ಕುಮಾರ್ 'ದಿಲ್‌ದಾರ್' ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಕೀರ್ತಿ ಕೃಷ್ಣ ಈ ಚಿತ್ರದ ಮೂಲಕ ನಾಯಕಿಯಾಗಿ ಚಂದನವನಕ್ಕೆ ಹೆಜ್ಜೆ ಇಡುತ್ತಿದ್ದಾರೆ. ಸಾಧು ಕೋಕಿಲಾ, ಚಂದ್ರಪ್ರಭ, ಕಾರ್ತಿಕ್, ಚಿಲ್ಲರ್ ಮಂಜು ಮುಂತಾದ ಹಾಸ್ಯ ನಟರ ದಂಡು ಈ ಚಿತ್ರದಲ್ಲಿದೆ. 'ಕೆಜಿಎಫ್' ಖ್ಯಾತಿಯ ಆಂಡ್ರೋ ಅವಿನಾಶ್, ಭಜರಂಗಿ ಲೋಕಿ, ಅರ್ಪಿತ್ ಖಳ ನಟರಾಗಿ ಬಣ್ಣಹಚ್ಚಿದ್ದಾರೆ. ಈಗಾಗಲೇ ಪೋಸ್ಟ್ ಪ್ರೊಡಕ್ಷನ್ ಕಾರ್ಯಗಳನ್ನು ಮುಗಿಸಿಕೊಂಡಿರುವ ಚಿತ್ರತಂಡ ಶೀಘ್ರದಲ್ಲಿಯೇ ಬಿಡುಗಡೆ ದಿನಾಂಕ ಘೋಷಿಸಲಿದೆ.

ಏಷ್ಯಾ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ ಇಂದಿನಿಂದ

ಲಕ್ಷ್ಯ, ಸಿಂಧು ಮೇಲೆ ನಿರೀಕ್ಷೆ



ಪಿ.ವಿ.ಸಿಂಧು



ಲಕ್ಷ್ಯ ಸೇನ್

ನಿಂಗ್ಬೊ (ಚೀನಾ), (ಪಿಟಿಐ): ಬ್ಯಾಡ್ಮಿಂಟನ್ ತಾರೆಗಳಾದ ಲಕ್ಷ್ಯ ಸೇನ್ ಮತ್ತು ಪಿ.ವಿ. ಸಿಂಧು ಅವರು ಮಂಗಳವಾರ ಆರಂಭವಾಗುವ ಬ್ಯಾಡ್ಮಿಂಟನ್ ಏಷ್ಯಾ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಸವಾಲನ್ನುಮುನ್ನಡೆಸಲಿದ್ದಾರೆ.

ಭುಜದ ಗಾಯದಿಂದ ಬಳಲುತ್ತಿರುವ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ–ಚಿರಾಗ್ ಶೆಟ್ಟಿ ಜೋಡಿಯು ಕೂಟದಿಂದ ಹಿಂದೆ ಸರಿದಿದೆ. 2023ರಲ್ಲಿ ಪ್ರಶಸ್ತಿ ಗೆದ್ದಿದ್ದ ಭಾರತದ ಸೂಪರ್ ಸ್ಟಾರ್ ಜೋಡಿ ಈ ಬಾರಿ ಸ್ಪರ್ಧಿಸುತ್ತಿಲ್ಲ.

'ಸಾತ್ವಿಕ್‌ಗೆ ಇನ್ನೂ ಸ್ವಲ್ಪ ನೋವು ಇದೆ, ಆದ್ದರಿಂದ ಅವರು ಈ ವಾರ ಆಡುವುದಿಲ್ಲ' ಎಂದು ಕೋಚ್ ಟಾನ್ ಕಿಮ್‌ಹರ್ ಪಿಟಿಐಗೆ ತಿಳಿಸಿದ್ದಾರೆ.

ಸಾತ್ವಿಕ್ ಅವರ ಬಲ ಭುಜದ ಗಾಯ ದಿಂದಾಗಿ ಸ್ವಿಸ್ ಓಪನ್ ಟೂರ್ನಿಯಲ್ಲಿ ಕ್ವಾರ್ಟರ್ ಫೈನಲ್ ಪಂದ್ಯಕ್ಕೂ ಮುನ್ನ ಸ್ಪರ್ಧೆಯಿಂದ ಹಿಂದೆ ಸರಿದಿದ್ದರು.

ಸಿಂಗಲ್ಸ್ ಅನುಭವಿಗಳಾದ ಲಕ್ಷ್ಯ ಮತ್ತು ಸಿಂಧು ಅವರ ಮೇಲೆ ಹೆಚ್ಚಿನ ನಿರೀಕ್ಷೆಯಿದೆ. ಅವರಿಬ್ಬರೂ ಸಿಂಗಲ್ಸ್ ಪ್ರಶಸ್ತಿಗಾಗಿ ದೇಶದ 61 ವರ್ಷಗಳ ಕಾಯುವಿಕೆಯನ್ನು ಕೊನೆಗೊಳಿಸಲು ಎದುರು ನೋಡುತ್ತಿದ್ದಾರೆ. 1965ರಲ್ಲಿ ದಿನೇಶ್ ಖನ್ನಾ ಅವರು ಮೊದಲ ಬಾರಿ ಪುರುಷರ ಸಿಂಗಲ್ಸ್ ಚಿನ್ನ ಗೆದ್ದಿದ್ದು, ನಂತರದಲ್ಲಿ ಭಾರತ ಪ್ರಶಸ್ತಿಯ ಬರವನ್ನು ಎದುರಿಸುತ್ತಿದೆ.

ಆಲ್ ಇಂಗ್ಲೆಂಡ್ ಚಾಂಪಿಯನ್ ಷಿಪ್‌ನಲ್ಲಿ ರನ್ನರ್ಸ್ ಅಪ್ ಆಗಿರುವ ಸೇನ್ ಪ್ರಶಸ್ತಿಯ ನೆಚ್ಚಿನ ಆಟಗಾರನಾಗಿ ಕಣಕ್ಕಿಳಿಯಲಿದ್ದಾರೆ. ಅಲ್ಮೋರಾದ 24 ವರ್ಷದ ಆಟಗಾರ, ಹಾಂಗ್ ಕಾಂಗ್‌ನ ಲೀ ಚೆಯುಕ್ ಯಿಯು ವಿರುದ್ಧ ತನ್ನ ಅಭಿಯಾನವನ್ನುಆರಂಭಿಸಲಿದ್ದಾರೆ.


ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಸಿಂಧು ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದಿಂದಾಗಿ ಆಲ್ ಇಂಗ್ಲೆಂಡ್ ಚಾಂಪಿಯನ್‌ಷಿಪ್‌ಗೆ ಹೋಗುವ ಮಾರ್ಗದಲ್ಲಿ ದುಬೈನಲ್ಲಿ ಸಿಲುಕಿಕೊಂಡಿದ್ದರು. ನಂತರದಲ್ಲಿ ಸ್ವಿಸ್ ಓಪನ್‌ನಿಂದಲೂ ಹಿಂದೆ ಸರಿದಿದ್ದರು. ಇದೀಗ ಮಲೇಷ್ಯಾದ ವಾಂಗ್ ಲಿಂಗ್ ಚಿಂಗ್ ವಿರುದ್ಧ ತಮ್ಮ ಅಭಿಯಾನವನ್ನುಪ್ರಾರಂಭಿಸಲಿದ್ದಾರೆ.

ಭುಜದ ಗಾಯದಿಂದ ಚೇತರಿಸಿಕೊಂಡು ವಾಪಸಾದ ಎಚ್.ಎಸ್. ಪ್ರಣಯ್ ಅರ್ಹತಾ ಸುತ್ತಿನ ಪಂದ್ಯವನ್ನು ಎದುರಿಸಲಿದ್ದಾರೆ. ಕಿದಂಬಿ ಶ್ರೀಕಾಂತ್, ಸಿಂಗಪುರದ ಎಂಟನೇ ಶ್ರೇಯಾಂಕದ ಲೋಹ್ ಕೀನ್ ಯೂ ಅವರನ್ನು ಎದುರಿಸಲಿದ್ದಾರೆ. ಅಮೆರಿಕ ಓಪನ್ ಚಾಂಪಿಯನ್ ಆಯುಷ್ ಶೆಟ್ಟಿ, ಚೀನಾದ ಐದನೇ ಶ್ರೇಯಾಂಕದ ಲಿ ಶಿ ಫೆಂಗ್ ಅವರನ್ನು ಎದುರಿಸಲಿದ್ದಾರೆ.

ಮಹಿಳೆಯರ ಸಿಂಗಲ್ಸ್‌ನಲ್ಲಿ ಉನ್ನತಿ ಹೂಡಾ ಅವರು ಥಾಯ್ಲೆಂಡ್‌ನ ಸುಪಾನಿದಾ ಕಟೆಥೋಂಗ್ ಅವರನ್ನು, ತನ್ವಿ ಶರ್ಮಾ ಮಲೇಷ್ಯಾದ ಕೆ.ಲೆಟ್ಶಾನಾ ಅವರನ್ನು ಎದುರಿಸಲಿದ್ದಾರೆ. ಮಾಳವಿಕಾ ಬನ್ಸೋಡ್ ಅವರು ಥಾಯ್ಲೆಂಡ್‌ನ ಬುಸಾನನ್ ಒಂಗ್‌ಬಮ್ರುಂಗ್‌ಫಾನ್ ವಿರುದ್ಧ ಕಣಕ್ಕಿಳಿಯಲಿದ್ದಾರೆ.

ಫೈನಲ್‌ಗೆ ಪ್ರಿಯಾ, ಪ್ರೀತಿ, ಅರುಂಧತಿ

ಏಷ್ಯಾ ಬಾಕ್ಸಿಂಗ್ ಚಾಂಪಿಯನ್‌ಷಿಪ್ ನಿಖತ್ ಝರೀನ್, ಲವ್ಲಿನಾ ನಿರ್ಗಮನ



ಪ್ರಿಯಾ



ನಿಖತ್

ಉಲಾನ್‌ಬಾತರ್ (ಮಂಗೋಲಿಯಾ, ಪಿಟಿಐ): ಭಾರತದ ಉದಯೋನ್ಮುಖ ಆಟಗಾರ್ತಿ ಪ್ರೀತಿ ಪವಾರ್ ಅವರು ದಕ್ಷಿಣ ಕೊರಿಯಾದ ಅನುಭವಿ ಸ್ಪರ್ಧಿ ಏಜಿ ಇಮ್ ಅವರಿಗೆ ಆಘಾತ ನೀಡಿದರು. ಅದರೊಂದಿಗೆ ಏಷ್ಯಾ ಬಾಕ್ಸಿಂಗ್ ಚಾಂಪಿಯನ್‌ಷಿಪ್ಸ್‌ನಲ್ಲಿ ಫೈನಲ್ ಪ್ರವೇಶಿಸಿದರು. ಇಮ್ ಅವರು 2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕಂಚು ಜಯಿಸಿದ್ದರು.

ಪ್ರಿಯಾ ಹಾಗೂ ಅರುಂಧತಿ ಚೌಧರಿ ಅವರೂ ಅಮೋಘ ಪ್ರದರ್ಶನದೊಂದಿಗೆ ಪ್ರಶಸ್ತಿ ಸುತ್ತು ಪ್ರವೇಶಿಸಿದರು. ಆದರೆ, ಅನುಭವಿ ಆಟಗಾರ್ತಿಯರಾದ ನಿಖತ್ ಝರೀನ್, ಲವ್ಲಿನಾ ಬೊರ್ಗೊಹೈನ್, ಪೂಜಾ ರಾಣಿ ಹಾಗೂ ಅಂಕುಶಿತಾ ಬೊರೊ ಅವರು ತಮ್ಮ ತಮ್ಮ ವಿಭಾಗದ ಸೆಮಿಫೈನಲ್ ಪಂದ್ಯಗಳಲ್ಲಿ ಸೋತು, ಕಂಚು ಪಡೆದರು.

ಏಷ್ಯನ್ ಗೇಮ್ಸ್ ಕಂಚು ವಿಜೇತೆ ಪ್ರೀತಿ ಅವರು ಮಹಿಳೆಯರ 54 ಕೆ.ಜಿ. ವಿಭಾಗದ ಸೆಮಿಫೈನಲ್‌ನಲ್ಲಿ 5–0 ಅಂತರದ ಸರ್ವಾನುಮತದ ತೀರ್ಪಿನಿಂದ ಕೊರಿಯಾದ ಬಾಕ್ಸರ್‌ಗೆ ಸೋಲುಣಿಸಿದರು. ಸಂಯಮ ಮತ್ತು ಆಕ್ರಮಣಕಾರಿ ಆಟದ ಸಂಯೋಜಿತ ಪ್ರದರ್ಶನದೊಂದಿಗೆ ಮೂರೂ ಸುತ್ತುಗಳಲ್ಲಿ ಮೇಲುಗೈ ಸಾಧಿಸಿದರು.

ಹರಿಯಾಣದ 23 ವರ್ಷ ವಯಸ್ಸಿನ ಪ್ರೀತಿ ಅವರು ಫೈನಲ್‌ನಲ್ಲಿ ಮೂರು ಬಾರಿಯ ವಿಶ್ವ ಚಾಂಪಿಯನ್, ತೈವಾನ್‌ನ ಹುವಾಂಗ್ ಸಿಯಾವೊ–ವೆನ್ ಅವರೊಂದಿಗೆ ಸೆಣಸಲಿದ್ದಾರೆ.

ಅರುಂಧತಿ ಅವರು ಮಹಿಳೆಯರ 70 ಕೆ.ಜಿ.ಯೊಳಗಿನವರ ಸ್ಪರ್ಧೆಯ ಸೆಮಿಫೈನಲ್‌ನಲ್ಲಿ 4–1ರಿಂದ ಉಜ್ಬೇಕಿಸ್ತಾನದ ಒಯ್‌ಶಾ ಟಾಯ್‌ರೊವಾ ವಿರುದ್ಧ ಗೆದ್ದರು. ಅಂತಿಮ ಸುತ್ತಿನಲ್ಲಿ ಅವರು ಕಜಾಕಸ್ತಾನದ ಬೆಕಿಟ್ ಸೀಡಿಶ್ ಅವರೊಂದಿಗೆ ಜಿದ್ದಾಜಿದ್ದಿ ನಡೆಸಬೇಕಿದೆ.

ಮಹಿಳೆಯರ 60 ಕೆ.ಜಿ. ವಿಭಾಗದ ನಾಲ್ಕರ ಘಟ್ಟದಲ್ಲಿ ಪ್ರಿಯಾ ಅವರು 5–0ಯಿಂದ ಸ್ಥಳೀಯ ನೆಚ್ಚಿನ ಆಟಗಾರ್ತಿ ನಮೂನ್ ಮಾಂಖೊರ್ ವಿರುದ್ಧ ಏಕಪಕ್ಷೀಯ ಗೆಲುವು ಸಾಧಿಸಿದರು. ಅವರು ಚಿನ್ನದ ಪದಕಕ್ಕಾಗಿ ಉತ್ತರ ಕೊರಿಯಾದ ಉನ್ ಗ್ಯೊಂಗ್ ವಾನ್ ಅವರೊಂದಿಗೆ ಸೆಣಸಲಿದ್ದಾರೆ.

ಎರಡು ಬಾರಿಯ ವಿಶ್ವ ಚಾಂಪಿಯನ್ ನಿಖತ್ ಅವರು ಮಹಿಳೆಯರ 51 ಕೆ.ಜಿ. ವಿಭಾಗದ ನಾಲ್ಕರ ಘಟ್ಟದಲ್ಲಿ 0–5ರಿಂದ ಪ್ಯಾರಿಸ್ ಒಲಿಂಪಿಕ್ಸ್ ಸ್ವರ್ಣ ವಿಜೇತೆ, ಚೀನಾದ ವು ಯು ಅವರಿಗೆ ಮಣಿದರು. ಲವ್ಲಿನಾ (75 ಕೆ.ಜಿ.) ಅವರೂ ಇದೇ ಅಂತರದಲ್ಲಿ ಉಜ್ಬೇಕಿಸ್ತಾನದ ಅಜೀಜಾ ಜಾಕಿರೋವಾ ಎದುರು ಸೋತರು.

ಅಂಕುಶಿತಾ (65 ಕೆ.ಜಿ.) ಹಾಗೂ ಪೂಜಾ (80 ಕೆ.ಜಿ.) ಅವರು ಸೆಮಿಫೈನಲ್ ಪಂದ್ಯಗಳಲ್ಲಿ ಕ್ರಮವಾಗಿ 0–3ರಿಂದ ತೈವಾನ್‌ನ ನಿಯೆನ್ ಚಿನ್ ಚೆನ್ ಎದುರು ಹಾಗೂ 0–5ರಿಂದ ನಾಡೆಝ್ದಾ ರಿಯಾಬೆಟ್ಸ್ (ಕಜಾಕಸ್ತಾನ) ಎದುರು ಪರಾಭವಗೊಂಡರು.





ಭಾರತದ ಪ್ರೀತಿ ಪವಾರ್ (ಎಡ) ಹಾಗೂ ಅರುಂಧತಿ ಚೌಧರಿ ಸಂಭ್ರಮ

ಚಿತ್ರಗಳು: ಭಾರತ ಬಾಕ್ಸಿಂಗ್ ಫೆಡರೇಶನ್

ವಿಶ್ವ 10ಕೆ ಓಟ: ಬ್ಲಾಂಕಾ ವ್ಲಾಸಿಕ್ ರಾಯಭಾರಿ



ಬೆಂಗಳೂರು: ದಿಗ್ಗಜ ಹೈಜಂಪ್ ಅಥ್ಲೀಟ್, ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತರಾದ ಬ್ಲಾಂಕಾ ವ್ಲಾಸಿಕ್ ಅವರು ಇದೇ 26ರಂದು 'ಸಿಲಿಕಾನ್ ಸಿಟಿ'ಯಲ್ಲಿ ನಡೆಯುವ 'ಟಿಸಿಎಸ್ ವಿಶ್ವ 10ಕೆ ಬೆಂಗಳೂರು' ಓಟದ ರಾಯಭಾರಿಯಾಗಿದ್ದಾರೆ.

ವಿಶ್ವ ಅಥ್ಲೆಟಿಕ್ಸ್‌ನಿಂದ 'ಗೋಲ್ಡ್ ಲೇಬಲ್ ರೇಸ್' ಮಾನ್ಯತೆ ಪಡೆದಿರುವ 18ನೇ ಆವೃತ್ತಿಯ ಓಟದ ಸ್ಪರ್ಧೆಯು ಒಟ್ಟು ₹1.97 ಕೋಟಿ ಬಹುಮಾನ ಮೊತ್ತವನ್ನು ಒಳಗೊಂಡಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಖ್ಯಾತನಾಮ ಅಥ್ಲೀಟ್‌ಗಳು ಕಣಕ್ಕಳಿಯಲಿದ್ದಾರೆ.

2008ರ ಬೀಜಿಂಗ್ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ, 2016ರ ರಿಯೊ ಕೂಟದಲ್ಲಿ ಕಂಚಿನ ಪದಕ ಗೆದ್ದಿರುವ ಕ್ರೊವೇಷ್ಯಾದ ವ್ಲಾಸಿಕ್ ಅವರು ವಿಶ್ವ ಚಾಂಪಿಯನ್‌ಷಿಪ್ ಮತ್ತು ವಿಶ್ವ ಒಳಾಂಗಣ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದ್ದಾರೆ. 2009ರಲ್ಲಿ ಅವರು ಸಾಧಿಸಿದ 2.08 ಮೀಟರ್ ಜಿಗಿತವು ಕ್ರೊವೇಷ್ಯಾದ ರಾಷ್ಟ್ರೀಯ ದಾಖಲೆಯಾಗಿ ಉಳಿದಿದೆ.

'ವಿಶ್ವ 10ಕೆ 18ನೇ ಆವೃತ್ತಿಯ ಭಾಗವಾಗಲು ನನಗೆ ಹೆಮ್ಮೆ ಇದೆ. ಓಟದ ಮೂಲಕ ಸಾವಿರಾರು ಜನರನ್ನು ಒಟ್ಟುಗೂಡಿಸುವ ಈ ಕಾರ್ಯಕ್ರಮ ನಿಜವಾಗಿಯೂ ಸ್ಫೂರ್ತಿದಾಯಕ ಮತ್ತು ಶಕ್ತಿಯುತವಾಗಿದೆ. ಓಟವು ನಮ್ಮನ್ನು ದೈಹಿಕವಾಗಿ ಸಕ್ರಿಯವಾಗಿಸುವ ಜೊತೆಗೆ ಮಾನಸಿಕವಾಗಿ ಸದೃಢಗೊಳಿಸುತ್ತದೆ' ಎಂದು ವ್ಲಾಸಿಕ್ ಹೇಳಿದ್ದಾರೆ.



ಚಾಂಪಿಯನ್ ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಪುರುಷರ ತಂಡ. (ಎಡದಿಂದ) ನಿಂತವರು: ಪ್ರಾಣೇಶ್, ಧ್ರುವ, ವೇದ್, ಆದರ್ಶ (ನಾಯಕ), ಸಚಿನ್ ಬೆಳ್ವಾಡಿ (ಮುಖ್ಯ ಕೋಚ್), ಚಿರಂತನ್, ಶಮಂತ್, ಸಮರ್ಥ, ರಣವೀರ್. ಕುಳಿತವರು: ಕನಿಷ್ಕ, ಜಯದೇವ್, ದಿಲ್ಶಾಂತ್ ಹಾಗೂ ಮೋನಿಷ್

ಬ್ಯಾಸ್ಕೆಟ್‌ಬಾಲ್: ರಾಮಯ್ಯ ಇನ್‌ಸ್ಟಿಟ್ಯೂಟ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಆರ್‌ಐಟಿ) ಪುರುಷರ ತಂಡವು ಗೋವಾದಲ್ಲಿ ಭಾನುವಾರ ಮುಕ್ತಾಯಗೊಂಡ ಅಖಿಲ ಭಾರತ ಅಂತರ ಕಾಲೇಜು ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಮುಡಿಗೇರಿಸಿಕೊಂಡಿತು. ಮಹಿಳೆಯರ ತಂಡವು ರನ್ನರ್ಸ್‌ಅಪ್ ಆಯಿತು.

ಬಿರ್ಲಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಬಿಐಟಿಎಸ್) ಆವರಣದಲ್ಲಿ ನಡೆದ ಚಾಂಪಿಯನ್‌ಷಿಪ್‌ನ ಫೈನಲ್‌ನಲ್ಲಿ ಆರ್‌ಐಟಿ ತಂಡವು 60–48ರಿಂದ ಆತಿಥೇಯ ಬಿಐಟಿಎಸ್ ತಂಡವನ್ನು ಮಣಿಸಿತು. ಆರ್‌ಐಟಿ ತಂಡದ ಕನಿಷ್ಕ 22 ಅಂಕ ಗಳಿಸಿದರೆ, ಪ್ರಾಣೇಶ್ (13) ಹಾಗೂ ಧ್ರುವ (12) ಉತ್ತಮ ಬೆಂಬಲ ನೀಡಿದರು. ಬಿಐಟಿಎಸ್ ತಂಡದ ನೀಲ್ (18) ಹಾಗೂ ಪ್ರತೀಕ್ (14) ಹೋರಾಟ ತೋರಿದರು.

ಮಹಿಳೆಯರ ಫೈನಲ್‌ನಲ್ಲಿ ದೆಹಲಿಯ ಲೇಡಿ ಶ್ರೀರಾಮ್ ಕಾಲೇಜು (ಎಲ್‌ಎಸ್‌ಆರ್) ತಂಡವು 40–37ರಿಂದ ಆರ್‌ಐಟಿ ತಂಡದ ವಿರುದ್ಧ ರೋಚಕ ಗೆಲುವು ಸಾಧಿಸಿತು. ಆನವಿ (22 ಅಂಕ) ಎಲ್‌ಎಸ್‌ಆರ್ ತಂಡದ ಗೆಲುವಿನಲ್ಲಿ ಮಿಂಚಿದರು. ಆರ್‌ಐಟಿ ತಂಡದ ಪರ ನಕ್ಷತ್ರ (15) ಹಾಗೂ ಆಧ್ಯಾ ಐತಾಳ್ (10) ಗಮನಾರ್ಹ ಪ್ರದರ್ಶನ ನೀಡಿದರು.

'ಐಪಿಎಲ್: ಷರತ್ತು ವಿಧಿಸಿ ಟಿಕೆಟ್ ಕೊಡಲಿ'

ಬೆಂಗಳೂರು: 'ನನಗೆ ಕೊಟ್ಟಿದ್ದ ಐಪಿಎಲ್ ಕ್ರಿಕೆಟ್ ಪಂದ್ಯದ ಉಚಿತ ಟಿಕೆಟ್‌ನ ಮೇಲೆ ವರ್ಗಾವಣೆಗೆ ಅವಕಾಶ ಇಲ್ಲ ಎಂದು ನಮೂದಿಸಲಾಗಿತ್ತು. ಹೀಗೆ ಷರತ್ತು ವಿಧಿಸಿ ಟಿಕೆಟ್ ನೀಡಿದರೆ ಆ ಟಿಕೆಟನ್ನು ಶಾಸಕರು ಬೇರೆಯವರಿಗೆ ಕೊಡುವುದಿಲ್ಲ' ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ಶಾಸಕರಿಗೆ ನೀಡಿದ್ದ ಐಪಿಎಲ್ ಕ್ರಿಕೆಟ್ ಪಂದ್ಯದ ಟಿಕೆಟ್ ದುರ್ಬಳಕೆಯಾಗಿರುವ ಬಗ್ಗೆ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಷರತ್ತು ಹಾಕದೇ ಇದ್ದರೆ ಆ ಟಿಕೆಟ್ ಪಡೆದುಕೊಂಡು ಶಾಸಕರ ಕುಟುಂಬದವರೊ, ಸ್ನೇಹಿತರೊ ಅಥವಾ ಇನ್ಯಾರೊ, ಅವರಿಗೆ ಬೇಕಾದವರು ಹೋಗಲು ಅವಕಾಶವಾಗುತ್ತದೆ' ಎಂದರು.

ಸಿ.ಎಂ ಮಾತು ಸರಿ: 'ಪ್ರಸ್ತಾವಿತ ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆ ವೇಳೆ ದಕ್ಷಿಣ ಭಾರತದ ರಾಜ್ಯಗಳಿಗೆ ಅನ್ಯಾಯವಾಗಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿರುವುದು ಸರಿಯಾಗಿದೆ. ಜನಸಂಖ್ಯೆ ಆಧಾರದಲ್ಲಿ ಲೋಕಸಭಾ ಕ್ಷೇತ್ರಗಳ ಸಂಖ್ಯೆಯನ್ನು ಹೆಚ್ಚಿಸುವುದು ಸರಿಯಲ್ಲವೆಂದು ಮುಖ್ಯಮಂತ್ರಿ ಹೇಳಿದ್ದಾರೆ. ಕರ್ನಾಟಕವೂ ಸೇರಿದಂತೆ ದಕ್ಷಿಣದ ರಾಜ್ಯಗಳಲ್ಲಿ ಜನಸಂಖ್ಯೆ ನಿಯಂತ್ರಣ ಉತ್ತಮವಾಗಿ ಆಗಿದೆ. ಉತ್ತರ ಭಾರತದಲ್ಲಿ ಜನಸಂಖ್ಯೆ ಹೆಚ್ಚಳವಾಗಿದೆ. ಕೇಂದ್ರ ಸರ್ಕಾರದ ಜನಸಂಖ್ಯೆಯ ಆಧಾರದಲ್ಲಿ ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆಗೆ ಮುಂದಾಗಿದೆ' ಎಂದರು.

ನಾವೇ ಗೆಲ್ಲುತ್ತೇವೆ: 'ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಗೆಲುವು ನಮ್ಮದೇ' ಎಂದು ಪರಮೇಶ್ವರ ವಿಶ್ವಾಸ ವ್ಯಕ್ತಪಡಿಸಿದರು.

'ಎರಡೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪರ ವಾತಾವರಣವಿದೆ. ಉಪ ಚುನಾವಣೆಯಾದ ಕಾರಣ ಸರ್ಕಾರ ಸಾಧನೆಗಳು ಮುಖ್ಯವಾಗುತ್ತದೆ. ನಾವು ಬಡವರ ಪರ ಏನೆಲ್ಲ ಕಾರ್ಯಕ್ರಮಗಳನ್ನು ಮಾಡಿದ್ದೇವೆ ಎನ್ನುವುದು ಜನರಿಗೆ ತಿಳಿದಿದೆ' ಎಂದರು.

ಆವೇಶ್ ಖಾನ್ ವಿರುದ್ಧ ದೂರು?

ಹೈದರಾಬಾದ್: ಭಾನುವಾರ ನಡೆದ ಐಪಿಎಲ್ ಪಂದ್ಯದ ವೇಳೆ ಲಖನೌ ಸೂಪರ್ ಜೈಂಟ್ಸ್ ತಂಡದ ವೇಗದ ಬೌಲರ್ ಆವೇಶ್ ಖಾನ್ ತೋರಿದ ಅಶಿಸ್ತಿನ ವರ್ತನೆ ವಿರುದ್ಧ ಬಿಸಿಸಿಐಗೆ ದೂರು ನೀಡಲು ಸನ್‌ರೈಸರ್ಸ್ ಹೈದರಾಬಾದ್ ತಂಡದ ಮುಂದಾಗಿದೆ.

ಸನ್‌ರೈಸರ್ಸ್ ನೀಡಿದ್ದ 157 ರನ್‌ಗಳ ಗುರಿ ಬೆನ್ನಟ್ಟಿದ್ದ ಲಖನೌ ತಂಡಕ್ಕೆ ಕೊನೆಯ ಓವರ್‌ನಲ್ಲಿ 9 ರನ್‌ಗಳ ಅಗತ್ಯವಿತ್ತು. ನಾಯಕ ರಿಷಭ್ ಪಂತ್ ಮೊದಲೆರಡು ಎಸೆತಗಳಲ್ಲಿ ಎರಡು ಬೌಂಡರಿಗಳನ್ನು ಹೊಡೆದು ಮೊತ್ತವನ್ನು ಸರಿದೂಗಿಸಿದರು. ನಂತರ ಕೊನೆಯ ಎರಡು ಎಸೆತಗಳಲ್ಲಿ ಒಂದು ರನ್ ಅಗತ್ಯವಿತ್ತು. ಸ್ಟ್ರೈಕ್‌ನಲ್ಲಿದ್ದ ಪಂತ್ ಲಾಂಗ್ ಆನ್ ಮೇಲೆ ಬೌಂಡರಿ ಬಾರಿಸಿದರು. ಚೆಂಡು ಬೌಂಡರಿ ಲೈನ್ ದಾಟುವುದಕ್ಕೂ ಮುನ್ನ ಗೆರೆ ಬಳಿ ನಿಂತಿದ್ದ ಆವೇಶ್ ತಮ್ಮ ಬ್ಯಾಟ್‌ನಿಂದ ವಾಪಸ್ ಮೈದಾನದತ್ತ ಹೊಡೆದರು.

ಈ ವೇಳೆ ಬೌಂಡರಿ ಲೈನ್ ಬಳಿ ಯಾವುದೇ ಫೀಲ್ಡರ್ ಇರಲಿಲ್ಲ. ಇದನ್ನು ಅರಿತುಕೊಂಡು ಆವೇಶ್ ಖಾನ್ ಗೆಲುವಿನ ಸಂಭ್ರಮದಲ್ಲಿ ತಮ್ಮ ಬ್ಯಾಟ್‌ನಿಂದ ಚೆಂಡನ್ನು ಹೊಡೆದರು. ಇದು ವಿವಾದವನ್ನು ಹುಟ್ಟು ಹಾಕಿದೆ. ಈ ಪಂದ್ಯದಲ್ಲಿ ಆವೇಶ್ ಎರಡು ಪ್ರಮುಖ ವಿಕೆಟ್‌ಗಳನ್ನು ಪಡೆದಿದ್ದರು. ಅವರು ಮೊದಲ ಇನಿಂಗ್ಸ್‌ನ 19ನೇ ಓವರ್‌ನಲ್ಲಿ ಹೆನ್ರಿಕ್ ಕ್ಲಾಸೆನ್ ಮತ್ತು ಹರ್ಷ್ ದುಬೆ ಅವರನ್ನು ಔಟ್ ಮಾಡಿದ್ದರು.

'ಈ ಋತುವಿನಲ್ಲಿ ತಮ್ಮ ವಿರುದ್ಧದ ಹಲವು ಅಂಪೈರ್ ತೀರ್ಪುಗಳಿಂದ ಸನ್‌ರೈಸರ್ಸ್ ತಂಡವು ಅಸಮಾಧಾನಗೊಂಡಿದೆ. ಇದರಲ್ಲಿ ಆವೇಶ್ ಸಂಬಂಧಿತ ಘಟನೆಯೂ ಸೇರಿದೆ. ಈ ಸಂಬಂಧ ಬಿಸಿಸಿಐಗೆ ದೂರು ನೀಡಲು ಸಿದ್ಧತೆ ನಡೆಸಿದೆ' ಎಂದು ಕ್ರಿಕ್‌ಬಝ್ ವರದಿ ಮಾಡಿದೆ.

ಸೆಮಿಫೈನಲ್‌ನಲ್ಲಿ ಅಮನ್, ಸುನಿಲ್‌ಗೆ ನಿರಾಸೆ

ಏಷ್ಯನ್ ಕುಸ್ತಿ: ಲಲಿತ್ ಫೈನಲ್‌ಗೆ



ಲಲಿತ್

ನವದೆಹಲಿ (ಪಿಟಿಐ): 23 ವರ್ಷದೊಳಗಿನವರ ಏಷ್ಯನ್ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತ ಕುಸ್ತಿಪಟು ಲಲಿತ್ ಅವರು ಕಿರ್ಗಿಸ್ತಾನದ ಬಿಷ್ಕೆಕ್‌ನಲ್ಲಿ ನಡೆಯುತ್ತಿರುವ ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಫೈನಲ್‌ಗೆ ಲಗ್ಗೆ ಹಾಕಿದರು.

ಸೋಮವಾರ ನಡೆದ ಪುರುಷರ 55 ಕೆಜಿ ಗ್ರೀಕೊ ರೋಮನ್ ಸೆಮಿಫೈನಲ್‌ನಲ್ಲಿ ಭಾರತದ ಪೈಲ್ವಾನ್ 11-3 ಅಂತರದಿಂದ 2025ರ ವಿಶ್ವ ಚಾಂಪಿಯನ್‌ಷಿಪ್ ಕಂಚು ವಿಜೇತ ಹುವೊಯಿಂಗ್ ಶಿ (ಚೀನಾ) ಅವರನ್ನು ಸೋಲಿಸಿದರು.

23 ವರ್ಷದ ಲಲಿತ್ ಅವರು ಚಿನ್ನದ ಪದಕದ ಸುತ್ತಿನಲ್ಲಿ ಎರಡು ಬಾರಿ ಏಷ್ಯನ್ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತ ಬೊಟಿರೋವ್ ಇಖ್ತೋಯೊರ್ (ಉಜ್ಬೇಕಿಸ್ತಾನ) ಅವರನ್ನು ಎದುರಿಸಲಿದ್ದಾರೆ. ಮತ್ತೊಂದು ಸೆಮಿಫೈನಲ್‌ನಲ್ಲಿ ಬೊಟಿರೋವ್ 5-3ರಿಂದ ಕಿರ್ಗಿಸ್ತಾನದ ಉಲಾನ್ ಉಲು ಅವರನ್ನು ಮಣಿಸಿದರು.

ಆದರೆ, ಭಾರತದ ಅಮನ್ (77 ಕೆ.ಜಿ, ಗ್ರೀಕೊ ರೋಮನ್) ಮತ್ತು ಮಾಜಿ ಚಾಂಪಿಯನ್ ಸುನಿಲ್ ಕುಮಾರ್ (87 ಕೆ.ಜಿ, ಗ್ರೀಕೊ ರೋಮನ್) ಅವರು ಮೊದಲ ದಿನ ತಮ್ಮ ವಿಭಾಗಗಳ ಸೆಮಿಫೈನಲ್ ಸ್ಪರ್ಧೆಗಳಲ್ಲಿ ಸೋತರು. ಅವರು ಮಂಗಳವಾರ ಕಂಚಿನ ಪದಕಕ್ಕಾಗಿ ಸ್ಪರ್ಧಿಸುವರು.

ಅಮನ್ 13-3 ಅಂತರದಿಂದ ಇರಾನ್‌ನ ಅಲಿ ಓಸ್ಕೌ ವಿರುದ್ಧ ಸೋತರು. ಭಾರತದ ಪೈಲ್ವಾನ್ ಕ್ವಾರ್ಟರ್ ಫೈನಲ್‌ನಲ್ಲಿ 1–4 ಹಿನ್ನಡೆಯಿಂದ ಚೇತರಿಸಿಕೊಂಡು 6–4ರಿಂದ ಚೀನಾದ ಹಲಿಶಾನ್ ಬಹೆಜಿಯಾಂಗ್ ಅವರನ್ನು ಮಣಿಸಿದ್ದರು. ಕಂಚಿನ ಪದಕಕ್ಕಾಗಿ ದಕ್ಷಿಣ ಕೊರಿಯಾದ ಯೊಂಗ್‌ಹುನ್ ನೋಹ್ ಅವರನ್ನು ಎದುರಿಸಲಿದ್ದಾರೆ.

2020ರ ಏಷ್ಯನ್ ಚಾಂಪಿಯನ್ ಸುನಿಲ್ ಕುಮಾರ್ ಕೂಟದಲ್ಲಿ ತಮ್ಮ ನಾಲ್ಕನೇ ಪದಕಕ್ಕಾಗಿ ಹೋರಾಡಲಿದ್ದಾರೆ. ಅವರು ಸೆಮಿಫೈನಲ್‌ನಲ್ಲಿ 0-8 ಅಂತರದಿಂದ ಇರಾನ್‌ನ ಘೋಲಮ್ರೆಜಾ ಫರೋಖಿಸೆಂಜಾನಿ ವಿರುದ್ಧ ಸೋತರು.

65 ಕೆ.ಜಿ ಗ್ರೀಕೊ ರೋಮನ್ ತೂಕ ವಿಭಾಗದಲ್ಲಿ ಸನ್ನಿ ಕುಮಾರ್ ಅವರು ಕಜಾಕಸ್ತಾನದ ಸೈಫುಲ್ಲಾ ಕುರ್ಮನ್ ವಿರುದ್ಧ ಅರ್ಹತಾ ಸುತ್ತಿನಲ್ಲಿ ಸೋತು ಹೊರಬಿದ್ದರು. 130 ಕೆ.ಜಿ ಗ್ರೀಕೊ ರೋಮನ್ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ಜೋಗಿಂದರ್ ರಾಥಿ ದಕ್ಷಿಣ ಕೊರಿಯಾದ ಮಿನ್ಸಿಯೋಕ್ ಕಿಮ್ ವಿರುದ್ಧ ಸೋತರು.

ಮಂಗಳವಾರ ನಡೆಯಲಿರುವ ಸ್ಪರ್ಧೆಗಳಲ್ಲಿ ಸಾಹಿನ್ (60 ಕೆಜಿ), ಸಚಿನ್ ಸೆಹ್ರಾವತ್ (67 ಕೆಜಿ), ಅನಿಲ್ (72 ಕೆಜಿ) ಪ್ರಿನ್ಸ್ (82 ಕೆಜಿ) ಮತ್ತು ನಿತೇಶ್ (87 ಕೆಜಿ) ಸೇರಿದಂತೆ ಭಾರತದ ಐವರು ಕಣದಲ್ಲಿದ್ದಾರೆ.

ವಿಶ್ವಕಪ್: ಪದಕದ ವಿಶ್ವಾಸದಲ್ಲಿ ಶೂಟರ್‌ಗಳು

ಗ್ರೆನೆಡಾ (ಸ್ಪೇನ್), (ಪಿಟಿಐ): ಭಾರತದ ಶೂಟರ್‌ಗಳು ಮಂಗಳವಾರ ಇಲ್ಲಿ ಆರಂಭವಾಗುವ ಐಎಸ್‌ಎಸ್‌ಎಫ್ ವಿಶ್ವಕಪ್‌ನಲ್ಲಿ ಉತ್ತಮ ಪ್ರದರ್ಶನದ ವಿಶ್ವಾಸದಲ್ಲಿದ್ದಾರೆ. ಕೂಟದ ಮೊದಲ ದಿನ 10 ಮೀಟರ್ ಏರ್ ರೈಫಲ್ ಮತ್ತು ಏರ್ ಪಿಸ್ತೂಲ್ ಸ್ಪರ್ಧೆಗಳು ನಡೆಯಲಿವೆ.

ಪಿಸ್ತೂಲ್ ಮಿಶ್ರ ತಂಡ ಸ್ಪರ್ಧೆಯಲ್ಲಿ ಏಷ್ಯನ್ ಗೇಮ್ಸ್ ಚಾಂಪಿಯನ್ ಪಲಕ್ ಗುಲಿಯಾ ಅವರು ಮುಖೇಶ್ ನೆಲವಳ್ಳಿ ಅವರೊಂದಿಗೆ ಕೈಜೋಡಿಸಲಿದ್ದಾರೆ. 2025ರ ವಿಶ್ವಕಪ್ ಫೈನಲ್ಸ್ ಬೆಳ್ಳಿ ಪದಕ ವಿಜೇತ ಸೈನ್ಯಮ್ ಅವರು ಉಜ್ವಲ್ ಮಲಿಕ್ ಅವರಿಗೆ ಜೋಡಿಯಾಗಲಿದ್ದಾರೆ.

ವಿಶ್ವ ಚಾಂಪಿಯನ್ ಹು ಕೈ ಮತ್ತು ಯಾವೊ ಕಿಯಾನ್ ಸುನ್ ಹಾಗೂ ಪ್ಯಾರಿಸ್ ಒಲಿಂಪಿಕ್ಸ್ ಚಿನ್ನದ ಪದಕ ವಿಜೇತ ಶೀ ಯು ಮತ್ತು ಶೆನ್ ಯಿಯಾವೊ ಅವರು ಸ್ಪರ್ಧಾಕಣದಲ್ಲಿದ್ದು, ಭಾರತದ ಜೋಡಿಗಳಿಗೆ ಕಠಿಣ ಸವಾಲು ಎದುರಾಗಿದೆ.

ಪ್ಯಾರಿಸ್ ಒಲಿಂಪಿಕ್ಸ್ ಬೆಳ್ಳಿ ವಿಜೇತೆ ಟರ್ಕಿಯ ಸೆವ್ವಲ್ ಇಲೈಡಾ ತರ್ಹಾನ್ ಮತ್ತು ಯೂಸುಫ್ ಡಿಕೆಕ್; ಸರ್ಬಿಯಾದ ಜೊರಾನಾ ಅರುನೋವಿಕ್ ಮತ್ತು ಡ್ಯಾಮಿರ್ ಮಿಕೆಕ್; ಹಂಗರಿಯ ವೆರೋನಿಕಾ ಮೇಜರ್ ಮತ್ತು ಅಕೋಸ್ ಕರೋಲಿ ಹಾಗೂ ಜರ್ಮನಿಯ ಕ್ರಿಶ್ಚಿಯನ್ ರೀಟ್ಜ್ ಮತ್ತು ಸ್ವೆಂಜಾ ಬರ್ಗ್ ಸ್ಪರ್ಧೆಯಲ್ಲಿರುವ ಇತರ ಪ್ರಮುಖ ಜೋಡಿಗಳು.

10 ಮೀಟರ್ ಏರ್ ರೈಫಲ್ ಸ್ಪರ್ಧೆಯಲ್ಲಿ ಸೋನಮ್ ಮಸ್ಕರ್ ಮತ್ತು ಗಜಾನನ್ ಖಂಡಗಾಲೆ ಜೋಡಿ ಹಾಗೂ ಶ್ರುತಿ ಮತ್ತು ಅರ್ಷದೀಪ್ ಸಿಂಗ್ ಜೋಡಿ ಭಾರತದ ಸವಾಲನ್ನು ಮುನ್ನಡೆಸಲಿದೆ.



ಈಡನ್ ಗಾರ್ಡನ್ಸ್‌ನಲ್ಲಿ ಮಳೆಯ ಆಟ

ಕೋಲ್ಕತ್ತ ನೈಟ್‌ರೈಡರ್ಸ್– ಪಂಜಾಬ್ ಕಿಂಗ್ಸ್ ತಂಡಗಳಿಗೆ ತಲಾ ಒಂದು ಅಂಕ • ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೆ ಶ್ರೇಯಸ್ ಪಡೆ

ಕೋಲ್ಕತ್ತ (ಪಿಟಿಐ): ಇಲ್ಲಿನ ಈಡನ್ ಗಾರ್ಡನ್ಸ್‌ನಲ್ಲಿ ಸೋಮವಾರ ನಡೆಯಬೇಕಿದ್ದ ಕೋಲ್ಕತ್ತ ನೈಟ್ ರೈಡರ್ಸ್ ಮತ್ತು ಪಂಜಾಬ್ ಕಿಂಗ್ಸ್ ನಡುವಿನ ಐಪಿಎಲ್ ಪಂದ್ಯವು 22 ಎಸೆತಗಳ ನಂತರ ಮಳೆಗೆ ಕೊಚ್ಚಿಹೋಯಿತು. ಉಭಯ ತಂಡಗಳು ತಲಾ ಒಂದು ಪಾಯಿಂಟ್ ಹಂಚಿಕೊಂಡವು.

ಆತಿಥೇಯ ಕೋಲ್ಕತ್ತ ತಂಡವು ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಇನಿಂಗ್ಸ್‌ನ ಎರಡನೇ ಓವರ್ ಬೌಲಿಂಗ್ ಮಾಡಿದ ಝೇವಿಯರ್ (9ಕ್ಕೆ2) ಎರಡು ವಿಕೆಟ್ ಬುಟ್ಟಿಗೆ ಹಾಕಿಕೊಂಡರು. ಆರಂಭಿಕ ಬ್ಯಾಟರ್ ಫಿನ್ ಅಲೆನ್ (6; 7ಎ, 4X1) ಮತ್ತು ಕ್ಯಾಮರಾನ್ ಗ್ರೀನ್ (4; 2ಎ, 4X1) ಅವರು ನಿರ್ಗಮಿಸಿದರು. ಇಬ್ಬರ ಕ್ಯಾಚ್‌ಗಳನ್ನೂ ಪ್ರಭಸಿಮ್ರನ್ ಸಿಂಗ್ ಪಡೆದರು. ಆಸ್ಟ್ರೇಲಿಯಾದ ಝೇವಿಯರ್ ಅವರ ಸ್ವಿಂಗ್ ಎಸೆತಗಳನ್ನು ಎದುರಿಸಲು ಬ್ಯಾಟರ್‌ಗಳು ಪರದಾಡಿದರು.

ಮಳೆ ಆರಂಭವಾಗಿ ಆಟ ಸ್ಥಗಿತವಾದಾಗ ಕೋಲ್ಕತ್ತ ತಂಡವು 3.4 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 25 ರನ್ ಗಳಿಸಿತು. ನಾಯಕ ಅಜಿಂಕ್ಯ ರಹಾನೆ (ಬ್ಯಾಟಿಂಗ್ 8; 6ಎ, 4X1) ಮತ್ತು ಅಂಗಕ್ರಿಷ್ ರಘುವಂಶಿ (ಬ್ಯಾಟಿಂಗ್ 7; 7ಎ) ಕ್ರೀಸ್‌ನಲ್ಲಿದ್ದರು.

ಮಳೆ ಆರಂಭವಾದಾಗ ಕ್ರೀಡಾಂಗಣ ಸಿಬ್ಬಂದಿಯು ಶರವೇಗದಲ್ಲಿ ಪಿಚ್‌ಗಳಿಗೆ ಹೊದಿಕೆ ಹಾಕಿ ರಕ್ಷಿಸಿದರು. ಸ್ವಲ್ಪ ಹೊತ್ತಿನ ನಂತರ ಮಳೆ ನಿಂತಿತು. ಆಗ ಹೊದಿಕೆಗಳನ್ನು ತೆಗೆಯುವ ಸಮಯದಲ್ಲಿ ಮತ್ತೆ ಮಳೆ ಆರಂಭವಾಯಿತು.

ರಾತ್ರಿ 11:14ರ ಕಟ್ ಆಫ್‌ಗೆ 40 ನಿಮಿಷಗಳ ಮೊದಲು ಮಳೆ ನಿಂತಿತು. ಆದರೆ, ಐದು ಓವರ್‌ಗಳ ಪಂದ್ಯಕ್ಕೆ ಮೈದಾನವನ್ನು ಸಿದ್ಧಪಡಿಸಲು ಸಾಕಷ್ಟು ಸಮಯವಿರಲಿಲ್ಲ. ಹೀಗಾಗಿ ಅಂಪೈರ್‌ಗಳು ಉಭಯ ತಂಡಗಳ ನಾಯಕರೊಂದಿಗೆ ಚರ್ಚಿಸಿ ಪಂದ್ಯವನ್ನು ರದ್ದುಗೊಳಿಸಲು ನಿರ್ಧರಿಸಿದರು.

ಹೋದ ವರ್ಷ ಈಡನ್ ಗಾರ್ಡನ್‌ನಲ್ಲಿ ಕೋಲ್ಕತ್ತ ಮತ್ತು ಪಂಜಾಬ್ ಮುಖಾಮುಖಿಯಾಗಿದ್ದ ಪಂದ್ಯವೂ ಮಳೆಯಿಂದಾಗಿ ರದ್ದಾಗಿತ್ತು. ಉಭಯ ತಂಡಗಳು ತಲಾ ಒಂದು ಅಂಕ ಹಂಚಿಕೊಂಡಿದ್ದವು.

ಮೂರು ಪಂದ್ಯಗಳಿಂದ ಒಟ್ಟು 5 ಅಂಕಗಳನ್ನು ಸಂಪಾದಿಸಿದ ಪಂಜಾಬ್ ತಂಡವು ಅಂಕಪಟ್ಟಿಯಲ್ಲಿ ಮತ್ತೆ ಅಗ್ರಸ್ಥಾನಕ್ಕೇರಿತು. ಆರ್‌ಸಿಬಿ (4) ತಂಡವು ಎರಡನೇ ಸ್ಥಾನಕ್ಕೆ ಸರಿಯಿತು. ಕೋಲ್ಕತ್ತ ತಂಡವು ಮೂರು ಪಂದ್ಯಗಳಿಂದ ಒಂದು ಅಂಕದೊಂದಿಗೆ ಎಂಟನೇ ಸ್ಥಾನದಲ್ಲಿದೆ.

ಕೋಲ್ಕತ್ತ ತಂಡವು ಪ್ರಮುಖ ಸ್ಪಿನ್ನರ್‌ಗಳಿಲ್ಲದೆ ಈ ಪಂದ್ಯದಲ್ಲಿ ಕಣಕ್ಕಿಳಿದಿತ್ತು. ವರುಣ್ ಚಕ್ರವರ್ತಿ ಗಾಯಾಳಾದರೆ, ವೆಸ್ಟ್ ಇಂಡೀಸ್‌ನ ಸುನಿಲ್ ನಾರಾಯಣ ಅನಾರೋಗ್ಯದ ಕಾರಣ ತಂಡದಿಂದ ಹೊರಗುಳಿದಿದ್ದರು.



ಮಳೆ ನಿಂತ ಬಳಿಕ ಪಿಚ್ ಪರಿಶೀಲನೆ ನಡೆಸಿದ ಬಂಗಾಳ ಕ್ರಿಕೆಟ್ ಸಂಸ್ಥೆ ಅಧ್ಯಕ್ಷ ಸೌರವ್ ಗಂಗೂಲಿ –ಪಿಟಿಐ ಚಿತ್ರ

ಐಪಿಎಲ್: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಪಿಬಿಕೆಎಸ್	3	2	0	1	5	0.637
ಆರ್‌ಸಿಬಿ	2	2	0	0	4	2.501
ಆರ್‌ಆರ್	2	2	0	0	4	2.233
ಡಿಸಿ	2	2	0	0	4	1.170
ಎಸ್‌ಆರ್‌ಎಚ್	3	1	2	0	2	0.275
ಎಂಐ	2	1	1	0	2	-0.206
ಎಲ್‌ಎಸ್‌ಜಿ	2	1	1	0	2	- 0.542
ಕೆಕೆಆರ್	3	0	2	1	1	-1.964
ಜಿಟಿ	2	0	2	0	0	-0.424
ಸಿಎಸ್‌ಕೆ	3	0	3	0	0	-2.517

ಆರೇಂಜ್ ಕ್ಯಾಪ್–ಸಮೀರ್ ರಿಜ್ವಿ, ಡಿಸಿ (160 ರನ್)
ಪರ್ಪಲ್ ಕ್ಯಾಪ್–ರವಿ ಬಿಷ್ಣೋಯಿ, ಆರ್‌ಆರ್ (5 ವಿಕೆಟ್)

ಕಠಿಣ ಅಭ್ಯಾಸಕ್ಕೆ ಸಿಕ್ಕ ಫಲ: ದೇವದತ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್ಲ ಮಾದರಿಯ ಕ್ರಿಕೆಟ್‌ಗೂ ತಾವು ಸಿದ್ಧ ಎಂಬುದನ್ನು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಬ್ಯಾಟರ್ ದೇವದತ್ತ ಪಡಿಕ್ಕಲ್ ಮತ್ತೆ ತೋರಿಸಿಕೊಟ್ಟಿದ್ದಾರೆ.

ಒಂದೂವರೆ ತಿಂಗಳು ಹಿಂದಷ್ಟೇ ದೇಶಿ ಕ್ರಿಕೆಟ್‌ನ ವೈಟ್ ಬಾಲ್ ಮತ್ತು ರೆಡ್ ಬಾಲ್ ಮಾದರಿಗಳಲ್ಲಿ ರನ್‌ಗಳ ಹೊಳೆ ಹರಿಸಿದ್ದ ಎಡಗೈ ಬ್ಯಾಟರ್, ಈಗ ಐಪಿಎಲ್‌ನಲ್ಲಿಯೂ ತಮ್ಮ ಸಾಮರ್ಥ್ಯ ಮೆರೆಯುತ್ತಿದ್ದಾರೆ. ಇದಕ್ಕಾಗಿ ಅವರು ತಮ್ಮ 'ಆರಾಮ ವಲಯ'ವನ್ನು ಮೀರಿ ಹೊರಬಂದಿದ್ದಾರೆ. ಪೂರ್ಣ ಪರಿಶ್ರಮದೊಂದಿಗೆ ತಾಲೀಮು ನಡೆಸುತ್ತಿದ್ದಾರೆ.

ಪ್ರಸಕ್ತ ಐಪಿಎಲ್‌ನಲ್ಲಿ ಮೊದಲ ಪಂದ್ಯದಲ್ಲಿ ಸನ್‌ರೈಸರ್ಸ್ ವಿರುದ್ಧ 61 ಮತ್ತು ಭಾನುವಾರ ಚೆನ್ನೈ ಸೂಪರ್ ಕಿಂಗ್ಸ್ ಎದುರು 50 ರನ್ ಗಳಿಸಿದ್ದರು. ಅದರೊಂದಿಗೆ ತಂಡದ ಗೆಲುವಿಗೆ ಶಕ್ತಿ ತುಂಬಿದ್ದರು. ಚೆನ್ನೈ ವಿರುದ್ಧ ಆರ್‌ಸಿಬಿಯು 43 ರನ್‌ಗಳಿಂದ ಜಯಿಸಿತ್ತು.

'ಕಠಿಣ ಪರಿಶ್ರಮದಿಂದ ಮಾಡಿದ ಅಭ್ಯಾಸದಿಂದಾಗಿ ಆತ್ಮವಿಶ್ವಾಸದಿಂದ ಆಡಲು ಸಾಧ್ಯವಾಗಿದೆ. ನಮ್ಮನ್ನು ನಾವು ಬದಲಾಯಿಸಿಕೊಳ್ಳುವುದು ಸುಲಭವಲ್ಲ. ಏಕೆಂದರೆ ಮೂಲ ಹಂತದಿಂದಲೇ ಕೌಶಲಗಳನ್ನು ಪರಿಷ್ಕರಿಸಿಕೊಳ್ಳಬೇಕು. ಮೊದಲಿನಿಂದಲೂ ಕಲಿತದ್ದನ್ನು ಬದಲಿಸುತ್ತ ಬೆಳೆಯಬೇಕು' ಎಂದು ಪಂದ್ಯದ ನಂತರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

'ನಾನು ಬದಲಾವಣೆಗಳನ್ನು ಪ್ರಜ್ಞಾಪೂರ್ವಕವಾಗಿ ಮಾಡಿಕೊಳ್ಳಬೇಕಾಯಿತು. ಆರ್‌ಸಿಬಿಯ ತರಬೇತಿ ಮತ್ತು ನೆರವು ಸಿಬ್ಬಂದಿಯು ನನಗೆ ತೋರಿದ ಮಾರ್ಗದರ್ಶನ ಮಹತ್ವದ್ದು. ಸರಿಯಾದ ದಾರಿಯಲ್ಲಿ ಮಾರ್ಗದರ್ಶನ ನೀಡಿದರು' ಎಂದರು.

ಟಿಮ್ ಡೇವಿಡ್ ಅವರ ಬ್ಯಾಟಿಂಗ್ ಬಗ್ಗೆ ಪ್ರತಿಕ್ರಯಿಸಿದ ಅವರು, 'ಅವರು ಈ ರೀತಿ ಆಡುವುದನ್ನು ನಾವು ಅಭ್ಯಾಸದ ಸಂದರ್ಭದಲ್ಲಿ ನೋಡಿದ್ದೇವೆ. ತಾವು ಎದುರಿಸುವ ಪ್ರತಿಯೊಂದು ಎಸೆತವನ್ನೂ ಸಿಕ್ಸರ್ ಹೊಡೆಯಲು ಪ್ರಯತ್ನಿಸುವ ಆಟಗಾರ ಅವರು. ಪಂದ್ಯದಲ್ಲಿ ಅವರು ಕ್ರೀಸ್‌ಗೆ ಬರುವ ಹಂತದಲ್ಲಿ ಹೆಚ್ಚು ರನ್ ಗಳಿಸುವ ಒತ್ತಡ ಬಹಳಷ್ಟಿರುತ್ತದೆ. ಆದರೆ ಆ ಪರಿಸ್ಥಿತಿಯಲ್ಲಿ ಬೀಡುಬೀಸಾಗಿ ಆಡುವ ಸಮರ್ಥರು ಅವರು. ಅದನ್ನು ಅವರು ಕಳೆದ ಕೆಲವು ವರ್ಷಗಳಿಂದ ಮಾಡುತ್ತಿದ್ದಾರೆ' ಎಂದರು.

ಟಿಮ್ ಡೇವಿಡ್ ಅವರು 25 ಎಸೆತಗಳಲ್ಲಿ ಅಜೇಯ 70 ರನ್ ಗಳಿಸಿದ್ದರು. ಅದರಿಂದಾಗಿ ಆರ್‌ಸಿಬಿ ತಂಡವು 20 ಓವರ್‌ಗಳಲ್ಲಿ 3ಕ್ಕೆ 250 ರನ್ ಗಳಿಸಿತ್ತು. ಚೆನ್ನೈ ತಂಡವು 19.4 ಓವರ್‌ಗಳಲ್ಲಿ 207 ರನ್‌ಗಳಿಸಿ ಆಲೌಟ್ ಆಯಿತು.



ದೇವದತ್ತ ಪಡಿಕ್ಕಲ್ ಪಿಟಿಐ ಚಿತ್ರ

ರಾಜಸ್ಥಾನ ರಾಯಲ್ಸ್ ತಂಡಕ್ಕೆ ಇಂಡಿಯನ್ಸ್ ಸವಾಲು ಇಂದು

ಗೆಲ್ಲುವ ಛಲದಲ್ಲಿ ಮುಂಬೈ ಇಂಡಿಯನ್ಸ್

ಗುವಾಹಟಿ (ಪಿಟಿಐ): ಮುಂಬೈ ಇಂಡಿಯನ್ಸ್ ತಂಡವು ಮಂಗಳವಾರ ಇಲ್ಲಿ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ಎದುರು ಕಣಕ್ಕಿಳಿಯಲಿದೆ.

ಗೆಲುವಿನ ಹಾದಿಗೆ ಮರಳುವ ಛಲದಲ್ಲಿರುವ ಮುಂಬೈ ತಂಡದ ನಾಯಕ ಹಾರ್ದಿಕ್ ಪಾಂಡ್ಯ ಅನಾರೋಗ್ಯದಿಂದ ಪೂರ್ಣ ಚೇತರಿಸಿಕೊಂಡು ಕಣಕ್ಕಿಳಿಯುವ ನಿರೀಕ್ಷೆ ಗರಿಗೆದರಿದೆ.

ಟೂರ್ನಿಯ ಮೊದಲ ಪಂದ್ಯದಲ್ಲಿ ತಂಡವು ಜಯಿಸಿತ್ತು. ಆದರೆ ಎರಡನೇ ಪಂದ್ಯದಲ್ಲಿ ಹಾರ್ದಿಕ್ ಆಡಿರಲಿಲ್ಲ. ಹಂಗಾಮಿ ನಾಯಕ ಸೂರ್ಯಕುಮಾರ್ ಯಾದವ್ ಮುಂದಾಳತ್ವ ವಹಿಸಿದ್ದರು. ಆ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಎದುರು ತಂಡವೂ ಸೋತಿತ್ತು.

ಕಳೆದ ಪಂದ್ಯದಲ್ಲಿ ಹಾರ್ದಿಕ್ ಬದಲಿಗೆ ಆಲ್‌ರೌಂಡರ್ ದೀಪಕ್ ಚಾಹರ್ ಅವರನ್ನು ಆಡಿಸಲಾಯಿತು. ಅವರು ಉತ್ತಮ ಬೌಲಿಂಗ್ ಮಾಡಿದರು. ಆದರೆ ಎಡಗೈ ವೇಗಿ ಟ್ರೆಂಟ್ ಬೌಲ್ಟ್ ಬದಲಿಗೆ ವೇಗದ ಬೌಲಿಂಗ್ ಆಲ್‌ರೌಂಡರ್ ಕಾರ್ಬಿನ್ ಬಾಷ್ ಅವರನ್ನು ಕಣಕ್ಕಿಳಿಸಿದ್ದು ಮುಂಬೈಗೆ ತಿರುಗುಬಾಣವಾಯಿತು. ಅವರು ಹೆಚ್ಚು ರನ್ ಬಿಟ್ಟುಕೊಟ್ಟು ದುಬಾರಿಯಾದರು. ಶಾರ್ದೂಲ್ ಠಾಕೂರ್ ಕೂಡ ಹೆಚ್ಚು ರನ್ ಕೊಟ್ಟಿದ್ದರು. ಜಸ್‌ಪ್ರೀತ್ ಬೂಮ್ರಾ ಬಿಗಿ ದಾಳಿ ನಡೆಸಿದ್ದರು. ಆದರೆ ವಿಕೆಟ್ ಪಡೆದಿರಲಿಲ್ಲ. ಅದರಿಂದಾಗಿ ಮಧ್ಯಮವೇಗಿಯೊಬ್ಬರ ಅಗತ್ಯ ತಂಡಕ್ಕೆ ಇದೆ. ಅದಕ್ಕಾಗಿಯೇ ಈಗ ಮುಂಬೈ ಬಳಗದ ಮ್ಯಾನೇಜ್‌ಮೆಂಟ್ ಚಿತ್ತ ಹಾರ್ದಿಕ್ ಅವರತ್ತ ಇದೆ. ಪಾಂಡ್ಯ ತಂಡದೊಂದಿಗೆ ಗುವಾಹಟಿಗೆ ಬಂದಿದ್ದಾರೆ. ನೆಟ್ಸ್‌ನಲ್ಲಿಯೂ ಒಂದಿಷ್ಟು ಹೊತ್ತು ಅಭ್ಯಾಸ ನಡೆಸಿದರು.

ರಾಜಸ್ಥಾನ ತಂಡದ ಬ್ಯಾಟಿಂಗ್ ವಿಭಾಗವು ಬಲಾಢ್ಯವಾಗಿರುವುದರಿಂದ ಮುಂಬೈ ತಂಡದ ಬೌಲಿಂಗ್ ಪಡೆಗೆ ಕಠಿಣ ಸವಾಲು ಎದುರಾಗಬಹುದು. 15 ವರ್ಷದ ವೈಭವ್ ಸೂರ್ಯವಂಶಿ ಮತ್ತು ಯಶಸ್ವಿ ಜೈಸ್ವಾಲ್ ಅವರು ಉತ್ತಮ ಆರಂಭ ನೀಡುವಲ್ಲಿ ಯಶಸ್ವಿಯಾಗಿದ್ದಾರೆ. ನಾಯಕ ರಿಯಾನ್ ಪರಾಗ್ ಅವರು ಲಯಕ್ಕೆ ಮರಳಿದರೆ ರನ್ ಹೊಳೆ ಹರಿಸಬಲ್ಲರು. ಧ್ರುವ ಜುರೇಲ್ ಕಳೆದ ಪಂದ್ಯದಲ್ಲಿ ತಂಡದ ಗೆಲುವಿನ ರೂವಾರಿಯಾಗಿದ್ದರು. ಅವರು ಬ್ಯಾಟಿಂಗ್ ಮತ್ತು ಕೀಪಿಂಗ್ ಎರಡರಲ್ಲೂ ಮಿಂಚಿದ್ದಾರೆ.

ಶಿಮ್ರಾನ್ ಹೆಟ್ಮೆಯರ್, ಆಲ್‌ರೌಂಡರ್ ರವೀಂದ್ರ ಜಡೇಜ, ಶುಭಂ ದುಬೆ ಅವರು ಮಧ್ಯಮ ಕ್ರಮಾಂಕಕ್ಕೆ ಬಲ ತುಂಬುವ ಆಟಗಾರರಾಗಿದ್ದಾರೆ.

ಬೌಲಿಂಗ್ ವಿಭಾಗದಲ್ಲಿ ಸ್ಪಿನ್ನರ್ ರವಿ ಬಿಷ್ಣೋಯಿ, ವೇಗಿ ಜೋಫ್ರಾ ಆರ್ಚರ್, ತುಷಾರ್ ದೇಶಪಾಂಡೆ ಅವರು ಈಚೆಗೆ ಗುಜರಾತ್ ಟೈಟನ್ಸ್ ಎದುರಿನ ಪಂದ್ಯದಲ್ಲಿ ತಮ್ಮ ತಂಡವನ್ನು ಗೆಲುವಿನತ್ತ ಮುನ್ನಡೆಸಿದ್ದರು. ಅದರಲ್ಲೂ ಜೋಫ್ರಾ ಮತ್ತು ತುಷಾರ್ ಅವರು ಕೊನೆಯ ಎರಡು ಓವರ್‌ಗಳಲ್ಲಿ ಎದುರಾಳಿಗಳಿಗೆ ಸೋಲಿನ ಆಘಾತ ನೀಡಿದ್ದರು.

ಇದೀಗ ಈ ಬೌಲಿಂಗ್ ಪಡೆಯ ಮುಂದೆ; ಮುಂಬೈನ ಘಟಾನುಘಟಿ ಬ್ಯಾಟರ್‌ಗಳ ಸವಾಲು ಎದುರಾಗಲಿದೆ. ರೋಹಿತ್ ಶರ್ಮಾ, ರಿಯಾನ್ ರಿಕೆಲ್ಟನ್, ಸೂರ್ಯಕುಮಾರ್ ಯಾದವ್, ತಿಲಕ್ ವರ್ಮಾ ಹಾಗೂ ಶೆರ್ಫೇನ್ ರುದರ್‌ಫೋರ್ಡ್ ಅವರನ್ನು ನಿಯಂತ್ರಿಸಿದರೆ ಮಾತ್ರ ರಾಜಸ್ಥಾನದ ಜಯದ ಕನಸು ಈಡೇರಬಹುದು.



ರಾಜಸ್ಥಾನ ರಾಯಲ್ಸ್ ತಂಡದ ನಾಯಕ ರಿಯಾನ್ ಪರಾಗ್

ಬಲಾಬಲ

31 ಒಟ್ಟು ಪಂದ್ಯ

ಮುಂಬೈ ಗೆಲುವು	16
ರಾಜಸ್ಥಾನ ಜಯ	14
ಫಲಿತಾಂಶವಿಲ್ಲ	1

ಇಂದಿನ ಪಂದ್ಯ

ರಾಜಸ್ಥಾನ ರಾಯಲ್ಸ್ V/s ಮುಂಬೈ ಇಂಡಿಯನ್ಸ್
ತಾಣ: ಗುವಾಹಟಿ,
ಆರಂಭ: ರಾತ್ರಿ 7.30
ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್



ಸೂರ್ಯಕುಮಾರ್ ಯಾದವ್ ಪಿಟಿಐ ಚಿತ್ರ

ಐಸಿಸಿ ಮಾರ್ಚ್ ತಿಂಗಳ ಆಟಗಾರ: ರೇಸ್‌ನಲ್ಲಿ ಸಂಜು

ದುಬೈ (ಪಿಟಿಐ): ಟಿ20 ವಿಶ್ವಕಪ್ ವಿಜೇತ ಭಾರತ ತಂಡದ ಆಟಗಾರರಾದ ಸಂಜು ಸ್ಯಾಮ್ಸನ್ ಹಾಗೂ ಜಸ್‌ಪ್ರೀತ್ ಬೂಮ್ರಾ ಅವರು 'ಐಸಿಸಿ ಮಾರ್ಚ್ ತಿಂಗಳ ಆಟಗಾರ' ಪ್ರಶಸ್ತಿಗೆ ನಾಮನಿರ್ದೇಶನಗೊಂಡಿದ್ದಾರೆ. ದಕ್ಷಿಣ ಆಫ್ರಿಕಾದ ವಿಕೆಟ್ ಕೀಪರ್– ಬ್ಯಾಟರ್ ಕಾನರ್ ಎಸ್ಟರ್‌ಹುಯಿಝೆನ್ ಅವರೂ ಪ್ರಶಸ್ತಿಯ ರೇಸ್‌ನಲ್ಲಿದ್ದಾರೆ.

ಬೂಮ್ರಾ ಅವರು ಟಿ20 ವಿಶ್ವಕಪ್ ಫೈನಲ್‌ನಲ್ಲಿ 4 ವಿಕೆಟ್ ಪಡೆದು ನ್ಯೂಜಿಲೆಂಡ್ ಬ್ಯಾಟರ್‌ಗಳನ್ನು ಕಾಡಿದ್ದರು. ಟೂರ್ನಿಯಲ್ಲಿ ಎಂಟು ಪಂದ್ಯಗಳಿಂದ 14 ವಿಕೆಟ್ ಗಳಿಸಿ ವರುಣ್ ಚಕ್ರವರ್ತಿ ಅವರೊಂದಿಗೆ ಜಂಟಿ ಅಗ್ರಸ್ಥಾನ ತಮ್ಮದಾಗಿಸಿಕೊಂಡಿದ್ದರು. ಅಲ್ಲದೆ, ಪಂದ್ಯದ ಆಟಗಾರ ಗೌರವಕ್ಕೂ ಭಾಜನರಾಗಿದ್ದರು.

ಸಂಜು, ವಿಶ್ವಕಪ್ ಟೂರ್ನಿಯ ಆರಂಭದಲ್ಲಿ ಭಾರತ ತಂಡದಲ್ಲಿ ಸತತವಾಗಿ ಆಡುವ ಅವಕಾಶ ಪಡೆದಿರಲಿಲ್ಲ. ಗುಂಪು ಹಂತದಲ್ಲಿ ನಮೀಬಿಯಾ ವಿರುದ್ಧ 24 ರನ್ ಗಳಿಸಿ ನಿರ್ಗಮಿಸಿದ್ದರು. ಸೂಪರ್ 8ರ ಹಂತದಲ್ಲಿ ಜಿಂಬಾಬ್ವೆ ವಿರುದ್ಧ 24 ಹಾಗೂ ವೆಸ್ಟ್‌ಇಂಡೀಸ್ ವಿರುದ್ಧ ಅಜೇಯ 97 ರನ್ ಸಿಡಿಸಿದ್ದರು. ಇಂಗ್ಲೆಂಡ್ ವಿರುದ್ಧದ ಸೆಮಿಫೈನಲ್ ಹಾಗೂ ನ್ಯೂಜಿಲೆಂಡ್ ವಿರುದ್ಧದ ಫೈನಲ್‌ನಲ್ಲಿ ತಲಾ 89 ರನ್ ಗಳಿಸಿದ್ದರು. ಟೂರ್ನಿಯ ಆಟಗಾರ ಗೌರವಕ್ಕೂ ಪಾತ್ರರಾಗಿದ್ದರು.

ಕಾನರ್ ಅವರು ಕಳೆದ ತಿಂಗಳು ನ್ಯೂಜಿಲೆಂಡ್ ಪ್ರವಾಸದ ವೇಳೆ ದಕ್ಷಿಣ ಆಫ್ರಿಕಾ ತಂಡಕ್ಕೆ ಪದಾರ್ಪಣೆ ಮಾಡಿದ್ದರು. ಐದು ಪಂದ್ಯಗಳ ಟಿ20 ಸರಣಿಯಲ್ಲಿ ಎರಡು ಅರ್ಧಶತಕ ಸೇರಿ ಬರೋಬ್ಬರಿ 200 ರನ್ ಗಳಿಸಿದ್ದರು. ಪ್ರವಾಸಿ ತಂಡವು 3–2ರಿಂದ ಸರಣಿ ಜಯಿಸುವಲ್ಲಿ ನಿರ್ಣಾಯಕ ಪಾತ್ರ ನಿರ್ವಹಿಸಿದ್ದರು.